ಗುರುವಾರ, ಡಿಸೆಂಬರ್ 19, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 350 | ಪುಟ 16

www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ–ಅಗಲ
ಎಸ್‌ಸಿ, ಎಸ್‌ಟಿ ದೌರ್ಜನ್ಯ ತಡೆ 'ಡಿಸಿಆರ್‌ಇ'ಗೆ ಹೆಚ್ಚು ಬಲ

ಮಸೂದೆ ಬೀಳಿಸಲು ಹೋಗಿ ತಾನೇ ಬಿದ್ದ ವಿಪಕ್ಷ 7

'ಪ್ರಕರಣದಿಂದ ಹಿಂದೆ ಸರಿಯಲು ಆಮಿಷ' 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
80,182	24,198	₹80,180 (ಬೆಂಗಳೂರು)	₹94,500 (ಬೆಂಗಳೂರು)	84.94

ಅಂಬೇಡ್ಕರ್‌ಗೆ 'ಅವಮಾನ': 'ಇಂಡಿಯಾ' ಒಕ್ಕೂಟ ಆಕ್ರೋಶ – ಗೃಹ ಸಚಿವರ ವಜಾಕ್ಕೆ ಬಿಗಿಪಟ್ಟು

ಕಿಚ್ಚು ಹಚ್ಚಿದ ಅಮಿತ್ ಶಾ ಹೇಳಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ರಾಜ್ಯಸಭೆಯಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಕುರಿತು ಆಡಿದ ಮಾತುಗಳು ಭಾರಿ ಕೋಲಾಹಲಕ್ಕೆ ಕಾರಣವಾಗಿವೆ. 'ಅಂಬೇಡ್ಕರ್ ಅವರ ಕುರಿತು ಶಾ ಆಡಿದ ಅವಮಾನಕಾರಿ ಮಾತುಗಳನ್ನು ವಾಪಸ್ ಪಡೆಯಬೇಕು ಮತ್ತು ಸಂಪುಟದಿಂದ ಅವರನ್ನು ವಜಾ ಮಾಡಬೇಕು' ಎಂದು 'ಇಂಡಿಯಾ' ಒಕ್ಕೂಟ ಪ್ರಧಾನಿ ನರೇಂದ್ರ ಮೋದಿ ಅವರನ್ನು ಆಗ್ರಹಿಸಿದೆ.

ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹಾಗೂ ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ನೇತೃತ್ವದಲ್ಲಿ ವಿರೋಧ ಪಕ್ಷಗಳ ಸಂಸದರು, ಸಂಸತ್ ಒಳಗೆ ಮತ್ತು ಹೊರಗೆ ಅಂಬೇಡ್ಕರ್ ಭಾವಚಿತ್ರ ಹಿಡಿದು ಪ್ರತಿಭಟನೆ ನಡೆಸಿದರು. ಬಿಜೆಪಿಯ ಪ್ರತಿದಾಳಿಯ ನೇತೃತ್ವವನ್ನು ಸ್ವತಃ ಪ್ರಧಾನಿ ವಹಿಸಿಕೊಂಡು, 'ಎಕ್ಸ್' ನಲ್ಲಿ ಸರಣಿ ಟ್ವೀಟ್ ಮಾಡುವ ಮೂಲಕ ತಮ್ಮ ಆಪ್ತ ಶಾ ಅವರನ್ನು ಬಲವಾಗಿ ಸಮರ್ಥಿಸಿಕೊಂಡರು. ದಲಿತರ ಆರಾಧಕನನ್ನು ಕಾಂಗ್ರೆಸ್ ಪಕ್ಷವೇ ಅವಮಾನಿಸುತ್ತಿದೆ ಎಂದೂ ಹರಿಹಾಯ್ದರು. ಹಿರಿಯ ಸಚಿವರಾದ ಜೆ.ಪಿ. ನಡ್ಡಾ ಮತ್ತು ಕಿರಣ್ ರಿಜಿಜು ಕೂಡ ತಮ್ಮ ಸಹೋದ್ಯೋಗಿಯ ಸಮರ್ಥನೆಗೆ ಗಟ್ಟಿಯಾಗಿ ನಿಂತರು.

ಶಾ ಹೇಳಿಕೆ ವಿಚಾರವಾಗಿ ಎರಡೂ ಸದನಗಳಲ್ಲಿ ಪರಸ್ಪರ ಆರೋಪ–ಪ್ರತ್ಯಾರೋಪ ಜೋರಾಗಿದ್ದರಿಂದ ಬುಧವಾರ ಕಲಾಪ ನಡೆಯಲಿಲ್ಲ.

11ನೇ ಪುಟ ನೋಡಿ



ಅಮಿತ್ ಶಾ ಹೇಳಿಕೆ ವಿರುದ್ಧ ಸಂಸತ್ ಮುಂಭಾಗದಲ್ಲಿ ಬುಧವಾರ ಪ್ರಿಯಾಂಕಾ ಗಾಂಧಿ, ರಾಹುಲ್ ಗಾಂಧಿ ಮತ್ತು ಮಲ್ಲಿಕಾರ್ಜುನ ಖರ್ಗೆ ಅವರ ನೇತೃತ್ವದಲ್ಲಿ ಸಂಸದರು ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

ಬಿಜೆಪಿಯವರು ಸಂವಿಧಾನದ ವಿರೋಧಿಗಳು. ಸಂವಿಧಾನವನ್ನು ಬದಲಾಯಿಸುತ್ತೇವೆ ಎಂದು ಅವರು ಮೊದಲೇ ಹೇಳಿದ್ದರು. ಅವರು ಅಂಬೇಡ್ಕರ್ ಮತ್ತು ಅವರ ಸಿದ್ಧಾಂತಕ್ಕೆ ವಿರುದ್ಧವಾಗಿದ್ದಾರೆ. ಅಂಬೇಡ್ಕರ್ ಅವರ ಕೊಡುಗೆ ಮತ್ತು ಸಂವಿಧಾನವನ್ನು ಕೊನೆಗೊಳಿಸುವುದೇ ಅವರ ಕೆಲಸವಾಗಿದೆ

ರಾಹುಲ್ ಗಾಂಧಿ
ಲೋಕಸಭೆಯ ವಿರೋಧ ಪಕ್ಷದ ನಾಯಕ



ಅಮಿತ್ ಶಾ ಅವರೇ, ಅಂಬೇಡ್ಕರ್ ಹುಟ್ಟದಿದ್ದರೆ ನಿಮ್ಮೂರಿನಲ್ಲೇ ನೀವು ಗುಜರಿ ವ್ಯಾಪಾರ ಮಾಡಿಕೊಂಡು ಇರಬೇಕಾಗುತ್ತಿತ್ತು. ನರೇಂದ್ರ ಮೋದಿ ಕೂಡಾ ರೈಲ್ವೆ ಸ್ಟೇಷನ್‌ನಲ್ಲಿ ಚಹಾ ಮಾರಿಕೊಂಡೇ ಇರಬೇಕಾಗಿತ್ತೊ ಏನೋ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಅಮಿತ್ ಶಾ ಹೇಳಿದ್ದೇನು?



ಅಭಿ ಏಕ್ ಫ್ಯಾಷನ್ ಹೋ ಗಯಾ ಹೈ – ಅಂಬೇಡ್ಕರ್, ಅಂಬೇಡ್ಕರ್, ಅಂಬೇಡ್ಕರ್, ಅಂಬೇಡ್ಕರ್, ಅಂಬೇಡ್ಕರ್, ಅಂಬೇಡ್ಕರ್. ಇತನಾ ನಾಮ್ ಅಗರ್ ಭಗವಾನ್ ಕಾ ಲೇತೆ ತೋ ಸಾತ್ ಜನ್ಮೋ ತಕ್ ಸ್ವರ್ಗ್ ಮಿಲ್ ಜಾತಾ (ಅಂಬೇಡ್ಕರ್, ಅಂಬೇಡ್ಕರ್, ಅಂಬೇಡ್ಕರ್, ಅಂಬೇಡ್ಕರ್, ಅಂಬೇಡ್ಕರ್, ಅಂಬೇಡ್ಕರ್ ಎಂದು ಹೇಳುವುದು ಈಗ ಶೋಕಿ ಆಗಿಬಿಟ್ಟಿದೆ. ಇಷ್ಟೊಂದು ಬಾರಿ ದೇವರ ಹೆಸರು ಹೇಳಿದ್ದರೆ ಏಳು ಜನ್ಮಗಳವರೆಗೆ ಸ್ವರ್ಗ ಪ್ರಾಪ್ತಿ ಆಗುತ್ತಿತ್ತು)

(ಮಂಗಳವಾರ ರಾತ್ರಿ ನಡೆದ ಕಲಾಪದಲ್ಲಿ ಸಂವಿಧಾನ ಕುರಿತ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡುವಾಗ ಹೇಳಿದ್ದು)

ಸಂವಿಧಾನಶಿಲ್ಪಿಗೆ ಕಾಂಗ್ರೆಸ್ ಪಕ್ಷವು ಮಾಡಿರುವ ಘೋರ ಅಪಮಾನಗಳನ್ನು ಬಿಜೆಪಿ ನಾಯಕರೆಲ್ಲ ಬಹಿರಂಗ ಮಾಡಿದ್ದೇವೆ. ಇದಾದ ಬಳಿಕ ಕಾಂಗ್ರೆಸ್ ಪಕ್ಷವು ಹತಾಶೆಗೊಂಡಿದೆ. ನನ್ನ ಹೇಳಿಕೆಯನ್ನು ತಿರುಚಿದೆ. ಅಂಬೇಡ್ಕರ್ ಅವರಿಗೆ ಎಂದೂ ಅವಮಾನ ಮಾಡದ ಪಕ್ಷದಿಂದ ಬಂದಿರುವವನು ನಾನು. ಗೊಂದಲ ಸೃಷ್ಟಿಸಲು ಹಾಗೂ ಜನರ ದಿಕ್ಕು ತಪ್ಪಿಸಲು ನನ್ನ ಹಾಗೂ ಪ್ರಧಾನಿ ಮೋದಿ ಅವರ ಹೇಳಿಕೆಗಳನ್ನು ಕಾಂಗ್ರೆಸ್ ಪಕ್ಷವು ತಪ್ಪಾಗಿ ವ್ಯಾಖ್ಯಾನ ಮಾಡುತ್ತಿರುವುದು ಇದೇ ಮೊದಲಲ್ಲ. ಕಾಂಗ್ರೆಸ್ ಪಕ್ಷವು ಸಂವಿಧಾನ ವಿರೋಧಿ, ಅಂಬೇಡ್ಕರ್ ವಿರೋಧಿ ಹಾಗೂ ಮೀಸಲಾತಿ ವಿರೋಧಿ ಎಂಬುದನ್ನು ನಾವೆಲ್ಲ ತಿಳಿಸಿದ್ದಕ್ಕೆ ಹೀಗಾಗಿದೆ. ವೀರ ಸಾವರ್ಕರ್ ಅವರನ್ನು ಕಾಂಗ್ರೆಸ್ ಅಪಮಾನಿಸಿದೆ. ತುರ್ತು ಪರಿಸ್ಥಿತಿ ಹೇರುವ ಮೂಲಕ ಸಂವಿಧಾನದ ಮೌಲ್ಯಗಳನ್ನು ಗಾಳಿಗೆ ತೂರಿದೆ.

ಅಮಿತ್ ಶಾ, ಕೇಂದ್ರ ಗೃಹ ಸಚಿವ



ವಂಶಪಾರಂಪರ್ಯ ನೇತೃತ್ವದ ಒಂದು ಪಕ್ಷವು ಅಂಬೇಡ್ಕರ್ ಅವರ ಪರಂಪರೆ ಅಳಿಸಿ ಹಾಕಲು ಹಾಗೂ ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡ ಸಮುದಾಯಗಳನ್ನು ಅವಮಾನಗೊಳಿಸಲು ಹೇಗೆ ಕೊಳಕು ತಂತ್ರ ನಡೆಸಿದೆ ಎಂಬುದನ್ನು ದೇಶದ ಜನ ನೋಡಿದ್ದಾರೆ. ಅಂಬೇಡ್ಕರ್ ಅವರನ್ನು ಅವಮಾನಿಸಿದ ಮತ್ತು ಎಸ್‌ಸಿ/ಎಸ್‌ಟಿ ಸಮುದಾಯಗಳನ್ನು ಕಡೆಗಣಿಸಿದ ಕಾಂಗ್ರೆಸ್‌ನ ಕರಾಳ ಇತಿಹಾಸವನ್ನು ಶಾ ಅವರು ರಾಜ್ಯಸಭೆಯಲ್ಲಿ ಬಿಚ್ಚಿಟ್ಟಿದ್ದಾರೆ. ಅವರು ಪ್ರಸ್ತುತಪಡಿಸಿದ ಸತ್ಯಗಳಿಂದ ಆ ಪಕ್ಷವು ದಿಗ್ಭ್ರಮೆಗೊಂಡಿದೆ. ಅಂಬೇಡ್ಕರ್ ಅವರನ್ನು ಕಾಂಗ್ರೆಸ್ ಎರಡು ಬಾರಿ ಸೋಲಿಸಿತು. ಅಂಬೇಡ್ಕರ್ ವಿರುದ್ಧ ನೆಹರೂ ಕೂಡ ಪ್ರಚಾರ ಮಾಡಿದರು. ಅವರಿಗೆ ಭಾರತರತ್ನ ನೀಡಲಿಲ್ಲ.

ನರೇಂದ್ರ ಮೋದಿ, ಪ್ರಧಾನಿ



ದಲಿತರು ದೇವರೆಂದೇ ನಂಬಿರುವ ಬಾಬಾಸಾಹೇಬರಿಗೆ ಮಾತ್ರವಲ್ಲದೆ ಅವರು ಬರೆದಿರುವ ಸಂವಿಧಾನಕ್ಕೂ ಅಮಿತ್ ಶಾ ಅಪಮಾನ ಮಾಡಿದ್ದಾರೆ. ಮನುಸ್ಮೃತಿ ಮತ್ತು ಆರ್‌ಎಸ್‌ಎಸ್‌ನ ಸಿದ್ಧಾಂತವು ಬಾಬಾಸಾಹೇಬ್ ಅಂಬೇಡ್ಕರ್ ಮತ್ತು ಸಂವಿಧಾನಕ್ಕೆ ಗೌರವ ಕೊಡುವುದಿಲ್ಲ ಎಂಬುದನ್ನು ಅವರ ಹೇಳಿಕೆ ತೋರಿದೆ. ಅವರು ದೇಶದ ಕ್ಷಮೆ ಯಾಚಿಸಲಿ ಮತ್ತು ಪ್ರಧಾನಿಗೆ ಬಾಬಾಸಾಹೇಬರ ಮೇಲೆ ಕಿಂಚಿತ್ತಾದರೂ ಗೌರವ ಇದ್ದರೆ ಶಾ ಅವರನ್ನು ಸಂಪುಟದಿಂದ ಕಿತ್ತೊಗೆಯಲಿ. ಶಾ ಇದೇ ರೀತಿ ಹೇಳಿಕೆ ಕೊಡುವುದನ್ನು ಮುಂದುವರಿಸಿದರೆ ದೇಶದಲ್ಲಿ ಬೆಂಕಿ ಹೊತ್ತಿಕೊಳ್ಳಲಿದೆ. ಅಂಬೇಡ್ಕರ್ ಅವರಿಗೆ ಅವಮಾನ ಆಗುವುದನ್ನು ನಾವು ಸಹಿಸಿಕೊಳ್ಳಲು ಸಾಧ್ಯವಿಲ್ಲ.

ಮಲ್ಲಿಕಾರ್ಜುನ ಖರ್ಗೆ, ರಾಜ್ಯಸಭೆ ವಿರೋಧಪಕ್ಷದ ನಾಯಕ

ಮ್ಯಾಚ್ ವಿನ್ನರ್

ಅಶ್ವಿನ್ ವಿದಾಯ



ಬ್ರಿಸ್ಬೇನ್ (ಪಿಟಿಐ): ಭಾರತ ತಂಡದ ಆಫ್‌ಸ್ಪಿನ್–ಆಲ್‌ರೌಂಡರ್ ರವಿಚಂದ್ರನ್ ಅಶ್ವಿನ್ ಅವರು ಕ್ರಿಕೆಟ್‌ಗೆ ವಿದಾಯ ಹೇಳಿದರು. 14 ವರ್ಷಗಳಿಂದ ಭಾರತ ತಂಡವನ್ನು ಪ್ರತಿನಿಧಿಸಿದ್ದ ಅವರು ಬುಧವಾರ ತಮ್ಮ ನಿವೃತ್ತಿ ನಿರ್ಧಾರ ಪ್ರಕಟಿಸಿದರು. ಫ್ರ್ಯಾಂಚೈಸಿ ಲೀಗ್ ಮತ್ತು ಕ್ಲಬ್ ಕ್ರಿಕೆಟ್‌ನಲ್ಲಿ ಮುಂದುವರಿಯುವುದಾಗಿ 38 ವರ್ಷ ವಯಸ್ಸಿನ ಅಶ್ವಿನ್ ತಿಳಿಸಿದ್ದಾರೆ.

2011ರ ಏಕದಿನ ವಿಶ್ವಕಪ್ ಮತ್ತು 2013 ಚಾಂಪಿಯನ್ಸ್ ಟ್ರೋಫಿ ಜಯಿಸಿದ ಭಾರತ ತಂಡವನ್ನು ಅವರು ಪ್ರತಿನಿಧಿಸಿದ್ದರು. ಭಾರತದ ಕ್ರಿಕೆಟ್ ಇತಿಹಾಸದಲ್ಲಿ ಮ್ಯಾಚ್ ವಿನ್ನಿಂಗ್ ಆಟಗಾರನಾಗಿ ಗುರುತಿಸಿಕೊಂಡಿದ್ದಾರೆ.

537 ವಿಕೆಟ್‌ಗಳನ್ನು ಟೆಸ್ಟ್ ಕ್ರಿಕೆಟ್‌ನಲ್ಲಿ ಗಳಿಸಿರುವ ಅವರು ಅತಿ ಹೆಚ್ಚು ವಿಕೆಟ್ ಗಳಿಸಿದ ಭಾರತದ ಎರಡನೇ ಬೌಲರ್ ಆಗಿದ್ದಾರೆ. ಅನಿಲ್ ಕುಂಬ್ಳೆ (619) ಮೊದಲ ಸ್ಥಾನದಲ್ಲಿದ್ದಾರೆ

ಪ್ರಮುಖ ಅಂಶಗಳು

- **765** ಮೂರು ಮಾದರಿಗಳಲ್ಲಿ ಸೇರಿ (ಅಂತರರಾಷ್ಟ್ರೀಯ) ಅಶ್ವಿನ್ ಗಳಿಸಿರುವ ಒಟ್ಟು ವಿಕೆಟ್‌ಗಳು
- **37** ಅಶ್ವಿನ್ ಟೆಸ್ಟ್ ಕ್ರಿಕೆಟ್‌ನಲ್ಲಿ ಗಳಿಸಿದ ವಿಕೆಟ್‌ಗಳ ಪಂಚಗುಚ್ಛಗಳು
- **3** ಅಶ್ವಿನ್ ಅವರು ಐಸಿಸಿ ಟೆಸ್ಟ್ ಆಲ್‌ರೌಂಡರ್‌ಗಳ ರ‍್ಯಾಂಕಿಂಗ್ ಪಟ್ಟಿಯಲ್ಲಿ ಪ್ರಸ್ತುತ ಇರುವ ಸ್ಥಾನ
- **11** ಟೆಸ್ಟ್ ಕ್ರಿಕೆಟ್‌ನಲ್ಲಿ ಬಂದ ಸರಣಿ ಶ್ರೇಷ್ಠ ಪ್ರಶಸ್ತಿಗಳು(44 ಸರಣಿ). ಶ್ರೀಲಂಕಾದ ಮುತ್ತಯ್ಯ ಮುರಳೀಧರನ್ 61 ಸರಣಿಗಳಿಂದ 11 ಪ್ರಶಸ್ತಿ ಗೆದ್ದಿದ್ದಾರೆ.
- **7** ವಿಶ್ವದಲ್ಲಿ ಅತಿ ಹೆಚ್ಚು ಟೆಸ್ಟ್ ವಿಕೆಟ್ ಗಳಿಸಿದ ಆಟಗಾರರ ಪಟ್ಟಿಯಲ್ಲಿರುವ ಅಶ್ವಿನ್ ಸ್ಥಾನ
- **350** ವಿಕೆಟ್‌ಗಳನ್ನು ಟೆಸ್ಟ್ ಕ್ರಿಕೆಟ್‌ನಲ್ಲಿ ಅತಿ ವೇಗದಲ್ಲಿ ಗಳಿಸಿದ ಮೊದಲ ಬೌಲರ್. 66 ಪಂದ್ಯಗಳಲ್ಲಿ ಅವರು ಈ ಸಾಧನೆ ಮಾಡಿದರು

ನನ್ನಲ್ಲಿ ಇನ್ನೂ ಸಾಮರ್ಥ್ಯ ಇದೆ ಎಂದು ನಾನು ನಂಬಿದ್ದೇನೆ. ಅದನ್ನು ಕ್ಲಬ್ ಮಟ್ಟದ ಕ್ರಿಕೆಟ್‌ನಲ್ಲಿ ಪ್ರದರ್ಶಿಸಲಿದ್ದೇನೆ

ಆರ್.ಅಶ್ವಿನ್

ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನೇತೃತ್ವ– ಸಿ.ಎಂ

ಗೊಂದಲ ಪರಿಶೀಲನೆಗೆ ಸಮಿತಿ

ಪ್ರಜಾವಾಣಿ ವಾರ್ತೆ



ವಿಧಾನ ಮಂಡಲದಲ್ಲಿ

ವಕ್ಫ್ ಆಸ್ತಿ

ಸುವರ್ಣ ವಿಧಾನಸೌಧ (ಬೆಳಗಾವಿ): ರಾಜ್ಯದಲ್ಲಿ ವಕ್ಫ್ ಆಸ್ತಿಗಳ ಒಡೆತನ, ಖಾತೆ ವರ್ಗಾವಣೆಗೆ ಸಂಬಂಧಿಸಿದ ಗೊಂದಲಗಳ ಪರಿಶೀಲನೆಗೆ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಯೊಬ್ಬರ ನೇತೃತ್ವದಲ್ಲಿ ಸಮಿತಿಯೊಂದನ್ನು ನೇಮಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸಭೆಯಲ್ಲಿ ಬುಧವಾರ ಪ್ರಕಟಿಸಿದರು.

ವಕ್ಫ್ ಮಂಡಳಿಯು ರೈತರ ಆಸ್ತಿ, ಮಠ–ಮಂದಿರಗಳ ಆಸ್ತಿಯ ಮೇಲೆ ಹಕ್ಕು ಸಾಧಿಸುತ್ತಿದೆ ಎಂದು ನಿಯಮ 69ರ ಅಡಿಯಲ್ಲಿ ನಡೆದ ಚರ್ಚೆಗೆ ಸದನದಲ್ಲಿ ಉತ್ತರ ನೀಡಿದ ಅವರು, 'ರೈತರಿಗೆ ಮಂಜೂರಾದ ಜಮೀನು, ಮಠ, ಮಂದಿರಗಳ ಆಸ್ತಿ ಮತ್ತು ರುದ್ರಭೂಮಿಗಳ ಜಮೀನಿನ ಮೇಲೆ ವಕ್ಫ್ ಮಂಡಳಿ ಹಕ್ಕು ಸಾಧಿಸುವುದಿಲ್ಲ. ಅದಕ್ಕೆ ಹೊರತಾಗಿಯೂ ಗೊಂದಲಗಳಿದ್ದರೆ ಪರಿಹಾರ ಕಂಡುಕೊಳ್ಳಲು ಸಮಿತಿ ನೇಮಿಸ ಲಾಗುವುದು' ಎಂದರು.

ಯಾವುದೇ ಖಾಸಗಿ ಆಸ್ತಿಗೆ ವಕ್ಫ್ ಮಂಡಳಿ ನೋಟಿಸ್ ನೀಡಿದ್ದರೆ, ಮಂಜೂರಾದ ಜಮೀನುಗಳ ಸ್ವಾಧೀನಕ್ಕೆ ಪ್ರಕ್ರಿಯೆ ಆರಂಭಿಸಿದ್ದರೆ, ಇನಾಂ ರದ್ದತಿ ಕಾಯ್ದೆ ಮತ್ತು ಭೂ ಸುಧಾರಣಾ ಕಾಯ್ದೆಯಡಿ ಹಕ್ಕು ಮಂಡನೆ ಬಾಕಿ ಉಳಿದಿದ್ದರೆ ಸಮಿತಿಯ ಮುಂದೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗುವುದು. ಸಮಿತಿಯು ಪರಿಶೀಲಿಸಿ ತೀರ್ಮಾನ ಕೈಗೊಳ್ಳುತ್ತದೆ ಎಂದು ಹೇಳಿದರು.

'ಇನಾಂ ರದ್ದತಿ ಕಾಯ್ದೆ ಮತ್ತು ಕರ್ನಾಟಕ ಭೂ ಸುಧಾರಣಾ ಕಾಯ್ದೆಯಡಿ ರೈತರಿಗೆ ಮಂಜೂರಾಗಿರುವ ಯಾವುದೇ ಜಮೀನಿನ ಮೇಲೆ ವಕ್ಫ್ ಮಂಡಳಿ ಹಕ್ಕು ಸಾಧಿಸಲು ಅವಕಾಶ ನೀಡುವುದಿಲ್ಲ. ದೇವಸ್ಥಾನ, ರುದ್ರಭೂಮಿ ಮತ್ತು ಶಾಲೆಗಳು ವಕ್ಫ್ ಆಸ್ತಿಯಲ್ಲಿದ್ದರೆ ಅಂತಹ ಆಸ್ತಿಗಳ ಮೇಲಿನ ಹಕ್ಕನ್ನೂ ತ್ಯಜಿಸಲು ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ ಸಭೆಯಲ್ಲಿ ತೀರ್ಮಾನವಾಗಿದೆ ಎಂದು ವಕ್ಫ್ ಸಚಿವ ಜಮೀರ್ ಅಹಮ್ಮದ್ ಖಾನ್ ನಮಗೆ ತಿಳಿಸಿದ್ದರು. ಅವರ ಸಲಹೆಯಂತೆ ವಕ್ಫ್ ಆಸ್ತಿಯಲ್ಲಿರುವ ದೇವಸ್ಥಾನ, ರುದ್ರಭೂಮಿ, ಶಾಲೆಗಳಿಗೂ ರಕ್ಷಣೆ ದೊರಕಲಿದೆ' ಎಂದು ತಿಳಿಸಿದರು.

ಈ ವಿಷಯದ ಕುರಿತು ವಿಸ್ತೃತವಾಗಿ ಉತ್ತರ ನೀಡಿದ ಜಮೀರ್ ಅಹಮ್ಮದ್ ಖಾನ್ ಮತ್ತು ಕಂದಾಯ ಸಚಿವ ಕೃಷ್ಣ ಬೈರೇಗೌಡ ಕೂಡ, ರೈತರಿಗೆ ಮಂಜೂರಾದ ಜಮೀನು, ದೇವಸ್ಥಾನ, ರುದ್ರಭೂಮಿ ಮತ್ತು ಶಾಲಾ ಜಮೀನುಗಳ ಮೇಲೆ ವಕ್ಫ್ ಮಂಡಳಿ ಹಕ್ಕು ಸಾಧಿಸುವುದರಿಂದ ರಕ್ಷಣೆ ದೊರಕಲಿದೆ ಎಂದು ಪುನರುಚ್ಚರಿಸಿದರು.

7ನೇ ಪುಟ ನೋಡಿ

ಮುಂಬೈ: ದೋಣಿಗಳ ಡಿಕ್ಕಿ– 13 ಸಾವು

ಮುಂಬೈ: ಮುಂಬೈ ಕರಾವಳಿಯಲ್ಲಿ ವೇಗವಾಗಿ ಚಲಿಸುತ್ತಿದ್ದ ನೌಕಾಪಡೆಯ ಗಸ್ತು ದೋಣಿಯೊಂದು ಪ್ರವಾಸಿಗರಿದ್ದ ಮತ್ತೊಂದು ದೋಣಿಗೆ ಬುಧವಾರ ಡಿಕ್ಕಿ ಹೊಡೆದ ಪರಿಣಾಮ 13 ಮಂದಿ ಮೃತಪಟ್ಟಿದ್ದಾರೆ. 101 ಜನರನ್ನು ರಕ್ಷಿಸಲಾಗಿದೆ.

ನಾಗ್ಪುರದಲ್ಲಿ ಈ ಕುರಿತು ಮಾಹಿತಿ ನೀಡಿದ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್, 'ಗಸ್ತು ದೋಣಿ ಡಿಕ್ಕಿ ಹೊಡೆದ ನಂತರ, ಪ್ರವಾಸಿಗರಿದ್ದ ದೋಣಿಯು ಮಗುಚಿ ಈ ಅವಘಡ ಸಂಭವಿಸಿದೆ. ಮೃತರಲ್ಲಿ ಮೂವರು ನೌಕಾಪಡೆ ಸಿಬ್ಬಂದಿ ಇದ್ದಾರೆ' ಎಂದು ಹೇಳಿದ್ದಾರೆ.

'ನೀಲಕಮಲ್' ದೋಣಿಯು, ಗೇಟ್ ವೇ ಆಫ್ ಇಂಡಿಯಾದಿಂದ ಪ್ರಸಿದ್ಧ ಪ್ರವಾಸಿ ತಾಣ ಎಲಿಫಂಟಾ ಗುಹೆಗಳತ್ತ ಸಾಗುತ್ತಿದ್ದಾಗ, ಸಂಜೆ 4ರ ಹೊತ್ತಿಗೆ ಈ ಅವಘಡ ಸಂಭವಿಸಿದೆ' ಎಂದು ಫಡಣವೀಸ್ ತಿಳಿಸಿದರು. 'ದೋಣಿಯಲ್ಲಿ 110ಕ್ಕೂ ಹೆಚ್ಚು ಪ್ರಯಾಣಿಕರು ಹಾಗೂ ಐವರು ಸಿಬ್ಬಂದಿ ಇದ್ದರು' ಎಂದು ಮುಂಬೈ ಪೊಲೀಸರು ತಿಳಿಸಿದ್ದಾರೆ.


ನೌಕಾಪಡೆಯ 11 ದೋಣಿಗಳನ್ನು ರಕ್ಷಣಾ ಕಾರ್ಯಾಚರಣೆಗೆ ನಿಯೋಜಿಸಲಾಗಿದೆ.

ಪರಿಹಾರ ಘೋಷಣೆ: ಮೃತರ ಕುಟುಂಬಗಳಿಗೆ ಪ್ರಧಾನಿ ನರೇಂದ್ರ ಮೋದಿ ಅವರು ತಲಾ ₹2 ಲಕ್ಷ ಹಾಗೂ ಗಾಯಾಳುಗಳಿಗೆ ತಲಾ ₹50 ಸಾವಿರ ಪರಿಹಾರವನ್ನು ಘೋಷಿಸಿದ್ದಾರೆ.

ಪ್ರೊ. ಕೆವಿಎನ್‌ಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಹಿರಿಯ ಭಾಷಾ ವಿದ್ವಾಂಸ ಹಾಗೂ ಸಂಶೋಧಕ ಪ್ರೊ.ಕೆ.ವಿ. ನಾರಾಯಣ ಅವರ 'ನುಡಿಗಳ ಅಳಿವು' ಕೃತಿಯು ಕೇಂದ್ರ ಸಾಹಿತ್ಯ ಅಕಾಡೆಮಿಯ 2024ನೇ ಸಾಲಿನ ಪ್ರಶಸ್ತಿಗೆ ಆಯ್ಕೆಯಾಗಿದೆ.



ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಮಾಧವ್ ಕೌಶಿಕ್ ಅವರು ಬುಧವಾರ ಇಲ್ಲಿ ಪತ್ರಿಕಾಗೋಷ್ಠಿ ನಡೆಸಿ 21 ಭಾಷೆಗಳ ಪ್ರಶಸ್ತಿ ಪುರಸ್ಕೃತರ ಹೆಸರನ್ನು ಪ್ರಕಟಿಸಿದರು. ಪ್ರಶಸ್ತಿಯು ₹1 ಲಕ್ಷ ನಗದು, ಪ್ರಶಸ್ತಿ ಫಲಕ ಒಳಗೊಂಡಿದೆ. ನವದೆಹಲಿಯಲ್ಲಿ ಮಾರ್ಚ್ 8ರಂದು ನಡೆಯಲಿರುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಕನ್ನಡ ವಿಭಾಗಕ್ಕೆ ವಿದ್ವಾಂಸ ಓ.ಎಲ್. ನಾಗಭೂಷಣಸ್ವಾಮಿ, ಹಳೆಮನೆ ರಾಜಶೇಖರ್ ಹಾಗೂ ಸರಜೂ ಕಾಟ್ಕರ್ ಜ್ಯೂರಿಗಳಾಗಿದ್ದರು.

10ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ





ರೂ. 1 ಲಕ್ಷದವರೆಗೆ ಉಳಿಸಿ

ಅದ್ಭುತ ಬೆಲೆ, ಅದ್ವಿತೀಯ ಸೇವೆ

ಗ್ಯಾರಂಟಿಯೊಂದಿಗೆ

080 4642 7999

enquiry@trawelmart.com

www.trawelmart.com

ಗೋಲ್ಡನ್ ಯುರೋಪ್ ಪ್ರವಾಸ 17 ದಿನಗಳು ₹ 1,45,000 + € 2,600

ಇಂಗ್ಲೆಂಡ್, ನೆದರ್‌ಲ್ಯಾಂಡ್, ಬೆಲ್ಜಿಯಂ, ಫ್ರಾನ್ಸ್, ಲಕ್ಸಮ್‌ಬರ್ಗ್, ಸ್ವಿಡ್ಜರ್‌ಲ್ಯಾಂಡ್, ಲಿಚೆನ್‌ಸ್ಟೈನ್, ಆಸ್ಟ್ರಿಯಾ, ಇಟಲಿ ಮತ್ತು ವ್ಯಾಟಿಕನ್

ಡಿಲೈಟ್‌ಫುಲ್ ಯುರೋಪ್ ಪ್ರವಾಸ
14 ದಿನಗಳು ₹ 1,35,000 + € 2,250
ನೆದರ್‌ಲ್ಯಾಂಡ್, ಬೆಲ್ಜಿಯಂ, ಫ್ರಾನ್ಸ್, ಲಕ್ಸಮ್‌ಬರ್ಗ್, ಸ್ವಿಡ್ಜರ್‌ಲ್ಯಾಂಡ್, ಲಿಚೆನ್‌ಸ್ಟೈನ್, ಆಸ್ಟ್ರಿಯಾ, ಇಟಲಿ ಮತ್ತು ವ್ಯಾಟಿಕನ್

ಸ್ಪೇನ್ ಮತ್ತು ಪೋರ್ಚುಗಲ್ ಪ್ರವಾಸ
12 ದಿನಗಳು ₹ 1,15,000 + € 1,900
ಮ್ಯಾಡ್ರಿಡ್, ಟೊಲೆಡೊ, ಪೋರ್ಟೊ, ಫಾತಿಮಾ, ಲಿಸ್‌ಬನ್, ಸೆವಿಲ್ಲೆ, ಕೊರ್ಡೋಬಾ, ಗ್ರನಾಡ, ವಾಲೆನ್ಸಿಯಾ, ಬಾರ್ಸಿಲೋನ

ಬೆಸ್ಟ್ ಆಫ್ ಯುರೋಪ್ ಪ್ರವಾಸ
12 ದಿನಗಳು ₹ 1,15,000 + € 1,750
ಫ್ರಾನ್ಸ್, ಬೆಲ್ಜಿಯಂ, ನೆದರ್‌ಲ್ಯಾಂಡ್, ಲಕ್ಸಮ್‌ಬರ್ಗ್, ಜರ್ಮನಿ, ಸ್ವಿಡ್ಜರ್‌ಲ್ಯಾಂಡ್, ಇಟಲಿ ಮತ್ತು ವ್ಯಾಟಿಕನ್

ಈಸ್ಟರ್ನ್ ಯುರೋಪ್ ಪ್ರವಾಸ
11 ದಿನಗಳು ₹ 1,15,000 + € 1,775
ಮುನಿಚ್, ಬರ್ಲಿನ್, ಡ್ರೆಸ್‌ಡೆನ್, ಪ್ರಾಗ್, ವಿಯಾನ್ನಾ, ಬ್ರಾಟಿಸ್ಲಾವ, ಬುಡಪೆಸ್ಟ್ ಮತ್ತು ಜೆಲ್‌ಆ್ಯಂಸೀ

ಗ್ರೇಟ್ ಬ್ರಿಟನ್ ಪ್ರವಾಸ
11 ದಿನಗಳು ₹ 1,15,000 + € 2,200
ಡಬ್ಲಿನ್, ಬೆಲ್‌ಫಾಸ್ಟ್, ಗ್ಲಾಸ್‌ಗೋ, ಈಡೆನ್‌ಬರ್ಗ್, ವಿಂಡರ್‌ಮೆರೆ, ಮ್ಯಾಂಚೆಸ್ಟರ್, ಆಕ್ಸ್‌ಫರ್ಡ್ ಮತ್ತು ಲಂಡನ್

ಸ್ಕ್ಯಾಂಡಿನೇವಿಯಾ, ಪ್ರವಾಸ
11 ದಿನಗಳು ₹ 1,35,000 + € 2,150
ಹೆಲ್ಸಿಂಕಿ, ಸ್ಟಾಕ್‌ಹೋಮ್, ನಾರ್ವೆ ಇನ್ ನಟ್‌ಷೆಲ್, ಓಸ್ಲೊ ಮತ್ತು ಕೋಪನ್ ಹ್ಯಾಂಗ್

ಷರತ್ತುಗಳು ಅನ್ವಯ

ಗುಂಪು ಪ್ರವಾಸ ಪ್ಯಾಕೇಜ್‌ಗಳು

ದುಬೈ 6 ದಿನಗಳು ₹ 98,000/–	ಸಿಂಗಾಪುರ್ ಮಲೇಷಿಯಾ 7 ದಿನಗಳು ₹ 1,09,000/–	ವಿಯೆಟ್ನಾಂ 7 ದಿನಗಳು ₹ 1,22,000/–
ಸಿಂಗಾಪುರ್ ಮಲೇಷಿಯಾ ಥೈಲ್ಯಾಂಡ್ 11 ದಿನಗಳು ₹ 1,39,000/–	ವಿಯೆಟ್ನಾಂ ಕಾಂಬೊಡಿಯಾ 11 ದಿನಗಳು ₹ 1,60,000/–	ಟರ್ಕಿ 8 ದಿನಗಳು ₹ 1,85,000/–
ಈಜಿಪ್ಟ್ 9 ದಿನಗಳು ₹ 1,85,000/–	ಸೌತ್ ಆಫ್ರಿಕಾ 10 ದಿನಗಳು ₹ 2,25,000/–	ಆಸ್ಟ್ರೇಲಿಯಾ 10 ದಿನಗಳು ₹ 3,50,000/–

ಕಸ್ಟಮೈಸ್ಡ್ ಪ್ರವಾಸ ಪ್ಯಾಕೇಜ್‌ಗಳು

ವಿಮಾನ ಟಿಕೆಟ್ ಹೆಚ್ಚುವರಿ

ಶ್ರೀಲಂಕಾ 6 ದಿನಗಳು ₹ 38,000/–	ಥೈಲ್ಯಾಂಡ್ 7 ದಿನಗಳು ₹ 42,000/–	ಬಾಲಿ 6 ದಿನಗಳು ₹ 48,000/–
ಕಜಖಸ್ತಾನ್ 6 ದಿನಗಳು ₹ 48,000/–	ಅಜೆರ್‌ಬೈಜಾನ್ 5 ದಿನಗಳು ₹ 48,000/–	ಮಾರಿಷಸ್ 7 ದಿನಗಳು ₹ 49,000/–
ಜಾರ್ಜಿಯಾ 6 ದಿನಗಳು ₹ 58,000/–	ಮಾಲ್ಡೀವ್ಸ್ 5 ದಿನಗಳು ₹ 62,000/–	ಹಾಂಗ್ ಕಾಂಗ್ ಮತ್ತು ಮಕಾವು 6 ದಿನಗಳು ₹ 83,000/–
ಜೋರ್ಡಾನ್ 8 ದಿನಗಳು ₹ 93,000/–	ಕೀನ್ಯಾ 8 ದಿನಗಳು ₹ 1,10,000/–	ಸೀಶೆಲ್ಸ್ 7 ದಿನಗಳು ₹ 1,35,000/–
ನ್ಯೂಜಿಲ್ಯಾಂಡ್ 9 ದಿನಗಳು ₹ 1,50,000/–	ಜಪಾನ್ 7 ದಿನಗಳು ₹ 1,80,000/–	ಫಿನ್‌ಲ್ಯಾಂಡ್ ಮತ್ತು ಸ್ವೀಡೆನ್ 11 ದಿನಗಳು ₹ 2,60,000/–

www.trawelmart.com www.trawelmart.com www.trawelmart.com www.trawelmart.com www.trawelmart.com www.trawelmart.com www.trawelmart.com www.trawelmart.com

ಟ್ರಾವೆಲ್ ಮಾರ್ಟ್ ವರ್ಲ್ಡ್ ಟೂರ್ಸ್ ಪ್ರೈ. ಲಿ.

IATA Accredited Agent 14376740

ಬೆಂಗಳೂರು ನಂ. 357, ಟ್ರಾವೆಲ್ ಮಾರ್ಟ್ ಗೃಹ, 10ನೇ ಬಿ ಮುಖ್ಯ ರಸ್ತೆ, ಜಯನಗರ 3ನೇ ಬಡಾವಣೆ, ಬೆಂಗಳೂರು–560011

ಮಲ್ಲೇಶ್ವರಂ 1ನೇ ಟೆಂಪಲ್ ಸ್ಟ್ರೀಟ್, 20, 10ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003.

ಬೆಂಗಳೂರು ವಿಮಾನ ನಿಲ್ದಾಣ: ಲಾಂಜ್‌ಗೆ ಮನ್ನಣೆ

ಪ್ರಜಾವಾಣಿ ವಾರ್ತೆ



ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿರುವ (ಬಿಐಎಎಲ್) 080 ಲಾಂಜ್

ಬೆಂಗಳೂರು: ಟ್ರಾವೆಲ್ ಹಾಗೂ ಲೀಶರ್ ಇಂಡಿಯಾ ನೀಡುವ 'ಅತ್ಯುತ್ತಮ ದೇಶೀಯ ಏರ್‌ಪೋರ್ಟ್ ಲಾಂಜ್' ಮನ್ನಣೆಯನ್ನು ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ (ಬಿಐಎಎಲ್) ಟರ್ಮಿನಲ್ 2ರಲ್ಲಿ ದೇಶೀಯ ನಿರ್ಗಮನ ಪ್ರದೇಶ ದಲ್ಲಿರುವ 080 ಲಾಂಜ್ ಪಡೆದು ಕೊಂಡಿದೆ.

ಇದಲ್ಲದೆ, 'ಕಾಂಡೆ ನಾಸ್ಟ್ ರೀಡರ್ಸ್ ಚಾಯ್ಸ್ ಅವಾರ್ಡ್ಸ್- 2024'ರಲ್ಲಿ ಟರ್ಮಿನಲ್ 2ರಲ್ಲಿನ ಅಂತರ ರಾಷ್ಟ್ರೀಯ ನಿರ್ಗಮನ ಪ್ರದೇಶದಲ್ಲಿ ರುವ 080 ಲಾಂಜ್‌ಗೆ 'ಮೆಚ್ಚಿನ ವಿಮಾನ ನಿಲ್ದಾಣ ಲಾಂಜ್' ಎಂಬ ಶೀರ್ಷಿಕೆಯ ಮನ್ನಣೆಯನ್ನು ನೀಡಲಾಗಿದೆ.

'ಟ್ರಾವೆಲ್', 'ಲೀಶರ್' ಮತ್ತು 'ಕಾಂಡೆ ನಾಸ್ಟ್ ಟ್ರಾವೆಲರ್' ನಿಯತ ಕಾಲಿಕೆಗಳು ಪ್ರಯಾಣ ಮತ್ತು ಆತಿಥ್ಯ ಉದ್ಯಮದಲ್ಲಿನ ಅತ್ಯುತ್ತಮ ಸಂಸ್ಥೆ ಗಳನ್ನು ಓದುಗರ ಆಯ್ಕೆಯ ಮೂಲಕ ಪ್ರಶಸ್ತಿಗೆ ಆಯ್ಕೆ ಮಾಡುತ್ತವೆ.

ಪ್ರಯಾಣಿಕರಿಗೆ ಮೊದಲ ಆದ್ಯತೆಯಲ್ಲಿ ಉತ್ತಮ ಸೌಕರ್ಯ ಹಾಗೂ ವ್ಯವಸ್ಥೆಯೊಂದಿಗೆ ನಿರ್ಮಾಣ ವಾಗಿರುವ ಲಾಂಜ್ ಅನ್ನು ಇನ್ನಷ್ಟು ಪ್ರಯಾಣಿಕರ ಸ್ನೇಹಿಯಂತೆ ಕಾರ್ಯ ನಿರ್ವಹಿಸಲು ಎಲ್ಲ ವ್ಯವಸ್ಥೆಯನ್ನು ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಈ ಅನುಭವವನ್ನು ಇನ್ನಷ್ಟು ಉನ್ನತೀಕರಿಸಲು ಹಾಗೂ ಆತಿಥ್ಯದ ಹೊಸ ಮಾನದಂಡವನ್ನು ಹೆಚ್ಚಿಸಲು ಪ್ರಶಸ್ತಿ ಪ್ರೇರಣೆ ನೀಡಿದೆ ಎಂದು ಬಿಐಎಎಲ್ ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಹರಿ ಮರಾರ್ ಪ್ರತಿಕ್ರಿಯಿಸಿದರು.

116 ರೈಲುಗಳಿಗೆ ಮರುಸಂಖ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೈರುತ್ಯ ರೈಲ್ವೆ ವಲಯದ 116 ಪ್ಯಾಸೆಂಜರ್ ರೈಲುಗಳಿಗೆ ಜ. 1ರಿಂದ ಮರು ಸಂಖ್ಯೆ ನೀಡಲು ರೈಲ್ವೆ ನಿರ್ಧರಿ ಸಿದೆ. ಪ್ಯಾಸೆಂಜರ್ ವಿಶೇಷ ರೈಲು ಗಳನ್ನು ನಿಯಮಿತ ರೈಲು ಸಂಖ್ಯೆ ಗಳೊಂದಿಗೆ ಮರುಸಂಖ್ಯೆ ಮಾಡ ಲಾಗುತ್ತಿದೆ. ಅಸ್ತಿತ್ವದಲ್ಲಿರುವ ಆರಂಭಿಕ ಸಂಖ್ಯೆ '0'ಯ ಬದಲು '5', '6' ಅಥವಾ '7' ರಿಂದ ಸಂಖ್ಯೆಗಳು ಆರಂಭವಾಗಲಿವೆ. ಪ್ರಯಾಣಿಕರು ಪರಿಷ್ಕೃತ ರೈಲು ಸಂಖ್ಯೆಗಳನ್ನು ಗಮನಿಸಬೇಕು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜ್ಞಾನಭಾರತಿ ಆವರಣದಲ್ಲಿ ಸರಕು ವಾಹನಗಳಿಗೆ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವ ವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಸರಕು ವಾಹನಗಳ ಸಂಚಾರವನ್ನು ನಿಷೇಧಿಸಲಾಗಿದೆ.

ಮೈಸೂರು ರಸ್ತೆಯಲ್ಲಿ ಸಂಚಾರ ದಟ್ಟಣೆ ತಪ್ಪಿಸಿಕೊಳ್ಳಲು ಸರಕು ಸಾಗಣೆ ವಾಹನಗಳಾದ ಟಿಪ್ಪರ್ ಲಾರಿ, ಟೆಂಪೊ, ಸರಕು ಆಟೊಗಳು ವಿಶ್ವ ವಿದ್ಯಾಲಯದ ಆವರಣದಲ್ಲಿ ಸಂಚರಿ ಸುತ್ತಿದ್ದವು. ಇದರಿಂದ ವಿದ್ಯಾರ್ಥಿ ಗಳಿಗೆ ಶೈಕ್ಷಣಿಕ ಚಟುವಟಿಕೆಗಳಿಗೆ ಸಮಸ್ಯೆ ಹೆಚ್ಚಾಗಿತ್ತು. ಅಪಘಾತ ಕೂಡ ಸಂಭವಿಸುತ್ತಿತ್ತು. ಜ್ಞಾನಭಾರತಿ ಆವರಣದಲ್ಲಿ ಸರಕು ಸಾಗಣೆ ವಾಹನ ಸಂಚಾರವನ್ನು ನಿರ್ಬಂಧಿಸುವಂತೆ ವಿ.ವಿ ಆಡಳಿತ ಮಂಡಳಿಯವರು ಕೋರಿದ್ದರು.

ವಿದ್ಯಾರ್ಥಿಗಳ ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ಸುಗಮ ಸಂಚಾರಕ್ಕೆ ಅವಕಾಶ ಮಾಡಿಕೊಡಲು ವಿಶ್ವ ವಿದ್ಯಾಲಯದ ಆವರಣದಲ್ಲಿ ಸರಕು ಸಾಗಣೆ ವಾಹನ ಪ್ರವೇಶಿಸಿದಂತೆ ನಿರ್ಬಂಧಿಸಿ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ಆದೇಶಿಸಿದ್ದಾರೆ.

ಉಲ್ಲಾಳ, ಮರಿಯಪ್ಪನ ಪಾಳ್ಯ, ನಾಗರಬಾವಿ ಸರ್ಕಲ್, ಜ್ಞಾನಭಾರತಿ ಕಡೆಯಿಂದ ಯಾವುದೇ ಸರಕು ವಾಹನಗಳು ವಿಶ್ವವಿದ್ಯಾಲಯ ಪ್ರವೇಶಿದಂತೆ ಪರ್ಯಾಯ ಮಾರ್ಗ ವನ್ನು ಬಳಸಬೇಕೆಂದು ಕಡ್ಡಾಯ ಗೊಳಿಸಲಾಗಿದೆ.

ಸಾಹಿತ್ಯ ಸಮ್ಮೇಳನ: 87 ಪುಸ್ತಕಗಳ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಡ್ಯದಲ್ಲಿ ನಡೆಯಲಿ ರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ 87 ಪುಸ್ತಕಗಳು ಬಿಡುಗಡೆಯಾಗಲಿವೆ.

ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಪ್ರಮುಖ ಕಾರ್ಯ ಚಟುವಟಿಕೆಗಳಲ್ಲಿ ಪುಸ್ತಕ ಪ್ರಕಟಣೆಯೂ ಒಂದಾಗಿದ್ದು, ಈವರೆಗೆ 1,800ಕ್ಕೂ ಹೆಚ್ಚು ಪುಸ್ತಕ ಗಳನ್ನು ಪ್ರಕಟಿಸಲಾಗಿದೆ. ಪರಿಷತ್ತಿನ ಪ್ರಕಟಣಾ ಸಮಿತಿಯ ಜತೆಗೆ, 87ನೇ ಸಾಹಿತ್ಯ ಸಮ್ಮೇಳನಕ್ಕೆ ಸಂಬಂಧಿಸಿದಂತೆ ಎಚ್.ಎಸ್.ಮುದ್ದೇಗೌಡ ಅವರ ಅಧ್ಯಕ್ಷತೆ ಯಲ್ಲಿ ಪ್ರಕಟಣಾ ಸಮಿತಿಯನ್ನು ರಚಿಸಲಾಗಿತ್ತು. ಎರಡೂ ಸಮಿತಿಗಳು ಸೇರಿ 87 ಪುಸ್ತಕಗಳನ್ನು ಹೊರತರುತ್ತಿವೆ ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

ತೊರವೆ ನರಹರಿಯ 'ತೊರವೆ ರಾಮಾಯಣ'ದ ಎರಡು ಸಂಪುಟಗಳು ಬಿಡುಗಡೆಯಾಗಲಿವೆ. ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್.ಎಂ.ವಿಶ್ವೇಶ್ವರಯ್ಯ ಮತ್ತು ಸರ್ ಮಿರ್ಜಾ ಇಸ್ಮಾಯಿಲ್ ಅವರ ಸಾಧನೆಯನ್ನು ವಿವರಿಸುವ ಕೃತಿಗಳು ಪ್ರಕಟವಾಗುತ್ತಿವೆ ಎಂದು ಅವರು ಹೇಳಿದ್ದಾರೆ.

ಮಾವಿನ ಮರದ ರೆಂಬೆ ಬಿದ್ದು, ಬಾಲಕನಿಗೆ ಗಾಯ

ಬೆಂಗಳೂರು: ಶಿವಾಜಿನಗರದ ನಂದಿದುರ್ಗ ಮುಖ್ಯರಸ್ತೆಯಲ್ಲಿ ಮಾವಿನ ಮರದ ರೆಂಬೆ ಬಿದ್ದು ಬಾಲಕನೊಬ್ಬನಿಗೆ ಗಾಯವಾಗಿದೆ.

ಬುಧವಾರ ಬೆಳಿಗ್ಗೆ 8.15ರ ಸಮಯದಲ್ಲಿ ಪೋಷಕರು ಬಾಲಕನನ್ನು ಶಾಲೆಗೆ ಬಿಡಲು ತೆರಳುವಾಗ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ಹೋಗುತ್ತಿದ್ದಾಗ, ಮಾವಿನ ಮರದ ರೆಂಬೆ ಬಿದ್ದು ಅಪಘಾತ ಸಂಭವಿಸಿದೆ. ಭಗವಾನ್ ಮಹಾವೀರ್ ಜೈನ್ ಆಸ್ಪತ್ರೆಯ ತುರ್ತು ನಿಗಾ ಘಟಕದಲ್ಲಿ ಬಾಲಕನಿಗೆ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ಸುಮನಹಳ್ಳಿ ವಿದ್ಯುತ್ ಚಿತಾಗಾರ ಸ್ಥಗಿತ

ಬೆಂಗಳೂರು: ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ ಸುಮನಹಳ್ಳಿ ವಿದ್ಯುತ್ ಚಿತಾಗಾರದಲ್ಲಿ ಕಾಮಗಾರಿ ನಡೆಯಲಿದ್ದು, ಡಿ. 21ರಿಂದ 30ರ ವರೆಗೆ ಸ್ಥಗಿತಗೊಳಿಸಲಾಗುತ್ತಿದೆ ಎಂದು ಬಿಬಿಎಂಪಿ ಕಾರ್ಯಪಾಲಕ ಎಂಜಿನಿಯರ್ ತಿಳಿಸಿದ್ದಾರೆ.

ವೃದ್ಧರಿಗೆ ₹1.24 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ರಮ ಹಣ ವರ್ಗಾವಣೆ ಸಂಬಂಧ ಸಿಬಿಐನಲ್ಲಿ ತಮ್ಮ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ವೃದ್ಧರೊಬ್ಬರನ್ನು ಸೈಬರ್ ಖದೀಮರು ಬೆದರಿಸಿ ₹1.24 ಕೋಟಿ ದೋಚಿದ್ದಾರೆ.

83 ವರ್ಷದ ವೃದ್ಧರೊಬ್ಬರು ನೀಡಿರುವ ದೂರಿನ ಅನ್ವಯ ಸೈಬರ್ ಅಪರಾಧ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಕೆಲವು ದಿನಗಳ ಹಿಂದೆ ದೂರುದಾರರಿಗೆ ಅಪರಿಚಿತ ಮೊಬೈಲ್ ಸಂಖ್ಯೆಯಿಂದ ಕರೆ ಬಂದಿತ್ತು. ಮುಂಬೈ ಪೊಲೀಸರು ಎಂದು ಪರಿಚಯ ಮಾಡಿಕೊಂಡಿದ್ದರು.

'ನಿಮ್ಮ ಹೆಸರಿನಲ್ಲಿ ಇನ್ನೊಂದು ನಂಬರ್ ಚಾಲ್ತಿಯಲ್ಲಿ ಇದೆ. ಆ ಸಂಖ್ಯೆ ಬಳಸಿ ಕಾನೂನುಬಾಹಿರ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ. ಅಕ್ರಮವಾಗಿ ಹಣ ವರ್ಗಾವಣೆ ಆಗುತ್ತಿದೆ. ಸಿಬಿಐನ ಅಧಿಕಾರಿಗಳು ನಿಮ್ಮನ್ನು ಸಂಪರ್ಕಿಸಲಿದ್ದಾರೆ' ಎಂದು ಬೆದರಿಸಿದ್ದರು. ಬಳಿಕ, ಸಿಬಿಐ ಅಧಿಕಾರಿಗಳ ಸೋಗಿನಲ್ಲಿ ಕರೆ ಮಾಡಿದ್ದ ವಂಚಕರು, 'ಎಲ್ಲ ಬ್ಯಾಂಕ್ ಖಾತೆಗಳನ್ನು ಪರಿಶೀಲನೆ ನಡೆಸಬೇಕಿದೆ' ಎಂದು ಹೇಳಿದ್ದರು. ಬೆದರಿದ ದೂರುದಾರರು ಬ್ಯಾಂಕ್‌ಗಳ ವಿವರ ಹಾಗೂ ದಾಖಲೆಗಳನ್ನು ನೀಡಿದ್ದರು.

ವಿಚಾರಣೆ ವೇಳೆ ಪೊಲೀಸರ ಎದುರು ನಿಖಿತಾ ಮಾಹಿತಿ

'ಅತುಲ್ ಅಲ್ಲ; ನಾನೇ ಸಂತ್ರಸ್ತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರ ಪ್ರದೇಶದ ಟೆಕಿ ಅತುಲ್ ಸುಭಾಷ್ ಆತ್ಮಹತ್ಯೆ ಪ್ರಕರಣದಲ್ಲಿ ಬಂಧಿತರಾಗಿದ್ದ ಮೂವರು ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಿದ್ದ ಮಾರತ್‌ಹಳ್ಳಿ ಠಾಣೆ ಪೊಲೀಸರು, ಆರೋಪಿಗಳಿಂದ ಕೆಲವು ಮಾಹಿತಿ ಕಲೆ ಹಾಕಿದ್ದಾರೆ.

ಪತ್ನಿ ವಿರುದ್ಧ ಕಿರುಕುಳದ ಆರೋಪ ಮಾಡಿ ಮರಣಪತ್ರ ಬರೆದಿಟ್ಟು ಡಿ.9ರಂದು ನೇಣು ಹಾಕಿಕೊಂಡು ಅತುಲ್ ಆತ್ಮಹತ್ಯೆ ಮಾಡಿಕೊಂಡಿದ್ದರು. 23 ಪುಟಗಳ ಮರಣಪತ್ರ ಹಾಗೂ 90 ನಿಮಿಷಗಳ ವಿಡಿಯೊ ಮಾಡಿ ಅದರಲ್ಲಿ ವಿವಿಧ ವಿಚಾರಗಳನ್ನು ಪ್ರಸ್ತಾಪಿಸಿದ್ದರು. ಅವರು ಉಲ್ಲೇಖಿಸಿದ್ದ ವಿಚಾರಗಳು ಚರ್ಚೆಗೆ ಗ್ರಾಸ ಆಗಿದ್ದವು.

ಮೃತ ಅತುಲ್ ಅವರ ಸಹೋದರ ಬಿಕಾಸ್‌ಕುಮಾರ್ ಅವರು ನೀಡಿದ ದೂರು ಆಧರಿಸಿ, ಅತುಲ್ ಪತ್ನಿ ನಿಖಿತಾ ಸಿಂಘಾನಿಯಾ, ಅವರ ತಾಯಿ ನಿಶಾ ಸಿಂಘಾನಿಯಾ ಹಾಗೂ ಸಹೋದರ ಅನುರಾಗ್ ಸಿಂಘಾನಿಯ ಅವರನ್ನು ಮಾರತ್‌ಹಳ್ಳಿ ಠಾಣೆ ಪೊಲೀಸರು ಹೊರ ರಾಜ್ಯದಲ್ಲಿ ಬಂಧಿಸಿ ನಗರಕ್ಕೆ ಕರೆತಂದು ವಿಚಾರಣೆ ಒಳಪಡಿಸಿದ್ದರು. ಸದ್ಯ ಮೂವರೂ ನ್ಯಾಯಾಂಗ ಬಂಧನದಲ್ಲಿದ್ದಾರೆ.

'ಘಟನೆಯಲ್ಲಿ ಅತುಲ್ ಸಂತ್ರಸ್ತ ಅಲ್ಲ; ನಾನೇ ನಿಜವಾದ ಸಂತ್ರಸ್ತೆ' ಎಂದು ನಿಖಿತಾ ಪೊಲೀಸರ ಎದುರು ಅಳಲು ತೋಡಿಕೊಂಡಿದ್ದಾರೆ.

'ಮದುವೆಯಾದ ಆರಂಭದಲ್ಲಿ ನಾನೂ ಬೆಂಗಳೂರಿಗೆ ಬಂದಿದ್ದೆ. ಅವರು ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯ ಕೃತಕ ಬುದ್ಧಿಮತ್ತೆ ವಿಭಾಗದಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದರು. ಮಂಜುನಾಥ ಲೇಔಟ್‌ನ ಡೆಲ್ಫಿನಿಯಂ ರೆಸಿಡೆನ್ಸಿಯ ಮೂರನೇ ಮಹಡಿಯ ಫ್ಲ್ಯಾಟ್‌ನ ನಂ. ಟಿ–06ನಲ್ಲಿ ನೆಲಸಿದ್ದೆವು. ಅಡುಗೆ ಚೆನ್ನಾಗಿ ಮಾಡಿದ್ದರೂ ಚೆನ್ನಾಗಿಲ್ಲ ಎಂದು ರೇಗುತ್ತಿದ್ದರು. ಮಾಂಸಾಹಾರದ ಅಡುಗೆ ಮಾಡುವಂತೆ ಒತ್ತಾಯಿಸುತ್ತಿದ್ದರು. ಇಷ್ಟೆಲ್ಲಾ ಕಿರುಕುಳವಾದರೂ ನಾನು ಮನೆ ಬಿಟ್ಟು ಉತ್ತರ ಪ್ರದೇಶಕ್ಕೆ ಹೋಗಿರಲಿಲ್ಲ. ಕಿರುಕುಳ ಹೆಚ್ಚಾದ ಮೇಲೆ ಮನೆ ಬಿಟ್ಟು ಹೋಗುವ ಪರಿಸ್ಥಿತಿ ಉದ್ಭವಿಸಿತ್ತು ಎಂಬುದಾಗಿ ಪೊಲೀಸರ ಎದುರು ಹೇಳಿದ್ದಾರೆ' ಎಂದು ಗೊತ್ತಾಗಿದೆ.

'ಅತುಲ್ ಮರಣಪತ್ರದಲ್ಲಿ ಉಲ್ಲೇಖಿಸಿರುವ ಆರೋಪಗಳು ಸುಳ್ಳು. ನಾಲ್ಕು ವರ್ಷಗಳಿಂದ ಇಬ್ಬರೂ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದೇವೆ. ಅವರ ಸಾವಿಗೂ ನನಗೂ ಯಾವುದೇ ಸಂಬಂಧವಿಲ್ಲ ಎಂಬುದಾಗಿಯೂ ಪೊಲೀಸರಿಗೆ ಹೇಳಿಕೆ ನೀಡಿದ್ದಾರೆ' ಎಂದು ಗೊತ್ತಾಗಿದೆ.

ತನ್ನ ಸಹೋದರನ ಸಾವಿಗೆ ಆತನ ಪತ್ನಿ, ಪತ್ನಿಯ ತಾಯಿ, ಸಹೋದರ ಹಾಗೂ ಆಕೆಯ ಚಿಕ್ಕಪ್ಪ ಕಾರಣ ಎಂಬುದಾಗಿ ಬಿಕಾಸ್‌ಕುಮಾರ್ ದೂರು ನೀಡಿದ್ದರು. ಅತುಲ್ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದರು. ಅಲ್ಲದೇ ಪ್ರಕರಣಗಳನ್ನು ಬಗೆಹರಿಸಿಕೊಳ್ಳಲು ₹3 ಕೋಟಿಗೆ ಬೇಡಿಕೆ ಇಟ್ಟಿದ್ದರು. ಇದರಿಂದ ಅತುಲ್ ಅವರು ಮಾನಸಿಕವಾಗಿ ಹಾಗೂ ದೈಹಿಕವಾಗಿ ನೊಂದಿದ್ದರು. ನಾಲ್ವರ ಪ್ರಚೋದನೆಯಿಂದಲೇ ಸಹೋದರ ಮೃತಪಟ್ಟಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಿದ್ದರು.

ನಿಖಿತಾ ಹೇಳಿದ್ದು...
- ಅಡುಗೆ ವಿಷಯಕ್ಕೆ ಗಂಡನಿಂದ ಕಿರಿಕಿರಿ
- ನಾಲ್ಕು ವರ್ಷಗಳಿಂದ ಬೇರೆ ಇದ್ದೆವು
- ಮರಣಪತ್ರದ ಅಂಶಗಳು ಸುಳ್ಳು



ನಿಖಿತಾ



ಅತುಲ್

ಅಪರಾಧ ಸುದ್ದಿ

ಆಸ್ಪತ್ರೆಯಿಂದ ದರ್ಶನ್ ಮನೆಗೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕೆಂಗೇರಿಯ ಬಿಜಿಎಸ್ ಆಸ್ಪತ್ರೆಯಲ್ಲಿ ಬೆನ್ನು ನೋವಿಗೆ ಚಿಕಿತ್ಸೆ ಪಡೆಯುತ್ತಿದ್ದ ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ, ನಟ ದರ್ಶನ್ ಅವರು ಆಸ್ಪತ್ರೆಯಿಂದ ಬುಧವಾರ ಮಧ್ಯಾಹ್ನ ಬಿಡುಗಡೆಯಾಗಿ ಮನೆಗೆ ತೆರಳಿದರು.

ಬಳ್ಳಾರಿ ಕೇಂದ್ರ ಕಾರಾಗೃಹದಲ್ಲಿ ವಿಚಾರಣಾಧೀನ ಕೈದಿಯಾಗಿದ್ದ ಅವಧಿಯಲ್ಲಿ ದರ್ಶನ್ ಅವರಿಗೆ ಬೆನ್ನು ನೋವು ಕಾಣಿಸಿಕೊಂಡಿತ್ತು. ದರ್ಶನ್ ಅವರ ವೈದ್ಯಕೀಯ ಚಿಕಿತ್ಸೆಗೆಂದು ಹೈಕೋರ್ಟ್ ಮಧ್ಯಂತರ ಜಾಮೀನು ಮಂಜೂರು ಮಾಡಿತ್ತು. ಅದಾದ ಮೇಲೆ ದರ್ಶನ್ ಅವರು ಬಳ್ಳಾರಿ ಜೈಲಿನಿಂದ ಬಿಡುಗಡೆಯಾಗಿ ಆಸ್ಪತ್ರೆಗೆ ದಾಖಲಾಗಿದ್ದರು. ಕಳೆದ ಶುಕ್ರವಾರ ದರ್ಶನ್, ಪವಿತ್ರಾಗೌಡ ಸೇರಿದಂತೆ ಏಳು ಆರೋಪಿಗಳಿಗೆ ಹೈಕೋರ್ಟ್ ಷರತ್ತುಬದ್ಧ ನಿಯಮಿತ (ರೆಗ್ಯುಲರ್) ಜಾಮೀನು ಮಂಜೂರು ಮಾಡಿತ್ತು. ನಿಯಮಿತ ಜಾಮೀನು ಲಭಿಸಿದ ಆರು ದಿನಗಳ ಬಳಿಕ ದರ್ಶನ್ ಆಸ್ಪತ್ರೆಯಿಂದ ಮನೆಗೆ ತೆರಳಿದ್ದಾರೆ ಎಂದು ಗೊತ್ತಾಗಿದೆ.

ದರ್ಶನ್ ಅವರ ಪತ್ನಿ ವಿಜಯಲಕ್ಷ್ಮಿ, ಪುತ್ರ ವಿನೀಶ್ ಮತ್ತು ಕುಟುಂಬಸ್ಥರು, ಸ್ನೇಹಿತರು ಆಸ್ಪತ್ರೆ ಬಳಿಗೆ ಬಂದಿದ್ದರು. ಪುತ್ರನ ಕೈಹಿಡಿದುಕೊಂಡು ದರ್ಶನ್ ಆಸ್ಪತ್ರೆಯಿಂದ ಹೊರಬಂದರು. ಬಳಿಕ ಕಾರನ್ನೇರಿ ಆಸ್ಪತ್ರೆಯಿಂದ ಹೊರಟದ್ದು, ಅಲ್ಲಿಂದ ಹೊಸಕೆರೆಹಳ್ಳಿಯಲ್ಲಿ ವಿಜಯಲಕ್ಷ್ಮಿ ವಾಸವಿರುವ ಪ್ರೆಸ್ಟೀಜ್ ಅಪಾರ್ಟ್‌ಮೆಂಟ್‌ಗೆ ತೆರಳಿದ್ದಾರೆ ಎಂದು ಗೊತ್ತಾಗಿದೆ.

ಡಿಸೆಂಬರ್ 11ರಂದು ದರ್ಶನ್ ಅವರಿಗೆ ಶಸ್ತ್ರಚಿಕಿತ್ಸೆ ಮಾಡಲಾಗುತ್ತಿದೆ ಎಂದು ನ್ಯಾಯಾಲಯಕ್ಕೆ ದರ್ಶನ್ ಪರ ವಕೀಲರು ಮಾಹಿತಿ ನೀಡಿದ್ದರು. ಆದರೆ, ಇದುವರೆಗೂ ದರ್ಶನ್ ಅವರಿಗೆ ನೀಡಿದ್ದ ಚಿಕಿತ್ಸಾ ವಿಧಾನದ ಬಗ್ಗೆ ಆಸ್ಪತ್ರೆಯಿಂದ ಯಾವುದೇ ಅಧಿಕೃತ ಮಾಹಿತಿ ಬಿಡುಗಡೆ ಆಗಿಲ್ಲ.

ಬಿಎಂಟಿಸಿಗೆ ಎಕ್ಸಲೆನ್ಸ್ ಪ್ರಶಸ್ತಿ



ಸ್ಮಾರ್ಟ್‌ಆಟೋಮೋಟಿವ್ ಸಮ್ಮಿಟ್ ಎಕ್ಸಲೆನ್ಸ್‌ನಲ್ಲಿ ಬಿಎಂಟಿಸಿ ಎರಡು ಪ್ರಶಸ್ತಿ ಪಡೆದಿದ್ದು, ಬುಧವಾರ ಪ್ರಶಸ್ತಿ ಪ್ರದಾನ ಮಾಡಲಾಯಿತು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ಮಾರ್ಟ್ ಆಟೊಮೋಟಿವ್ ಸಮ್ಮಿಟ್ ಎಕ್ಸಲೆನ್ಸ್'ನಲ್ಲಿ ಬಿಎಂಟಿಸಿ ಎರಡು ಪ್ರಶಸ್ತಿಗಳನ್ನು ಪಡೆದಿದೆ.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಿನೂತನ ತಂತ್ರಜ್ಞಾನ 'ಬಿಎಂಟಿಸಿ ಸ್ಮಾರ್ಟ್ ಕಿಯಾಸ್ಕ್' ಮೂಲಕ ಪ್ರಯಾಣಿಕರಿಗೆ ಮಾಹಿತಿ ನೀಡುವ ಉಪಕ್ರಮಕ್ಕೆ ಒಂದು ಎಕ್ಸಲೆನ್ಸ್ ಪ್ರಶಸ್ತಿ ಸಂದಿದೆ.

ಪ್ರಯಾಣಿಕರ ಸುರಕ್ಷತೆಗಾಗಿ ಬಸ್‌ಗಳಲ್ಲಿ ಜಿಪಿಎಸ್ ಒಳಗೊಂಡಿರುವ ಪ್ಯಾನಿಕ್ ಬಟನ್ ವ್ಯವಸ್ಥೆ ಅಳವಡಿಸಿ 'ನಮ್ಮ ಬಿಎಂಟಿಸಿ' ಮೊಬೈಲ್ ಆ್ಯಪ್ ರೂಪಿಸಿರುವುದಕ್ಕಾಗಿ ಇನ್ನೊಂದು ಎಕ್ಸಲೆನ್ಸ್ ಪ್ರಶಸ್ತಿ ಪಡೆದಿದೆ.

ಬುಧವಾರ ಬಿಎಂಟಿಸಿ ನಿರ್ದೇಶಕ (ಭದ್ರತಾ ಮತ್ತು ಜಾಗೃತ) ಅಬ್ದುಲ್ ಅಹದ್, ನಿರ್ದೇಶಕಿ (ಮಾಹಿತಿ ತಂತ್ರಜ್ಞಾನ) ಶಿಲ್ಪಾ ಎಂ., ಮುಖ್ಯ ಗಣಕ ವ್ಯವಸ್ಥಾಪಕ ಕೆ.ಜಿ.ಸದಾನಂದ, ಸಾರ್ವಜನಿಕ ಸಂಪರ್ಕ ಅಧಿಕಾರಿ ಸುನೀತಾ ಪ್ರಶಸ್ತಿ ಸ್ವೀಕರಿಸಿದರು.

ಎರಡು ಪ್ರತ್ಯೇಕ ಅಪಘಾತ: ಕಾರ್ಮಿಕ ಸೇರಿ ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಗೇರಿ ಹಾಗೂ ಹೆಬ್ಬಾಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಂಭವಿಸಿದ ಎರಡು ಪ್ರತ್ಯೇಕ ಅಪಘಾತ ಪ್ರಕರಣಗಳಲ್ಲಿ ಕಾರ್ಮಿಕ ಹಾಗೂ ಖಾಸಗಿ ಕಂಪನಿ ಉದ್ಯೋಗಿ ಮೃತಪಟ್ಟಿದ್ದಾರೆ.

ಹೆಬ್ಬಾಳದ ಜಕ್ಕೂರು ಲೇಔಟ್‌ನಲ್ಲಿ ಸಂಭವಿಸಿದ ಅಪಘಾತದಲ್ಲಿ ಕಾರ್ಮಿಕ, ಲಕ್ಷ್ಮೀಪುರದ ನಿವಾಸಿ ರಮೇಶ್(56) ಅವರು ಮೃತಪಟ್ಟಿದ್ದಾರೆ.

ಜಕ್ಕೂರು ಲೇಔಟ್‌ನಲ್ಲಿ ಕಟ್ಟಡ ಕಾಮಗಾರಿ ನಡೆಯುತ್ತಿತ್ತು. ಅಲ್ಲಿ ರಮೇಶ್ ಅವರು ಕೆಲಸ ಮಾಡುತ್ತಿದ್ದರು. ಸಿಮೆಂಟ್ ಇಟ್ಟಿಗೆ ತುಂಬಿದ್ದ ಟ್ರ್ಯಾಕ್ಟರ್‌ವೊಂದು ಕಾಮಗಾರಿ ನಡೆಯುತ್ತಿದ್ದ ಸ್ಥಳಕ್ಕೆ ಬಂದಿತ್ತು. ಸಿಮೆಂಟ್ ಇಟ್ಟಿಗೆಗಳನ್ನು ಸ್ಥಳದಲ್ಲಿ ಅನ್‌ಲೋಡ್ ಮಾಡಿ ಟ್ರ್ಯಾಕ್ಟರ್ ಅನ್ನು ಚಾಲಕ ಹಿಂದಕ್ಕೆ ತೆಗೆದುಕೊಳ್ಳುತ್ತಿದ್ದ ಸಂದರ್ಭದಲ್ಲಿ ರಮೇಶ್ ಅವರಿಗೆ ಡಿಕ್ಕಿಯಾಗಿದೆ. ಗಂಭೀರವಾಗಿ ಗಾಯಗೊಂಡಿದ್ದ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು.

ಕೆಂಗೇರಿ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ರಸ್ತೆಯ ಬದಿಯಲ್ಲಿ ನಿಲುಗಡೆ ಮಾಡಿದ್ದ ಟ್ರಕ್‌ವೊಂದಕ್ಕೆ ಬೈಕ್ ಡಿಕ್ಕಿಯಾಗಿ ಬಾಗಲಕೋಟೆಯ ಕನಕಮಾದರ (19) ಅವರು ಮೃತಪಟ್ಟಿದ್ದಾರೆ. ಅವರು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು.

ವೇಗವಾಗಿ ಬಂದ ಬೈಕ್ ಟ್ರಕ್‌ಗೆ ಡಿಕ್ಕಿ ಹೊಡೆದು, ಅಪಘಾತವಾಯಿತು. ಗಸ್ತಿನಲ್ಲಿ ಸಂಚಾರ ಸಿಬ್ಬಂದಿ ಅವರನ್ನು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗದಲ್ಲಿ ಸವಾರ ಮೃತಪಟ್ಟಿದ್ದಾರೆ ಎಂದು ಮೂಲಗಳು ಹೇಳಿವೆ.

ನಗರದಲ್ಲಿ ಇಂದು



ಕುವೆಂಪು ಸವಿನೆನಪು, ಕನ್ನಡ ರಾಜ್ಯೋತ್ಸವ ಸಂಭ್ರಮಾಚರಣೆ, 'ಜಗಹೃದಯ' ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ವಿನಯ ಗುರೂಜಿ, ನಿಶ್ಚಲಾನಂದನಾಥ ಸ್ವಾಮೀಜಿ, ಗುರುಮೂರ್ತಿ ಗುರೂಜಿ, ಪ್ರಶಸ್ತಿ ಪುರಸ್ಕೃತರು: ನಾಗತಿಹಳ್ಳಿ ರಮೇಶ್, ಅತಿಥಿ: ವಿ.ಎಚ್. ಮಹೇಶ, ಉಪಸ್ಥಿತಿ: ಎಂ.ಸಿ. ಧನಂಜಯಗೌಡ, ಆಯೋಜನೆ: ಕರ್ನಾಟಕ ಸ್ವಯಂಸೇವಕರ ವೇದಿಕೆ, ಸ್ಥಳ: ನಂ. 1, ಡಿಕ್ಕನ್‌ಸನ್ ರಸ್ತೆ, ಕಮರ್ಷಿಯಲ್ ಸ್ಟ್ರೀಟ್ ವೃತ್ತ, ಶಿವಾಜಿನಗರ, ಸಂಜೆ 5

'ಲಾ ಫೆರಿಯಾ': ಸಂಗೀತ ಕಛೇರಿ: ಸಂಗೀತಾ ರವೀಂದ್ರನಾಥ್, ಸ್ವಾಹಾ ಬ್ಯಾಂಡ್, ಸ್ಥಳ: ಸೇಂಟ್ ಜೋಸೆಫ್ಸ್ ಶಾಲೆ, ವಿಠ್ಠಲ್ ಮಲ್ಯ ರಸ್ತೆ, ಬೆಳಿಗ್ಗೆ 9.30

'ಭವಿಷ್ಯದ ನಗರಗಳ ಸುಸ್ಥಿರ ಅಭಿವೃದ್ಧಿಗಾಗಿ ಬಹುಶಿಸ್ತಿನ ವಿಧಾನ ಮತ್ತು ನವೀನ ಉದಯೋನ್ಮುಖ ತಂತ್ರಜ್ಞಾನಗಳ ಬಳಕೆ' ಅಂತರರಾಷ್ಟ್ರೀಯ ಸಮ್ಮೇಳನ: ಅತಿಥಿಗಳು: ಎಸ್.ಎಂ. ಜಯಕರ, ಶೇಖ್ ಲತೀಫ್, ಅಶೋಕ್ ಡಿ. ಹಂಜಗಿ, ಬಿ.ಪಿ. ರವಿ, ವಿ. ರಶ್ಮಿ, ಪ್ರಸನ್ನ ಪ್ರಭು, ಆಯೋಜನೆ: ಸಂಪೂರ್ಣ ಸ್ವರಾಜ್ ಫೌಂಡೇಶನ್, ಸ್ಥಳ: ಭೌಗೋಳಿಕ ಮತ್ತು ಭೌಗೋಳಿಕ ಮಾಹಿತಿ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಿಗ್ಗೆ 10

ಪದ್ಮನಾದೋತ್ಸವ 'ಗುರು ನಮನ': ಉದ್ಘಾಟನೆ: ವಿಶ್ವವಲ್ಲಭತೀರ್ಥ ಸ್ವಾಮೀಜಿ, ಲಕ್ಷ್ಮಿ ಅತಿಥಿಗಳು: ಟಿ.ಎಸ್. ಸತ್ಯವತಿ, ಎಚ್.ಕೆ. ವೆಂಕಟರಾಮ್, ಅಭಿಮಾನದ ನುಡಿಗಳು: ಆರ್. ಕೆ. ಶ್ರೀನಿವಾಸ ಅಯ್ಯಂಗಾರ್, ಎಸ್. ವಿ. ಕೃಷ್ಣಕುಮಾರ್, ವಿ. ಶ್ರೀನಿವಾಸನ್, ಪಿ.ಎಂ.ಎನ್. ಸಂಡೂರ್, 'ಚಿಂತನಾ ಚಾವಡಿ' ಆರ್‌ಕೆಪಿ ಗೋಷ್ಠಿ: ಸುಧಾ ಪ್ರಭಾಕರ್, ಮೀರಾ ರಮೇಶ್, ಪದ್ಮಾ ಬಿ. ಎಸ್., ಜಯಶ್ರೀ, ನಿರುಪಮಾ ರಾವ್, ಆಯೋಜನೆ: ಡಾ. ಆರ್‌ಕೆಪಿ ಸನ್ಮಾನ ಸಮಿತಿ, ಸ್ಥಳ: ವಾದಿರಾಜ ಕಲಾಭವನ, ಬೆಳಿಗ್ಗೆ 10.15ರಿಂದ

'ಅಂಧರು ಹಾಗೂ ಅಂಗವಿಕಲ ಮಕ್ಕಳ ಸಮಸ್ಯೆಗೆ ಸಂಬಂಧಿಸಿದ ರಾಜ್ಯಮಟ್ಟದ ಕಾರ್ಯಾಗಾರ': ಅತಿಥಿ: ಶ್ರೀದಾಸ್ ಸೂರ್ಯವಂಶಿ, ಆಯೋಜನೆ: ಸೆನ್ಸ್ ಇಂಟರ್ ನ್ಯಾಷನಲ್ ಇಂಡಿಯಾ ಸಂಸ್ಥೆ, ಸ್ಥಳ: ಪರಾಗ್ ಹೋಟೆಲ್, ರಾಜಭವನ ರಸ್ತೆ, ಬೆಳಿಗ್ಗೆ 10.30

'ಕುವೆಂಪು ಸಾಹಿತ್ಯದಲ್ಲಿನ ಪರಿಸರ ಪ್ರಜ್ಞೆ' ಉಪನ್ಯಾಸ: ಸಂಗೀತಾ ಪಿ., ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

'ಧನುರ್ಮಾಸ ಮಹಾತ್ಮೆ' ಪ್ರವಚನ: ವೇಣುಗೋಪಾಲಾಚಾರ್ ಗುಡಿ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸೇವಾ ಸಮಿತಿ, ರಾಘವೇಂದ್ರ ಸ್ವಾಮಿ ಮಠ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಸಂಜೆ 7

ದಾಸರ ಪದಗಳ ಗಾಯನ: ಪ್ರಾಣೇಶ್ ಪಿ. ಭಾರದ್ವಾಜ್, ಸೌರಭ್ ಡಿ. ಭಟ್, ಕೀ-ಬೋರ್ಡ್: ಅಮಿತ್ ಶರ್ಮಾ, ತಬಲಾ: ಶ್ರೀನಿವಾಸ ಕಾಖಂಡಕಿ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಒಂದನೇ ಮುಖ್ಯರಸ್ತೆ, ಪವಮಾನಪುರ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಎನ್‌ಐಎಗೆ ಬೇಕಾಗಿದ್ದ ಆರೋಪಿ ಷಾಬ್ ಬಂಧನ

ಪ್ರಜಾವಾಣಿ ವಾರ್ತೆ

ಕಾಸರಗೋಡು: ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಹುಡುಕುತ್ತಿದ್ದ ಅಸ್ಸಾಂ ಮೂಲದ ಷಾಬ್ ಶೇಖ್ (32) ಎಂಬಾತನನ್ನು ಪೊಲೀಸರು ಕಾಞಂಗಾಡಿನಲ್ಲಿ ಬಂಧಿಸಿದ್ದಾರೆ.

ಈತನ ವಿರುದ್ಧ ಕಾನೂನುಬಾಹಿರ ಚಟುವಟಿಕೆ ತಡೆ ಕಾಯ್ದೆಯಡಿ (ಯುಎಪಿಎ) ಮೊಕದ್ದಮೆ ದಾಖಲಾಗಿತ್ತು. ಅಸ್ಸಾಂ ಪೊಲೀಸರು ಹೊಸದುರ್ಗ ಪೊಲೀಸರ ಸಹಾಯದಿಂದ ನಡೆಸಿದ ಕಾರ್ಯಾಚರಣೆ ಯಲ್ಲಿ ಈತನನ್ನು ಬಂಧಿಸಲಾಗಿದೆ.

ಕಾಞಂಗಾಡಿನಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದ ಈತ ಪೇಟಿಂಗ್ ಕಾರ್ಮಿಕನಾಗಿ ಕೆಲಸ ಮಾಡಿಕೊಂಡಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ಆದರೆ, ಈತನ ವಿರುದ್ಧ ಇರುವ ಪ್ರಕರಣ ಏನು ಎಂಬ ಮಾಹಿತಿ ನೀಡಿಲ್ಲ.

ರಾಣಿ ವಿಕ್ಟೋರಿಯಾ ಪ್ರತಿಮೆ ಕಿರೀಟಕ್ಕೆ ಹಾನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಬ್ಬನ್ ಉದ್ಯಾನದಲ್ಲಿ 1906ರಲ್ಲಿ ಸ್ಥಾಪಿಸಿದ ರಾಣಿ ವಿಕ್ಟೋರಿಯಾ ಪ್ರತಿಮೆಯ ಕಿರೀಟಕ್ಕೆ ಹಾನಿಯಾಗಿದೆ. ಈ ಕೃತ್ಯವೆಸಗಿದ ಕಿಡಿಗೇಡಿಗಳನ್ನು ಕೂಡಲೇ ಬಂಧಿಸಬೇಕು’ ಎಂದು ಕಬ್ಬನ್ ಉದ್ಯಾನ ನಡಿಗೆದಾರರ ಸಂಘದ ಅಧ್ಯಕ್ಷ ಉಮೇಶ್ ಆಗ್ರಹಿಸಿದ್ದಾರೆ.

‘ಉದ್ಯಾನದಲ್ಲಿನ ರಾಣಿ ವಿಕ್ಟೋರಿಯಾ ಅವರ ಪ್ರತಿಮೆಯು ವಿಶ್ವದ ಅಮೂಲ್ಯ ಸ್ಮಾರಕಗಳಲ್ಲಿ ಒಂದಾಗಿದೆ. ಇದು ನಮ್ಮ ಪರಂಪರೆಯ ಭಾಗ. ಕಿರೀಟವು ಆಕಸ್ಮಿಕವಾಗಿ ಬೀಳಲು ಸಾಧ್ಯವಿಲ್ಲ. ಈ ಐತಿಹಾಸಿಕ ಸ್ಮಾರಕವನ್ನು ನಾಶಪಡಿಸಲು ಯತ್ನಿಸಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಕಿರೀಟ ಮೂರು ಭಾಗಗಳಾಗಿ ಒಡೆದಿದೆ. ಸ್ಥಳೀಯ ಸಿಸಿಟಿವಿ ದೃಶ್ಯಾವಳಿಗಳನ್ನು ಪೊಲೀಸರು ಪರಿಶೀಲಿಸಿ, ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಿದ್ದಾರೆ. ‘ಇದು ಕಿಡಿಗೇಡಿಗಳು ಮಾಡಿದ ಕೃತ್ಯವಲ್ಲ ಎಂಬುದು ತನಿಖೆ ವೇಳೆ ತಿಳಿದುಬಂದಿದೆ. ಆಕಸ್ಮಿಕವಾಗಿ ಕಿರೀಟ ಬಿದ್ದಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.



ವಿಕ್ಟೋರಿಯಾ ಪ್ರತಿಮೆಯ ಕಿರೀಟ ಇಲ್ಲದಿರುವುದು

ವಿಳಂಬ ಕಾಮಗಾರಿ, ಕಿರಿ ಕಿರಿ

ಎರಡು ವರ್ಷದಿಂದ ನಡೆದಿದೆ ನಾಗಸಂದ್ರ 8ನೇ ಮೈಲಿ ಸರ್ವಿಸ್ ರಸ್ತೆ ಅಭಿವೃದ್ಧಿ

• ಪ್ರಸನ್ನಕುಮಾರ್ ಯಾದವ್

ಪೀಣ್ಯ ದಾಸರಹಳ್ಳಿ: ನಾಗಸಂದ್ರದಲ್ಲಿ ಕಾವೇರಿ ಐದನೇ ಹಂತದ ಪೈಪ್‌ಲೈನ್ ಕಾಮಗಾರಿ ಎರಡು ವರ್ಷಗಳಿಂದ ನಡೆಯುತ್ತಿದೆ. ದೊಡ್ಡ ದೊಡ್ಡ ಕೊಳವೆಗಳನ್ನು ಜೋಡಿಸುವುದಕ್ಕಾಗಿ ಎಂಟನೇ ಮೈಲಿ ಹತ್ತಿರ ಸರ್ವಿಸ್ ರಸ್ತೆಯನ್ನು ಅಗೆಯಲಾಗಿದೆ. ಕೊಳವೆ ಜೋಡಿಸುವ ಕಾರ್ಯ ಮುಗಿದಿದ್ದರೂ, ರಸ್ತೆ ದುರಸ್ತಿಯಾಗಿಲ್ಲ. ನಾಗರಿಕರು ಸಂಚಾರ ಮಾಡದಷ್ಟು ರಸ್ತೆ ಹಾಳಾಗಿದೆ.

ಈ ಭಾಗದಲ್ಲಿ, ಶಾಲೆಗೆ ಮಕ್ಕಳನ್ನು ಕರೆದುಕೊಂಡು ಹೋಗಲು, ಆಸ್ಪತ್ರೆಗೆ ಹೋಗಲು ಜನರು ಹೆಚ್ಚಾಗಿ ಈ ಸರ್ವಿಸ್ ರಸ್ತೆಯನ್ನೇ ಬಳಸುತ್ತಾರೆ. ಈಗ ರಸ್ತೆ ಕಾಮಗಾರಿ ವಿಳಂಬವಾದ ಕಾರಣ, ಜನರು ಮುಖ್ಯರಸ್ತೆಯಲ್ಲಿ ಹೋಗಬೇಕಿದೆ. ಮುಖ್ಯ ರಸ್ತೆ ಸದಾ ವಾಹನ ದಟ್ಟಣೆಯಿಂದ ಕೂಡಿದ್ದು, ಅಲ್ಲಿ ಸಂಚರಿಸುವುದು ದುಸ್ತರವಾಗಿದೆ. ವೇಗವಾಗಿ ಕಾಮಗಾರಿ ಮುಗಿಸಿ ರಸ್ತೆ ಸರಿಪಡಿಸಿದರೆ ಎಲ್ಲರಿಗೂ ಅನುಕೂಲವಾಗುತ್ತದೆ’ ಎಂದು ಸ್ಥಳೀಯರು ಹೇಳುತ್ತಾರೆ.

‘ಎಂಟನೇ ಮೈಲಿ ಸಿಗ್ನಲ್ ಹತ್ತಿರ ಕಿಲೋಮೀಟರ್‌ಗಟ್ಟಲೆ ಟ್ರಾಫಿಕ್ ಜಾಮ್ ಆಗುತ್ತದೆ. ದೂರದ ಜಿಲ್ಲೆಗಳಿಂದ ಬರುವ ಪ್ರಯಾಣಿಕರು ಸರ್ವಿಸ್ ರಸ್ತೆ ದಾಟಲು ಪರದಾಡುವಂತಾಗಿದೆ. ನಾವು ಶಾಲೆಗೆ ಮಕ್ಕಳನ್ನು ಬಿಡುವುದಕ್ಕಾಗಿ, ಆಸ್ಪತ್ರೆಗೆ ಹೋಗುವುದಕ್ಕಾಗಿ ಸರ್ವಿಸ್ ರಸ್ತೆ ಅನುಕೂಲಕರವಾಗಿತ್ತು. ಈಗ ಅದು ಅಧ್ವಾನವಾಗಿದೆ. ಆದಷ್ಟು ಬೇಗ ಕಾಮಗಾರಿ ಮುಗಿಸಿ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು’ ಎಂದು ಸ್ಥಳೀಯ ನಿವಾಸಿ ರಾಜೇಂದ್ರ ಕೊಣ್ಣೂರ ಆಗ್ರಹಿಸಿದರು.

> **ಆಸ್ಪತ್ರೆಗೆ ತುರ್ತಾಗಿ ರೋಗಿಗಳನ್ನು ಕರೆತರುವ ಆಂಬುಲೆನ್ಸ್ ಸಹ ಬರಲು ಆಗುತ್ತಿಲ್ಲ, ತುಂಬಾ ತೊಂದರೆಯಾಗುತ್ತದೆ**
> **ಶ್ರೀನಿವಾಸ್ ಚಿರಕುರಿ**
> ಪ್ರಕ್ರಿಯ ಆಸ್ಪತ್ರೆಯ ಸಿಇಒ

‘5ನೇ ಹಂತದ ಕಾವೇರಿ ನೀರಿನ ಪೈಪ್ ಲೈನ್ ಅಳವಡಿಕೆ ಸಂಪರ್ಕ ಮುಗಿದಿದೆ. ನೀರಿನ ಒತ್ತಡ ಮುಂತಾದ ಪರೀಕ್ಷೆಗಳು ಮುಗಿದಿವೆ. ಇದು ದೊಡ್ಡ ಪೈಪ್‌ಲೈನ್ ಆಗಿರುವುದರಿಂದ ಅಚ್ಚುಕಟ್ಟಾಗಿ ಕೆಲಸ ಮಾಡಬೇಕು. ಅದಕ್ಕಾಗಿ ಸ್ವಲ್ಪ ತಡವಾಗಿದೆ. ಈಗ ಯೋಜನೆಯ ‘ಪ್ರಾಜೆಕ್ಟ್ ವಿಭಾಗ’ದವರಿಗೆ ರಸ್ತೆಗೆ ಡಾಂಬರೀಕರಣ ಮಾಡಲು ಹೇಳಿದ್ದೇವೆ’ ಎಂದು ಜಲಮಂಡಳಿ ಎಇಇ ನಾಗರಾಜು ತಿಳಿಸಿದರು.



ಕಾವೇರಿ ನೀರು ಪೂರೈಕೆ ಪೈಪ್‌ಲೈನ್ ಅನ್ನು ಅಳವಡಿಸಲು ನಾಗಸಂದ್ರ ಸರ್ವಿಸ್ ರಸ್ತೆ ಅಗೆದಿರುವುದು

ಕಲ್ಗುಡಿ, ಸುಧಾರಾಣಿ ಸೇರಿ ನಾಲ್ವರಿಗೆ ‘ಬರಗೂರು ಪ್ರಶಸ್ತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡೋಜ ಡಾ. ಬರಗೂರು ಪ್ರತಿಷ್ಠಾನ ನೀಡುವ ‘ಬರಗೂರು ಪ್ರಶಸ್ತಿ’ಗೆ ವಿಮರ್ಶಕ ಬಸವರಾಜ ಕಲ್ಗುಡಿ, ನಟಿ ಸುಧಾರಾಣಿ ಸೇರಿ ನಾಲ್ವರು ಆಯ್ಕೆಯಾಗಿದ್ದಾರೆ.

ಪ್ರತಿಷ್ಠಾನವು 2023 ಮತ್ತು 2024ನೇ ಸಾಲಿನ ಪ್ರಶಸ್ತಿ ಪ್ರಕಟಿಸಿದೆ. ಚಲನಚಿತ್ರ ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು ಹಾಗೂ ಸಾಹಿತಿ ಕರೀಗೌಡ ಬೀಚನಹಳ್ಳಿ ಅವರೂ ಆಯ್ಕೆಯಾಗಿದ್ದಾರೆ. ಸೃಜನಶೀಲ ಕ್ಷೇತ್ರಗಳಾದ ಸಾಹಿತ್ಯ ಮತ್ತು ಸಿನಿಮಾದಲ್ಲಿ ಸಾಧನೆ ಮಾಡಿದ ತಲಾ ಒಬ್ಬರಿಗೆ ಪ್ರತಿ ವರ್ಷ ಈ ಪ್ರಶಸ್ತಿ ನೀಡಲಾಗುತ್ತಿದೆ.

ಪ್ರಶಸ್ತಿ ಪ್ರದಾನ ಸಮಾರಂಭವು ಇದೇ 23ರಂದು ಸಂಜೆ 5 ಗಂಟೆಗೆ ಇಲ್ಲಿನ ಸರ್ಕಾರಿ ಕಲಾ ಕಾಲೇಜಿನ ಬಾಪೂಜಿ ಸಭಾಂಗಣದಲ್ಲಿ ನಡೆಯಲಿದೆ. ಸಾಹಿತಿ ಹಂ.ಪ. ನಾಗರಾಜಯ್ಯ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಪ್ರತಿಷ್ಠಾನದ ಕಾರ್ಯದರ್ಶಿ ಲಕ್ಷ್ಮೀನಾರಾಯಣ ಎ.ವಿ. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬಸವರಾಜ ಕಲ್ಗುಡಿ



ರಾಜೇಂದ್ರ ಸಿಂಗ್ ಬಾಬು



ಸುಧಾರಾಣಿ



ಕರೀಗೌಡ ಬೀಚನಹಳ್ಳಿ

ಒಟಿಎಸ್ ನೀತಿ ರದ್ದುಪಡಿಸಲು ಎಎಪಿ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ರಮ ಗಣಿಗಾರಿಕೆ ಮಾಡುವ ಲೂಟಿಕೋರರನ್ನು ಬೆಂಬಲಿಸುವ ಒಟಿಎಸ್ (ಒಂದು ಬಾರಿ ಪರಿಹಾರ) ನೀತಿಯನ್ನು ರಾಜ್ಯ ಸರ್ಕಾರ ಕೂಡಲೇ ರದ್ದುಗೊಳಿಸಬೇಕು ಎಂದು ಆಮ್ ಆದ್ಮಿ ಪಕ್ಷ (ಎಎಪಿ) ಆಗ್ರಹಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಎಪಿ ಮಾಧ್ಯಮ ಸಂಚಾಲಕ ಜಗದೀಶ್ ವಿ. ಸದಂ, ‘ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳ ಜಾರಿಗೆ ಹಣಕಾಸು ಕ್ರೋಡೀಕರಣದ ನೆಪದಲ್ಲಿ ಒಟಿಎಸ್ ಪದ್ಧತಿ ಜಾರಿಗೊಳಿಸಿರುವುದು ಖಂಡನೀಯ’ ಎಂದು ಹೇಳಿದರು.

ಎಎಪಿ ತುಮಕೂರು ಘಟಕದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಮಾಂಜನಪ್ಪ, ‘ಪಾವಗಡ ಕ್ಷೇತ್ರದ ಶಾಸಕ ಎಚ್.ವಿ. ವೆಂಕಟೇಶ್ ಅವರ ಪತ್ನಿಯ ಒಡೆತನದ ವೆಂಕಟೇಶ್ವರ ಸ್ಟೋನ್ ಕ್ರಷರ್ ₹10 ಕೋಟಿ ರಾಜಧನ ಹಾಗೂ ದಂಡ ಮೊತ್ತವನ್ನು ಬಾಕಿ ಉಳಿಸಿಕೊಂಡಿದೆ’ ಎಂದು ಆರೋಪಿಸಿ ದಾಖಲೆಗಳನ್ನು ಬಿಡುಗಡೆಗೊಳಿಸಿದರು.

20 ಎಕರೆಯಲ್ಲಿ ಗಣಿಗಾರಿಕೆ ಮಾಡುತ್ತಿದ್ದರೂ ದಂಡದ ಮೊತ್ತ ಕೇವಲ 5 ಎಕರೆಗೆ ಸೀಮಿತವಾಗಿದೆ ಎಂದರು.

ಎಎಪಿ ತುಮಕೂರು ಜಿಲ್ಲಾ ಘಟಕದ ಅಧ್ಯಕ್ಷ ಜಯರಾಮಯ್ಯ ಹಾಜರಿದ್ದರು.



ವಿದ್ಯಾರ್ಥಿ ಡಾ.ಸೂರಜ್ ಸತ್ಯೇಂದ್ರ ಅವರಿಗೆ ಕುಲಪತಿ ಡಾ.ಎಂ.ಕೆ.ರಮೇಶ್ ಪದವಿ ಪ್ರದಾನ ಮಾಡಿದರು. ರಾಜರಾಜೇಶ್ವರಿ ಸಮೂಹ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷ ಡಾ.ಎ.ಸಿ.ಷಣ್ಮುಗಂ, ಡಾ.ವಿಜಯಾನಂದ, ಸಿ.ಎನ್ ಸೀತಾರಾಮ್ ಉಪಸ್ಥಿತರಿದ್ದರು

131 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಪ್ರಜಾವಾಣಿ ವಾರ್ತೆ

ಕೆಂಗೇರಿ: ರಾಜರಾಜೇಶ್ವರಿ ದಂತ ವೈದ್ಯಕೀಯ ಮಹಾವಿದ್ಯಾಲಯದ 28ನೇ ಘಟಿಕೋತ್ಸವದಲ್ಲಿ 131 ವಿದ್ಯಾರ್ಥಿಗಳಿಗೆ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಎಂ.ಕೆ.ರಮೇಶ್ ಪದವಿ ಪ್ರದಾನ ಮಾಡಿದರು.

‘ಜ್ಞಾನಾರ್ಜನೆ ನಿರಂತರ ಪ್ರಕ್ರಿಯೆ. ಬದಲಾಗುವ ಅಗತ್ಯಗಳಿಗೆ ಪೂರಕವಾದ ಮಾಹಿತಿಯನ್ನು ಗಳಿಸಿಕೊಂಡಾಗ ಮಾತ್ರ ಯಾವುದೇ ಕ್ಷೇತ್ರದಲ್ಲಿ ಯಶಸ್ವಿಯಾಗಲು ಸಾಧ್ಯ’ ಎಂದು ರಮೇಶ್ ಹೇಳಿದರು.

ಮುಖ್ಯಾಂಶಗಳು

- ರಾಜರಾಜೇಶ್ವರಿ ದಂತ ವೈದ್ಯಕೀಯ ವಿದ್ಯಾಲಯದ 28ನೇ ಘಟಿಕೋತ್ಸವ
- ಕೌಶಲ, ಸೃಜನಶೀಲತೆ ಗಳಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಕಿವಿಮಾತು

‘ಪ್ರಸಕ್ತ ಸ್ಪರ್ಧಾತ್ಮಕ ಯುಗದಲ್ಲಿ ಸಮಾಜದ ಅಗತ್ಯಗಳು ಕಾಲಕಾಲಕ್ಕೆ ಬದಲಾಗುತ್ತಿರುತ್ತದೆ. ಜನರ ಬೇಡಿಕೆಗಳನ್ನು ಪೂರೈಸುವ ಕೌಶಲ ಹಾಗೂ ಸೃಜನಶೀಲತೆ ಗಳಿಸಿಕೊಳ್ಳಲು ಅಧ್ಯಯನದ ಅವಶ್ಯಕತೆ ನಿರಂತರವಾಗಿರುತ್ತದೆ’ ಎಂದರು.

ರಾಜರಾಜೇಶ್ವರಿ ಸಮೂಹ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷ ಡಾ.ಎ.ಸಿ.ಷಣ್ಮುಗಂ ಮಾತನಾಡಿ, ‘ಶೈಕ್ಷಣಿಕ ಕೇಂದ್ರಗಳಲ್ಲಿ ಸಂಶೋಧನೆ ಹಾಗೂ ಆವಿಷ್ಕಾರಗಳು ನಿರಂತರವಾಗಿ ನಡೆಯುತ್ತಿರಬೇಕು’ ಎಂದರು.

ರಾಜರಾಜೇಶ್ವರಿ ಸಮೂಹ ಸಂಸ್ಥೆಗಳ ಕಾರ್ಯಕಾರಿಣಿ ನಿರ್ದೇಶಕ ಡಾ.ವಿಜಯಾನಂದ, ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸಿ.ಎನ್. ಸೀತಾರಾಮ್, ಪ್ರಾಂಶುಪಾಲ ಡಾ. ಎಚ್. ಗಿರೀಶ್ ಭಾಗವಹಿಸಿದ್ದರು.

ಜಯದೇವ: ಸಿಬ್ಬಂದಿ ಸುರಕ್ಷತೆಗೆ ‘ಸುಹೃದ್’ ಆ್ಯಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿಯ ಸುರಕ್ಷತೆಗೆ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಲೈಂಗಿಕ ದೌರ್ಜನ್ಯ ತಡೆ ಸಮಿತಿ (ಪಾಶ್) ‘ಸುಹೃದ್’ ಆ್ಯಪ್ ಅಭಿವೃದ್ಧಿಪಡಿಸಿದೆ.

ಸಂಸ್ಥೆ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸಂಸ್ಥೆಯ ನಿರ್ದೇಶಕ ಡಾ.ಕೆ.ಎಸ್. ರವೀಂದ್ರನಾಥ್ ಅವರು ಆ್ಯಪ್ ಲೋಕಾರ್ಪಣೆ ಮಾಡಿದರು. ಸಂಸ್ಥೆಯ ಪಾಶ್ ಮುಖ್ಯಸ್ಥೆ ಪ್ರೊ. ಜಯಶ್ರೀ ಖರ್ಗೆ ನೇತೃತ್ವದಲ್ಲಿ ಈ ಆ್ಯಪ್ ಅಭಿವೃದ್ಧಿಪಡಿಸಲಾಗಿದೆ.

ಆ್ಯಪ್ ಬಗ್ಗೆ ಮಾಹಿತಿ ನೀಡಿದ ಪ್ರೊ. ಜಯಶ್ರೀ ಖರ್ಗೆ, ‘ಸಂಸ್ಕೃತದಲ್ಲಿ ‘ಸುಹೃದ್’ ಅಂದರೆ ಒಳ್ಳೆಯ ಹೃದಯ ಎಂಬ ಅರ್ಥವಿದೆ. ಆದ್ದರಿಂದ ಆ್ಯಪ್‌ಗೆ ಈ ಹೆಸರು ಇಡಲಾಗಿದೆ. ದೇಶದ ವಿವಿಧೆಡೆ ಇತ್ತೀಚೆಗೆ ವೈದ್ಯಕೀಯ ಸಿಬ್ಬಂದಿಯ ಮೇಲೆ ಹಲ್ಲೆ ಹಾಗೂ ಲೈಂಗಿಕ ದೌರ್ಜನ್ಯ ಪ್ರಕರಣಗಳು ವರದಿಯಾಗುತ್ತಿರುವುದರಿಂದ ಸಂಸ್ಥೆ ಈ ಕ್ರಮ ಕೈಗೊಂಡಿದೆ. ‘ಶೇಕ್ ಟು ಸೇಫ್ಟಿ’ ಶೀರ್ಷಿಕೆಯಡಿ ಈ ಆ್ಯಪ್ ಪರಿಚಯಿಸಿದ್ದು, ತುರ್ತು ಸಂದರ್ಭದಲ್ಲಿ ಸ್ಮಾರ್ಟ್ ಫೋನ್ ಅನ್ನು ಮೂರು ಬಾರಿ ಅಲ್ಲಾಡಿಸಿದಲ್ಲಿ ಸಂದೇಶಗಳು ಆ್ಯಪ್ ಡೌನ್‌ಲೋಡ್ ಮಾಡಿಕೊಂಡವರಿಗೆ ರವಾನೆಯಾಗಲಿವೆ’ ಎಂದರು.

‘ಆ್ಯಪ್‌ನಲ್ಲಿ ತುರ್ತು ಸಹಾಯ (ಎಸ್‌ಒಎಸ್) ಬಟನ್ ಒತ್ತುವ ಆಯ್ಕೆಯನ್ನೂ ನೀಡಲಾಗಿದೆ. ಸ್ಮಾರ್ಟ್ ಫೋನ್ ಅಲ್ಲಾಡಿಸಿದಲ್ಲಿ ಅಥವಾ ಎಸ್‌ಒಎಸ್ ಆಯ್ಕೆ ಒಮ್ಮೆ ಒತ್ತಿದರೂ ಜಿಪಿಎಸ್ ತಂತ್ರಜ್ಞಾನದ ನೆರವಿನಿಂದ ನಿಗದಿತ ಸ್ಥಳ ಸಹಿತ ತುರ್ತು ಸಂದೇಶವು ಸಂಸ್ಥೆಯ ರಕ್ಷಣಾ ಸಿಬ್ಬಂದಿ, ನಿರ್ದೇಶಕರು, ವೈದ್ಯರು ಹಾಗೂ ಸಿಬ್ಬಂದಿಗೆ ರವಾನೆಯಾಗುತ್ತದೆ. ಇದರಿಂದ ಕೂಡಲೇ ನೆರವಿಗೆ ಧಾವಿಸಲು ಸಾಧ್ಯವಾಗುತ್ತದೆ’ ಎಂದರು.

ಡಾ.ಕೆ.ಎಸ್. ರವೀಂದ್ರನಾಥ್, ‘ವೈದ್ಯರು, ಸಿಬ್ಬಂದಿಗೆ ಸುರಕ್ಷಿತ ವಾತಾವರಣ ನಿರ್ಮಿಸಲು ಆ್ಯಪ್ ಪರಿಚಯಿಸಲಾಗಿದೆ. ಕರ್ತವ್ಯನಿರತ ಸಿಬ್ಬಂದಿ ಸಮಸ್ಯೆಗೆ ಸಿಲುಕಿದಾಗ ಒಬ್ಬರಿಗೊಬ್ಬರು ನೆರವಾಗುವುದು ಆ್ಯಪ್ ಅಭಿವೃದ್ಧಿ ಉದ್ದೇಶ. ವೈದ್ಯಕೀಯ ಸಿಬ್ಬಂದಿ ಮೇಲೆ ಹಲ್ಲೆ, ಮಹಿಳಾ ಸಿಬ್ಬಂದಿ ಮೇಲೆ ಲೈಂಗಿಕ ಕಿರುಕುಳ ತಡೆಗಟ್ಟಲು ಸಾಧ್ಯವಾಗುತ್ತದೆ’ ಎಂದು ಹೇಳಿದರು.

ಸಂಸ್ಥೆಯ ವೈದ್ಯಕೀಯ ಅಧೀಕ್ಷಕ ಡಾ. ಪ್ರಭಾಕರ್, ಆ್ಯಪ್ ಅಭಿವೃದ್ಧಿಗೆ ನೆರವಾಗಿದ್ದ ಡಾ. ಚಂದನಾ ಹಾಗೂ ಎಂಜಿನಿಯರ್ ನವೀನ್ ಹೆಗ್ಡೆ ಅವರು ಉಪಸ್ಥಿತರಿದ್ದರು.

ವಿಕ್ಟೋರಿಯಾ ಆಸ್ಪತ್ರೆಗೆ ಬರುವ ರೋಗಿಗಳ ಸಂಖ್ಯೆ ಹೆಚ್ಚಳ • ನಿತ್ಯ ಸಾವಿರಕ್ಕೂ ಅಧಿಕ ಹೊರರೋಗಿಗಳ ಭೇಟಿ

ಹಾಸಿಗೆಯ ಕೊರತೆ, ರೋಗಿಗಳ ಸಂಕಟ

• ವರುಣ ಹೆಗಡೆ

ಬೆಂಗಳೂರು: ಸದಾ ಗಿಜಿಗುಡುವ ಹೊರರೋಗಿಗಳ ವಿಭಾಗ, ಪರೀಕ್ಷೆಗಾಗಿ ಸರದಿಯಲ್ಲಿ ಕಾಯುತ್ತಿರುವ ರೋಗಿಗಳು, ಅತ್ಯಾಧುನಿಕ ಸೌಲಭ್ಯಗಳು, ಹಾಸಿಗೆಗಳ ಕೊರತೆ, ಆವರಣದಲ್ಲಿಯೇ ವಿಶ್ರಾಂತಿ ಪಡೆಯುವ ರೋಗಿಗಳ ಸಹಾಯಕರು...

ಇದು ರಾಜ್ಯದ ಪ್ರತಿಷ್ಠಿತ ಹಾಗೂ ಹಳೆಯ ಆಸ್ಪತ್ರೆಗಳಲ್ಲಿ ಒಂದಾಗಿರುವ ವಿಕ್ಟೋರಿಯಾ ಆಸ್ಪತ್ರೆಯ ಚಿತ್ರಣ. ಆಸ್ಪತ್ರೆಯು ಗುಣಮಟ್ಟದ ಚಿಕಿತ್ಸೆಗೆ ಹೆಸರಾಗಿರುವುದರಿಂದ ಹೊರ ರಾಜ್ಯಗಳಿಂದಲೂ ರೋಗಿಗಳು ಇಲ್ಲಿಗೆ ಬರುತ್ತಾರೆ. ಇದರಿಂದಾಗಿ ವರ್ಷದಿಂದ ವರ್ಷಕ್ಕೆ ರೋಗಿಗಳ ದಟ್ಟಣೆ ಆಸ್ಪತ್ರೆಗಳ ಒಳಗೆ ಹೆಚ್ಚಿದರೆ, ಹೊರಗಡೆ ಅವರಿಗಾಗಿ ಕಾಯುವ ಸಹಾಯಕರ ಸಂಖ್ಯೆಯೂ ಅಧಿಕವಾಗುತ್ತಿದೆ. ಹೆಚ್ಚಿನವರು ಪಾದಚಾರಿ ಮಾರ್ಗ ಹಾಗೂ ಪಾರ್ಕಿಂಗ್ ಸ್ಥಳದಲ್ಲಿಯೇ ಮಲಗುತ್ತಿದ್ದಾರೆ. ಇದರಿಂದಾಗಿ ಆಸ್ಪತ್ರೆಯ ಆವರಣ ಸದಾ ಗಿಜಿಗುಡುತ್ತಿರುತ್ತದೆ. ವೈದ್ಯರು ಹಾಗೂ ಸಿಬ್ಬಂದಿಗೂ ರೋಗಿಗಳು ಮತ್ತು ಅವರ ಸಹಾಯಕರ ನಿರ್ವಹಣೆ ಸವಾಲಾಗಿ ಪರಿಣಮಿಸಿದೆ.

ಆಸ್ಪತ್ರೆಯ ದಾಖಲಾತಿ ಪ್ರಕಾರ 2014ರಲ್ಲಿ 2.18 ಲಕ್ಷ ಹೊಸ ಪ್ರಕರಣಗಳನ್ನು ವೈದ್ಯರು ನೋಡಿದರೆ, ಈಗ ಆ ಸಂಖ್ಯೆ ಮೂರೂವರೆ ಲಕ್ಷ ಸಮೀಪಿಸಿದೆ. ಅದೇ ರೀತಿ, ವಾರ್ಷಿಕ 26,295 ಒಳರೋಗಿಗಳ ಸಂಖ್ಯೆ ಹತ್ತು ವರ್ಷಗಳ ಬಳಿಕ 50 ಸಾವಿರ ಸಮೀಪಿಸಿದೆ. ಶಸ್ತ್ರಚಿಕಿತ್ಸೆಗಳ ಸಂಖ್ಯೆಯೂ ಈ ಅವಧಿಯಲ್ಲಿ ದುಪ್ಪಟ್ಟಾಗಿದೆ. 2014ರಲ್ಲಿ 5,448 ಪ್ರಮುಖ (ಮೇಜರ್) ಶಸ್ತ್ರಚಿಕಿತ್ಸೆ ಹಾಗೂ 18,526 ಸಣ್ಣ (ಮೈನರ್) ಶಸ್ತ್ರಚಿಕಿತ್ಸೆಗಳನ್ನು ನಡೆಸಲಾಗಿತ್ತು. ಈಗ ಆ ಸಂಖ್ಯೆ ಕ್ರಮವಾಗಿ 10 ಸಾವಿರ ಹಾಗೂ 50 ಸಾವಿರದ ಗಡಿ ಸಮೀಪಿಸಿದೆ.

ವಿಕ್ಟೋರಿಯಾ ಆಸ್ಪತ್ರೆಯು ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಬಿಎಂಸಿಆರ್‌ಐ) ಅಡಿ ಕಾರ್ಯನಿರ್ವಹಿಸುತ್ತಿದ್ದು, ಆರ್ಥೋಪೆಡಿಕ್ಸ್, ಡರ್ಮಟಾಲಜಿ, ಸೈಕಿಯಾಟ್ರಿ, ರೇಡಿಯಾಲಜಿ, ರೇಡಿಯೊಥೆರಪಿ, ಫಿಸಿಯೋಥೆರಪಿ, ನ್ಯೂರಾಲಜಿ, ನ್ಯೂರೋಸರ್ಜರಿ, ಕಾರ್ಡಿಯಾಲಜಿ ಸೇರಿ ವಿವಿಧ ವಿಭಾಗಗಳಿವೆ. ಎಕ್ಸ್‌–ರೆ, ಸಿ.ಟಿ ಸ್ಕ್ಯಾನ್ ಸೇರಿದಂತೆ ವಿವಿಧ ಪರೀಕ್ಷೆಗಳು ಲಭ್ಯ ಇವೆ.

ಐಸಿಯು ಹಾಸಿಗೆ ಸಮಸ್ಯೆ: ವಿಕ್ಟೋರಿಯಾ ಹಾಗೂ ಅಪಘಾತ ಮತ್ತು ತುರ್ತು ಚಿಕಿತ್ಸಾ ಕೇಂದ್ರದಿಂದ 70 ಐಸಿಯು ಹಾಸಿಗೆಗಳಿವೆ. ಈ ಹಾಸಿಗೆಗಳ ಕೊರತೆಯಿಂದ ಕೆಲ ಸಂದರ್ಭದಲ್ಲಿ ಜಯನಗರ ಸಾರ್ವಜನಿಕ ಆಸ್ಪತ್ರೆ, ಕೆ.ಸಿ. ಜನರಲ್ ಸೇರಿದಂತೆ ವಿವಿಧ ಸರ್ಕಾರಿ ಆಸ್ಪತ್ರೆಗಳಲ್ಲಿನ ಹಾಸಿಗೆ ಲಭ್ಯತೆಯ ಮಾಹಿತಿ ಪಡೆದು, ಅಲ್ಲಿಗೆ ರೋಗಿಗಳನ್ನು ಶಿಫಾರಸು ಮಾಡಲಾಗುತ್ತಿದೆ. ವೈದ್ಯರು ಬರೆದುಕೊಡುವ ಎಲ್ಲ ಔಷಧಗಳು ಆಸ್ಪತ್ರೆಯಲ್ಲಿ ಲಭ್ಯವಿರದಿರುವುದರಿಂದ ಹೊರಗಡೆ ಪಡೆಯಲು ಸೂಚಿಸಲಾಗುತ್ತಿದೆ. ಇದು ರೋಗಿಗಳ ಅಸಮಾಧಾನಕ್ಕೆ ಕಾರಣವಾಗಿದೆ.

‘ಆಸ್ಪತ್ರೆಯಲ್ಲಿ ಉತ್ತಮ ಚಿಕಿತ್ಸೆ ದೊರೆಯುತ್ತದೆ. ಆದರೆ, ದಿನವಿಡೀ ಕಾಯಬೇಕಾದ ಪರಿಸ್ಥಿತಿಯಿದೆ. ದೂರದ ಊರುಗಳಿಂದ ಬಂದವರಿಗೆ ಸಮಸ್ಯೆ ಆಗುತ್ತಿದೆ. ವಾರ್ಡ್‌ಗಳಿಗೆ ಬರುವ ಸಿಬ್ಬಂದಿ ಅನಗತ್ಯವಾಗಿ ರೇಗಾಡುತ್ತಾರೆ. ವೈದ್ಯರು ಉತ್ತಮವಾಗಿ ನೋಡುತ್ತಾರೆ’ ಎನ್ನುವುದು ರೋಗಿಗಳ ಹಾಗೂ ಅವರ ಸಹಾಯಕರ ಅಭಿಮತವಾಗಿದೆ.

ವಿಕ್ಟೋರಿಯಾ ಆಸ್ಪತ್ರೆಯಲ್ಲಿನ ವ್ಯವಸ್ಥೆ



764 ವಿಕ್ಟೋರಿಯಾ ಆಸ್ಪತ್ರೆಯಲ್ಲಿರುವ ಹಾಸಿಗೆಗಳು

53 ಆಸ್ಪತ್ರೆಯಲ್ಲಿರುವ ವಾರ್ಡ್‌ಗಳು



500-600 ಚಿಕಿತ್ಸೆ ಪಡೆಯುವ ಸರಾಸರಿ ಒಳರೋಗಿಗಳು

1,000-1,200 ದಿನವೊಂದಕ್ಕೆ ಭೇಟಿ ನೀಡುವ ಹೊರರೋಗಿಗಳ ಸರಾಸರಿ ಸಂಖ್ಯೆ

120-150 ದೈನಂದಿನ ಒಳರೋಗಿಗಳ ದಾಖಲಾತಿ



500 ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರು

9,612 ಕಳೆದ ವರ್ಷ ನಡೆಸಲಾದ ಪ್ರಮುಖ (ಮೇಜರ್) ಶಸ್ತ್ರಚಿಕಿತ್ಸೆಗಳು

42,574 ಕಳೆದ ವರ್ಷ ನಡೆಸಲಾದ ಸಣ್ಣ (ಮೈನರ್) ಶಸ್ತ್ರಚಿಕಿತ್ಸೆಗಳು

44,096 ಕಳೆದ ವರ್ಷ ಚಿಕಿತ್ಸೆ ಪಡೆದ ಒಳರೋಗಿಗಳು

80-100 ಪ್ರತಿನಿತ್ಯ ನಡೆಯುವ ‘ಡಿಸ್ಚಾರ್ಜ್’ಗಳು





ರೋಗಿಗಳಿಗೆ ಚಿಕಿತ್ಸೆ ವಿಳಂಬವಾಗದಂತೆ ನೋಡಿಕೊಳ್ಳಲಾಗುತ್ತಿದೆ. ಐಸಿಯು ಹಾಸಿಗೆ ಭರ್ತಿಯಾಗಿದ್ದಲ್ಲಿ ಮಾತ್ರ ಬೇರೆ ಆಸ್ಪತ್ರೆಗೆ ಶಿಫಾರಸು ಮಾಡಲಾಗುತ್ತದೆ

ಡಾ. ದೀಪಕ್ ಎಸ್., ವಿಕ್ಟೋರಿಯಾ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ



ವಿಕ್ಟೋರಿಯಾ ಆಸ್ಪತ್ರೆಯ ಹೊರರೋಗಿ ವಿಭಾಗದ ಆವರಣದಲ್ಲಿ ರೋಗಿಗಳು ಹಾಗೂ ಅವರ ಸಹಾಯಕರು ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

ಗಡುವು ಮುಗಿದರೂ ಸೇವೆಯಿಲ್ಲ

ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿ ಸಾವಿರ ಹಾಸಿಗೆಯ 11 ಮಹಡಿಗಳ ಕಟ್ಟಡ ನಿರ್ಮಾಣ ಕಾಮಗಾರಿ ನಡೆಯುತ್ತಿದೆ. ಈ ಕಟ್ಟಡ ನಿರ್ಮಾಣ ಕಾಮಗಾರಿಗೆ 2019ರಲ್ಲಿ ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಶಂಕುಸ್ಥಾಪನೆ ನೆರವೇರಿಸಿದ್ದರು. ಇದನ್ನು 2021ರೊಳಗೆ ಪೂರ್ಣಗೊಳಿಸಿ, ಸೇವೆ ಪ್ರಾರಂಭಿಸಲು ಈ ಹಿಂದಿನ ಸರ್ಕಾರ ಗಡುವು ನೀಡಿತ್ತು. ಆದರೆ, ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆ ಈವರೆಗೂ ಪೂರ್ಣಗೊಳಿಸಿಲ್ಲ. ಇದರಿಂದ ರೋಗಿಗಳ ಚಿಕಿತ್ಸೆಗೆ ಸಮಸ್ಯೆಯಾಗಿದೆ. ಬಿಎಂಸಿಆರ್‌ಐ ಮೂಲಗಳ ಪ್ರಕಾರ ಈ ಕಟ್ಟಡದ ಕಾಮಗಾರಿ ಶೇ 90ರಷ್ಟು ಮುಗಿದಿದ್ದು, ಕಾರ್ಯಾರಂಭಕ್ಕೆ ಇನ್ನೂ ಮೂರರಿಂದ ನಾಲ್ಕು ತಿಂಗಳು ಬೇಕು. ಈ ಕಟ್ಟಡ ಕಾರ್ಯಾರಂಭಿಸಿದಲ್ಲಿ ವಿಕ್ಟೋರಿಯಾ ಆಸ್ಪತ್ರೆ ಮೇಲಿನ ರೋಗಿಗಳ ಭಾರ ಇಳಿಯಲಿದೆ.

ಪ್ರಮುಖ ಸಮಸ್ಯೆಗಳು


- ಹೊರರೋಗಿ ವಿಭಾಗದಲ್ಲಿ ದಟ್ಟಣೆಯಿಂದ ವೈದ್ಯರ ಭೇಟಿಗೆ ಅಧಿಕ ಅವಧಿ ಕಾಯಬೇಕಾದ ಸ್ಥಿತಿ
- ಐಸಿಯು ಹಾಸಿಗೆ ಕೊರತೆಯಿಂದ ಕೆಲ ಸಂದರ್ಭಗಳಲ್ಲಿ ಬೇರೆ ಆಸ್ಪತ್ರೆಗೆ ಶಿಫಾರಸು ಮಾಡಬೇಕಾದ ಅನಿವಾರ್ಯ
- ಆಸ್ಪತ್ರೆಗೆ ಬರುವ ರೋಗಿಗಳ ಸಂಖ್ಯೆ ಹೆಚ್ಚಿದ್ದರಿಂದ ಸಿಬ್ಬಂದಿಗೆ ಸವಾಲಾದ ನಿರ್ವಹಣೆ
- ರೋಗಿಗಳ ಕುಟುಂಬಸ್ಥರು, ಸಂಬಂಧಿಗಳಿಗೆ ಆಸ್ಪತ್ರೆ ಒಳಗಡೆ ಪ್ರವೇಶಕ್ಕೆ ನಿರ್ಬಂಧದಿಂದ ಆವರಣದಲ್ಲೇ ಕಾಯುವಿಕೆ
- ಕೆಲ ಔಷಧಗಳು ಲಭ್ಯವಿರದ ಕಾರಣ ಹೊರಗಡೆ ಪಡೆಯುವಂತೆ ಸೂಚನೆ

ಸುದ್ದಿ 2 ನಿಮಿಷ

ಸ್ಫೋಟಕ್ಕೆ ಸಂಚು: ಶಿಕ್ಷೆ ಪ್ರಮಾಣ ಕಾಯ್ದಿರಿಸಿದ ಕೋರ್ಟ್

ಬೆಂಗಳೂರು: ವಿಧ್ವಂಸಕ ಕೃತ್ಯಗಳಿಗೆ ಸ್ಫೋಟಕ ಸಾಮಗ್ರಿ ಪೂರೈಸಿದ್ದ ಪ್ರಕರಣದಲ್ಲಿ ಮೂವರು ಶಂಕಿತ ಉಗ್ರರನ್ನು ದೋಷಿಗಳೆಂದು ನಗರದಲ್ಲಿ ಇರುವ ಎನ್‌ಐಎ ವಿಶೇಷ ನ್ಯಾಯಾಲಯ ತೀರ್ಪು ನೀಡಿದ್ದು, ಶಿಕ್ಷೆಯ ಪ್ರಮಾಣ ಕಾಯ್ದಿರಿಸಿದೆ. ಡಿ.23ರಂದು ಅಪರಾಧಿಗಳಿಗೆ ಶಿಕ್ಷೆಯ ಪ್ರಮಾಣ ಪ್ರಕಟವಾಗಲಿದೆ ಎಂದು ಮೂಲಗಳು ಹೇಳಿವೆ.

ಇಂಡಿಯನ್ ಮುಜಾಹಿದ್ದೀನ್ (ಐಎಂ) ಸಂಘಟನೆಯಲ್ಲಿ ಗುರುತಿಸಿಕೊಂಡಿದ್ದ ಉತ್ತರ ಕನ್ನಡ ಜಿಲ್ಲೆ ಭಟ್ಕಳದ ವೈದ್ಯ ಸೈಯದ್ ಇಸ್ಮಾಯಿಲ್ ಅಫಾಕ್ ಹಾಗೂ ಅಬ್ದುಲ್ ಸುಬೂರು, ಸದ್ದಾಂ ಹುಸೇನ್ ದೋಷಿಗಳೆಂದು ನ್ಯಾಯಾಲಯ ಹೇಳಿದೆ. ಇದೇ ಪ್ರಕರಣದಲ್ಲಿ



ಭಟ್ಕಳದ ಜೈನುಲ್ ಆಬಿದ್ದೀನ್ ಹಾಗೂ ರಿಯಾಜ್ ಅಹ್ಮದ್ ಸೈಯದ್ ಅವರನ್ನು ಆರೋಪ ಮುಕ್ತಗೊಳಿಸಿದೆ.

2015ರಲ್ಲಿ ಬೆಂಗಳೂರಿನ ಪುಲಕೇಶಿನಗರ ಹಾಗೂ ಭಟ್ಕಳ ಪಟ್ಟಣದಲ್ಲಿ ಕಾರ್ಯಾಚರಣೆ ನಡೆಸಿ ಐಎಂನಲ್ಲಿ ಗುರುತಿಸಿಕೊಂಡಿದ್ದ ಶಂಕಿತ ಉಗ್ರರನ್ನು ಬಂಧಿಸಲಾಗಿತ್ತು. ಬಂಧಿತರಿಂದ ಅಪಾರ ಪ್ರಮಾಣದ ಸ್ಫೋಟಕ ವಸ್ತುಗಳನ್ನು ಜಪ್ತಿ ಮಾಡಲಾಗಿತ್ತು.

2015ರಲ್ಲಿ ಅಂದಿನ ಅಮೆರಿಕ ಅಧ್ಯಕ್ಷ ಬರಾಕ್ ಒಬಾಮ ಅವರು ಭಾರತಕ್ಕೆ ಭೇಟಿ ನೀಡಿದ್ದ ವೇಳೆ ಸ್ಫೋಟ ನಡೆಸಲು ಸಂಚು ರೂಪಿಸಿದ್ದ ಆರೋಪ ಮೂವರ ಮೇಲಿತ್ತು. ಉಗ್ರರು ಪಾಕಿಸ್ತಾನದಿಂದ ಬಂದ ಸೂಚನೆಯಂತೆ ಸ್ಫೋಟಕ್ಕೆ ಸಂಚು ರೂಪಿಸಿದ್ದರು ಎಂಬುದು ತನಿಖೆ ವೇಳೆ ಗೊತ್ತಾಗಿತ್ತು.

ಸ್ಫೋಟ ಸಂಚಿನ ಕುರಿತು ಪುಲಕೇಶಿನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಅಂದಿನ ಕೇಂದ್ರ ಅಪರಾಧ ವಿಭಾಗದ ಪೊಲೀಸರು ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಸೌಕರ್ಯವಿಲ್ಲದ ಆಂಬುಲೆನ್ಸ್: ದೂರು

ಬೆಳಗಾವಿ: ಗೌರವಧನ ಹೆಚ್ಚಳ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಅತಿಥಿ ಉಪನ್ಯಾಸಕರು ಧರಣಿ ನಡೆಸುತ್ತಿದ್ದ ವೇಳೆ ಉಪನ್ಯಾಸಕಿಯೊಬ್ಬರು ಪ್ರಜ್ಞೆ ತಪ್ಪಿದ ಬಿದ್ದ ಪ್ರಕರಣ ನಡೆದಿದೆ.

ಪ್ರಜ್ಞೆ ತಪ್ಪಿದ್ದ ಯುವತಿಗೆ ಸ್ಥಳದಲ್ಲೇ ಪ್ರಾಥಮಿಕ ಚಿಕಿತ್ಸೆ ನೀಡಿದ ವೈದ್ಯರೂ ಆಗಿರುವ ವಿಧಾನ ಪರಿಷತ್ ಸದಸ್ಯ ಡಾ.ಧನಂಜಯ ಸರ್ಜಿ ಅವರು ನಂತರ ಆಂಬುಲೆನ್ಸ್ (108) ಮೂಲಕ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದಾರೆ.

ತೀವ್ರ ಬಳಲಿಕೆಯಿಂದ ಪ್ರಜ್ಞೆ ತಪ್ಪಿದ್ದ ಯುವತಿಗೆ ಪ್ರಥಮ ಚಿಕಿತ್ಸೆ ನೀಡಲು ಅಗತ್ಯವಾದ ಒಆರ್‌ಎಸ್ ದ್ರಾವಣ, ಮಧುಮೇಹ, ರಕ್ತದ ಒತ್ತಡ ಪರಿಶೀಲಿಸುವ ಯಂತ್ರ, ಔಷಧಗಳು ಆಂಬುಲೆನ್ಸ್‌ನಲ್ಲಿ ಲಭ್ಯವಿರಲಿಲ್ಲ ಎಂದು ಅತಿಥಿ ಉಪನ್ಯಾಸಕರು ದೂರಿದರು.

‘ಸುವರ್ಣ ವಿಧಾನಸೌಧದಲ್ಲಿ ಅಧಿವೇಶನ ನಡೆಯುತ್ತಿರುವ ಕಾರಣ ರೋಗಿಗಳನ್ನು ಕರೆದುಕೊಂಡು ಹೋಗುವ ಆಂಬುಲೆನ್ಸ್‌ಗಳಿಗೆ ಸೈರನ್ ಕೂಗಿಸದಂತೆ ಪೊಲೀಸರು ನಿರ್ಬಂಧ ವಿಧಿಸಿದ್ದಾರೆ. ಇದು ಸರಿಯಾದ ಕ್ರಮವಲ್ಲ. ಈ ಕುರಿತು ಸರ್ಕಾರದ ಗಮನಕ್ಕೆ ತರುತ್ತೇನೆ’ ಎಂದು ಧನಂಜಯ್ ಸರ್ಜಿ ಹೇಳಿದರು.

ಚಿತ್ರಾವಳಿ



ಕೆಂಗುಂಟೆಯ ಜೆ.ಎಸ್ ಪದವಿ ಪೂರ್ವ ಕಾಲೇಜಿನಲ್ಲಿ ‘ಕಲೋತ್ಸವ2024’ ಕಾರ್ಯಕ್ರಮಕ್ಕೆ ಕಾಂಗ್ರೆಸ್ ಮುಖಂಡ ಹನುಮಂತರಾಯ್ಯಪ್ಪ ಅವರು ಚಾಲನೆ ನೀಡಿದರು. ಶಿಕ್ಷಣ ಸಂಸ್ಥೆ ಅಧ್ಯಕ್ಷ ಎಸ್ ಜಯರಾಮಶೆಟ್ಟಿ, ಪ್ರಾಂಶುಪಾಲರಾದ ವಿಜಯಲಕ್ಷ್ಮಿ, ಸಾಹಿತಿ ಕೆ. ಎಚ್ ತುಕಾರಾಂ ಉಪಸ್ಥಿತರಿದ್ದರು



ವಿಕಾಸ ಟ್ರಸ್ಟ್ ಆಯೋಜಿಸಿದ್ದ ಬೆಂಗಳೂರುಕಾಸರಗೋಡು ಕನ್ನಡ ಸ್ನೇಹ ಮಿಲನ ಕಾರ್ಯಕ್ರಮದಲ್ಲಿ ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎ. ಅಮೃತ್ ರಾಜ್ ಅವರಿಗೆ ‘ಕಾಸರಗೋಡು ಪ್ರಶಸ್ತಿ’ಯನ್ನು ಪ್ರದಾನ ಮಾಡಲಾಯಿತು



ಬೆಂಗಳೂರಿನ ಕಬ್ಬನ್ ಉದ್ಯಾನದ ಎನ್‌ಜಿಒ ಹಾಲ್‌ನಲ್ಲಿ ಬುಧವಾರ ವಕೀಲರ ವಾಹಿನಿ ಆಯೋಜಿಸಿದ 'ವಕೀಲ ಭೂಷಣ ಪ್ರಶಸ್ತಿ'ಯನ್ನು (ಎಡದಿಂದ) ಸಿ.ಎಂ. ನಾಗಭೂಷಣ, ಸಿ.ಎಚ್ ಹನುಮಂತರಾಯ, ಕೆ.ಎನ್ ಸುಬ್ಬಾರೆಡ್ಡಿ, ಹೇಮಲತಾ ಮಹಿಷಿ ಮತ್ತು ಎಚ್ ಕಾಂತರಾಜ ಅವರಿಗೆ ಪ್ರದಾನ ಮಾಡಲಾಯಿತು. ಕೆ. ಚಂದ್ರಕಾಂತ್ ಪಾಟೀಲ್, ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್, ಅಡ್ವೊಕೇಟ್ ಜನರಲ್ ಕೆ. ಶಶಿಕಿರಣ್ ಶೆಟ್ಟಿ, ಹಿರಿಯ ವಕೀಲ ಉದಯ ಹೊಳ್ಳ, ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಎನ್‌ವಿ. ಅಂಜಾರಿಯಾ, ಎಸ್‌ಎನ್ ಪ್ರಶಾಂತ್ ಚಂದ್ರ, ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ. ಅರವಿಂದ್ ಕಾಮತ್, ವಕೀಲರ ವಾಹಿನಿ ಸಂಪಾದಕ ಡಿ.ಎಂ. ಹೆಗ್ಡೆ ಮತ್ತು ಅರವಿಂದ್ ಎಂ. ನೆಗಳೂರು ಉಪಸ್ಥಿತರಿದ್ದರು. ಪ್ರಜಾವಾಣಿ ಚಿತ್ರ

ಕಾರ್ಯಾಗಾರದಲ್ಲಿ ವಿಟಿಪಿಸಿ ವ್ಯವಸ್ಥಾಪಕ ನಿರ್ದೇಶಕ ಬಿ.ಕೆ.ಶಿವಕುಮಾರ್

‘ರಫ್ತಿಗೆ ಪೂರಕವಾದ ವಾತಾವರಣ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಸಣ್ಣ ಕೈಗಾರಿಕಾ ಕ್ಷೇತ್ರ ಬೆಳೆಯಬೇಕಿದೆ
- ಎಂಎಸ್‌ಎಂಇ ಕಾರ್ಯಕ್ಷಮತೆ ಹೆಚ್ಚಿಸಲು ರ‍್ಯಾಂಪ್ ಯೋಜನೆ

ಬೆಂಗಳೂರು: ‘ರಾಜ್ಯದಲ್ಲಿ ರಫ್ತು ವಹಿವಾಟಿಗೆ ಪೂರಕ ವಾತಾವರಣ ಇದ್ದು, ಸಣ್ಣ ಕೈಗಾರಿಕಾ ಕ್ಷೇತ್ರಗಳು ಇನ್ನಷ್ಟು ವಿಸ್ತಾರವಾಗಿ ಬೆಳೆಯಬೇಕಿವೆ’ ಎಂದು ವಿಟಿಪಿಸಿ ವ್ಯವಸ್ಥಾಪಕ ನಿರ್ದೇಶಕ ಬಿ.ಕೆ.ಶಿವಕುಮಾರ್ ಅಭಿಪ್ರಾಯಪಟ್ಟರು.

ಕಾಸಿಯಾ ಸಭಾಂಗಣದಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಜಿಲ್ಲಾ ಕೈಗಾರಿಕಾ ಕೇಂದ್ರ, ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರ (ವಿಟಿಪಿಸಿ) ಹಾಗೂ ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ ಸಹಯೋಗದಲ್ಲಿ ‘ಲೀನ್, ಝೆಡ್‌ಇಡಿ ಮತ್ತು ರಫ್ತು’ ಕುರಿತು ಆಯೋಜಿಸಿದ್ದ ಒಂದು ದಿನದ ಕಾರ್ಯಾಗಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಕೈಗಾರಿಕೆ (ಎಂಎಸ್‌ಎಂಇ) ಕಾರ್ಯಕ್ಷಮತೆಯನ್ನು ಹೆಚ್ಚಿಸುವ ಹಾಗೂ ವೇಗಗೊಳಿಸುವ (ಆರ್‌ಎಎಂಪಿ–ರ‍್ಯಾಂಪ್) ಯೋಜನೆಯ ಅಡಿ ಈ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

‘ವಿಶ್ವಬ್ಯಾಂಕ್ ಮತ್ತು ಸರ್ಕಾರ ಜೊತೆಗೂಡಿ ಎಂಎಸ್‌ಎಂಇಗಳ ಕಾರ್ಯಕ್ಷಮತೆ ಹೆಚ್ಚಿಸುವ ಹಾಗೂ ವೇಗಕ್ಕೆ ಒತ್ತು ನೀಡುವ ರ‍್ಯಾಂಪ್ ಯೋಜನೆಯನ್ನು ಜಾರಿಗೆ ತಂದಿವೆ. ಇದರಿಂದ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಯನ್ನು ತಂತ್ರಜ್ಞಾನ, ಮಾರುಕಟ್ಟೆ ವ್ಯವಸ್ಥೆಗೆ ತಕ್ಕಂತೆ ಪರಿವರ್ತನೆಗೊಳಿಸಬಹುದಾಗಿದೆ ಎಂದು ಹೇಳಿದರು.

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ (ಎಂಎಸ್‌ಎಂಇ ಆ್ಯಂಡ್ ಪಿಪಿ) ಹೆಚ್ಚುವರಿ ನಿರ್ದೇಶಕ ಮಾಣಿಕ್ ವಿ. ರಾಘೋಜಿ, ‘ರ‍್ಯಾಂಪ್ ಯೋಜನೆಯಡಿ ಇಂಥ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಕಾಸಿಯಾ ಸಹಯೋಗದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಆಯೋಜಿಸಲಾಗುತ್ತಿದೆ. ಇದರಿಂದ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ತಿಳಿವಳಿಕೆ ನೀಡಲು ಸಹಕಾರಿಯಾಗಲಿದೆ’ ಎಂದರು.

ಕಾಸಿಯಾ ಅಧ್ಯಕ್ಷ ಎಂ.ಜಿ. ರಾಜಗೋಪಾಲ್, ಡಿಐಸಿ ಜಂಟಿ ನಿರ್ದೇಶಕ ಸುನೀಲ್ ಕುಮಾರ್, ಉಪಾಧ್ಯಕ್ಷ ಗಣೇಶ್ ರಾವ್, ಗೌರವ ಪ್ರಧಾನ ಕಾರ್ಯದರ್ಶಿ ಸುರೇಶ್ ಎನ್. ಸಾಗರ್, ಜಂಟಿ ಕಾರ್ಯದರ್ಶಿ(ನಗರ) ಜೆ.ಎಸ್.ಬಾಬು, ಜಂಟಿ ಕಾರ್ಯದರ್ಶಿ-(ಗ್ರಾಮೀನ) ಸತೀಶ್ ಎನ್., ಖಜಾಂಚಿ ಮಂಜುನಾಥ್ ಎನ್. ಹಾಗೂ ಕೈಗಾರಿಕೋದ್ಯಮಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಮುಡಾಕ್ಕೆ ಬಿಡಿಎ ಮಾದರಿ ಅಧಿಕಾರ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಮಾದರಿಯಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ರಚನೆಯ ಮಸೂದೆಗೆ ವಿಧಾನಸಭೆ ಬುಧವಾರ ಅಂಗೀಕಾರ ನೀಡಿತು.

ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರು ಮಸೂದೆಯನ್ನು ಮಂಡಿಸಿದರು.

ಈ ಕುರಿತು ವಿವರಣೆ ನೀಡಿದ ಸಚಿವರು, ಪ್ರಾಧಿಕಾರಕ್ಕೆ ಹಿರಿಯ ಶ್ರೇಣಿಯ ಐಎಎಸ್ ಅಧಿಕಾರಿಯನ್ನು ಆಯುಕ್ತರನ್ನಾಗಿ ನೇಮಿಸಲು ಅವಕಾಶ ನೀಡಲಾಗಿದೆ. ಪ್ರಾಧಿಕಾರಕ್ಕೆ ಒಬ್ಬ ಅಥವಾ ಇಬ್ಬರು ಶಾಸಕರನ್ನು ನೇಮಿಸಲು ಅವಕಾಶ ಕಲ್ಪಿಸಲಾಗಿದೆ. ಮಹಾನಗರ ಪಾಲಿಕೆ ಸದಸ್ಯರನ್ನು ಕೈಬಿಡಲಾಗುವುದು ಎಂದರು.

ಮೈಸೂರು ನಗರಾಭಿವೃದ್ಧಿ ಪಾಧಿಕಾರವನ್ನು ಆರ್ಥಿಕ ನಿಯಂತ್ರಣ ಮತ್ತು ಶಿಸ್ತಿಗೆ ಒಳಪಡಿಸಲಾಗುವುದು. ಮೈಸೂರು ಪಾರಂಪರಿಕ ಮಹತ್ವ ಕಾಪಾಡಲು ಪ್ರಾಧಿಕಾರದಡಿ ಪಾರಂಪರಿಕ ಕಟ್ಟಡಗಳ ರಕ್ಷಣಾ ಸಮಿತಿಯನ್ನೂ ರಚನೆ ಮಾಡಲಾಗುವುದು ಎಂದೂ ಅವರು ಹೇಳಿದರು.

ಮಸೂದೆ ಕುರಿತು ಮಾತನಾಡಿದ ಬಿಜೆಪಿಯ ಟಿ.ಎಸ್. ಶ್ರೀವತ್ಸ, ‘ಈ ಮಸೂದೆಯ ಮೂಲಕ ಯಾವ ಸುಧಾರಣೆ ತರಲಾಗುವುದು ಎಂಬ ಮಾಹಿತಿ ಇಲ್ಲ. ಸದಸ್ಯರ ಸಂಖ್ಯೆ ಕಡಿಮೆ ಮಾಡುತ್ತಿರುವುದನ್ನು ಬಿಟ್ಟು ಬೇರೆ ಏನೂ ಇಲ್ಲ. ಮುಡಾ ಹಗರಣದ ಕಾರಣ ಶಾಸಕರ ಸಂಖ್ಯೆ ಕಡಿಮೆ ಮಾಡಲಾಗುತ್ತಿದೆ ಎಂಬ ಅಭಿಪ್ರಾಯ ಸಾರ್ವಜನಿಕವಾಗಿ ಕೇಳಿಬರುತ್ತಿದೆ. ಇದರಿಂದ ತಪ್ಪು ಸಂದೇಶ ಹೋಗುತ್ತದೆ’ ಎಂದು ಹೇಳಿದರು.

ಡೆವಲಪರ್‌ಗಳು ಮತ್ತು ಸಾರ್ವಜನಿಕ ಸ್ನೇಹಿಯಾಗುವಂತೆ ಮಸೂದೆ ಇರಬೇಕಿತ್ತು. ಆ ದಿಸೆಯಲ್ಲಿ ಗಮನಹರಿಸಿ ಎಂದು ಶ್ರೀವತ್ಸ ಅವರು ಸಲಹೆ ನೀಡಿದರು.

ಬಿಜೆಪಿಯ ಎಸ್‌.ಟಿ.ಸೋಮಶೇಖರ್ ಅವರು ಮಾತನಾಡಿ, ‘ಶಾಸಕರ ಸಂಖ್ಯೆಯನ್ನು ಕಡಿಮೆ ಮಾಡುತ್ತಿರುವುದು ಸರಿಯಾದ ಕ್ರಮವೇ ಆಗಿದೆ. ಮುಡಾದಲ್ಲಿ ಇನ್ನೂ ಹೆಚ್ಚಿನ ಬಿಗಿ ತರಬೇಕು’ ಎಂದು ಸಲಹೆ ನೀಡಿದರು.

ಬಿಎಸ್‌ಆರ್‌ಪಿ: ಯು ಗರ್ಡರ್ ಅಳವಡಿಕೆ ಆರಂಭ



ಬಿಎಸ್‌ಆರ್‌ಪಿ ಕಾರಿಡಾರ್ 2ರಲ್ಲಿ ಮಂಗಳವಾರ ಸಂಜೆ ಯು ಗರ್ಡರ್ ಅಳವಡಿಸುವ ಕಾರ್ಯ ನಡೆಯಿತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಉಪನಗರ ರೈಲು ಯೋಜನೆಯ (ಬಿಎಸ್‌ಆರ್‌ಪಿ) ಕಾರಿಡಾರ್‌ನಲ್ಲಿ 2026ಕ್ಕೆ ಮೊದಲ ರೈಲು ಸಂಚಾರ ಆರಂಭಿಸುವ ಗುರಿಯನ್ನು ಇಟ್ಟುಕೊಂಡಿರುವ ಕರ್ನಾಟಕ ರೈಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಕಂಪನಿಯು (ಕೆ-ರೈಡ್) ಯು ಗರ್ಡರ್ (ಯು ಆಕಾರದ ತೊಲೆ) ಅಳವಡಿಸುವ ಕಾರ್ಯ ಆರಂಭಿಸಿದೆ.

ದೇಶದಲ್ಲಿಯೇ ಅತಿ ಉದ್ದದ (31 ಮೀಟರ್) ಯು ಗರ್ಡರ್‌ಗಳನ್ನು ಕಾರಿಡಾರ್–2 ಮಲ್ಲಿಗೆ ಮಾರ್ಗದಲ್ಲಿ ಚಿಕ್ಕಬಾಣಾವರದಿಂದ ಯಶವಂತಪುರದವರೆಗೆ ಅಳವಡಿಸುತ್ತಿದೆ. ಇಲ್ಲಿವರೆಗೆ 28 ಮೀಟರ್‌ನ ಯು ಗರ್ಡರ್‌ಗಳೇ ಅತಿ ಉದ್ದದ್ದಾಗಿದ್ದವು.

ಬಿಎಸ್‌ಆರ್‌ಪಿ ಮಾರ್ಗದಲ್ಲಿ 100 ಅಡಿ (31 ಮೀಟರ್) ಉದ್ದದ ಯು ಗರ್ಡರ್ ಅನ್ನು ಯಶವಂತಪುರ ಸಮೀಪ ಯಶಸ್ವಿಯಾಗಿ ಅಳವಡಿಸುವ ಮೂಲಕ ಕೆ–ರೈಡ್ ಎಂಜಿನಿಯರ್, ಅಧಿಕಾರಿಗಳು, ಸಿಬ್ಬಂದಿ, ಕಾರ್ಮಿಕ ವರ್ಗ ಮಹತ್ತರ ಸಾಧನೆ ಮಾಡಿದೆ ಎಂದು ಬೃಹತ್ ಕೈಗಾರಿಕೆ ಮತ್ತು ಮೂಲಸೌಕರ್ಯ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ.

ಗರ್ಡರ್ ವಿವರ: ಗರ್ಡರ್ ಸಂಖ್ಯೆ 25. ಇದರಲ್ಲಿ 70 ಘನ ಮೀಟರ್ ಕಾಂಕ್ರೀಟ್, 12.5 ಟನ್ ಉಕ್ಕು ಬಳಸಲಾಗಿದೆ. 178 ಮೆಟ್ರಿಕ್ ಟನ್ ತೂಕ ಹೊಂದಿದೆ. ವಿಶೇಷವಾಗಿ ವಿನ್ಯಾಸಗೊಳಿಸಿದ ಸಾರಿಗೆ ವಾಹನದ ಮೂಲಕ ಕಾಸ್ಟಿಂಗ್ ಯಾರ್ಡ್‌ನಿಂದ ನಿಗದಿತ ಸ್ಥಳಕ್ಕೆ ರಸ್ತೆ ಮೂಲಕ ಗರ್ಡರ್ ತರಲಾಗಿದೆ. 550 ಟನ್ ಸಾಮರ್ಥ್ಯದ ಒಂದು ಕ್ರೇನ್ ಮತ್ತು 700 ಟನ್ ಸಾಮರ್ಥ್ಯದ ಇನ್ನೊಂದು ಕ್ರೇನ್ ಬಳಸಿ ಗರ್ಡರ್ ಅಳವಡಿಸಲಾಗಿದೆ ಎಂದು ಕೆ–ರೈಡ್ ಅಧಿಕಾರಿಗಳು ತಿಳಿಸಿದ್ದಾರೆ.

ಭೀಕರ ರಸ್ತೆ ಅಪಘಾತ; ಐವರ ಸಾವು

ಪ್ರಜಾವಾಣಿ ವಾರ್ತೆ

ಮುಳಬಾಗಿಲು: ತಾಲ್ಲೂಕಿನ ಕೋನಂಗುಂಟೆ ಸಮೀಪ ಬುಧವಾರ ಮೂರು ದ್ವಿಚಕ್ರ ವಾಹನಗಳಿಗೆ ಸರಕು ಸಾಗಾಣಿಕೆ ಟೆಂಪೊ ಡಿಕ್ಕಿ ಹೊಡೆದ ಪರಿಣಾಮ ದ್ವಿಚಕ್ರ ವಾಹನಗಳಲ್ಲಿದ್ದ ಐವರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ತಾಲ್ಲೂಕಿನ ಬೈರಕೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೋನಂಗುಂಟೆ ಗ್ರಾಮದ ವೆಂಕಟರಾಮಪ್ಪ (45), ಅವರ ಪತ್ನಿ ಅಲುವೇಲಮ್ಮ (30), ರಾಧಪ್ಪ (45), ಗುಡಿಪಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಾಗೇನಹಳ್ಳಿ ವೆಂಕಟರಾಮಪ್ಪ (50) ಹಾಗೂ ಅವರ ಪತ್ನಿ ಗಾಯತ್ರಮ್ಮ(43) ಮೃತರು.

ಗುಡಿಪಲ್ಲಿ ಕಡೆಯಿಂದ ಬಂದ ಸರಕು ಸಾಗಣೆ ಟೆಂಪೊ, ಎನ್.ವಡ್ಡಹಳ್ಳಿ ಕಡೆಯಿಂದ ಸ್ವಗ್ರಾಮಗಳಿಗೆ ತೆರಳುತ್ತಿದ್ದ ಮೂರು ದ್ವಿಚಕ್ರ ವಾಹನಗಳಿಗೆ ಗುದ್ದಿ ಪಲ್ಟಿ ಹೊಡೆದಿದೆ. ಚಾಲಕನಿಗೆ ಗಂಭೀರ ಗಾಯಗಳಾಗಿದ್ದು, ಕೋಲಾರದ ಜಾಲಪ್ಪ ಆಸ್ಪತ್ರೆಗೆ ದಾಖಲಿಸಲಾಗಿದೆ.



ಮುಳಬಾಗಿಲು ತಾಲ್ಲೂಕಿನ ಕೋನಂಗುಂಟೆ ಸಮೀಪ ಐದು ದ್ವಿಚಕ್ರ ವಾಹನಗಳಿಗೆ ಡಿಕ್ಕಿ ಹೊಡೆದು ಪಲ್ಟಿಯಾದ ಬೊಲೆರೊ ಸರಕು ಟೆಂಪೊ

ಸವಾರನಿಗೆ ಗಂಭೀರ ಗಾಯ

ಕೋಲಾರ ತಾಲ್ಲೂಕಿನ ಶ್ರೀನಿವಾಸಪುರ ರಸ್ತೆಯ ಸೋಲಾರ್ ಸಿಟಿ ಮುಂಭಾಗ ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ದ್ವಿಚಕ್ರ ವಾಹನ ಸವಾರರೊಬ್ಬರ ತಲೆಗೆ ಗಂಭೀರ ಗಾಯವಾಗಿದೆ. ಕೋಲಾರ ಕಡೆಯಿಂದ ಶ್ರೀನಿವಾಸಪುರಕ್ಕೆ ತೆರಳುವ ವೇಳೆ ರಸ್ತೆ ಗುಂಡಿ ತಪ್ಪಿಸಲು ಹೋಗಿ ಈ ಅವಘಡ ಸಂಭವಿಸಿದೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಾಲಕ ಸಾವು

ಯಾದಗಿರಿ: ತಾಲ್ಲೂಕಿನ ರಾಮಸಮುದ್ರ ಗ್ರಾಮದಲ್ಲಿ ಚೇಳು ಕುಟುಕಿ ಬುಧವಾರ ಬಾಲಕ ಜಗದೀಶ ಬಸವರಾಜ (6) ಮೃತಪಟ್ಟಿದ್ದಾನೆ. ತಂದೆ ಮತ್ತು ತಾಯಿ ಜತೆ ಜಮೀನಿಗೆ ಹೋಗಿದ್ದಾಗ ಚೇಳು ಕುಟುಕಿದೆ.

ಬಾಲಕನನ್ನು ಜಿಲ್ಲಾ ಆಸ್ಪತ್ರೆಗೆ ಚಿಕಿತ್ಸೆಗೆ ಕರೆತರಲಾಗಿತ್ತು.

‘ಪರಿಶಿಷ್ಟರ ಮೇಲಿನ ದೌರ್ಜನ್ಯ ತಡೆಗೆ ರಾಜ್ಯಗಳು ವಿಫಲ’

ನವದೆಹಲಿ (ಪಿಟಿಐ): ಪರಿಶಿಷ್ಟ ಜಾತಿಗೆ (ಎಸ್‌ಸಿ) ಸೇರಿದವರ ಮೇಲಿನ ದೌರ್ಜನ್ಯ ಪ್ರಕರಣಗಳನ್ನು ಪರಿಣಾಮಕಾರಿಯಾಗಿ ಪರಿಹರಿಸಲು ಅಗತ್ಯ ಕಾರ್ಯವಿಧಾನಗಳನ್ನು ಸ್ಥಾಪಿಸಲು ಹಲವು ರಾಜ್ಯಗಳು ವಿಫಲವಾಗಿವೆ ಎಂದು ಸಂಸದೀಯ ಸಮಿತಿ ಕಳವಳ ವ್ಯಕ್ತಪಡಿಸಿದೆ.

1955ರ ನಾಗರಿಕ ಹಕ್ಕುಗಳ ಸಂರಕ್ಷಣೆ ಕಾಯ್ದೆ, 1989ರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆಯ ಪರಿಣಾಮಕಾರಿ ಜಾರಿ ಮತ್ತು ಅವನ್ನು ಬಲಪಡಿಸುವ ಕಾರ್ಯದಲ್ಲಿ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳನ್ನು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಬೇಕು ಎಂದು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸ್ಥಾಯಿ ಸಮಿತಿ ಶಿಫಾರಸು ಮಾಡಿದೆ.

ಸಮಿತಿಯು ಈ ವರದಿಯನ್ನು ಬುಧವಾರ ಲೋಕಸಭೆಯಲ್ಲಿ ಮಂಡಿಸಲಾಗಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಅನೇಕ ರಾಜ್ಯಗಳು ಲಭ್ಯವಿರುವ ಹಣವನ್ನು ಬಳಸಿಕೊಳ್ಳುತ್ತಿಲ್ಲ, ಅಲ್ಲದೆ ಸಮಸ್ಯೆಗಳನ್ನು ಪರಿಹರಿಸಲು ಸೂಕ್ತ ಕ್ರಮಗಳನ್ನೂ ತೆಗೆದುಕೊಳ್ಳುತ್ತಿಲ್ಲ ಎಂದು ವರದಿ ಹೇಳಿದೆ.

ಪರಿಶಿಷ್ಟ ಜಾತಿಯವರ ವಿರುದ್ಧದ ದೌರ್ಜನ್ಯಗಳನ್ನು ನಿಯಂತ್ರಣಕ್ಕೆ ತರಲು ಕೇಂದ್ರ ಸಂಪನ್ಮೂಲಗಳ ಬೆಂಬಲದೊಂದಿಗೆ ರಾಜ್ಯ ಸರ್ಕಾರಗಳು ಪ್ರಾಮಾಣಿಕ ಮತ್ತು ಸಂಘಟಿತ ಪ್ರಯತ್ನ ಮಾಡಬೇಕು ಎಂದು ಸಮಿತಿ ಹೇಳಿದೆ.

ತಡರಾತ್ರಿವರೆಗೆ ನಡೆದ ವಿಧಾನಸಭಾ ಕಲಾಪ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ಬುಧವಾರವೂ ವಿಧಾನಸಭೆಯ ಕಲಾಪ ತಡರಾತ್ರಿವರೆಗೆ ನಡೆಯಿತು. ರಾತ್ರಿ 12.40ರವರೆಗೂ ಉತ್ತರ ಕರ್ನಾಟಕದ ಅಭಿವೃದ್ಧಿ ಕುರಿತು ಚರ್ಚೆ ನಡೆಯಿತು. ನಂತರ ಅನುದಾನ ಬಿಡುಗಡೆ ವಿಳಂಬದ ಕುರಿತು ಚರ್ಚೆ ಆರಂಭವಾಯಿತು.

ಸಭಾಧ್ಯಕ್ಷ ಯು.ಟಿ. ಖಾದರ್, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಕೃಷ್ಣ ಬೈರೇಗೌಡ, ಪ್ರಿಯಾಂಕ್ ಖರ್ಗೆ, ಹಲವು ಸದಸ್ಯರು ಸದನದಲ್ಲಿದ್ದರು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಅನುದಾನ ಕೊಡಿಸುವುದಾಗಿ ಮಧ್ಯವರ್ತಿಗಳು ಗುತ್ತಿಗೆದಾರರಿಂದ ಹಣ ವಸೂಲಿ ಮಾಡುತ್ತಿದ್ದಾರೆ ಎಂದು ಬಿಜೆಪಿಯ ಎಚ್‌.ಕೆ. ಸುರೇಶ್ ಮತ್ತು ಸಿಮೆಂಟ್ ಮಂಜು ಆರೋಪಿಸಿದರು.

ಉತ್ತರಿಸಿದ ಪ್ರಿಯಾಂಕ್, ‘ನಮ್ಮ ಕಚೇರಿಯಲ್ಲಿ ಹಣ ಸಂಗ್ರಹಿಸುತ್ತಿಲ್ಲ. ಆರೋಪಕ್ಕೆ ಪೂರಕ ಸಾಕ್ಷ್ಯಗಳಿದ್ದರೆ ಒದಗಿಸಲಿ, ತನಿಖೆ ನಡೆಸಿ, ಕ್ರಮ ಜರುಗಿಸುತ್ತೇನೆ’ ಎಂದರು.

ಕಂಬಳಕ್ಕೆ ಸರ್ಕಾರದಿಂದ ಅನುದಾನ ನೀಡುವಂತೆ ಕಾಂಗ್ರೆಸ್ ಸದಸ್ಯ ಅಶೋಕ್ ಕುಮಾರ್ ರೈ ಆಗ್ರಹಿಸಿದರು. ಸಂಬಂಧಿಸಿದ ಸಚಿವರ ಜೊತೆ ಚರ್ಚಿಸಿ ಕ್ರಮ ಕೈಗೊಳ್ಳುವುದಾಗಿ ಕೃಷ್ಣ ಬೈರೇಗೌಡ ಭರವಸೆ ನೀಡಿದರು. ಆಸ್ಪತ್ರೆಗಳಲ್ಲಿನ ಅವ್ಯವಸ್ಥೆ ಕುರಿತು ಕಾಂಗ್ರೆಸ್ಸಿನ ದರ್ಶನ್ ಧ್ರುವ ನಾರಾಯಣ್ ಗಮನ ಸೆಳೆದರು. ಆರೋಗ್ಯ ಸಚಿವರ ಜೊತೆ ಚರ್ಚಿಸಿ ಪರಿಹಾರ ಒದಗಿಸುವುದಾಗಿ ಕೃಷ್ಣ ಬೈರೇಗೌಡ ಭರವಸೆ ನೀಡಿದರು.

‘ಏಕಕಾಲಕ್ಕೆ ಚುನಾವಣೆ’ ಪರಿಶೀಲನೆಗೆ ಸಮಿತಿ

ಜೆಪಿಸಿಗೆ ಪ್ರಿಯಾಂಕಾ ಸದಸ್ಯೆ?

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭೆ ಹಾಗೂ ವಿಧಾನಸಭೆ ಚುನಾವಣೆಗಳನ್ನು ಏಕಕಾಲದಲ್ಲಿ ನಡೆಸುವ ‘ಒಂದು ದೇಶ ಒಂದು ಚುನಾವಣೆ’ಗೆ ಸಂಬಂಧಿಸಿದ ಎರಡು ಮಸೂದೆಗಳನ್ನು ಪರಿಶೀಲಿಸಲು ರಚಿಸಲಾಗುವ ಜಂಟಿ ಸಂಸದೀಯ ಸಮಿತಿಯಲ್ಲಿ (ಜೆಪಿಸಿ) ಲೋಕಸಭೆಯ 21 ಸದಸ್ಯರು ಇರಲಿದ್ದು, ಅವರಲ್ಲಿ ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಹಾಗೂ ಬಿಜೆಪಿಯ ಬಾನ್ಸುರಿ ಸ್ವರಾಜ್ ಹಾಗೂ ಎನ್‌ಸಿಪಿ (ಶರತ್‌ಚಂದ್ರ ಪವಾರ್ ಬಣ) ಪಕ್ಷದ ಸುಪ್ರಿಯಾ ಸುಳೆ ಇರಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಜೆಪಿಸಿಯಲ್ಲಿ ಒಟ್ಟು 31 ಸದಸ್ಯರು ಇರಲಿದ್ದಾರೆ. ಯಾರೆಲ್ಲ ಅದರಲ್ಲಿ ಇರಲಿದ್ದಾರೆ ಎಂಬುದು ಇನ್ನೂ ಅಧಿಕೃತವಾಗಿ ಪ್ರಕಟವಾಗಿಲ್ಲ. ಲೋಕಸಭಾ ಸದಸ್ಯರ ಪೈಕಿ ಆಡಳಿತಾರೂಢ ಎನ್‌ಡಿಎಗೆ ಸೇರಿದ 14 ಸಂಸದರು ಹಾಗೂ ವಿಪಕ್ಷಗಳ ಏಳು ಮಂದಿ ಜೆಪಿಸಿಯಲ್ಲಿ ಇರಲಿದ್ದಾರೆ.

ಲೋಕಸಭೆಯಿಂದ ಕಾಂಗ್ರೆಸ್‌ನ ಮೂವರು, ಬಿಜೆಪಿಯಿಂದ ಹತ್ತು, ಎನ್‌ಡಿಎ ಮೈತ್ರಿಕೂಟಕ್ಕೆ ಸೇರಿದ ಟಿಡಿಪಿ, ಜನಸೇನಾ, ಶಿವಸೇನಾ ಹಾಗೂ ಆರ್‌ಎಲ್‌ಡಿಯಿಂದ ತಲಾ ಒಬ್ಬರು ಜೆಪಿಸಿಯಲ್ಲಿ ಇರಲಿದ್ದಾರೆ. ವಿಪಕ್ಷಗಳ ಪೈಕಿ ಲೋಕಸಭೆಯಿಂದ ಟಿಎಂಸಿ, ಸಮಾಜವಾದಿ ಪಕ್ಷ, ಡಿಎಂಕೆ ಹಾಗೂ ಎನ್‌ಸಿಪಿ (ಎಸ್‌ಪಿ)ಯ ತಲಾ ಒಬ್ಬರು ಇರಲಿದ್ದಾರೆ.

ಜಂಟಿ ಸಂಸದೀಯ ಸಮಿತಿಗೆ 21 ಸದಸ್ಯರನ್ನು ಆಯ್ಕೆ ಮಾಡಲು ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಅವರು ಗುರುವಾರ ಲೋಕಸಭೆಯಲ್ಲಿ ನಿಲುವಳಿ ಮಂಡಿಸಲಿದ್ದಾರೆ. ಜೆಪಿಸಿಗೆ ಸದಸ್ಯರನ್ನು ಆಯ್ಕೆ ಮಾಡಲು ರಾಜ್ಯಸಭೆಯಲ್ಲೂ ನಿಲುವಳಿ ಮಂಡನೆಯಾಗಲಿದೆ.

ಪ್ರಿಯಾಂಕಾ ಅವರಲ್ಲದೆ ಕಾಂಗ್ರೆಸ್‌ನಿಂದ ಮನೀಷ್ ತಿವಾರಿ ಹಾಗೂ ಸುಖದೇವ್ ಭಗತ್ ಲೋಕಸಭೆಯಿಂದ ಜೆಪಿಸಿಯಲ್ಲಿ ಇರಲಿದ್ದಾರೆ. ರಾಜ್ಯಸಭೆಯಿಂದ ರಣದೀಪ್ ಸಿಂಗ್ ಸುರ್ಜೇವಾಲ ಅವರು ಜೆಪಿಸಿಯಲ್ಲಿ ಇರಲಿ ಎಂದು



ಪ್ರಿಯಾಂಕಾ ಗಾಂಧಿ ವಾದ್ರಾ

ಬಯಸಿರುವುದಾಗಿ ಕಾಂಗ್ರೆಸ್ ಮೂಲಗಳು ಹೇಳಿವೆ.

ಟಿಎಂಸಿಯ ಕಲ್ಯಾಣ್ ಬ್ಯಾನರ್ಜಿ ಲೋಕಸಭೆಯಿಂದ ಜೆಪಿಸಿ ಪ್ರತಿನಿಧಿಸುವರು ಹಾಗೂ ಅದೇ ಪಕ್ಷದ ಸಾಕೇತ್ ಗೋಖಲೆ ರಾಜ್ಯಸಭೆಯಿಂದ ಪ್ರತಿನಿಧಿಸಲಿ ಎಂದು ಪಕ್ಷ ಬಯಸಿದೆ. ಡಿಎಂಕೆ ಸೆಲ್ವಗಣಪತಿ ಅವರನ್ನು ಲೋಕಸಭೆಯಿಂದ ಜೆಪಿಸಿಗೆ ಶಿಫಾರಸು ಮಾಡಿದ್ದು, ಎಸ್‌ಪಿಯಿಂದ ಧರ್ಮೇಂದ್ರ ಯಾದವ್ ಜೆಪಿಸಿಯಲ್ಲಿ ಇರುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಪಿ.ಪಿ. ಚೌಧರಿ, ಸಿ.ಎಂ. ರಮೇಶ್, ಪುರುಷೋತ್ತಮ್ ರುಪಾಲಾ, ಅನುರಾಗ್ ಠಾಕೂರ್, ಭರ್ತೃಹರಿ ಮಹತಾಬ್, ಸಂಬಿತ್ ಪಾತ್ರಾ, ವಿಷ್ಣು ದಯಾಳ್ ಶರ್ಮ, ಅನಿಲ್ ಬಲೂನಿ ಹಾಗೂ ವಿಷ್ಣು ದತ್ತ ಶರ್ಮ ಅವರೂ ಜೆಪಿಸಿಗೆ ಬಿಜೆಪಿಯ ಆಯ್ಕೆ ಆಗಿದ್ದಾರೆ ಎಂದಿವೆ.

ಶಿವಸೇನೆಯ ಶ್ರೀಕಾಂತ ಶಿಂದೆ ಅವರೂ ಜೆಪಿಸಿಯಲ್ಲಿ ಇರಲಿದ್ದಾರೆ ಎನ್ನಲಾಗಿದೆ.

ವಿಧಾನಸಭೆಯಲ್ಲಿ ಸರ್ಕಾರದ ಉತ್ತರ: ಬಿಜೆಪಿ ಸದಸ್ಯರಿಂದ ಪ್ರತಿಭಟನೆ, ಸಭಾತ್ಯಾಗ

ಬಿಜೆಪಿ ಸುಳ್ಳಿನಿಂದ ವಕ್ಫ್ ಗೊಂದಲ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): 'ರೈತರು, ಮಠ-ಮಂದಿರ, ಶಾಲೆಗಳ ಆಸ್ತಿಯನ್ನು ವಕ್ಫ್ ಮಂಡಳಿ ಸ್ವಾಧೀನಕ್ಕೆ ತೆಗೆದುಕೊಳ್ಳುವ ಯಾವ ಪ್ರಯತ್ನವೂ ನಮ್ಮ ಸರ್ಕಾರದ ಅವಧಿಯಲ್ಲಿ ನಡೆದಿಲ್ಲ. ರಾಜಕೀಯ ಲಾಭಕ್ಕಾಗಿ ಬಿಜೆಪಿ ಸೃಷ್ಟಿಸಿದ ಸುಳ್ಳಿನಿಂದ ವಕ್ಫ್ ಆಸ್ತಿಯ ಗೊಂದಲ ಸೃಷ್ಟಿಯಾಗಿ, ಅನುಮಾನಕ್ಕೆ ಕಾರಣವಾಯಿತು' ಎಂದು ರಾಜ್ಯ ಸರ್ಕಾರ ವಿಧಾನಸಭೆಯಲ್ಲಿ ವಿರೋಧ ಪಕ್ಷ ಬಿಜೆಪಿ ವಿರುದ್ಧ ಬುಧವಾರ ವಾಗ್ದಾಳಿ ನಡೆಸಿತು.

ವಕ್ಫ್ ಆಸ್ತಿಗೆ ಸಂಬಂಧಿಸಿದ ಗೊಂದಲ ಕುರಿತು ನಿಯಮ 69ರ ಅಡಿಯಲ್ಲಿ ನಡೆದ ಚರ್ಚೆಗೆ ಸರ್ಕಾರ ಉತ್ತರ ನೀಡಿತು. ವಕ್ಫ್ ಸಚಿವ ಜಮೀರ್ ಅಹಮದ್ ಖಾನ್ ಅವರೇ ಉತ್ತರ ನೀಡಬೇಕೆಂದು ಆಗ್ರಹಿಸಿದ ಬಿಜೆಪಿ, ಭಾರಿ ಗದ್ದಲ ನಡೆಸಿತು. ಸರ್ಕಾರ ಅದಕ್ಕೆ ಮಣಿಯದೇ ಇದ್ದಾಗ, ಉತ್ತರ ಸರಿಯಿಲ್ಲ ಎಂದು ದೂಷಿಸಿ ಪ್ರತಿಪಕ್ಷ ಸದಸ್ಯರು ಸಭಾತ್ಯಾಗ ನಡೆಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ವಕ್ಫ್ ಸಚಿವ ಬಿ.ಜೆಡ್. ಜಮೀರ್ ಅಹಮದ್ ಖಾನ್ ಮತ್ತು ಕಂದಾಯ ಸಚಿವ ಕೃಷ್ಣ ಬೈರೇಗೌಡ ಮೂವರು ಸರ್ಕಾರದ ಪರವಾಗಿ ಉತ್ತರ ನೀಡಿದರು. ಬಿಜೆಪಿ ಸದಸ್ಯರು ಆರೋಪ ಮಾಡುವಾಗ ಪ್ರಸ್ತಾಪಿಸಿದ್ದ ಪ್ರತಿ ಪ್ರಕರಣಕ್ಕೂ ಸಂಬಂಧಿಸಿದ ದಾಖಲೆಗಳನ್ನು ಸದನದಲ್ಲಿ ಮಂಡಿಸಿ, ತಿರುಗೇಟು ನೀಡಿದರು.

'ವಕ್ಫ್ ಮಂಡಳಿಗೆ ಸೇರಿದ ಆಸ್ತಿಗಳ ರಕ್ಷಣೆ ಹಾಗೂ ಗೊಂದಲ ನಿವಾರಣೆಗೆ ನಾನು ವಕ್ಫ್ ಅದಾಲತ್ ನಡೆಸಿದ್ದೆ. ಅದನ್ನೇ ಬಿಜೆಪಿಯವರು ತಪ್ಪಾಗಿ ಬಿಂಬಿಸಿದರು. ಕೇಂದ್ರ ಸರ್ಕಾರ ರೂಪಿಸಿರುವ ಕಾಯ್ದೆಯಂತೆ ವಕ್ಫ್ ಆಸ್ತಿಗಳ ರಕ್ಷಣೆಯ ಕೆಲಸ ನಡೆದಿದೆ. ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಎಲ್ಲ ಪಕ್ಷಗಳ ನೇತೃತ್ವದ ಸರ್ಕಾರಗಳ ಅವಧಿಯಲ್ಲೂ ವಕ್ಫ್ ಆಸ್ತಿಗಳ ಒತ್ತುವರಿದಾರರಿಗೆ ನೋಟಿಸ್ ನೀಡಲಾಗಿದೆ. ಬಿಜೆಪಿ ನೇತೃತ್ವದ ಸರ್ಕಾರ ಇದ್ದಾಗಲೇ ಹೆಚ್ಚು ನೋಟಿಸ್‌ಗಳನ್ನು ನೀಡಲಾಗಿತ್ತು. ಬಿಜೆಪಿ ಅಧಿಕಾರದಲ್ಲಿದ್ದಾಗಲೇ 2010, 2020 ಮತ್ತು 2021ರಲ್ಲಿ ನಾಲ್ಕು ಆದೇಶಗಳನ್ನು ಹೊರಡಿಸಲಾಗಿದೆ' ಎಂದು ಜಮೀರ್ ಅಹಮದ್ ದಾಖಲೆಗಳನ್ನು ಪ್ರದರ್ಶಿಸಿದರು.

ಜಮೀರ್ ಅಹಮದ್ ಅವರ ಬಳಿಕ ಮುಖ್ಯಮಂತ್ರಿಯವರು ಸ್ಪಷ್ಟನೆ ನೀಡಿದರು. ಅದಾದ ಬಳಿಕ ಕೃಷ್ಣ ಬೈರೇಗೌಡ ಉತ್ತರ ಮುಂದುವರಿಸಲು ಎದ್ದು ನಿಂತರು. ಕಂದಾಯ ಸಚಿವರು ಉತ್ತರ ನೀಡಬಾರದು ಎಂದು ಆಗ್ರಹಿಸಿ ಬಿಜೆಪಿ ಸದಸ್ಯರು ಗದ್ದಲ ನಡೆಸಿದರು. 'ಕಂದಾಯ ಸಚಿವರಿಗೆ ಉತ್ತರ ನೀಡುವ ಅಧಿಕಾರವಿದೆ' ಎಂದು ಸಭಾಧ್ಯಕ್ಷ ಯು.ಟಿ. ಖಾದರ್ ತಿಳಿಸಿದರು.

ಬಳಿಕ, ವಕ್ಫ್ ಆಸ್ತಿಗಳ ಪಟ್ಟಿಯನ್ನು ಪ್ರಕಟಿಸಿದ್ದ 1974ರ ಗೆಜೆಟ್ ಅಧಿಸೂಚನೆಯನ್ನು ರದ್ದುಗೊಳಿಸುವಂತೆ ಬಿಜೆಪಿ ಸದಸ್ಯರು ಪಟ್ಟುಹಿಡಿದರು. 'ಗೆಜೆಟ್ ಅಧಿಸೂಚನೆ ರದ್ದುಗೊಳಿಸುವ ಪ್ರಶ್ನೆಯೇ ಇಲ್ಲ' ಎಂದು ಮುಖ್ಯಮಂತ್ರಿ ಹೇಳಿದರು. ಸರ್ಕಾರದ ನಿಲುವನ್ನು ವಿರೋಧಿಸಿ ಬಿಜೆಪಿ ಸದಸ್ಯರು ಸಭಾತ್ಯಾಗ ಮಾಡಿದರು. ಎನ್‌ಡಿಎ ಮೈತ್ರಿಕೂಟದ ಭಾಗವಾಗಿರುವ ಜೆಡಿಎಸ್ ಸದಸ್ಯರು ಸದನದಲ್ಲೇ ಉಳಿದರು. ನಂತರ ಉತ್ತರ ಮುಂದುವರಿಸಿದ ಕೃಷ್ಣ ಬೈರೇಗೌಡ, ಬಿಜೆಪಿ ಪ್ರಸ್ತಾಪಿಸಿದ್ದ ಪ್ರಕರಣವಾರು ಮಾಹಿತಿ ನೀಡಿದರು.



ಬೆಳಗಾವಿ ಸುವರ್ಣಸೌಧದಲ್ಲಿ ನಡೆಯುತ್ತಿರುವ ವಿಧಾನ ಸಭೆಯಲ್ಲಿ ಸಚಿವ ಬಿ.ಝಡ್.ಜಮೀರ್ ಅಹಮದ್ ಖಾನ್ ಮಾತನಾಡಿದರು

ಖುದ್ದು ಸ್ಥಳಕ್ಕೆ ಬರುವೆ; ಸಚಿವ ಜಮೀರ್

'ಯಾವುದೇ ದೇವಸ್ಥಾನ, ರುದ್ರಭೂಮಿ, ಶಾಲೆ, ರೈತರಿಗೆ ವಕ್ಫ್ ಮಂಡಳಿಯಿಂದ ತೊಂದರೆ ಆಗುವುದಿಲ್ಲ. ಅಂತಹ ಪ್ರಕರಣವಿದ್ದರೆ ತಿಳಿಸಿ. ನಾನೇ ಖುದ್ದಾಗಿ ಸ್ಥಳಕ್ಕೆ ಬಂದು ಸಮಸ್ಯೆ ಪರಿಹರಿಸುವೆ' ಎಂದು ವಕ್ಫ್ ಸಚಿವ ಬಿ.ಝಡ್. ಜಮೀರ್ ಅಹಮದ್ ಖಾನ್ ಸದನದಲ್ಲಿ ಭರವಸೆ ನೀಡಿದರು.

ಈಗ ಜ್ಞಾನೋದಯ ಆಯ್ತಾ?

'ನಿಮ್ಮದೇ (ಬಿಜೆಪಿ) ಸರ್ಕಾರ ಇತ್ತು. ಆಗ ನೀವು ಯಾಕೆ ವಕ್ಫ್ ಆಸ್ತಿಗೆ ಸಂಬಂಧಿಸಿದಂತೆ ಕ್ರಮ ಕೈಗೊಂಡಿಲ್ಲ. ಈಗ ನಿಮಗೆ ಜ್ಞಾನೋದಯ ಆಯ್ತಾ? ವಕ್ಫ್ ವಿಚಾರ ಇಟ್ಟುಕೊಂಡು ಉಪ ಚುನಾವಣೆಗೆ ಹೋದ್ರಿ. ಶಿಗ್ಗಾವಿ, ಚನ್ನಪಟ್ಟಣ, ಸಂಡೂರಿನಲ್ಲಿ ಜನರು ನಿಮಗೆ ಮೂರು ನಾಮ ಹಾಕಿ, ಚೊಂಬು ಕೊಟ್ಟಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಜೆಪಿಯವರನ್ನು ಛೇಡಿಸಿದರು.

'ಅಪಪ್ರಚಾರ ಮಾಡ್ತೀರಾ? ಮಾನ, ಮರ್ಯಾದೆ ಇಲ್ವಾ? ನಿಮಗೆ ನಾಚಿಕೆ ಆಗಬೇಕು. ಈಗ ನೀವು ಸುಳ್ಳು ಹೇಳಿದರೆ ಹೆದರಬೇಕೆ' ಎಂದು ಕೇಳಿದರು.

ಸರ್ಕಾರ ನೀಡಿದ ಪ್ರಕರಣವಾರು ಉತ್ತರ

- ಆಳಂದ ತಾಲ್ಲೂಕಿನ ಬೀರದೇವರ ಗುಡಿ ಜಮೀನಿನ ಖಾತೆಯನ್ನು 2020ರಲ್ಲಿ ಬಿಜೆಪಿ ಸರ್ಕಾರ ವಕ್ಫ್ ಹೆಸರಿಗೆ ವರ್ಗಾಯಿಸಿತ್ತು, 2024ರ ಸೆಪ್ಟೆಂಬರ್ 9ರಂದು ಬೀರದೇವರಗುಡಿ ಹೆಸರಿಗೆ ಸ್ಥಿರೀಕರಿಸಲಾಗಿದೆ
- ಶಿರಸಿ ನಗರದಲ್ಲಿ 50 ಎಕರೆ ವಕ್ಫ್ ಆಸ್ತಿ ಇದೆ ಎಂಬುದು ಸುಳ್ಳು. ಅಲ್ಲಿರುವುದು 7 ಎಕರೆ 22 ಗುಂಟೆ ಮಾತ್ರ
- ಮುದ್ದೇಬಿಹಾಳದಲ್ಲಿ ಸರ್.ಎಂ. ವಿಶ್ವೇಶ್ವರಯ್ಯ ಓದಿದ ಸರ್ಕಾರಿ ಶಾಲೆಯ ಜಮೀನು ದರ್ಗಾ ಹೆಸರಿನಲ್ಲಿತ್ತು, 1.04 ಗುಂಟೆ ದರ್ಗಾಕ್ಕೆ ನೀಡಿ, 17.12 ಗುಂಟೆ ಶಾಲೆಗೆ ನೀಡಲಾಗಿದೆ
- ಮೈಸೂರಿನ ಕೃಷ್ಣರಾಜ ಕ್ಷೇತ್ರದ ಮುನೇಶ್ವರನಗರದಲ್ಲಿ ವಕ್ಫ್ ಮಂಡಳಿಗೆ 13 ಎಕರೆ 04 ಗುಂಟೆ ಜಮೀನಿದೆ. 1 ಎಕರೆ 32 ಗುಂಟೆ ಜಮೀನಿನಲ್ಲಿ ಅನಧಿಕೃತವಾಗಿ 100 ಮನೆಗಳನ್ನು ನಿರ್ಮಿಸಲಾಗಿದೆ. ವಕ್ಫ್ ಮಂಡಳಿ ಯಾವುದೇ ಹಕ್ಕು ಕೋರಿಲ್ಲ. ಆದರೆ, ಸ್ಥಳೀಯ ಹಿಂದೂ ಧರ್ಮದ ವ್ಯಕ್ತಿಯೊಬ್ಬರು ಹೈಕೋರ್ಟ್‌ನಲ್ಲಿ ದಾವೆ ಹೂಡಿದ್ದಾರೆ. ಹೈಕೋರ್ಟ್ ನಿರ್ದೇಶನದಂತೆ ನೋಟಿಸ್ ನೀಡಲಾಗಿದೆ
- ಶ್ರೀರಂಗಪಟ್ಟಣದಲ್ಲಿ ಕಣ್ತಪ್ಪಿನಿಂದ ಚಿಕ್ಕಮ್ಮನಗುಡಿ ಜಮೀನಿನಲ್ಲಿ ವಕ್ಫ್ ಹೆಸರು ಬಂದಿತ್ತು, ಸರಿಪಡಿಸಲಾಗಿದೆ
- ವಿಜಯಪುರ ಜಿಲ್ಲೆಯ ದೇವರಹಿಪ್ಪರಗಿ ಗ್ರಾಮದ ಸರ್ವೆ ನಂಬರ್ 220ರಲ್ಲಿ ವಕ್ಫ್ ಮಂಡಳಿಗೆ 2 ಎಕರೆ ಜಮೀನಿದೆ. ಅದಕ್ಕೂ ಸೋಮೇಶ್ವರ ದೇವಸ್ಥಾನಕ್ಕೂ ಸಂಬಂಧವಿಲ್ಲ
- ವಿಜಯಪುರ ಜಿಲ್ಲಾಧಿಕಾರಿ, ಎಸ್‌ಪಿ ಬಂಗಲೆಗಳು, ಆಸ್ಪತ್ರೆಗಳು ವಕ್ಫ್ ಮಂಡಳಿಗೆ ಸೇರಿವೆ ಎಂಬುದು ಸುಳ್ಳು

'ಗೊಂದಲದಿಂದ ಸಮಾಜ ಒಡೆದಿದೆ'

'ವಿರೋಧ ಪಕ್ಷದವರು ರಾಜಕೀಯ ಲಾಭಕ್ಕಾಗಿ ಸೃಷ್ಟಿಸಿದ ವಕ್ಫ್ ಆಸ್ತಿ ಗೊಂದಲದಿಂದ ಸಮಾಜ ಒಡೆದುಹೋಗಿದೆ. ರಾಜ್ಯದಲ್ಲಿ ಇರುವುದು 3 ಕೋಟಿ ಎಕರೆ ಕೃಷಿ ಜಮೀನು. ವಕ್ಫ್ ಮಂಡಳಿ ಬಳಿ ಇರುವುದು 20 ಸಾವಿರ ಎಕರೆ ಮಾತ್ರ, ಶೇ 0.006ರಷ್ಟು ಜಮೀನನ್ನು ಮುಂದಿಟ್ಟುಕೊಂಡು ಗೊಂದಲ ಸೃಷ್ಟಿಸಿ ರಾಜ್ಯದ ಜನರ ನೆಮ್ಮದಿ ಕೆಡಿಸುತ್ತಿದ್ದಾರೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ವಾಗ್ದಾಳಿ ನಡೆಸಿದರು.

'ವಕ್ಫ್ ಮಂಡಳಿಗೆ 1.12 ಲಕ್ಷ ಎಕರೆ ಜಮೀನು ಇತ್ತು, ಅದರಲ್ಲಿ 92,000 ಎಕರೆ ಮಂಡಳಿ ಸ್ವಾಧೀನಕ್ಕೆ ಬಂದೇ ಇಲ್ಲ. ಇಷ್ಟು ಗದ್ದಲ ನಡೆಸಿದ ಬಿಜೆಪಿ ನೇತೃತ್ವದ ಸರ್ಕಾರ ಇದ್ದಾಗಲೇ ವಕ್ಫ್ ಮಂಡಳಿ ಹೆಸರಿಗೆ 4,500 ಆಸ್ತಿಗಳ ಖಾತೆ ಮಾಡಲಾಗಿದೆ. ಕಾಂಗ್ರೆಸ್ ನೇತೃತ್ವದ ಸರ್ಕಾರದ ಅವಧಿಯಲ್ಲಿ ಆಗಿರುವುದು 600 ಆಸ್ತಿಗಳ ಖಾತೆ ಮಾತ್ರ' ಎಂದರು.

'ಮುಸ್ಲಿಮರು ಹಿಂದೂಗಳ ಆಸ್ತಿ ಕಬಳಿಸುತ್ತಿದ್ದಾರೆ ಎಂಬ ಭೀತಿ ಸೃಷ್ಟಿಸುವ ಪ್ರಯತ್ನವೂ ನಡೆದಿದೆ. ವಕ್ಫ್ ಆಸ್ತಿಗಳ ಒತ್ತುವರಿಗೆ ಸಂಬಂಧಿಸಿದ ಪೂರ್ಣ ಮಾಹಿತಿಯನ್ನು ಸರ್ಕಾರ ಸಂಗ್ರಹಿಸಿದೆ. 16,204 ಮಂದಿ ಬಾಧಿತರಿದ್ದಾರೆ. 9,121 ಮಂದಿ ಮುಸ್ಲಿಮರಿದ್ದಾರೆ, 2,080 ಮಂದಿ ಹಿಂದೂಗಳು' ಎಂದು ತಿಳಿಸಿದರು.

ಮಸೂದೆ ಬೀಳಿಸಲು ಹೋಗಿ ತಾನೇ ಬಿದ್ದ ವಿಪಕ್ಷ

ಒಂದು ಮತದ ಅಂತರದಿಂದ ಅಂಗೀಕಾರವಾದ ಮಸೂದೆ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ವಿಧಾನ ಪರಿಷತ್‌ನಲ್ಲಿ ಬುಧವಾರ ಮಂಡಿಸಿದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ (ತಿದ್ದುಪಡಿ) ಮಸೂದೆ ಬೀಳಿಸಲು ಹೋದ ಬಿಜೆಪಿ-ಜೆಡಿಎಸ್ ಸದಸ್ಯರು ಮತ ವಿಭಜನೆಗೆ ಕೇಳಿ, ತಾವೇ ಬೇಸ್ತುಬಿದ್ದ ಪ್ರಸಂಗ ನಡೆಯಿತು.

ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಮಂಡಿಸಿದ ಮಸೂದೆ ಹಲವು ನಾಟಕೀಯ ಬೆಳವಣಿಗೆಗಳ ನಡುವೆ ಒಂದು ಮತದ ಅಂತರದಿಂದ ಅಂಗೀಕಾರ ಪಡೆಯಿತು.

ಮಸೂದೆಗೆ ತೀವ್ರ ವಿರೋಧ ವ್ಯಕ್ತಪಡಿಸಿದ ಬಿಜೆಪಿ-ಜೆಡಿಎಸ್ ಸದಸ್ಯರು, ಮುಖ್ಯಮಂತ್ರಿಯನ್ನು ವಿಶ್ವ ವಿದ್ಯಾಲಯದ ಕುಲಾಧಿಪತಿ ಮಾಡುವ ಹಾಗೂ ರಾಜ್ಯಪಾಲರ ಅಧಿಕಾರ ಮೊಟಕುಗೊಳಿಸುವ ಸರ್ಕಾರದ ನಡೆಯನ್ನು ಖಂಡಿಸಿದರು. ಮತವಿಭಜನೆಗೆ ಪಟ್ಟು ಹಿಡಿದರು.

ವಿರೋಧ ಪಕ್ಷಗಳ ಕೋರಿಕೆಯಂತೆ ಸಭಾಪತಿ ಬಸವರಾಜ ಹೊರಟ್ಟಿ ಅವರು ಮಸೂದೆ ಅಂಗೀಕಾರದ ಪ್ರಸ್ತಾವವನ್ನು ಮತ ವಿಭಜನೆಗೆ ಹಾಕಿದರು. ಪೂರ್ವಸಿದ್ಧತೆ ಮಾಡಿಕೊಳ್ಳದೆ, ಸದಸ್ಯರಿಗೆ ಕಡ್ಡಾಯವಾಗಿ ಹಾಜರಿರುವಂತೆ ಸೂಚಿಸದೆ (ವಿಪ್ ಜಾರಿ) ಬಿಜೆಪಿ-ಜೆಡಿಎಸ್ ತರಾತುರಿಯಲ್ಲಿ ಸದಸ್ಯರನ್ನು ಒಗ್ಗೂಡಿಸುವ ಕೆಲಸ ಮಾಡಿದವು. ಆರಂಭದಲ್ಲಿ ಇದ್ದ ಕೆಲವರು ಹೊರಗೆ ತೆರಳಿದ್ದರು. ಕೆಲವರು ಮಧ್ಯಾಹ್ನದ ನಂತರ ಸದನಕ್ಕೆ ಬಂದಿರಲಿಲ್ಲ. ಇಂತಹ ಸನ್ನಿವೇಶದಲ್ಲೇ ಮತವಿಭಜನೆಯ ಸಮಯದ ಗಂಟೆ ಬಾರಿಸಿತು. ಗಂಟೆಯ ಸದ್ದು ನಿಲ್ಲುತ್ತಿದ್ದಂತೆ ಮಾರ್ಷಲ್‌ಗಳು ಎಲ್ಲ ಬಾಗಿಲುಗಳನ್ನೂ ಬಂದ್ ಮಾಡಿದರು.

ಬಾಗಿಲುಗಳು ಬಂದ್ ಆದ ನಂತರ ಬಿಜೆಪಿ ಸದಸ್ಯ ಎಂ.ಜಿ. ಮುಳೆ ಓಡೋಡಿ ಬಂದರು. ಆದರೆ, ಸಮಯ ಮೀರಿದ್ದ ಕಾರಣ ಅವರಿಗೆ ಮತ ಪ್ರಕ್ರಿಯೆಯಲ್ಲಿ ಭಾಗವಹಿಸುವ ಅವಕಾಶ ದೊರೆಯಲಿಲ್ಲ. ಮತವಿಭಜನೆಯಲ್ಲಿ ಮಸೂದೆ ಪರವಾಗಿ ಕಾಂಗ್ರೆಸ್‌ಗೆ 26 ಹಾಗೂ ವಿರುದ್ಧವಾಗಿ ಬಿಜೆಪಿ-ಜೆಡಿಎಸ್‌ಗೆ 25 ಮತಗಳು ಬಂದವು. ಒಂದು ಮತದ ಅಂತರದಿಂದ ಮಸೂದೆ ಅಂಗೀಕಾರವಾಯಿತು.

ತಟಸ್ಥವಾಗಿ ಉಳಿದ ಉಪಸಭಾಪತಿ: ಮಸೂದೆಯ ಅಂಗೀಕಾರದ ಪ್ರಸ್ತಾವವನ್ನು ಮತವಿಭಜನೆಗೆ ಹಾಕಿದಾಗ ಸದಸ್ಯರು ಎದ್ದು ನಿಲ್ಲುವ ಮೂಲಕ ಪರ-ವಿರೋಧದ ಸಮ್ಮತಿ ನೀಡಿದರು. ಉಪಸಭಾಪತಿ ಬಿಜೆಪಿ ಎಂ.ಕೆ. ಪ್ರಾಣೇಶ್ ಅವರನ್ನು ಎದ್ದು ನಿಲ್ಲುವಂತೆ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ವಿನಂತಿಸಿದರು. ಆದರೆ, ಪ್ರಾಣೇಶ್ ಅವರು ತಮ್ಮ ಆಸನ ಬಿಟ್ಟು ಕದಲಲಿಲ್ಲ.

ಮುಳೆ ಅವರು ಒಂದು ನಿಮಿಷ ಮುಂಚೆ ಒಳಗೆ ಬಂದಿದ್ದರೂ ಅಥವಾ ಪ್ರಾಣೇಶ್ ಅವರು ಎದ್ದುನಿಂತಿದ್ದರೂ ಮತ ವಿಭಜನೆ ಸಮಬಲ ಪಡೆಯುತ್ತಿತ್ತು. ಸಭಾಪತಿಯ ನಿರ್ಣಾಯಕ ಮತ ಮಸೂದೆಯ ಭವಿಷ್ಯ ನಿರ್ಧರಿಸುತ್ತಿತ್ತು. ಪೂರ್ವ ತಯಾರಿಯಿಲ್ಲದೇ, ದುಡುಕಿದ ವಿಪಕ್ಷ ನಾಯಕರು ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಹೋಗಿ, ತಾವೇ ಸಿಕ್ಕಿಬಿದ್ದರು.



ವಿಧಾನ ಸಭೆಯ ಕಲಾಪದಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿದರು

10 ಮಸೂದೆಗಳಿಗೆ ಅಂಗೀಕಾರ

ಕರ್ನಾಟಕ ಧನ ವಿನಿಯೋಗ ಮಸೂದೆ, ಬಿಬಿಎಂಪಿ ಮಸೂದೆ, ಬಸವನ ಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ ಮಸೂದೆ, ಖನಿಜ ಹಕ್ಕುಗಳು ಮತ್ತು ಖನಿಜ ಹೊಂದಿರುವ ಭೂಮಿ ತೆರಿಗೆ ಮಸೂದೆ, ಕಾರ್ಮಿಕ ಕಲ್ಯಾಣ ನಿಧಿ ಮಸೂದೆ, ಪ್ರವಾಸೋದ್ಯಮ ರೋಪ್‌ವೇ ಮಸೂದೆ, ಸಿವಿಲ್ ಕ್ರಿಯಾ ಸಂಹಿತೆ ಮಸೂದೆ, ಭೂ ಕಂದಾಯ ಮಸೂದೆ, ಮೋಟಾರು ವಾಹನಗಳ ತೆರಿಗೆ ನಿರ್ಧರಣೆಯ ಎರಡನೇ ತಿದ್ದುಪಡಿ ಮಸೂದೆಗಳಿಗೆ ವಿಧಾನ ಪರಿಷತ್ ಅಂಗೀಕಾರ ನೀಡಿತು.

ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ತಿದ್ದುಪಡಿ ಮಸೂದೆ ವಾಪಸ್ ಪಡೆಯಲು ಪರಿಷತ್ ಸಮ್ಮತಿಸಿತು.

5022 ಆಸ್ತಿ ಹಸ್ತಾಂತರ: ಕೃಷ್ಣ ಬೈರೇಗೌಡ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): 'ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ 5,022 ಆಸ್ತಿಗಳನ್ನು ನೋಂದಣಿ ಮಾಡಿ ಮುಜರಾಯಿ ದೇವಸ್ಥಾನಗಳಿಗೆ ಹಸ್ತಾಂತರ ಮಾಡಲಾಗಿದೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಎನ್. ರವಿಕುಮಾರ್ ಅವರ ಪ್ರಶ್ನೆಗೆ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಪರ ಉತ್ತರಿಸಿದ ಅವರು, 'ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ ಶ್ರೀರಂಗನಾಥಸ್ವಾಮಿ ದೇವಸ್ಥಾನಕ್ಕೆ ಸೇರಿದ ಒಂದು ಸಾವಿರ ಎಕರೆ ಜಮೀನನ್ನು ಒಂದು ತಿಂಗಳ ಒಳಗೆ ಲೆಕ್ಕ ಪರಿಶೋಧನೆ ನಡೆಸಿ ವರದಿ ನೀಡಬೇಕೆಂದು ಸೂಚಿಸಲಾಗಿದೆ. ಸರ್ಕಾರ ವಶಪಡಿಸಿಕೊಂಡ ನಂತರ ದೇವಸ್ಥಾನಕ್ಕೆ ಸಮರ್ಪಣೆ ಮಾಡಲಾಗುವುದು. ದೇವಸ್ಥಾನಕ್ಕೆ ಸೇರಿದ ಆಸ್ತಿ ಅದಕ್ಕೇ ಸೇರಬೇಕು' ಎಂದರು.

'ದಾನಿಗಳು ಶ್ರೀರಂಗನಾಥಸ್ವಾಮಿ ದೇವಸ್ಥಾನಕ್ಕೆ 1,198 ಎಕರೆ ಜಮೀನು 1939ರಲ್ಲಿ ದಾನ ಮಾಡಿದ್ದರು. ಮಹಿಳಾ ಶಿಕ್ಷಣ, ವೈದ್ಯಕೀಯ ಶಿಕ್ಷಣ ಮತ್ತಿತರ ಸಾರ್ವಜನಿಕ ಉಪಯೋಗಕ್ಕೆ ಈ ಜಾಗ ಅನುಕೂಲವಾಗಲೆಂದು ನೀಡಲಾಗಿತ್ತು. ಇದರಲ್ಲಿ 198 ಎಕರೆ ಜಮೀನನ್ನು ನಿರಾಶ್ರಿತರಿಗೆ ನೀಡಲಾಗಿದೆ. ಖಾತೆ ಇಲ್ಲದವರಿಗೆ ಖಾತೆ ಮಾಡಿಕೊಡಲಾಗಿದೆ. ನಿಯಮಗಳ ಪ್ರಕಾರ ದೇವಸ್ಥಾನದ ಆಸ್ತಿಯನ್ನು ಯಾರಿಗೂ ಪರಭಾರೆ ಮಾಡಲು ಅವಕಾಶವಿಲ್ಲ' ಎಂದರು.

'ಚೊಳನಾಯಕನಹಳ್ಳಿ, ಬ್ಯಾಲಾಳು, ಪೆದ್ದನಪಾಳ್ಯ, ದೊಡ್ಡ-ಮಾರನಹಳ್ಳಿ ಮತ್ತು ಕುರುಬರಹಳ್ಳಿ ಗ್ರಾಮಗಳಲ್ಲಿರುವ ಈ ಜಾಗ ಒತ್ತುವರಿಯಾಗಿದೆ. ನ್ಯಾಯಾಲಯದ ತೀರ್ಪಿನಂತೆ ಕೇವಲ ಮೂರು ತಿಂಗಳಲ್ಲಿ 56 ಎಕರೆ ಜಮೀನನ್ನು ಮತ್ತೆ ವಶಪಡಿಸಿಕೊಳ್ಳಲಾಗಿದೆ. ದೇವಸ್ಥಾನದ ಜಮೀನನ್ನು ಉಳಿಸಿಕೊಳ್ಳಲು ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡಲಿದೆ' ಎಂದು ಭರವಸೆ ನೀಡಿದರು.

ಪ್ರಜಾಸೌಧ: 'ರಾಜ್ಯದಲ್ಲಿನ 49 ಹೊಸ ತಾಲ್ಲೂಕುಗಳಲ್ಲಿ ಮುಂದಿನ ಆರು ತಿಂಗಳ ಒಳಗೆ ಪ್ರಜಾಸೌಧ ನಿರ್ಮಿಸಲಾಗುವುದು' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್‌ನ ಜಗದೇವ್ ಗುತ್ತೇದಾರ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ರಾಜ್ಯದ 65 ಹೊಸ ತಾಲ್ಲೂಕುಗಳ ಪೈಕಿ ಈ ಹಿಂದಿನ ಸರ್ಕಾರದ ಐದು ವರ್ಷಗಳಲ್ಲಿ 14 ಹೊಸ ತಾಲ್ಲೂಕುಗಳಲ್ಲಿ ಹೊಸ ಕಟ್ಟಡ ನಿರ್ಮಿಸಿತ್ತು. ನಮ್ಮ ಸರ್ಕಾರ ಈಗಾಗಲೇ 27 ಕಟ್ಟಡಗಳನ್ನು ನಿರ್ಮಿಸಿದೆ' ಎಂದರು.

ಸಿಬ್ಬಂದಿ ನೇಮಕ ಪ್ರಕ್ರಿಯೆ ಆರಂಭ: 'ಸಾರಿಗೆ ಇಲಾಖೆಯಲ್ಲಿ ಒಟ್ಟು 9 ಸಾವಿರ ಸಿಬ್ಬಂದಿ ನೇಮಕಕ್ಕೆ ಅನುಮತಿ ಸಿಕ್ಕಿದ್ದು, ಈ ಪೈಕಿ 4 ಸಾವಿರ ಸಿಬ್ಬಂದಿ ನೇಮಕ ಪ್ರಕ್ರಿಯೆ ಆರಂಭವಾಗಿದೆ' ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಎಸ್.ವಿ. ಸಂಕನೂರ ಅವರ ಪ್ರಶ್ನೆಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಪರ ಉತ್ತರಿಸಿದ ಲಾಡ್, 'ಸಿಬ್ಬಂದಿ ನೇಮಕಾತಿ ಮಾಡಿಕೊಳ್ಳಬೇಕೆಂಬ ಬೇಡಿಕೆ ಇತ್ತು. 9 ಸಾವಿರ ಸಿಬ್ಬಂದಿ ನೇಮಕಾತಿಗೆ ಅರ್ಥಿಕ ಇಲಾಖೆ ಅನುಮೋದನೆ ನೀಡಿದೆ' ಎಂದರು.



ವಿಧಾನಪರಿಷತ್ ಕಲಾಪದಲ್ಲಿ ಸಚಿವ ಕೃಷ್ಣ ಬೈರೇಗೌಡ ಮಾತನಾಡಿದರು ಪ್ರಜಾವಾಣಿ ಚಿತ್ರ

'ಜವಾನ್ ಸಮ್ಮಾನ್' ಬಡಾವಣೆ

'ಪ್ರತಿ ಜಿಲ್ಲೆಯಲ್ಲಿ 'ಜವಾನ್ ಸಮ್ಮಾನ್' ಹೆಸರಿನಲ್ಲಿ ಬಡಾವಣೆಗಳನ್ನು ನಿರ್ಮಿಸಿ ಮಾಜಿ ಸೈನಿಕರಿಗೆ ನಿವೇಶನಗಳನ್ನು ನೀಡಲಾಗುವುದು' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ವಿಧಾನಪರಿಷತ್‌ನಲ್ಲಿ ಜೆಡಿಎಸ್ ಸಿ.ಎನ್. ಮಂಜೇಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ಮಾಜಿ ಸೈನಿಕರಿಗೆ ವ್ಯವಸಾಯ ಉದ್ದೇಶಕ್ಕಾಗಿ 2 ಎಕರೆ ಜಮೀನು ನೀಡಬೇಕೆಂಬ ನಿಯಮವಿದೆ. ಆದರೆ, ನೀಡಲು ಸರ್ಕಾರದ ಬಳಿ ಭೂಮಿ ಇಲ್ಲ. ಹೀಗಾಗಿ, ಈ ಕಾನೂನಿಗೆ ತಿದ್ದುಪಡಿ ತಂದು ಎಲ್ಲರಿಗೂ ನಿವೇಶನ ನೀಡಲು ಕ್ರಮ ಕೈಗೊಳ್ಳಲಾಗುವುದು. ಅಧಿವೇಶನ ಮುಗಿಯುತ್ತಿದ್ದಂತೆ ಎಲ್ಲ ಜಿಲ್ಲಾಧಿಕಾರಿಗಳಿಗೆ ಜಾಗ ಗುರುತಿಸಲು ಸೂಚಿಸಲಾಗುವುದು' ಎಂದರು.

ಫಲಾನುಭವಿಗಳ ಜೊತೆ ಸಂವಾದ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

'ಗೃಹಲಕ್ಷ್ಮಿ ಯೋಜನೆ ಸ್ಥಗಿತ ಪ್ರಶ್ನೆಯೇ ಇಲ್ಲ'

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): 'ಮಹಿಳೆಯರನ್ನು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಸಬಲರನ್ನಾಗಿಸುವ 'ಗೃಹಲಕ್ಷ್ಮಿ' ಯೋಜನೆಯನ್ನು ಸ್ಥಗಿತಗೊಳಿಸುವ ಪ್ರಶ್ನೆಯೇ ಇಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಗೃಹಲಕ್ಷ್ಮಿ' ಫಲಾನುಭವಿಗಳ ಜೊತೆ ಬುಧವಾರ ಸಂವಾದ ನಡೆಸಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಗೃಹಲಕ್ಷ್ಮಿ ಯೋಜನೆಯ ಹಣದಿಂದ ನಾನಾ ಅವಕಾಶಗಳನ್ನು ಸೃಷ್ಟಿಸಿಕೊಂಡ 20ಕ್ಕೂ ಹೆಚ್ಚು ಫಲಾನುಭವಿಗಳೊಂದಿಗೆ ಸಂವಾದ ನಡೆಸಿದ್ದೇನೆ. ಈ ಯೋಜನೆಯಿಂದ ಜೀವನದಲ್ಲಿ ಆಗಿರುವ ಲಾಭಗಳ ಬಗ್ಗೆ ಅವರು ವಿವರಿಸಿದರು' ಎಂದರು.

'ಗೃಹಲಕ್ಷ್ಮಿ ಯೋಜನೆಯು ಅತ್ತೆ ಸೊಸೆಯ ಮಧ್ಯೆ ಜಗಳ ತಂದಿದೆ ಎಂದು ಬಿಜೆಪಿಯವರು ಆರೋಪಿಸಿದ್ದರು. ಆದರೆ, ಇಂದಿನ ಕಾರ್ಯಕ್ರಮಕ್ಕೆ ಅತ್ತೆ-ಸೊಸೆಯರು ಜೊತೆ ಜೊತೆಯಾಗಿ ಹೆಚ್ಚಿನ ಸಂಖ್ಯೆಯಲ್ಲಿ ಬಂದು ತಮಗಾಗಿರುವ ಲಾಭದ ಬಗ್ಗೆ ಮಾತನಾಡಿದ್ದಾರೆ. ಈ ಯೋಜನೆಯಿಂದ ಮಹಿಳೆಯರು ಆರ್ಥಿಕವಾಗಿ, ಸಾಮಾಜಿಕವಾಗಿ ಸಬಲರಾಗುತ್ತಿರುವುದು ಸಂತೋಷದ ವಿಚಾರ. ಆದ್ದರಿಂದ ಮಹಿಳೆಯರನ್ನು ಸಶಕ್ತಗೊಳಿಸುವ ಈ ಯೋಜನೆಯನ್ನು ಮುಂದುವರಿಸಲಿದ್ದೇವೆ' ಎಂದರು.

ಎಐಸಿಸಿ ಅಧಿವೇಶನಕ್ಕೆ ಅಡ್ಡಿಪಡಿಸಿದರೆ ಕ್ರಮ: ಎಐಸಿಸಿ ಅಧಿವೇಶನದ ದಿನವೇ ಬಿಜೆಪಿಯವರು ವಕ್ಫ್ ಹೋರಾಟ ಹಮ್ಮಿಕೊಂಡಿರುವ ಬಗ್ಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, 'ಗಾಂಧೀಜಿಯವರು ಸ್ವಾತಂತ್ರ್ಯ ಹೋರಾಟದ ನೇತೃತ್ವ ವಹಿಸದೇ ಹೋಗಿದ್ದರೆ, ಎಲ್ಲರೂ ಸ್ವತಂತ್ರವಾಗಿರಲು ಸಾಧ್ಯವಾಗುತ್ತಿತ್ತೇ? ಸಂವಿಧಾನ ರಚನೆಯಾದ ನಂತರವೇ ಇಂತಹ ಹಕ್ಕುಗಳನ್ನು ಚಲಾಯಿಸಲು ಸಾಧ್ಯವಾಗಿರುವುದು. ಮಹಾತ್ಮಗಾಂಧಿ ಆಧರಿಸಿದ ಎಐಸಿಸಿ ಅಧಿವೇಶನವನ್ನು ಅಡ್ಡಿಪಡಿಸಿದರೆ ಕಾನೂನಿನ ರೀತಿ ಕ್ರಮಕೈಗೊಳ್ಳಲಾಗುವುದು' ಎಂದು ಎಚ್ಚರಿಕೆ ನೀಡಿದರು.

'ಹೆಡಗೇವಾರ್, ಗೋಳ್ವಾಲ್ಕರ್, ಸಾವರ್ಕರ್ ಸೇರಿದಂತೆ ಬಿಜೆಪಿಯವರು ಸಂವಿಧಾನ ವಿರೋಧಿಗಳು. ಭಾರತೀಯತೆಯಲ್ಲಿ ನಂಬಿಕೆಯಿರಿಸದಿರುವ ಬಿಜೆಪಿಯವರು ಮನುಸ್ಮೃತಿಗೆ ಒತ್ತು ನೀಡುವವರಾಗಿದ್ದಾರೆ' ಎಂದರು.

ಬಿಜೆಪಿಗೆ ನೈತಿಕತೆ ಇಲ್ಲ: '₹150 ಕೋಟಿ ಆಮಿಷ ಮತ್ತು ವಕ್ಫ್ ಪ್ರಕರಣಗಳನ್ನು ಸಿಬಿಐಗೆ ನೀಡಲಿ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ವಿಜಯೇಂದ್ರ ಆಗ್ರಹಿಸುತ್ತಿರುವ ಬಗ್ಗೆ ಕೇಳಿದಾಗ, '2008ರಿಂದ 2013ರವರೆಗೆ ಹಾಗೂ 2018ರಿಂದ 2023ರವರೆಗೆ ಬಿಜೆಪಿಯವರು ಯಾವುದಾದರೂ ಪ್ರಕರಣವನ್ನು ಸಿಬಿಐಗೆ ವಹಿಸಿದ್ದಾರೆಯೇ? ಅವರಿಗೆ ಈ ರೀತಿ ಹೇಳಲು ಯಾವುದೇ ನೈತಿಕತೆ ಇಲ್ಲ' ಎಂದರು.



ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಬುಧವಾರ ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮಾತನಾಡಿದರು. ಸಚಿವೆ ಲಕ್ಷ್ಮಿ ಹೆಬ್ಬಾಳಕರ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

'ಗೃಹಲಕ್ಷ್ಮಿ'ಯರನ್ನು ಪರಿಚಯಿಸಿದ ಹೆಬ್ಬಾಳಕರ

ಗೃಹಲಕ್ಷ್ಮಿ ಯೋಜನೆಯ ಹಣವನ್ನು ವಿವಿಧ ರೀತಿಯಲ್ಲಿ ಸದುಪಯೋಗಪಡಿಸಿಕೊಂಡ ಆಯ್ದ 21 ಫಲಾನುಭವಿಗಳನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರು ಮುಖ್ಯಮಂತ್ರಿಗೆ ಪರಿಚಯಿಸಿದರು.

ಗೃಹಲಕ್ಷ್ಮಿ ಹಣ ಕೂಡಿಟ್ಟು ಕೊಳವೆಬಾವಿ ಕೊರೆಸಿದ ಗದಗ ಜಿಲ್ಲೆಯ ಗಜೇಂದ್ರಗಡದ ಅತ್ತೆ-ಸೊಸೆ ಮಾಬುಬಿ ಹಾಗೂ ರೋಷನ್ ಬೇಗಂ, ವಿದ್ಯಾಥಿಗಳ ಅನುಕೂಲಕ್ಕಾಗಿ ಗ್ರಂಥಾಲಯ ಆರಂಭಿಸಿದ ರಾಯಬಾಗದ ಮಲ್ಲವ್ವಾ ಮೇಟಿ, ಫ್ಯಾನ್ಸಿ ಸ್ಟೋರ್ ಆರಂಭಿಸಿದ ಶಿಗ್ಗಾವಿಯ ದ್ರಾಕ್ಷಾಯಣಿ ಪಾಟೀಲ್, ತರಕಾರಿ ವ್ಯಾಪಾರ ಆರಂಭಿಸಿದ ಬಾಗಲಕೋಟೆಯ ಮುಧೋಳದ ಗೌರಿ ಕೃಷ್ಣಾ ಲಮಾಣಿ ತಂಡದಲ್ಲಿದ್ದರು. ಈ ಯೋಜನೆಯ ಪ್ರಯೋಜನ ಪಡೆದ ಲಿಂಗತ್ವ ಅಲ್ಪಸಂಖ್ಯಾತರು ಕೂಡಾ ಇದ್ದರು.

ಗೊಂದಲ ಪರಿಶೀಲನೆಗೆ ಸಮಿತಿ

ಒಂದನೇ ಪುಟದಿಂದ..

'ವಕ್ಫ್ ಮಂಡಳಿಯು ಇನಾಂ ರದ್ದತಿ ಕಾಯ್ದೆ ಮತ್ತು ಭೂ ಸುಧಾರಣಾ ಕಾಯ್ದೆಯಡಿ ಮಂಜೂರು ಮಾಡಿದ್ದ ಒಟ್ಟು 70,883 ಎಕರೆ ಜಮೀನಿನ ಒಡೆತನ ರೈತರ ಬಳಿಯಲ್ಲೇ ಉಳಿಯಲಿದೆ' ಎಂದು ಕೃಷ್ಣ ಬೈರೇಗೌಡ ತಿಳಿಸಿದರು.

17,969 ಎಕರೆ ಒತ್ತುವರಿ: ಸದ್ಯ ವಕ್ಫ್ ಮಂಡಳಿಗೆ ಸೇರಿದ 17,969 ಎಕರೆ ಜಮೀನು ಒತ್ತುವರಿಯಾಗಿದೆ. ಈಗಾಗಲೇ ಇರುವ ಆಸ್ತಿಗಳ ದಾಖಲೆಗಳನ್ನು ವಕ್ಫ್ ಮಂಡಳಿ ಹೆಸರಿಗೆ ವರ್ಗಾಯಿಸುವ ಪ್ರಕ್ರಿಯೆ ನಡೆಸಲಾಗುವುದು ಎಂದೂ ಪ್ರಕಟಿಸಿದರು.

210 ತಾಲ್ಲೂಕುಗಳಿಗೂ ಭೂ ಸುರಕ್ಷೆ ಯೋಜನೆ ವಿಸ್ತರಣೆ: ಸಚಿವ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): 'ಸರ್ವೆ ಹಾಗೂ ಕಂದಾಯ ಇಲಾಖೆಗಳಲ್ಲಿನ ಹಳೆ ಭೂ ದಾಖಲೆಗಳನ್ನು ಸ್ಕ್ಯಾನಿಂಗ್ ಮಾಡಿ ಡಾಟಾಬೇಸ್‌ನಲ್ಲಿ ಸಂರಕ್ಷಿಸುವ ಉದ್ದೇಶದಿಂದ 31 ತಾಲ್ಲೂಕುಗಳಲ್ಲಿ ಪ್ರಾಯೋಗಿಕವಾಗಿ ಜಾರಿಗೊಳಿಸಿದ್ದ 'ಭೂ ಸುರಕ್ಷೆ' ಯೋಜನೆಯನ್ನು ಉಳಿದ 210 ತಾಲ್ಲೂಕುಗಳಿಗೂ ವಿಸ್ತರಿಸಲಾಗುವುದು' ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಸುನೀಲ್ ವಲ್ಯಾಪುರೆ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ಮೂಲ ದಾಖಲೆಗಳ ಸ್ಕ್ಯಾನಿಂಗ್ ಪ್ರಕ್ರಿಯೆ 31 ತಾಲ್ಲೂಕುಗಳಲ್ಲಿ ಪೂರ್ಣಗೊಂಡಿದೆ. 2025ರ ಡಿಸೆಂಬರ್ ಒಳಗಾಗಿ ಉಳಿದ ತಾಲೂಕುಗಳಲ್ಲಿನ ದಾಖಲೆಗಳು ಸ್ಕ್ಯಾನಿಂಗ್ ಆಗಲಿವೆ. ಜನರಿಗೆ ಆನ್‌ಲೈನ್‌ನಲ್ಲಿಯೂ ಲಭ್ಯವಾಗಿದೆ' ಎಂದರು.

'ಅಲ್ಲದೆ, ಪ್ರಮುಖ ದಾಖಲೆಗಳ ಮೂಲಪ್ರತಿಯನ್ನು ತಾಲ್ಲೂಕು ಮಟ್ಟದಲ್ಲಿ ವೈಜ್ಞಾನಿಕವಾಗಿ ಸಂರಕ್ಷಿಸಿಡುವ ದೃಷ್ಟಿಯಿಂದ ತಾಲ್ಲೂಕಿಗೊಂದು ಕಾಂಪ್ಯಾಕ್ಟರ್ ನೀಡಲಾಗುತ್ತಿದೆ' ಎಂದು ತಿಳಿಸಿದರು.

ಪೋಡಿ ಅರ್ಜಿ ಇತ್ಯರ್ಥ: 'ರಾಜ್ಯದ್ಯಂತ ಮೂರು ವರ್ಷಗಳಲ್ಲಿ ಪೋಡಿಗಾಗಿ ಸಲ್ಲಿಸಿದ 6,62,825 ಅರ್ಜಿಗಳಲ್ಲಿ 5,33,545 ಅರ್ಜಿಗಳನ್ನು ವಿಲೇ ಮಾಡಲಾಗಿದೆ. ಬಾಕಿ ಇರುವ 1,29,280 ಅರ್ಜಿಗಳನ್ನು ಆರು ತಿಂಗಳಲ್ಲಿ ಇತ್ಯರ್ಥಗೊಳಿಸಲಾಗುವುದು ಎಂದು ಕೃಷ್ಣ ಬೈರೇಗೌಡ ತಿಳಿಸಿದರು.

ಬಾಣಂತಿಯರ ಸರಣಿ ಸಾವು ಪ್ರಕರಣ • ಡಾ.ಅಶ್ವತ್ಥನಾರಾಯಣ ಆಗ್ರಹ

'ಸಚಿವರ ವಜಾಗೊಳಿಸಿ, ಕ್ರಿಮಿನಲ್ ಪ್ರಕರಣ ಹೂಡಿ'

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ಬಳ್ಳಾರಿ ಸೇರಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸಂಭವಿಸಿದ ಬಾಣಂತಿಯರ ಸರಣಿ ಸಾವಿಗೆ ಸಂಬಂಧಿಸಿದಂತೆ ಆರೋಗ್ಯ ಸಚಿವರನ್ನು ವಜಾಗೊಳಿಸಿ, ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು ಎಂದು ಬಿಜೆಪಿ ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ಆಗ್ರಹಿಸಿದರು.

ವಿಧಾನಸಭೆಯಲ್ಲಿ ಬಾಣಂತಿಯರ ಸರಣಿ ಸಾವಿನ ಕುರಿತ ಚರ್ಚೆಯಲ್ಲಿ ಭಾಗವಹಿಸಿದ ಅವರು, ಈ ಸರಣಿ ಸಾವಿಗೆ ರಾಜ್ಯ ಸರ್ಕಾರವೇ ಹೊಣೆಯಾಗಿದ್ದು, ಇದೊಂದು ಕೊಲೆಗಡುಕ ಸರ್ಕಾರ ಎಂದರು.

ರಾಜ್ಯದಲ್ಲಿ ಬಾಣಂತಿಯರ ಸಾವು ಸರಿಯಾಗಿ ವರದಿಯಾಗುತ್ತಿಲ್ಲ. ಅದನ್ನು ಮುಚ್ಚಿಹಾಕುವ ಪ್ರಯತ್ನ ನಡೆದಿದೆ. ಬಾಣಂತಿಯರ ಆರೋಗ್ಯ ಸ್ಥಿತಿ ಹದೆಗೆಟ್ಟಾಗ ತಕ್ಷಣವೇ ಐಸಿಯುಗೆ ಏಕೆ ದಾಖಲಿಸಲಿಲ್ಲ. ಏಕೆಂದರೆ ಸರ್ಕಾರಿ ಆಸ್ಪತ್ರೆಗಳಲ್ಲಿ ಐಸಿಯುಗಳು ಮತ್ತು ಟ್ರಾಮಾ ಕೇರ್ ಕೇಂದ್ರಗಳು ಮುಚ್ಚಿ ಹೋಗಿವೆ ಎಂದು ದೂರಿದರು.

ಸಾರ್ವಜನಿಕ ಆಸ್ಪತ್ರೆಗಳಲ್ಲಿ ಅಗತ್ಯವಾಗಿ ಇರಬೇಕಾದ 761 ಔಷಧಗಳ ಪೈಕಿ 253 ಔಷಧಿಗಳು ಲಭ್ಯವಿದ್ದು, ಉಳಿದ 508 ಔಷಧಿಗಳು ಲಭ್ಯವಿಲ್ಲ. ಬಾಣಂತಿಯರಿಗೆ ಬಳಸಿದ ಔಷಧಿಯ ಒಟ್ಟು 22 ಮಾದರಿಗಳನ್ನು ಕೇಂದ್ರ ಪ್ರಯೋಗಾಲಯಕ್ಕೆ ಕಳಿಸಲಾಗಿದ್ದು, ಅದರಲ್ಲಿ 4 ಬ್ಯಾಚ್‌ಗಳು ಮಾತ್ರ ಬಳಕೆ ಯೋಗ್ಯವೆಂದು ಹೇಳಿದ್ದು, ಉಳಿದವು ಬಳಕೆಗೆ ಯೋಗ್ಯವಿಲ್ಲ ಎಂದು ತಿಳಿಸಿದೆ. ಪಶ್ಚಿಮಬಂಗಾ ಫಾರ್ಮಾಸ್ಯುಟಿಕಲ್ಸ್ ಕಂಪನಿಯ ಔಷಧ ಬಳಕೆಗೆ ಯೋಗ್ಯವಲ್ಲ ಎಂದು ಪ್ರಯೋಗಾಲಯ ಮಾರ್ಚ್‌ನಲ್ಲಿ ವರದಿ ನೀಡಿದೆ. ಕಪ್ಪು ಪಟ್ಟಿಗೆ ಸೇರಿಸಿದ್ದರೂ ಆ ಔಷಧ ಬಳಕೆ ಮಾಡಿದ್ದು ಹೇಗೆ ಎಂದು ಪ್ರಶ್ನಿಸಿದರು.

ನ್ಯಾಯಾಂಗ ತನಿಖೆಗೆ ಅಶೋಕ ಆಗ್ರಹ

ಬಳ್ಳಾರಿ ಮತ್ತು ಇತರ ಜಿಲ್ಲೆಗಳಲ್ಲಿ ನಡೆದಿರುವ ಬಾಣಂತಿಯರ ಸಾವಿನ ಪ್ರಕರಣದ ಬಗ್ಗೆ ಹೈಕೋರ್ಟ್‌ನ ಹಾಲಿ ನ್ಯಾಯಮೂರ್ತಿ ನೇತೃತ್ವದಲ್ಲಿ ನ್ಯಾಯಾಂಗ ತನಿಖೆಗೆ ಆದೇಶಿಸಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಒತ್ತಾಯಿಸಿದರು.

ರಾಜ್ಯದ ಈ ಪ್ರಕರಣ ಬೆಚ್ಚಿ ಬೀಳಿಸುವಂತಹದ್ದು, ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ, ರಾಯಚೂರು ಜಿಲ್ಲೆಗಳಲ್ಲಿ ಬಾಣಂತಿಯರ ಸಾವು ಸಂಭವಿಸಿದೆ. ಸಚಿವರಿಗಂತೂ ಕಾಳಜಿಯೇ ಇಲ್ಲ ಎಂದು ಟೀಕಿಸಿದರು.

ದಾವಣಗೆರೆಯಲ್ಲಿ 28, ರಾಯಚೂರಿನಲ್ಲಿ 10, ಚಿತ್ರದುರ್ಗದಲ್ಲಿ ಒಬ್ಬ ಬಾಣಂತಿ ಸಾವಿಗೀಡಾಗಿದ್ದಾರೆ. ಅಷ್ಟೇ ಅಲ್ಲ, ಸತ್ತ ಬಾಣಂತಿಯರ ಕುಟುಂಬಕ್ಕೆ ₹2 ಲಕ್ಷ ಪರಿಹಾರ ಕೊಟ್ಟರು. ವಯನಾಡಿನಲ್ಲಿ ಆನೆ ತುಳಿತಕ್ಕೆ ಸಿಕ್ಕ ಮೃತಪಟ್ಟ ವ್ಯಕ್ತಿಯ ಕುಟುಂಬಕ್ಕೆ ₹15 ಲಕ್ಷ ಪರಿಹಾರ ನೀಡಿದ್ದಾರೆ. ಇದು ಸರ್ಕಾರದ ಆದ್ಯತೆ ಎಂದು ಅಶೋಕ ಹರಿಹಾಯ್ದರು.

ಈ ಸರಣಿ ಸಾವಿನ ಪ್ರಕರಣದ ಬಳಿಕ ಸರ್ಕಾರಿ ಆಸ್ಪತ್ರೆಗೆ ಹೋಗುವ ಗರ್ಭಿಣಿಯರ ಪೈಕಿ ಶೇ 50ರಷ್ಟು ಇಳಿಕೆಯಾಗಿದೆ ಎಂದು ಅಶೋಕ ಹೇಳಿದಾಗ, ತಕರಾರು ಎತ್ತಿದ ಕಾಂಗ್ರೆಸ್‌ನ ಕೋನರಡ್ಡಿ, 'ಸರ್ಕಾರಿ ಆಸ್ಪತ್ರೆಗಳ ಬಗ್ಗೆ ನಕಾರಾತ್ಮಕವಾಗಿ ಮಾತನಾಡಬೇಡಿ. ಜನ ಹೋಗುವುದಿಲ್ಲ' ಎಂದರು.

ಈ ವಿಚಾರವಾಗಿ ಆಡಳಿತ ಮತ್ತು ವಿರೋಧಪಕ್ಷದ ಸದಸ್ಯರ ಮಧ್ಯೆ ಮಾತಿನ ಚಕಮಕಿ ನಡೆಯಿತು. ಮಧ್ಯಪ್ರವೇಶಿಸಿದ ಕಾನೂನು ಸಚಿವ ಎಚ್.ಕೆ.ಪಾಟೀಲ, ಅಶೋಕ ಅವರು ಹೇಳಿದ್ದರಲ್ಲಿ ತಪ್ಪಿಲ್ಲ. ಅವರು ವಾಸ್ತವ ಸಂಗತಿಯನ್ನೇ ಹೇಳಿದ್ದಾರೆ. ಈ ಬಗ್ಗೆ ಸಚಿವ ದಿನೇಶ್ ಅವರು ವಿಧಾನ ಪರಿಷತ್ತಿನಲ್ಲಿ ಇನ್ನೂ ಖಾರವಾಗಿ ಮಾತನಾಡಿದ್ದಾರೆ ಎಂದರು.

ಅನುಮೋದನೆ ಇಲ್ಲದೆ ವರ್ಗಾವಣೆ: ಸಿ.ಎಂ ತಡೆ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): 'ನನ್ನ ಅನುಮೋದನೆ ಇಲ್ಲದೆ ಯಾವುದೇ ವರ್ಗಾವಣೆ ಆದೇಶಗಳನ್ನು ಹೊರಡಿಸಬಾರದು. ಅಲ್ಲದೆ, ಘಟನೋತ್ತರ ಅನುಮೋದನೆಗೂ ಮಂಡಿಸಬಾರದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಟ್ಟಪ್ಪಣೆ ಹೊರಡಿಸಿದ್ದಾರೆ.

ಈ ಕುರಿತು ಎಲ್ಲ ಇಲಾಖೆಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ ಮತ್ತು ಕಾರ್ಯದರ್ಶಿಗಳಿಗೆ ಸೂಚನೆ ನೀಡುವಂತೆ ಮುಖ್ಯ ಕಾರ್ಯದರ್ಶಿಗೆ ಡಿ. 17ರಂದು ಮುಖ್ಯಮಂತ್ರಿ ಟಿಪ್ಪಣಿ ಹೊರಡಿಸಿದ್ದಾರೆ.

'ಸಾರ್ವತ್ರಿಕ ವರ್ಗಾವಣೆ ಅವಧಿ ಮುಗಿದಿರುವುದರಿಂದ ಇನ್ನು ಮುಂದೆ ಯಾವುದೇ ಇಲಾಖೆಯಲ್ಲಿ ಆಡಳಿತಾತ್ಮಕ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ವರ್ಗಾವಣೆ ಮಾಡುವುದು ಅಗತ್ಯವಾಗಿದ್ದರೆ ಮುಖ್ಯಮಂತ್ರಿಯಿಂದ ಪೂರ್ವಾನುಮೋದನೆ ಪಡೆಯಬೇಕು. ಇಲ್ಲದಿದ್ದರೆ ಸಂಬಂಧಿಸಿದ ಇಲಾಖಾ ಮುಖ್ಯಸ್ಥರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು' ಎಂದು 2023ರ ಆಗಸ್ಟ್ 31ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಸುತ್ತೋಲೆ ಹೊರಡಿಸಿತ್ತು. ಅಲ್ಲದೆ, 2024ರ ಜ. 3ರಂದು ಮುಖ್ಯಮಂತ್ರಿ ಕೂಡಾ ಟಿಪ್ಪಣಿ ನೀಡಿದ್ದರು.

ಆದರೂ, ಈ ನಿರ್ದೇಶನಗಳನ್ನು ಉಲ್ಲಂಘಿಸಿ, ವರ್ಗಾವಣೆಗೆ ಸಂಬಂಧಿಸಿದಂತೆ ಘಟನೋತ್ತರ ಅನುಮೋದನೆಗಾಗಿ ಇಲಾಖೆಗಳು ಪದೇ ಪದೇ ಕಡತಗಳನ್ನು ಸಲ್ಲಿಸುತ್ತಿವೆ. ಇನ್ನು ಮುಂದೆ ಇಂತಹ ಯಾವುದೇ ವರ್ಗಾವಣೆ ಕಡತಗಳನ್ನು ಘಟನೋತ್ತರ ಅನುಮೋದನೆ ಕೋರಿ ಮಂಡಿಸಬಾರದು ಎಂದು ತಮ್ಮ ಟಿಪ್ಪಣಿಯಲ್ಲಿ ಮುಖ್ಯಕಾರ್ಯದರ್ಶಿಗೆ ನಿರ್ದೇಶನ ನೀಡಿದ್ದಾರೆ.

ಪ್ರಜಾವಾಣಿ ಗುರುವಾರ, 19 ಡಿಸೆಂಬರ್ 2024 8

ಸ್ಪರ್ಧಾ ವಾಣಿ

ಎಸ್‌ಬಿಐನಲ್ಲಿ 13,735 'ಕ್ಲರಿಕಲ್' ನೇಮಕಾತಿ

ಭಾರತೀಯ ಸ್ಟೇಟ್ ಬ್ಯಾಂಕ್ ಗ್ರಾಹಕ ಸೇವಾ ಮತ್ತು ಮಾರುಕಟ್ಟೆ ವಿಭಾಗದಲ್ಲಿ ಗುಮಾಸ್ತ ಹಂತದ ಹುದ್ದೆಗಳ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಿದೆ. ಅರ್ಜಿ ಸಲ್ಲಿಕೆ ವಿವರ ಇಲ್ಲಿದೆ



ಮುಖ್ಯಾಂಶಗಳು

- **ಅರ್ಜಿ ಸಲ್ಲಿಕೆ :** ಡಿ.17 ರಿಂದ ಆರಂಭ
- **ಕೊನೆ ದಿನ:** ಜನವರಿ 7, 2025
- ಕನ್ನಡಿಗರಿಗೆ 50 ಹುದ್ದೆಗಳು
- ಕನ್ನಡದಲ್ಲೇ ಪ್ರಿಲಿಮ್ಸ್ ಮತ್ತು ಕನ್ನಡ ಪರೀಕ್ಷೆ ಬರೆಯಲು ಅವಕಾಶ
- ಫೆಬ್ರುವರಿ ಹಾಗೂ ಮಾರ್ಚ್/ ಏಪ್ರಿಲ್ ತಿಂಗಳಲ್ಲಿ ಪರೀಕ್ಷೆ ನಡೆಯುವ ಸಾಧ್ಯತೆ

ಗಾಣಧಾಳು ಶ್ರೀಕಂಠ

ಭಾರತೀಯ ಸ್ಟೇಟ್ ಬ್ಯಾಂಕ್(ಎಸ್‌ಬಿಐ) 13,735 ಜೂನಿಯರ್ ಅಸೋಸಿಯೇಟ್ಸ್ ಹುದ್ದೆಗಳ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಿದೆ. ಇದು ಕಸ್ಟಮರ್ ಸಪೋರ್ಟ್ ಮತ್ತು ಸೇಲ್ಸ್ ವಿಭಾಗದ ಗುಮಾಸ್ತ ಹಂತದ ಹುದ್ದೆಗಳಾಗಿವೆ. ಹುದ್ದೆಗಳ ಭರ್ತಿ ಸಂಬಂಧ ಅಧಿಸೂಚನೆ ಹೊರಡಿಸಿದ್ದು, ಅರ್ಹ ಮತ್ತು ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಕರ್ನಾಟಕಕ್ಕೆ 50 ಹುದ್ದೆಗಳನ್ನು ಮೀಸಲಿಟ್ಟಿದೆ. ಬಹುಮುಖ್ಯವಾಗಿ ಪ್ರಿಲಿಮ್ಸ್ ಪರೀಕ್ಷೆ ಮತ್ತು ಮುಖ್ಯ ಪರೀಕ್ಷೆಯನ್ನು ಕನ್ನಡದಲ್ಲಿ ಬರೆಯುವ ಅವಕಾಶ ಕಲ್ಪಿಸಿದೆ. ನೇಮಕ ಪ್ರಕ್ರಿಯೆ ಭಾಗವಾಗಿ ಸ್ಥಳೀಯ ಭಾಷಾ ಪರೀಕ್ಷೆಯನ್ನೂ ನಡೆಸಲಾಗುತ್ತಿದೆ.

ಅರ್ಜಿ ಸಲ್ಲಿಕೆ ಪ್ರಕ್ರಿಯೆ

ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು. ಡಿ.17ರಿಂದ ಅರ್ಜಿ ಸಲ್ಲಿಕೆ ಆರಂಭವಾಗಿದೆ. ಅರ್ಜಿ ಸಲ್ಲಿಕೆಗೆ ಕೊನೆ ದಿನ ಜನವರಿ 7, 2025. ಅರ್ಜಿ ಸಲ್ಲಿಕೆ ಮತ್ತಿತರ ಮಾಹಿತಿಗಾಗಿ https://www.sbi.co.in/web/careers/current-openings ಈ ಲಿಂಕ್ ಕ್ಲಿಕ್ ಮಾಡಿ.

ಅರ್ಜಿ ಶುಲ್ಕ ವಿವರ: ಸಾಮಾನ್ಯ ಹಾಗೂ ಒಬಿಸಿ ಅಭ್ಯರ್ಥಿಗಳಿಗೆ ₹750 ಅರ್ಜಿ ಶುಲ್ಕ ನಿಗದಿಪಡಿಸಲಾಗಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಅಂಗವಿಕಲ ಅಭ್ಯರ್ಥಿಗಳಿಗೆ ಸಂಪೂರ್ಣ ಶುಲ್ಕ ವಿನಾಯಿತಿ ನೀಡಲಾಗಿದೆ.

ಶುಲ್ಕಪಾವತಿ: ನೋಂದಣಿ ನಂತರ ಅಭ್ಯರ್ಥಿಗಳು ಡೆಬಿಟ್ ಕಾರ್ಡ್/ ಕ್ರೆಡಿಟ್ ಕಾರ್ಡ್/ ಇಂಟರ್ನೆಟ್ ಬ್ಯಾಂಕಿಂಗ್ ಬಳಸಿ ಆನ್‌ಲೈನ್ ಮೂಲಕ ಅಗತ್ಯವಾದ ಅರ್ಜಿ ಶುಲ್ಕವನ್ನು ಪಾವತಿಸಬೇಕಾಗುತ್ತದೆ. ನಿಗದಿತ ಜಾಲತಾಣದ ಮೂಲಕ ಆನ್‌ಲೈನ್‌ನಲ್ಲೇ ಅರ್ಜಿ ಸಲ್ಲಿಸಬೇಕು.

ವಿದ್ಯಾರ್ಹತೆ ಏನಿರಬೇಕು ?

ಯಾವುದೇ ವಿಶ್ವವಿದ್ಯಾಲಯದಲ್ಲಿ ಯಾವುದೇ ವಿಷಯದಲ್ಲಿ ಪದವಿ ಪಡೆದಿರಬೇಕು. ಪದವಿಯ ಅಂತಿಮ ಸೆಮಿಸ್ಟರ್ / ವರ್ಷದಲ್ಲಿ ಓದುತ್ತಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅವಕಾಶವಿದೆ. ಆದರೆ, ಆಯ್ಕೆಯಾದ ನಂತರ ಪದವಿ ಪ್ರಮಾಣ ಪತ್ರ ಸಲ್ಲಿಸುವುದು ಕಡ್ಡಾಯ. ಪ್ರಮಾಣಪತ್ರ ಸಲ್ಲಿಸದಿದ್ದರೆ, ಆಯ್ಕೆಯನ್ನು ರದ್ದು ಮಾಡಲಾಗುತ್ತದೆ ಎಂದು ಅಧಿಸೂಚನೆಯಲ್ಲಿ ತಿಳಿಸಿದೆ.

ವಯೋಮಿತಿ: ಸಾಮಾನ್ಯ ವರ್ಗದ ಅಭ್ಯರ್ಥಿಗೆಗೆ ಕನಿಷ್ಠ 20 ವರ್ಷ, ಗರಿಷ್ಠ 28 ವರ್ಷಗಳು. ಸರ್ಕಾರಿ ಆದೇಶದಂತೆ ವರ್ಗಾವಾರು ವಯೋಮಿತಿ ಸಡಿಲಿಕೆ ಇರುತ್ತದೆ. ನಿಯಮಾನುಸಾರ ಒಬಿಸಿ ವರ್ಗದವರಿಗೆ ಮೂರು ವರ್ಷ, ಪರಿಶಿಷ್ಟ ಜಾತಿ ಮತ್ತು ವರ್ಗದ ಅಭ್ಯರ್ಥಿಗಳಿಗೆ 5 ವರ್ಷ ವಯಸ್ಸಿನ ಸಡಿಲಿಕೆ ಇದೆ.

ನೇಮಕ ಪ್ರಕ್ರಿಯೆ ಹೀಗಿರುತ್ತದೆ

ಪ್ರಿಲಿಮ್ಸ್ ಪರೀಕ್ಷೆ, ಮುಖ್ಯ ಪರೀಕ್ಷೆ ಮತ್ತು ಸ್ಥಳೀಯ ಭಾಷಾ ಪರೀಕ್ಷೆ ಮತ್ತು ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುತ್ತದೆ. 2025ರ ಫೆಬ್ರುವರಿಯಲ್ಲಿ ಪ್ರಿಲಿಮ್ಸ್ ಪರೀಕ್ಷೆ ಹಾಗೂ ಮಾರ್ಚ್ ಅಥವಾ ಏಪ್ರಿಲ್ ತಿಂಗಳಲ್ಲಿ ಮುಖ್ಯ ಪರೀಕ್ಷೆ ನಡೆಯುವ ಸಾಧ್ಯತೆ ಇದೆ ಎಂದು ಬ್ಯಾಂಕ್ ಅಧಿಸೂಚನೆಯಲ್ಲಿ ತಿಳಿಸಿದೆ.

❖

ಎರಡು ಹಂತದ ಪರೀಕ್ಷೆಗಳು ಮಾತ್ರ..

ಜ್ಯೂನಿಯರ್ ಅಸೋಸಿಯೇಟ್ಸ್‌ಗೆ (ಕಸ್ಟಮರ್ ಸಪೋರ್ಟ್ ಮತ್ತು ಸೇಲ್ಸ್) ನೇಮಕಾತಿಗೆ ಎರಡು ಹಂತದ ಪರೀಕ್ಷೆಗಳಿರುತ್ತವೆ. ಸಂದರ್ಶನ ಇರುವುದಿಲ್ಲ. ಈ ಕಾರಣದಿಂದಾಗಿಯೇ ಪೂರ್ವಭಾವಿ ಮತ್ತು ಮುಖ್ಯ ಪರೀಕ್ಷೆ ಪ್ರಾಮುಖ್ಯ ಹೊಂದಿರುತ್ತದೆ. ಪೂರ್ವ ಭಾವಿ ಪರೀಕ್ಷೆ ಅಭ್ಯರ್ಥಿಗಳನ್ನು ಮುಂದಿನ ಹಂತಕ್ಕೆ ಕರೆದೊಯ್ಯುವ ಮೆಟ್ಟಿಲಾದರೆ, ಮುಖ್ಯ ಪರೀಕ್ಷೆ ಕೆಲಸವನ್ನು ಪಡೆಯಲು ಸಹಕಾರಿ ಎಂದು ಬ್ಯಾಂಕಿಂಗ್ ಪರೀಕ್ಷೆ ತರಬೇತುದಾರ ಬಾಲಚಂದ್ರ ಆರ್. ಕೆ. ವಿಶ್ಲೇಷಿಸುತ್ತಾರೆ.

ಪ್ರತಿ ಮೂರು ತಿಂಗಳಿಗೊಮ್ಮೆ ಕಾಯುವಿಕೆ ಪಟ್ಟಿ ಪ್ರಕಟವಾಗಲಿದೆ. ಅಂತಿಮ ಫಲಿತಾಂಶ ಪ್ರಕಟವಾದ ದಿನಾಂಕದಿಂದ ಒಂದು ವರ್ಷ ಈ ಕಾಯುವಿಕೆ ಪಟ್ಟಿಯು ಮಾನ್ಯತೆ ಹೊಂದಿರುತ್ತದೆ. ಒಟ್ಟು ಹುದ್ದೆಗಳಲ್ಲಿ (ರಾಜ್ಯ-ವರ್ಗವಾರು) ಶೇ 50ರಷ್ಟು ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಕಾಯುವಿಕೆ ಪಟ್ಟಿಯಲ್ಲಿ ಇಡಲಾಗುತ್ತದೆ. ಆಯ್ಕೆಯಾದ ಅಭ್ಯರ್ಥಿಗಳು ಕೆಲಸಕ್ಕೆ ಬಾರದಿದ್ದಲ್ಲಿ ಅಥವಾ ಸೇರಿ ನಂತರ ರಾಜೀನಾಮೆ ನೀಡಿದಲ್ಲಿ, ಕಾಯುವಿಕೆಯ ಪಟ್ಟಿಯಲ್ಲಿರುವ ಅಭ್ಯರ್ಥಿಗಳಿಗೆ ಅವಕಾಶ ನೀಡಲಾಗುತ್ತದೆ ಎಂದು ಅವರು ವಿವರಿಸುತ್ತಾರೆ.

ಪೂರ್ವಭಾವಿ ಪರೀಕ್ಷೆಯ ಮೂರು ಪ್ರಶ್ನೆ ಪತ್ರಿಕೆಗಳಿಗೆ ಕನಿಷ್ಠ ಅರ್ಹತಾ ಅಂಕಗಳನ್ನು ನಿಗದಿಪಡಿಸಿಲ್ಲ. ಹಾಗೂ ಒಟ್ಟು ಪಡೆಯುವ ಅಂಕಗಳಿಗೂ ಕನಿಷ್ಠ ಇಷ್ಟೇ ಅಂಕ ಪಡೆಯಬೇಕೆಂದು ನಿಗದಿಪಡಿಸಿಲ್ಲ. ವಿಭಾಗವಾರು ಅಂಕಗಳನ್ನು ನಿರ್ವಹಿಸಲಾಗುವುದಿಲ್ಲವೆಂಬುದನ್ನು ನೆನಪಿಡಿ ಎಂದು ಅವರು ಅಭ್ಯರ್ಥಿಗಳಿಗೆ ಸಲಹೆ ನೀಡಿದ್ದಾರೆ.

ಬಹುಆಯ್ಕೆಯ ಪ್ರಶ್ನೋತ್ತರಗಳು

1. ಇತ್ತೀಚೆಗೆ ಪ್ರವೀಣ್ ಕುಮಾರ್ ಶ್ರೀವಾಸ್ತವ ಅವರನ್ನು ಕೆಳಗಿನ ಯಾವ ಸಂಸ್ಥೆಗಳಿಗೆ ನೇಮಿಸಲಾಗಿದೆ?
ಎ. ಕೇಂದ್ರ ಜಾಗೃತದಳ.
ಬಿ. ಸೆಂಟ್ರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಷನ್.
ಸಿ. ಕೇಂದ್ರೀಯ ಮೀಸಲು ಪೊಲೀಸ್ ಪಡೆಯ ಮುಖ್ಯಸ್ಥರಾಗಿ.
ಡಿ. ಇಂಡೋ-ಟಿಬೆಟಿಯನ್ ಬಾರ್ಡರ್ ಪೊಲೀಸ್‌ನ ಮುಖ್ಯಸ್ಥರಾಗಿ.
ಉತ್ತರ : ಎ

2. ಇತ್ತೀಚೆಗೆ ಸುದ್ದಿಯಲ್ಲಿದ್ದ ನುಸ್ರತ್ ಚೌಧರಿ ಅವರಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ?
1. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಮೊದಲ ಮುಸ್ಲಿಂ ಫೆಡರಲ್ ನ್ಯಾಯಾಧೀಶರಾಗಿ ನೇಮಕವಾಗಿದ್ದಾರೆ.
2. ಇವರು ಬಾಂಗ್ಲಾದೇಶದ ಮೂಲದವರಾಗಿದ್ದು, ಅಮೆರಿಕದ ಜಿಲ್ಲಾ ನ್ಯಾಯಾಲಯದಲ್ಲಿ ಕಾರ್ಯನಿರ್ವಹಿಸಲಿದ್ದಾರೆ.
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮಾತ್ರ ಬಿ. 2 ಮಾತ್ರ
ಸಿ. 1 ಮತ್ತು 2 ಡಿ. ಮೇಲಿನ ಎರಡು ಹೇಳಿಕೆಗಳು ತಪ್ಪಾಗಿವೆ.
ಉತ್ತರ : ಸಿ

3. ಕೆಳಗಿನ ಯಾವ ಅಂಶಗಳನ್ನು ರಾಷ್ಟ್ರೀಯ ಜಾನುವಾರು ಅಭಿಯಾನದ ಉಪ ಅಭಿಯಾನಗಳು ಎಂದು ಪರಿಗಣಿಸಬಹುದು?
1. ಜಾನುವಾರುಗಳ ಮೇವಿನ ಉಪ ಅಭಿಯಾನ.
2. ಜಾನುವಾರು ವಲಯದ ಅಭಿವೃದ್ಧಿ ಉಪ ಅಭಿಯಾನ.
3. ಈಶಾನ್ಯ ಪ್ರದೇಶದಲ್ಲಿ ಹಂದಿ ಅಭಿವೃದ್ಧಿ ಉಪ ಅಭಿಯಾನ.
4. ಕೌಶಲ ಅಭಿವೃದ್ಧಿ ಊಟ ಅಭಿಯಾನ.
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1, 2, 3 ಮತ್ತು 4 ಬಿ. 2 ಮತ್ತು 4
ಸಿ. 3 ಮತ್ತು 4 ಡಿ. 2 ಮತ್ತು 3
ಉತ್ತರ : ಎ

4. ಮೊಟ್ಟೆ ಮತ್ತು ಮಾಂಸದ ಉತ್ಪಾದನೆಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ?
1. ಮೊಟ್ಟೆ ಉತ್ಪಾದನೆಯಲ್ಲಿ ಭಾರತ ಜಾಗತಿಕ ಮಟ್ಟದಲ್ಲಿ ನಾಲ್ಕನೇ ಸ್ಥಾನವನ್ನು ಹೊಂದಿದೆ.
2. ಮಾಂಸ ಉತ್ಪಾದನೆಯಲ್ಲಿ ಭಾರತ ಜಾಗತಿಕ ಮಟ್ಟದಲ್ಲಿ ಎಂಟನೇ ಸ್ಥಾನವನ್ನು ಹೊಂದಿದೆ.
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ.1 ಮಾತ್ರ ಬಿ. 2 ಮಾತ್ರ
ಸಿ. 1 ಮತ್ತು 2 ಡಿ. ಮೇಲಿನ ಎರಡು ಹೇಳಿಕೆಗಳು ತಪ್ಪಾಗಿದೆ.
ಉತ್ತರ : ಬಿ

5. ಸ್ವಾಮಿ ವಿವೇಕಾನಂದರು ಕೆಳಗಿನ ಯಾವ ಸ್ಥಳದಲ್ಲಿ ನಿಧನರಾದರು?
ಎ. ಕೋಲ್ಕತ್ತದ ಬೇಲೂರು ಮಠದಲ್ಲಿ.
ಬಿ. ಕೋಲ್ಕತ್ತದ ಆಲೂರು ಮಠದಲ್ಲಿ.
ಸಿ. ಜ್ಯೋತಿರ್ಮಠದಲ್ಲಿ.
ಡಿ. ಶೃಂಗೇರಿಯ ಶಾರದಾಂಬೆಯ ಮಠದಲ್ಲಿ.
ಉತ್ತರ : ಎ

6. ಅಲ್ಲೂರಿ ಸೀತಾರಾಮರಾಜು ಅವರು ಕೆಳಗಿನ ಯಾವ ಬಂಡಾಯವನ್ನು ಮುನ್ನಡೆಸಿದರು?
ಎ. ಅಲ್ಲೂರಿ ಬಂಡಾಯ.
ಬಿ. ರಾಂಪ ಬಂಡಾಯ.
ಸಿ. ಪೂರ್ವ ಗೋದಾವರಿ ಬಂಡಾಯ.
ಡಿ. ವಿಶಾಖಪಟ್ಟಣ ಬಂಡಾಯ.
ಉತ್ತರ : ಬಿ

7. ಫ್ರೆಂಚ್ ಕ್ರಾಂತಿಯ ಸಂದರ್ಭದಲ್ಲಿ ಕೆಳಗಿನ ಯಾವ ದೊರೆ ಫ್ರಾನ್ಸ್ ರಾಷ್ಟ್ರವನ್ನು ಆಳುತ್ತಿದ್ದನು?
ಎ. ಲೂಯಿಸ್.
ಬಿ. ಫಿಲಿಪ್ಸ್.
ಸಿ. ಚಾರ್ಲ್ಸ್.
ಡಿ. ವಿಲಿಯಮ್ಸ್.
ಉತ್ತರ : ಎ

8. ಇತ್ತೀಚೆಗೆ ಫ್ರಾನ್ಸ್ ರಾಷ್ಟ್ರ ಭಾರತದ ಪ್ರಧಾನ ಮಂತ್ರಿಗಳನ್ನು ಕೆಳಗಿನ ಯಾವ ದಿನದಂದು ಗೌರವ ಅತಿಥಿಯಾಗಿ ಭಾಗವಹಿಸಲು ಆಮಂತ್ರಿಸಿತ್ತು?
ಎ. ಬಾಸ್ಟಿಲ್ ಡೇ ಪೆರೇಡ್.
ಬಿ. ಗಣರಾಜ್ಯೋತ್ಸವದಂದು.
ಸಿ. ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ.
ಡಿ. ಸಂವಿಧಾನ ಜಾರಿಗೆ ಬಂದ ದಿನಾಚರಣೆಯ ಅಂಗವಾಗಿ.
ಉತ್ತರ : ಎ

9.ಕೆಳಗಿನ ಯಾವ ಕಾರಣಗಳಿಂದ ವಿದೇಶಿ ವಿನಿಮಯ ನಿಯಂತ್ರಣ ಕಾಯ್ದೆಯ ಬದಲಾಗಿ ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆಯನ್ನು ಜಾರಿಗೆ ತರಲಾಯಿತು?
ಎ. ಜಾಗತೀಕರಣ, ಉದಾರಿಕರಣ ಮತ್ತು ಖಾಸಗೀಕರಣ.
ಬಿ. ಅಮೆರಿಕದ ಷರತ್ತುಗಳ ಅನ್ವಯ.
ಸಿ. ಭಾರತದ ನೆರೆಹೊರೆ ರಾಷ್ಟ್ರಗಳು ಮನವಿಯ ಆಧಾರದ ಮೇಲೆ ಬದಲಾವಣೆಯನ್ನು ತರಲಾಯಿತು.
ಡಿ. ವಿಶ್ವಸಂಸ್ಥೆಯ ನಿರ್ದೇಶನದ ಮೇಲೆ ಬದಲಾವಣೆಯನ್ನು ತರಲಾಯಿತು.
ಉತ್ತರ : ಎ

10. ಜಾರಿ ನಿರ್ದೇಶನಾಲಯ ಕೆಳಗಿನ ಯಾವ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ?
ಎ. ಕೇಂದ್ರ ಗೃಹ ಸಚಿವಾಲಯ.
ಬಿ. ಕೇಂದ್ರ ಹಣಕಾಸು ಸಚಿವಾಲಯ.
ಸಿ. ಪ್ರಧಾನ ಮಂತ್ರಿ ಕಾರ್ಯಾಲಯ.
ಡಿ. ಸಂಪುಟ ಕಾರ್ಯಾಲಯ.
ಉತ್ತರ : ಬಿ

11. ನ್ಯಾಟೋ ಒಪ್ಪಂದಕ್ಕೆ ಕೆಳಗಿನ ಯಾವ ಸ್ಥಳದಲ್ಲಿ ಸದಸ್ಯ ರಾಷ್ಟ್ರಗಳು ಸಹಿಹಾಕಿದವು?
ಎ. ವಾಷಿಂಗ್ಟನ್. ಡಿ. ಸಿ.
ಬಿ. ಪ್ಯಾರಿಸ್.
ಸಿ. ರೋಮ್.
ಡಿ. ಲಿಸ್ಬನ್.
ಉತ್ತರ : ಎ

12. ಕೆಳಗಿನ ಯಾವ ಒಪ್ಪಂದವನ್ನು ನ್ಯಾಟೋ ಒಪ್ಪಂದದ ಮುನ್ನುಡಿ ಎಂದು ಪರಿಗಣಿಸಬಹುದು?
ಎ. ವಾಷಿಂಗ್ಟನ್ ಒಪ್ಪಂದ.
ಬಿ. ಬ್ರಸೆಲ್ಸ್ ಒಪ್ಪಂದ.
ಸಿ. ಹಿರೋಶಿಮಾ ಒಪ್ಪಂದ.
ಡಿ. ಕ್ಯಾಲಿಫೋರ್ನಿಯ ಒಪ್ಪಂದ.
ಉತ್ತರ : ಬಿ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಇಂಗ್ಲಿಷ್

Second Language ENGLISH

Poem -5 Jazz Poem Two

10) Read the last ten words of the poem. You may observe a change in the tone. What is that about?
Ans: The tone in the last ten words is of despondence (loss of hope). The speaker says that the Jazz player, who transformed himself into a bird with the power of music, may once again relapse into his pathetic condition of being an old black man with a wrinkled face and worn-out clothing.

Read and appreciate

1. Usually a poem is written in a stanza form with a rhyme scheme. Check and find out whether this poem follows any rhyme scheme. You may Compare this poem with the poem, "Seal" given below.
Ans: The poem does not follow any rhyme scheme. But we find rhyme scheme in the poem The Seal'.

2. Refer to the last stanza of 'Jazz Poem Two. Do you find anything extraordinary in the shape of the poem? Check the length of each line carefully. Why do you think lines 41, 42 and 43 are different from others? What does it suggest?
Ans: We find a different shape in the poem. They have a raising intonation. Just soaring higher. Stressing again that he is a black man again.

3. The poem is full of images [word pictures]. Some examples are given. Now find as many images as you can in the poem.
Ans: a) wrinkled old face.
b) sagging stomach
c) closed eyes
d) old jacket / run down shoes.
e) old saxophone across his chest.

4. Is there a simile in the poem? If so identify it.
Ans: Yes, in the very first stanza, a simile is employed. The poem begins with the lines, "there he stands, see? like a black Ancient Mariner." The comparison is between the Black Jazz, musician and the Ancient Mariner in Coleridge's poem. Like the Ancient Mariner, the old jazz, musician feels that he has a message for the people of the world.

****

Prose- Chapter 6 :The Discovery

Check Your Understanding

Share Your Responses

1. Some physical features of Columbus are described/ given in the text. Based on your reading complete the table.
Ans: Physical Features of Columbus
1.**Physique** - Tall and well built
2. **Age** – 46 years
3. **Hair** – Prematurely white
4.**Complexion**- fair almost ruddy
5. **Face**- in repose is melancholi

2. Usually, we sing songs to express our joys and sorrows. Here the play begins with a song. What mood does this convey?
Ans: The play begins with a song. The song was sung by Seamen. The song conveys the dissatisfied and discontented mood.

3.'There are limits to patients', says Diego. What does this suggest about Diego's state of mind?
Ans: Diego had lost his hopes. He was not happy with his captain's decision. He thought that going to discover the new land was a waste of time. So he had impatience. Whenever Pedro asked him, he said the above words that show his angry mood.

4. Who do you think has the lives of fifty in his hands? How?
Ans: Columbus had the lives of fifty in his hands, He was the captain of the ship. After many days of their voyage, it didn't give success. All are home-sick and wanted to go back home. But the captain did not agree for this. So all had thought their lives were in his hand.

Share your Responses :

1."A good sailor knows his place," Says Columbus to Diego. The statement is ....
(Choose the right answer from the options and complete the sentence).
a) a piece of advice
b) an indirect command
c) a statement
Ans: (b) an indirect command

1. Which reaction of Diego to the sentence above justifies your choice? Quote the phrase indicating his reaction.
Ans: By hearing the above statement Diego with repressed firry said yes sir. The phrase is scarcely concealing a scowl, goes off the above reaction of Diego states that it was an indirect command.

2. How does Pedro try to defend the drunken, seamen? Was he right in defending them?
Ans: Pedro defends the drunken seamen by saying that they are simple men without the vision of Columbus, and they need relaxation. Pedro is right because the seamen follow the orders of Columbus without sharing his passion. Often they are likely to get frustrated with the feeling that their voyage is a purposeless one and they are risking their lives for nothing. At times like this, they need to drink to get over their frustration.

3. What is termed as his worst enemy by Columbus?
Ans: Columbus felt sorry because he had a short (quick) temper and an uncontrolled tongue. His worst enemy was his uncontrolled tongue.

4. The dialogue between Columbus and Pedro in section 2 reveals this trait of Columbus –
(Choose the most appropriate response).
a. dictatorial attitude
b. quick temper
c. hatred towards the seamen
d. selfishness
Ans: (c) hatred towards the seamen

(Contd.......)


II PUC - CHEMISTRY

Coordination Compound

32. What will be the correct order for the wavelengths of absorption in the visible region for the following:
$[Ni(NO_2)_6]^{4-}$, $[Ni(NH_3)_6]^{2+}$, $[Ni(H_2O)_6]^{2+}$?
Ans: All of the complexes have the same metal ion, so the energy absorption depends upon the CFSE values of the ligands.
According to the spectro-chemical series, the CFSE values of the ligands are in the order of
$$H_2O < NH_3 < NO_2^-$$
As
$$E = hc / \lambda$$
$$\Rightarrow E \propto 1/\lambda$$
Therefore, the values of the absorbed wavelength in ascending order would be:
$$[Ni(H_2O)_6]^{2+} < [Ni(NH_3)_6]^{2+} < [Ni(NO_2)_6]^{4}$$

Alcohols, Phenols and Ethers


1. Write IUPAC names of the following compounds:



Soln :
(i) 2, 2, 4 -Trimethylpentan – 3 – ol
(ii) 5 – Ethylheptane – 2, 4 – diol
(iii) Butane – 2, 3 – diol
(iv) Propane – 1, 2, 3 – triol
(v) 2-Methylphenol
(vi) 4 – Methyl phenol
(vii) 2, 5 – Dimethylphenol
(viii) 2, 6 – Dimethylphenol
(ix) 1 – Methoxy – 2 – methyl propane
(x) Ethoxy benzene
(xi) 1 – Phenoxyheptane
(xii) 2 – Ethoxybutane

2 : Write structures of the compounds whose IUPAC names are as follows:
(i) 2 – Methylbutan – 2 – ol
(ii) 1 – Phenylpropan – 2 – ol
(iii) 3 , 5 – Dimethylhexane – 1 , 3 , 5 – triol
(iv) 2, 3 – Diethylphenol
(v) 1 – Ethoxypropane
(vi) 2 – Ethoxy – 3 – methylpentane
(vii) Cyclohexylmethanol
(viii) 3 – Cyclohexylpentan – 3 – ol
(ix) Cyclopent – 3 – en – 1 – ol
(x) 4-Chloro-3-ethylbutan-1-ol.

Soln :



3(i) Draw the structures of all isomeric alcohols of molecular formula $C_5H_{12}O$ and give their IUPAC names.
(ii) Classify the isomers of alcohols in question.
Soln : (i) The structures & IUPAC names of all isomeric alcohols with a molecular formula of $C_5H_{12}O$ are shown below:
(a) $CH_3-CH_2-CH_2-CH_2-CH_2-OH$ *(Contd)*

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

ರಾಷ್ಟ್ರೀಯ ಭದ್ರತಾ ಸಲಹೆಗಾರ ಡೊಭಾಲ್–ಚೀನಾ ವಿದೇಶಾಂಗ ಸಚಿವ ವಾಂಗ್ ಯಿ ಚರ್ಚೆ

ಗಡಿ: ದ್ವಿಪಕ್ಷೀಯ ಚರ್ಚೆ ಚುರುಕಿಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತ –ಚೀನಾ ಗಡಿ ವಿವಾದದ ಪರಿಹಾರಕ್ಕಾಗಿ ಮಾತುಕತೆಗೆ ಹೆಚ್ಚಿನ ವೇಗ ನೀಡಲು ಹಾಗೂ ಮೊದಲು ಸರಳ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಹಾಗೂ ನಂತರ ಕ್ಲಿಷ್ಟ ಸಮಸ್ಯೆ ಕುರಿತು ವಿಸ್ತೃತವಾಗಿ ಚರ್ಚಿಸಲು ಬುಧವಾರ ಸಮ್ಮತಿಸಲಾಗಿದೆ.

ಗಡಿ ವಿವಾದದ ಕುರಿತು ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಮತ್ತು ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ಚೀನಾ ರಾಜಧಾನಿಯಲ್ಲಿ ಚರ್ಚಿಸಿದರು. ಇದು, ಉಭಯತ್ರರ ಮಧ್ಯೆ 23ನೇ ಸುತ್ತಿನ ಸಭೆಯಾಗಿದೆ.

‘2005ರಲ್ಲಿ ಆಗಿರುವ ಒಪ್ಪಂದದ ಅನುಸಾರ ನ್ಯಾಯಯುತ, ಸಮಯೋಚಿತ ಮತ್ತು ಪರಸ್ಪರ ಒಪ್ಪಿತವಾಗುವ ಪರಿಹಾರ ಕ್ರಮ ಹೊಂದಲು ಉಭಯತ್ರರು ನಿರ್ಧರಿಸಿದರು’ ಎಂದು ಚೀನಾದ ವಿದೇಶಾಂಗ ಸಚಿವಾಲಯ ಪತ್ರಿಕೆ ಹೇಳಿಕೆ ನೀಡಿದೆ.

ಇದೇ ವೇಳೆ, ಮೊದಲು ಸಣ್ಣ ಸಮಸ್ಯೆಗಳನ್ನು ಬಗೆಹರಿಸಿಕೊಂಡು ನಂತರ ಕ್ಲಿಷ್ಟಕರವಾದ ವಿಷಯಗಳನ್ನು ಕುರಿತು ಚರ್ಚಿಸಬೇಕು. ಹಂತ ಹಂತವಾಗಿ ವಿವಾದಗಳನ್ನು ಇತ್ಯರ್ಥಪಡಿಸಿಕೊಳ್ಳಬೇಕು ಎಂದು ತೀರ್ಮಾನಿಸಲಾಯಿತು ಎಂದು ಹೇಳಿಕೆ ತಿಳಿಸಿದೆ.

‘ಗಡಿ ವಿಚಾರಕ್ಕೆ ಅಗತ್ಯ ಮಹತ್ವ ನೀಡಿ’

‘ಚೀನಾ ಹಾಗೂ ಭಾರತವು ಗಡಿ ವಿಷಯಕ್ಕೆ ದ್ವಿಪಕ್ಷೀಯ ಸಂಬಂಧದಲ್ಲಿ ‘ಅಗತ್ಯ ಮಹತ್ವ’ ನೀಡಬೇಕು ಎಂದು ‘ವಿಶೇಷ ಪ್ರತಿನಿಧಿಗಳ ಮಾತುಕತೆ’ಯಲ್ಲಿ ಅಜಿತ್ ಡೊಭಾಲ್ ಅವರಿಗೆ ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ಅವರು ಹೇಳಿದ್ದಾರೆ’ ಎಂದು ಚೀನಾದ ಪತ್ರಿಕೆಯೊಂದು ವರದಿ ಮಾಡಿದೆ.

‘ಗಡಿ ಸಮಸ್ಯೆಗಳಿಗೆ ನ್ಯಾಯಯುತವಾದ ಹಾಗೂ ಎರಡೂ ದೇಶಗಳು ಒಪ್ಪಿಕೊಳ್ಳಬಹುದಾದ ಪರಿಹಾರ ಸೂತ್ರ ಕಂಡುಕೊಳ್ಳಲು ಬದ್ಧವಾಗಿರುವುದಾಗಿ ಎರಡೂ ದೇಶಗಳು ಹೇಳಿವೆ’ ಎಂದು ಪತ್ರಿಕೆ ವರದಿ ಮಾಡಿದೆ.

‘ಎಎಪಿ ಗೆದ್ದರೆ ಹಿರಿಯ ನಾಗರಿಕರಿಗೆ ಉಚಿತ ಚಿಕಿತ್ಸೆ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ರಾಜಧಾನಿಯಲ್ಲಿ ನಮ್ಮ ಪಕ್ಷವು ಅಧಿಕಾರಕ್ಕೆ ಮರಳಿದಲ್ಲಿ ಹಿರಿಯ ನಾಗರಿಕರಿಗೆ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಉಚಿತವಾಗಿ ವೈದ್ಯಕೀಯ ಚಿಕಿತ್ಸೆ ಒದಗಿಸಲು ‘ಸಂಜೀವಿನಿ ಯೋಜನಾ’ ಜಾರಿಗೊಳಿಸಲಾಗುವುದು’ ಎಂದು ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಹೇಳಿದ್ದಾರೆ

ನೇರ ನೇಮಕ: 51 ಅಧಿಕಾರಿಗಳು

ನವದೆಹಲಿ (ಪಿಟಿಐ): ನೇರ ನೇಮಕಾತಿ (ಲ್ಯಾಟರಲ್ ಎಂಟ್ರಿ) ಮೂಲಕ ನೇಮಕವಾಗಿರುವ 51 ತಜ್ಞರು ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ಕೇಂದ್ರ ಸರ್ಕಾರ ಲೋಕಸಭೆಗೆ ಬುಧವಾರ ಮಾಹಿತಿ ನೀಡಿದೆ.

ವಿವಿಧ ಕ್ಷೇತ್ರಗಳಲ್ಲಿ ವಿಶೇಷ ಜ್ಞಾನ ಮತ್ತು ಪರಿಣತಿಯನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸರ್ಕಾರ 2018ರಿಂದಲೂ ಲ್ಯಾಟರಲ್ ಎಂಟ್ರಿ ಮೂಲಕ ನೇಮಕಾತಿ ನಡೆಸಿದೆ.

ಇಲ್ಲಿಯವರೆಗೆ ವಿವಿಧ ಇಲಾಖೆಗಳಲ್ಲಿನ ಜಂಟಿ ಕಾರ್ಯದರ್ಶಿ, ನಿರ್ದೇಶಕ, ಉಪ ಕಾರ್ಯದರ್ಶಿ ಹಂತಗಳಲ್ಲಿ 63 ನೇಮಕಾತಿಗಳು ಈ ಮಾದರಿಯಲ್ಲಿ ಆಗಿವೆ ಎಂದು ಸರ್ಕಾರವು ಸದನಕ್ಕೆ ಮಾಹಿತಿ ನೀಡಿದೆ.

ಅವರನ್ನು ಗುತ್ತಿಗೆ ಅಥವಾ ನಿಯೋಜನೆ ಆಧಾರದ ಮೇರೆಗೆ ನೇಮಿಸಿಕೊಳ್ಳಲಾಗಿದೆ ಎಂದು ಕೇಂದ್ರ ಸಿಬ್ಬಂದಿ ಸಚಿವಾಲಯದ ರಾಜ್ಯ ಖಾತೆ ಸಚಿವ ಜಿತೇಂದ್ರ ಸಿಂಗ್ ಲಿಖಿತ ಉತ್ತರ ನೀಡಿದ್ದಾರೆ.

ಕೇಂದ್ರೀಕರಣ ಪ್ರವೃತ್ತಿಯ ವಿರುದ್ಧ ಹೋರಾಟ ಅಗತ್ಯ: ಕೆವಿಎನ್

‘ಎಲ್ಲವನ್ನೂ ಕೇಂದ್ರೀಕರಣ ಮಾಡುವ ಪ್ರವೃತ್ತಿ ರಾಜಕೀಯವಾಗಿ ನಡೆಯುತ್ತಿರುವುದರಿಂದ ಭಾಷೆ ಹೇರಿಕೆ ಅದರ ಭಾಗವಾಗಿದೆ. ಕೇಂದ್ರೀಕರಣ ಪ್ರವೃತ್ತಿಯ ವಿರುದ್ಧದ ಹೋರಾಟ ಅಗತ್ಯ’ ಎಂದು ಭಾಷಾ ತಜ್ಞ ಕೆ.ವಿ. ನಾರಾಯಣ ಅಭಿಪ್ರಾಯ ಪಟ್ಟಿದ್ದಾರೆ. ತಮ್ಮ ‘ನುಡಿಗಳ ಅಳಿವು’ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದ ಹೊತ್ತಿನೊಳಗೆ ‘ಪ್ರಜಾವಾಣಿ’ ಜತೆ ಮಾತನಾಡಿದ್ದು ಇಲ್ಲಿದೆ.

ಪ್ರಜಾವಾಣಿ ಸಂದರ್ಶನ


ವರುಣ ಹೆಗಡೆ

- **ಕನ್ನಡ ಭಾಷೆ ಅಳಿಯುತ್ತಿದೆ, ಭವಿಷ್ಯದಲ್ಲಿ ಆಡು ಭಾಷೆಯಾಗಿ ಮಾತ್ರ ಉಳಿಯಲಿದೆ ಎಂಬ ಚರ್ಚೆ ವಿದ್ವಾಂಸರ ವಲಯದಲ್ಲಿದೆ...**

ಕನ್ನಡ ಭಾಷೆ ಅಳಿಯುತ್ತಿದೆ ಎಂಬುದನ್ನು ಸಾಬೀತು ಮಾಡಲು ಯಾರಿಂದಲೂ ಸಾಧ್ಯವಿಲ್ಲ. ಆದರೆ, ಭಾಷೆ ಬಳಕೆಯ ವಲಯಗಳು ಕಡಿಮೆ ಆಗುತ್ತಿವೆ. ವಿಧಾನಸೌಧದಲ್ಲಿ ಕನ್ನಡ ಬಳಕೆ ಇತ್ತೀಚಿನ ವರ್ಷಗಳಲ್ಲಿ ಹೆಚ್ಚಳವಾಗಿದೆ. ಹಿಂದೆ ಸರ್ಕಾರಿ ಆದೇಶಗಳು ಇಂಗ್ಲಿಷ್‌ನಲ್ಲಿ ಇರುತ್ತಿದ್ದವು. ಈಗ ಕನ್ನಡದಲ್ಲಿಯೇ ಆದೇಶಗಳನ್ನು ಹೊರಡಿಸಲಾಗುತ್ತಿದೆ. ಬರವಣಿಗೆ ಸ್ವಲ್ಪ ಕಡಿಮೆಯಾದರೂ ಸಾಮಾಜಿಕ ಜಾಲತಾಣದಲ್ಲಿ ಬಳಕೆ ಹೆಚ್ಚಿದೆ. ಮಾತಿನ ಮೂಲಕವೇ ಕನ್ನಡ ಉಳಿದಿದೆ. ಆದ್ದರಿಂದ ಕನ್ನಡಕ್ಕೆ ಕುತ್ತು ಬಂದಿದೆ ಎಂದು ಹೇಳುವುದು ಸರಿಯಲ್ಲ. ಲಿಪಿ ಇರದ ಕೊಡವ, ಲಂಬಾಣಿ ಭಾಷೆಯನ್ನು ಜನರು ಮಾತನಾಡುತ್ತಲೇ ಉಳಿಸಿದ್ದಾರೆ.

- **ಕನ್ನಡ ಭಾಷೆಯ ಬೆಳವಣಿಗೆಯ ದೃಷ್ಟಿಯಿಂದ ತುರ್ತಾಗಿ ಆಗಬೇಕಾಗಿದ್ದು ಏನು?**

ಸರ್ಕಾರವು ಭಾಷಾ ಯೋಜನೆಗಳ ಮೂಲಕ ವಿವಿಧ ಕಾರ್ಯಕ್ರಮಗಳನ್ನು ರೂಪಿಸಬೇಕು. ಕಲಿಕೆಯ ಹಂತದಲ್ಲಿಯೇ ಕನ್ನಡ ಭಾಷೆಯನ್ನು ಮಾಧ್ಯಮವನ್ನಾಗಿ ಬಳಸಲು ಕ್ರಮವಹಿಸಬೇಕಿದೆ. ಪ್ರಾದೇಶಿಕ ಕನ್ನಡಗಳ ನಡುವೆ ಸಮನ್ವಯ ಸಾಧಿಸುವ ಕೆಲಸವಾಗಬೇಕಿದೆ. ಈ ಕಾರ್ಯ ಶಿಕ್ಷಣದ ಮೂಲಕ ಆಗಲಿದೆ ಅನಿಸುತ್ತದೆ.



ಕೆ.ವಿ. ನಾರಾಯಣ

- **ಕನ್ನಡ ಅನ್ನದ ಭಾಷೆ ಆಗಬೇಕೆಂಬ ಆಗ್ರಹವಿದೆ. ಈ ಬಗ್ಗೆ...**

ಭಾಷೆಯಿಂದ ಉದ್ಯೋಗ ದೊರೆಯುವುದಿಲ್ಲ. ಕೌಶಲದಿಂದ ಉದ್ಯೋಗ ದೊರೆಯುತ್ತದೆ. ಇಂಗ್ಲಿಷ್ ಬಂದರೆ ಮಾತ್ರ ಉದ್ಯೋಗ ಸಿಗುತ್ತದೆ ಎನ್ನುವುದು ತಪ್ಪು ಕಲ್ಪನೆ. ಕಾಲ್ ಸೆಂಟರ್ ಮೊದಲಾದ ಕಡೆ ಮಾತ್ರ ಇಂಗ್ಲಿಷ್ ಬಂದವರಿಗೆ ಉದ್ಯೋಗ ದೊರೆಯಬಹುದು. ಭಾಷೆಗೂ ಉದ್ಯೋಗಕ್ಕೂ ನೇರವಾದ ಸಂಬಂಧವಿಲ್ಲ.

- **ಬ್ಯಾಂಕಿಂಗ್ ಕ್ಷೇತ್ರ ಸೇರಿ ವಿವಿಧೆಡೆ ದಕ್ಷಿಣ ಭಾರತೀಯ ಭಾಷೆಗಳನ್ನು ಕಡೆಗಣಿಸಿ, ಹಿಂದಿ ಹೇರಿಕೆ ಮಾಡಲಾಗುತ್ತಿದೆ ಎಂಬ ವಾದವಿದೆ.**

ನಿಜ, ಈ ಹೇರಿಕೆ ಭಾಷೆಗೆ ಮಾತ್ರ ಸೀಮಿತವಾಗಿರದೇ, ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ), ನೀಟ್ ಪರೀಕ್ಷೆ ಸೇರಿ ವಿವಿಧೆಡೆ ಕಾಣಬಹುದಾಗಿದೆ. ಹಿಂದಿ ಹೇರಿಕೆಯಷ್ಟನ್ನೇ ವಿರೋಧಿಸಿ, ಜಿಎಸ್‌ಟಿ, ನೀಟ್ ಸೇರಿ ವಿವಿಧ ಕೇಂದ್ರೀಕರಣ ಪ್ರಕ್ರಿಯೆ ಒಪ್ಪಿಕೊಳ್ಳುವುದು ಸರಿಯಲ್ಲ.

- **ಸಾಹಿತ್ಯ ವಿದ್ಯಾರ್ಥಿಗಳಿಗೆ ನಿಮ್ಮ ಕಿವಿಮಾತು...**

ಓದುವ ಪ್ರವೃತ್ತಿ ಹೆಚ್ಚಬೇಕು. ಸಮಕಾಲೀನದ್ದು ಮಾತ್ರವಲ್ಲದೆ, ಕನ್ನಡದಲ್ಲಿ ಮಹತ್ವದ ಬರಹಗಾರರು ಆಗಿ ಹೋಗಿದ್ದಾರೆ. ಅವರೆಲ್ಲರ ಬಗ್ಗೆಯೂ ತಿಳಿದು, ಸಾಹಿತ್ಯ ಕೃತಿಗಳನ್ನು ಓದಬೇಕು.

- **ಈ ಪ್ರಶಸ್ತಿಯ ನಿರೀಕ್ಷೆಯಿತ್ತೆ?**

ಪ್ರಶಸ್ತಿಗಳ ಬಗ್ಗೆ ಯಾವ ನಿರೀಕ್ಷೆಗಳನ್ನೂ ಇಟ್ಟುಕೊಂಡಿಲ್ಲ. ನನ್ನ ಪಾಡಿಗೆ ನಾನು ಕೆಲಸ ಮಾಡಿಕೊಂಡು ಹೋಗುತ್ತಿದ್ದೇನೆ. ಈ ಪ್ರಶಸ್ತಿಗಳೆಲ್ಲ ಆಕಸ್ಮಿಕ.

ನುಡಿಜಾತ್ರೆಯಲ್ಲೊಂದು ಸ್ವರಯಾತ್ರೆ

ಮಂಡ್ಯ: ರಾಜೇಶ್ ಕೃಷ್ಣನ್ ಮತ್ತು ಅರ್ಜುನ್ ಜನ್ಯ ತಂಡದಿಂದ ‘ಸಂಗೀತ ಸಂಜೆ’ ಕಾರ್ಯಕ್ರಮ

• ಸಿದ್ದು ಆರ್.ಜಿ.ಹಳ್ಳಿ

ಮಂಡ್ಯ: ಇಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ‘ನುಡಿಜಾತ್ರೆಯ ಸ್ವರಯಾತ್ರೆ’ ಸಂಗೀತ ಕಾರ್ಯಕ್ರಮ ಏರ್ಪಡಿಸಿರುವುದು ಈ ಬಾರಿಯ ವಿಶೇಷ.

ಡಿ.20ರಂದು ಸಂಗೀತ ನಿರ್ದೇಶಕ ಸಾಧುಕೋಕಿಲ ಮತ್ತು ಹಿನ್ನೆಲೆ ಗಾಯಕ ರಾಜೇಶ್ ಕೃಷ್ಣನ್ ತಂಡದಿಂದ ಹಾಗೂ 21ರಂದು ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಮತ್ತು ತಂಡದವರಿಂದ ‘ಸಂಗೀತ ಸಂಜೆ’ ನಡೆಯಲಿದೆ. ಎರಡು ದಿನ ಸಂಜೆ ವೇಳೆ ನಡೆಯಲಿರುವ ಕಾರ್ಯಕ್ರಮದಲ್ಲಿ, ‘ಸರಿಗಮಪ’ ಖ್ಯಾತಿಯ ಇಂದು ನಾಗರಾಜ್, ಸಾಕ್ಷಿ ಕಲ್ಲೂರ್, ಉಷಾ ಕೋಕಿಲ, ನದೀರಾ ಬಾನು, ಅನನ್ಯಾ ಪ್ರಕಾಶ್, ಕಂಬದ ರಂಗಯ್ಯ, ದಿವ್ಯಾ ರಾಮಚಂದ್ರ, ಸಂತೋಷ್ ಕನ್ನಡ ಗೀತೆಗಳನ್ನು ಹಾಡಿ ಪ್ರೇಕ್ಷಕರನ್ನು ರಂಜಿಸಲಿದ್ದಾರೆ.

ನಗರದ ಅಂಬೇಡ್ಕರ್ ಭವನ, ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾ ಮಂದಿರ, ಪ್ರಧಾನ ವೇದಿಕೆ ಮತ್ತು ಸಮಾನಾಂತರ ವೇದಿಕೆಗಳಲ್ಲಿ ಸ್ಥಳೀಯ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

ಮುಖ್ಯಾಂಶಗಳು

- 87ನೇ ನುಡಿ ಜಾತ್ರೆಗೆ ಸಕಲ ಸಿದ್ಧತೆ
- ಪುಸ್ತಕ, ವಾಣಿಜ್ಯ ಮಳಿಗೆಗಳು ಸಜ್ಜು



ಸಾಹಿತ್ಯ, ಸಂಸ್ಕೃತಿ, ಪರಂಪರೆ ಬಿಂಬಿಸುವ ಮತ್ತು ನಾಡು–ನುಡಿ ಬಗ್ಗೆ ಅಭಿಮಾನ ಮೂಡಿಸುವ ನಿಟ್ಟಿನಲ್ಲಿ 87ನೇ ನುಡಿಜಾತ್ರೆಗೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ

ಎನ್.ಚಲುವರಾಯಸ್ವಾಮಿ
ಜಿಲ್ಲಾ ಉಸ್ತುವಾರಿ ಸಚಿವ, ಮಂಡ್ಯ

450 ಪುಸ್ತಕ ಮಳಿಗೆ: ಸಮ್ಮೇಳನದಲ್ಲಿ ಪ್ರಮುಖ ಆಕರ್ಷಣೆಯಾದ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟಕ್ಕಾಗಿ 450 ಮಳಿಗೆಗಳನ್ನು ತೆರೆಯಲಾಗಿದೆ. 350 ವಾಣಿಜ್ಯ ಮಳಿಗೆಗಳು, ಸರ್ಕಾರದ ವಿವಿಧ ಇಲಾಖೆಗಳ 55 ವಸ್ತುಪ್ರದರ್ಶನ ಮಳಿಗೆಗಳಿರಲಿವೆ.



ಮಂಡ್ಯದ 87ನೇ ನುಡಿಜಾತ್ರೆಯಲ್ಲಿ ‘ಸ್ವರಯಾತ್ರೆ’ ನಡೆಸಿಕೊಡಲಿರುವ ಗಾಯಕರು

100 ಆಹಾರ ಕೌಂಟರ್: ‘ಆಹಾರ ಗುಣಮಟ್ಟ ಮತ್ತು ಸುರಕ್ಷತಾ ಸಮಿತಿಯನ್ನು ರಚಿಸಿದ್ದು, ಪ್ರತಿ ಹಂತದಲ್ಲೂ ಗುಣಮಟ್ಟವನ್ನು ಪರೀಕ್ಷಿಸಿ, ದೃಢೀಕರಿಸಿದ ನಂತರವೇ ವಿತರಿಸುವಂತೆ ಕ್ರಮ ಕೈಗೊಳ್ಳಲಾಗಿದೆ. ನೂಕುನುಗ್ಗಲು ತಪ್ಪಿಸಲು ಸಾರ್ವಜನಿಕರಿಗೆ 100 ಕೌಂಟರ್ ಮತ್ತು ಪ್ರತಿನಿಧಿಗಳಿಗೆ 40 ಕೌಂಟರ್ ತೆರೆಯಲಾಗಿದೆ’ ಎಂದು ಜಿಲ್ಲಾಧಿಕಾರಿ ಕುಮಾರ ಮಾಹಿತಿ ನೀಡಿದ್ದಾರೆ.

‘ಬೆಲ್ಲದಾರತಿ’ ಅನಾವರಣ: 87ನೇ ನುಡಿಜಾತ್ರೆಯ ಅಂಗವಾಗಿ ಒಟ್ಟು 87 ಪುಸ್ತಕಗಳನ್ನು 20ರಂದು ಪ್ರಧಾನ ವೇದಿಕೆಯಲ್ಲಿ ಬಿಡುಗಡೆ ಮಾಡಲಾಗುತ್ತದೆ. ಸಮ್ಮೇಳನದ ನೆನಪುಗಳ ಸಂಪುಟವಾದ ‘ಬೆಲ್ಲದಾರತಿ’ ಸ್ಮರಣ ಸಂಚಿಕೆ ಅನಾವರಣಗೊಳ್ಳಲಿದೆ.

ಗೊರುಚ ಪುರ ಪ್ರವೇಶ ಇಂದು

ಸಾಹಿತ್ಯ ಸಮ್ಮೇಳನಾಧ್ಯಕ್ಷ ಗೊ.ರು. ಚನ್ನಬಸಪ್ಪ ಅವರು ‘ಸಕ್ಕರೆ ನಾಡು’ ಮಂಡ್ಯಕ್ಕೆ ಗುರುವಾರ ಸಂಜೆ 4.30ಕ್ಕೆ ‘ಪುರ ಪ್ರವೇಶ’ ಮಾಡಲಿದ್ದಾರೆ.

ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ನೇತೃತ್ವದಲ್ಲಿ ಅದ್ದೂರಿಯಾಗಿ ಸ್ವಾಗತಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಮೆರವಣಿಗೆ ಮೂಲಕ ಜಿಲ್ಲಾಧಿಕಾರಿ ನಿವಾಸಕ್ಕೆ ಕರೆದೊಯ್ದು ‘ಅತಿಥಿ ಸತ್ಕಾರ’ ನೀಡಲಾಗುತ್ತದೆ. 20ರಂದು ಬೆಳಿಗ್ಗೆ 7 ಗಂಟೆಗೆ ಸಮ್ಮೇಳನಾಧ್ಯಕ್ಷರ ಮೆರವಣಿಗೆ ನಡೆಯಲಿದೆ.

30 ನಿಮಿಷಕ್ಕೊಂದು ವಿಶೇಷ ಬಸ್!

ಸಮ್ಮೇಳನಕ್ಕೆ ಬರಲು ಅನುಕೂಲವಾಗಲಿ ಎಂಬ ಉದ್ದೇಶದಿಂದ ಬೆಂಗಳೂರಿನ ಸ್ಯಾಟಲೈಟ್ ನಿಲ್ದಾಣದಿಂದ ಹಾಗೂ ಮೈಸೂರಿನ ಕೇಂದ್ರೀಯ ಬಸ್ ನಿಲ್ದಾಣದಿಂದ ಮಂಡ್ಯಕ್ಕೆ ಪ್ರತಿ 30 ನಿಮಿಷಕ್ಕೊಂದು ‘ವಿಶೇಷ ಬಸ್’ ವ್ಯವಸ್ಥೆ ಇರಲಿದೆ.

ಜಿಲ್ಲೆಯ ಪ್ರತಿ ತಾಲ್ಲೂಕಿನಿಂದ ಸಮ್ಮೇಳನ ನಡೆಯುವ ಸ್ಥಳಕ್ಕೆ ತಲಾ 15 ವಿಶೇಷ ವಾಹನಗಳಂತೆ ಒಟ್ಟು 105 ಬಸ್ ಸೌಲಭ್ಯ ಕಲ್ಪಿಸಲಾಗಿದೆ. ನಗರದ ವಿವಿಧ ಸ್ಥಳಗಳಿಂದ ಸಮ್ಮೇಳನದ ಸ್ಥಳಕ್ಕೆ ಬೆಳಿಗ್ಗೆಯಿಂದ ರಾತ್ರಿವರೆಗೆ ನಿರಂತರವಾಗಿ 15 ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅವಕಾಶ ನೀಡಲಾಗಿದೆ.

ಪ್ರೊ. ಕೆ.ವಿಎನ್‌ಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

ಒಂದನೇ ಪುಟದಿಂದ...

ಪ್ರೊ.ಕೆ.ವಿ.ನಾರಾಯಣ ಅವರು ಮೂಲತಃ ಪಿರಿಯಾಪಟ್ಟಣದ ಕಂಪಲಾಪುರದವರು. ಆರಂಭಿಕ ಶಿಕ್ಷಣವನ್ನು ತಮ್ಮ ಊರಿನಲ್ಲಿ ಪಡೆದರು. ಉನ್ನತ ಶಿಕ್ಷಣಕ್ಕಾಗಿ ಬೆಂಗಳೂರಿನತ್ತ ಹೊರಟರು. ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡ ಎಂ.ಎ.ಗೆ ಸೇರಿದರು. ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ಅಧ್ಯಾಪನ ವೃತ್ತಿ ಆರಂಭಿಸಿದರು. ಅವರು ಬೆಂಗಳೂರು ವಿಶ್ವವಿದ್ಯಾಲಯದ ಜಿ.ಎಸ್. ಶಿವರುದ್ರಪ್ಪ ಅವರ ಮಾರ್ಗದರ್ಶನದಲ್ಲಿ ಆನಂದವರ್ಧನನ ‘ಧ್ವನ್ಯಾಲೋಕ’ವನ್ನು ಅಧ್ಯಯನ ಮಾಡಿ ಪಿಎಚ್.ಡಿ ಪದವಿ ಪಡೆದರು.

1993ರಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯ ಅಸ್ತಿತ್ವಕ್ಕೆ ಬಂದ ಶುರುವಿನಲ್ಲಿ ಅವರು ರಿಜಿಸ್ಟ್ರಾರ್ ಆಗಿ ಕಾರ್ಯನಿರ್ವಹಿಸಿದರು. ಬಳಿಕ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು.

‘ಕನ್ನಡ ಜಗತ್ತು–ಅರ್ಧ ಶತಮಾನ’, ‘ಭಾಷೆಯ ಸುತ್ತಮುತ್ತ’, ಸಾಹಿತ್ಯ ತತ್ವ–ಬೇಂದ್ರೆ ದೃಷ್ಟಿ’, ‘ಧ್ವನ್ಯಾಲೋಕ– ಒಂದು ಅಧ್ಯಯನ’, ‘ನಮ್ಮೊಡನೆ ನಮ್ಮ ನುಡಿ’, ‘ಬೇರು ಕಾಂಡ ಚಿಗುರು’, ‘ಕನ್ನಡ ಶೈಲಿ ಕೈಪಿಡಿ’ ಸೇರಿದಂತೆ 22ಕ್ಕೂ ಅಧಿಕ ಕೃತಿಗಳನ್ನು ರಚಿಸಿದ್ದಾರೆ.

‘ಪರಮಾಣು ಸ್ಥಾವರ: ಭೂಮಿ ಗುರುತಿಸಿ’

ಪ್ರಜಾವಾಣಿ ವಾರ್ತೆ

ಕೊಪ್ಪಳ: ರಾಜ್ಯದಲ್ಲಿ ಕೈಗಾ ನಂತರ ಮತ್ತೊಂದು ಪರಮಾಣು ವಿದ್ಯುತ್ ಸ್ಥಾವರ ಸ್ಥಾಪನೆಗೆ ಕೇಂದ್ರ ಸರ್ಕಾರ ಮುಂದಾಗಿದ್ದು, ಕೊಪ್ಪಳವೂ ಸೇರಿದಂತೆ ಉತ್ತರ ಕರ್ನಾಟಕದ ನಾಲ್ಕೈದು ಜಿಲ್ಲೆಗಳಲ್ಲಿ ಒಂದೇ ಕಡೆ 1,200 ಎಕರೆ ಭೂಮಿ ಗುರುತಿಸುವ ಕಾರ್ಯ ನಡೆಯುತ್ತಿದೆ.

ಕೊಪ್ಪಳ ಜಿಲ್ಲೆಯ ಬೇರೆ ಬೇರೆ ತಾಲ್ಲೂಕುಗಳಲ್ಲಿಯೂ ಭೂಮಿ ಗುರುತಿಸುವ ಕೆಲಸ ನಡೆಯುತ್ತಿದ್ದು, ಅದರಲ್ಲಿ ತಾಲ್ಲೂಕಿನ ಅರಸನಕೇರಿ ಹಾಗೂ ಸುತ್ತಮುತ್ತಲ ಪ್ರದೇಶವೂ ಒಂದಾಗಿದೆ.

ಈ ಕುರಿತು ಕೊಪ್ಪಳ ಜಿಲ್ಲಾಧಿಕಾರಿ ನಲಿನ್ ಅತುಲ್ ಅವರು ಕೊಪ್ಪಳ ತಹಶೀಲ್ದಾರ್‌ಗೆ ಪತ್ರ ಬರೆದಿದ್ದು, ಅರಸನಕೇರಿ ಗ್ರಾಮದಲ್ಲಿ ಪರಮಾಣು ವಿದ್ಯುತ್ ಸ್ಥಾವರ ಸ್ಥಾಪನೆಗೆ ಭೂಮಿ ಲಭ್ಯತೆ ಬಗ್ಗೆ ಮಾಹಿತಿ ನೀಡುವಂತೆ ಸೂಚಿಸಿದ್ದಾರೆ. ಆದರೆ, ಈ ಗ್ರಾಮದಲ್ಲಿ ಪಟ್ಟಾ ಹಾಗೂ ಸರ್ಕಾರಿ ಸೇರಿ ಒಟ್ಟು 615 ಎಕರೆ ಜಮೀನು ಮಾತ್ರ ಲಭ್ಯವಿದೆ.

ಅರಸನಕೇರಿ ಸಮೀಪದ ಕರಡಿಗುಡ್ಡ, ಅದಕ್ಕೆ ಹೊಂದಿಕೊಂಡಿರುವ ಹಾಗೂ ಜನವಸತಿ ಪ್ರದೇಶದಿಂದ ಕನಿಷ್ಠ ಮೂರು ಕಿ.ಮೀ. ದೂರದಲ್ಲಿ ಜಮೀನು ಗುರುತಿಸಿ ಎಂದೂ ಹೇಳಿದ್ದಾರೆ. ಭೂಮಿ ಗುರುತಿಸುವ ಕಾರ್ಯ ಇನ್ನೂ ಪ್ರಾಥಮಿಕ ಹಂತದಲ್ಲಿದ್ದು, ಜಿಲ್ಲಾಡಳಿತ ಈ ಸ್ಥಳ

ಪರಮಾಣು ವಿದ್ಯುತ್ ಸ್ಥಾವರಕ್ಕೆ 1,200 ಎಕರೆ ಭೂಮಿ ಗುರುತಿಸುವಂತೆ ಕೇಂದ್ರ ಸರ್ಕಾರ ತಿಳಿಸಿದ್ದು ಜಿಲ್ಲೆಯಾದ್ಯಂತ ಜಾಗದ ಹುಡುಕಾಟ ನಡೆದಿದೆ

ನಲಿನ್ ಅತುಲ್
ಕೊಪ್ಪಳ ಜಿಲ್ಲಾಧಿಕಾರಿ



ವೀಕ್ಷಣೆ ಮಾಡಿರುವುದಕ್ಕೆ ಸ್ಥಳೀಯರು ವಿರೋಧ ವ್ಯಕ್ತಪಡಿಸಿದ್ದಾರೆ.

ಅರಸನಕೇರಿ ಭಾಗದ ಮುಖಂಡರೂ ಆದ ವಿಧಾನಪರಿಷತ್ ಮಾಜಿ ಸದಸ್ಯ ಕರಿಯಣ್ಣ ಸಂಗಟಿ ಹಾಗೂ ರೈತರು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದ್ದು, ‘ಕೊಪ್ಪಳ ತಾಲ್ಲೂಕಿನ ಇರಕಲ್ಲಗಡ ಹೋಬಳಿ ವ್ಯಾಪ್ತಿಯ ಅರಸನಕೇರಿ ಗ್ರಾಮದಲ್ಲಿ ಪರಮಾಣು ವಿದ್ಯುತ್ ಸ್ಥಾವರಕ್ಕೆ ಭೂಮಿ ಗುರುತಿಸುವುದಕ್ಕೆ ನಮ್ಮ ವಿರೋಧವಿದೆ. ಈ ಪ್ರದೇಶದಲ್ಲಿ ಸಾಕಷ್ಟು ಕರಡಿಗಳಿರುವ ಕಾರಣ ಕರಡಿ ಸಂರಕ್ಷಿತ ಧಾಮ ಎಂದು ಘೋಷಣೆ ಮಾಡಲಾಗುತ್ತಿದೆ. ಇಂಥ ಪ್ರದೇಶದಲ್ಲಿ ಪರಮಾಣು ವಿದ್ಯುತ್ ಸ್ಥಾವರ ಏಕೆ ನಿರ್ಮಿಸಬೇಕು’ ಎಂದು ಪ್ರಶ್ನಿಸಿದ್ದಾರೆ.

‘ಪ್ರಕರಣದಿಂದ ಹಿಂದೆ ಸರಿಯಲು ಆಮಿಷ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಮುಡಾ ನಿವೇಶನಗಳ ಹಂಚಿಕೆ ಪ್ರಕರಣವನ್ನು ಸಿಬಿಐ ತನಿಖೆಗೆ ಕೋರಿ ನ್ಯಾಯಾಲಯದಲ್ಲಿ ಸಲ್ಲಿಸಿರುವ ಅರ್ಜಿ ಹಿಂಪಡೆಯುವಂತೆ ಕೆಲವರು ನನಗೆ ಹಾಗೂ ನನ್ನ ಕುಟುಂಬಕ್ಕೆ ಹಣದ ಆಮಿಷ ಒಡ್ಡಿದ್ದಾರೆ. ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಸಾಮಾಜಿಕ ಹೋರಾಟಗಾರ ಸ್ನೇಹಮಯಿ ಕೃಷ್ಣ ಬುಧವಾರ ಇಲ್ಲಿನ ಲೋಕಾಯುಕ್ತ ಎಸ್.ಪಿ. ಕಚೇರಿಗೆ ದೂರು ಸಲ್ಲಿಸಿದರು.

ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ‘ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಬಿ.ಎಂ. ಪಾರ್ವತಿ ಕಡೆಯವರೆಂದು ಹೇಳಿಕೊಂಡು ಡಿ. 12ರಂದು ಶ್ರೀನಿಧಿ ಎಂಬುವರು ನನ್ನ ಮನೆಗೆ ಬಂದಿದ್ದರು. ಪಾರ್ವತಿ ಅವರ ಆಗುಹೋಗುಗಳನ್ನು ನಾವೇ ನೋಡಿಕೊಳ್ಳುತ್ತಿದ್ದೇವೆ. ಅವರು ಈ ಪ್ರಕರಣದಿಂದ ಖಿನ್ನತೆಗೆ ಒಳಗಾಗಿದ್ದಾರೆ. ಪ್ರಕರಣದಲ್ಲಿ ಅವರ ಪಾತ್ರವಿಲ್ಲ. ದೇವರಾಜು, ಮಲ್ಲಿಕಾರ್ಜುನ ಸ್ವಾಮಿ, ಸಿ.ಟಿ. ಕುಮಾರ್ ಸೇರಿಕೊಂಡು ಅವರಿಗೆ ಮೋಸ ಮಾಡಿದ್ದಾರೆ. ಹೈಕೋರ್ಟ್‌ನಲ್ಲಿ ಸಿಬಿಐ ತನಿಖೆಗೆ ಕೋರಿರುವ ಪ್ರಕರಣವನ್ನು ಹಿಂಪಡೆಯಿರಿ. ಬೇಕಿದ್ದರೆ ಲೋಕಾಯುಕ್ತ ತನಿಖೆ ಮುಂದುವರಿಯಲಿ ಎಂದಿದ್ದರು’ ಎಂದು ವಿವರಿಸಿದರು.

‘ಬಳಿಕ, ಡಿ. 14ರಂದು ಕೆ.ಆರ್. ಪೊಲೀಸ್ ಠಾಣೆಯಲ್ಲಿ ನನ್ನ ವಿರುದ್ಧ ಸುಳ್ಳು ಪ್ರಕರಣ ದಾಖಲಾಯಿತು. ನಾನು ಬೆಂಗಳೂರಿಗೆ ತೆರಳಿದೆ. 15ರಂದು ಬೆಳಿಗ್ಗೆ 10.30ಕ್ಕೆ ಮತ್ತೆ ನನ್ನ ಮನೆಗೆ ಬಂದ ಶ್ರೀನಿಧಿ ಮತ್ತು ಹರ್ಷ ಎಂಬ ಇಬ್ಬರು ನನ್ನ ಮಗನೊಂದಿಗೆ ಮಾತನಾಡಿದ್ದರು. ಪ್ರಕರಣ ಹಿಂಪಡೆಯಲು ಅದೇ ರೀತಿ ವ್ಯಕ್ತಿಯೊಬ್ಬರಿಗೆ ₹3 ಕೋಟಿ ಕೊಡಲು ಮಾತನಾಡಿದ್ದು, ಈಗಾಗಲೇ ₹1.5 ಕೋಟಿ ನೀಡಿದ್ದೇವೆ ಎಂದು ಹಣದ ಬ್ಯಾಗ್ ಇರುವ ವಿಡಿಯೊವನ್ನು ನನ್ನ ಮಗನಿಗೆ ತೋರಿಸಿದ್ದರು. ನಿಮ್ಮ ತಂದೆ ನ್ಯಾಯಾಲಯದಲ್ಲಿ ಪ್ರಕರಣ ಹಿಂಪಡೆಯಲು ಒಪ್ಪಿದರೆ ಅದೇ ರೀತಿ ಹಣ ಕೊಡುವುದಾಗಿಯೂ ಆಮಿಷ ಒಡಿದ್ದರು. ನನ್ನ ಮಗ ಒಪ್ಪದಿದ್ದಾಗ ಹಲವು ಬಾರಿ ನನಗೆ ಕರೆ ಮಾಡಿದ್ದರು’ ಎಂದರು. ‘ಮಂಗಳವಾರ ಬೆಂಗಳೂರಿನಲ್ಲಿ ಇ.ಡಿ. ಕಚೇರಿಗೆ ದೂರು ನೀಡಿದ್ದೇನೆ. ಲೋಕಾಯುಕ್ತ ಎಸ್.ಪಿ. ಹಾಗೂ ನಗರ ಪೊಲೀಸ್ ಆಯುಕ್ತರಿಗೆ ಬುಧವಾರ ದೂರು ನೀಡಿದ್ದೇನೆ’ ಎಂದರು.

‘ವಿಚಾರಣಾ ಆಯೋಗದಿಂದ ನ್ಯಾ. ದೇಸಾಯಿ ಕೈಬಿಡಿ’

ಮೈಸೂರು: ‘ಮುಡಾ ನಿವೇಶನಗಳ ಹಂಚಿಕೆ ಪ್ರಕರಣದ ವಿಚಾರಣೆಗಾಗಿ ರಾಜ್ಯ ಸರ್ಕಾರವು ನೇಮಿಸಿರುವ ಏಕಸದಸ್ಯ ಆಯೋಗದ ಮುಖ್ಯಸ್ಥರಾದ, ನಿವೃತ್ತ ನ್ಯಾಯಮೂರ್ತಿ ಪಿ.ಎನ್. ದೇಸಾಯಿ ಅವರನ್ನು ಕೇಂದ್ರ ಸರ್ಕಾರವು ಮೂರು ವರ್ಷ ಕಾಲ ಯಾವುದೇ ಶಾಸನಾತ್ಮಕ ಸಂಸ್ಥೆಯಲ್ಲಿ ನ್ಯಾಯಮೂರ್ತಿಯಾಗಿ ಕರ್ತವ್ಯ ನಿರ್ವಹಿಸದಂತೆ ನಿರ್ಬಂಧ ಹೇರಿದೆ. ಅವರನ್ನು ವಿಚಾರಣಾ ಆಯೋಗದಿಂದ ಕೈ ಬಿಟ್ಟು, ಅವರ ಬಳಿ ಇರುವ ದಾಖಲೆಗಳನ್ನು ವಶಕ್ಕೆ ಪಡೆಯಬೇಕು’ ಎಂದು ಕೋರಿ ಸಾಮಾಜಿಕ ಹೋರಾಟಗಾರ ಸ್ನೇಹಮಯಿ ಕೃಷ್ಣ ಬುಧವಾರ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಮನವಿ ಪತ್ರ ಸಲ್ಲಿಸಿದ್ದಾರೆ.

‘ಕೇಂದ್ರ ಆಡಳಿತಾತ್ಮಕ ಟ್ರಿಬ್ಯುನಲ್ (ಸಿಎಟಿ) ಹೈದರಾಬಾದ್ ಪೀಠದ ಸದಸ್ಯರಾಗಿ ಕಾರ್ಯ ನಿರ್ವಹಿಸಲು ದೇಸಾಯಿ ಅವರು ನಿರಾಕರಿಸಿದ ಹಿನ್ನೆಲೆಯಲ್ಲಿ, ಅವರನ್ನು ಯಾವುದೇ ಸಂಸ್ಥೆ/ ಆಯೋಗಗಳಲ್ಲಿ ಕಾರ್ಯ ನಿರ್ವಹಿಸದಂತೆ ನಿರ್ಬಂಧಿಸಿ ಆದೇಶ ಹೊರಡಿಸಲಾಗಿದೆ’ ಎಂದಿದ್ದಾರೆ.

ಸಾಹಿತ್ಯ ಸಮ್ಮೇಳನ: ಆತಿಥ್ಯಕ್ಕೆ ಸಿಹಿ ತಿನಿಸುಗಳ ತಯಾರಿಕೆ ಭರದಿಂದ ಆರಂಭ

‘ಮನೆಗೊಂದು ಕೋಳಿ, ಊರಿಗೊಂದು ಕುರಿ’

ಪ್ರಜಾವಾಣಿ ವಾರ್ತೆ

ಮಂಡ್ಯ: ‘87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಾಂಸಾಹಾರ ನಿಷೇಧಿಸಿರುವುದನ್ನು ವಿರೋಧಿಸಿ ‘ಮನೆಗೊಂದು ಕೋಳಿ ಮತ್ತು ಊರಿಗೊಂದು ಕುರಿ ಸಂಗ್ರಹ’ ಅಭಿಯಾನಕ್ಕೆ ಚಾಲನೆ ನೀಡಿ, ಸಮ್ಮೇಳನದಲ್ಲಿ ಮಾಂಸಪ್ರಿಯರಿಗೆ ಅಡುಗೆ ಮಾಡಿಸುತ್ತೇವೆ’ ಎಂದು ಸಾಹಿತಿ ರಾಜೇಂದ್ರ ಪ್ರಸಾದ್ ಹೇಳಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ‘ಸಮ್ಮೇಳನದಲ್ಲಿ ಮಾಂಸಾಹಾರಕ್ಕೆ ಪ್ರಾತಿನಿಧ್ಯವಿರಬೇಕೆಂಬುದು ನಮ್ಮ ಉದ್ದೇಶ. ತಂಬಾಕು, ಮದ್ಯಪಾನ ಹಾಗೂ ಮಾಂಸಾಹಾರ ನಿಷೇಧಿಸಲಾಗಿದೆ ಎಂಬ ನಿಬಂಧನೆಯನ್ನು ಖಂಡಿಸಿಯೇ ಇದು ಪ್ರಾರಂಭವಾಗಿದ್ದು ಎಂಬುದನ್ನು ಅರಿತುಕೊಳ್ಳಬೇಕು’ ಎಂದರು.

‘ಸಮ್ಮೇಳನದಲ್ಲಿ ಮಾಂಸಾಹಾರಕ್ಕೆ ನಿಷೇಧವಿಲ್ಲ. ಆದರೂ ಅದನ್ನು ಕೀಳಾಗಿ ಕಾಣುತ್ತಿರುವುದನ್ನು ಹೋಗಲಾಡಿಸುವ ಹಾಗೂ ಆಹಾರದಲ್ಲಿ ಸಮಾನತೆ ತರುವ ಪ್ರಯತ್ನ ನಮ್ಮದು. ಸಾರ್ವಜನಿಕರ ಹಣವನ್ನು ಸಮ್ಮೇಳನದಲ್ಲಿ ಬಳಸುತ್ತಿದ್ದು, ಒಂದು ಮೊಟ್ಟೆ ಹಾಗೂ ಒಂದು ತುಂಡು ಮಾಂಸ ನೀಡಲು ಸಮಸ್ಯೆ ಏನಿದೆ’ ಎಂದು ಪ್ರಶ್ನಿಸಿದರು.

ಕರುನಾಡು ಸೇವಕರ ಸಂಘಟನೆಯ ಎಂ.ಬಿ.ನಾಗಣ್ಣಗೌಡ, ‘ಸಮ್ಮೇಳನಕ್ಕೆ ಹಾಕಿರುವ ಬ್ರಾಹ್ಮಣ್ಯದ ಜನಿವಾರವನ್ನು ಬಾಡೂಟದ ಮೂಲಕ ತೆರವುಗೊಳಿಸುವ ಪ್ರಯತ್ನ ಮಾಡುತ್ತೇವೆ’ ಎಂದರು.

ಸಾಮಾಜಿಕ ಕಾರ್ಯಕರ್ತ ಸಂತೋಷ್ ಮಾತನಾಡಿದರು. ಲಕ್ಷ್ಮಣ್ ಚೀರನಹಳ್ಳಿ, ಸಿ. ಕುಮಾರಿ, ಶಿವಶಂಕರ್, ಧನುಷ್, ಮನು ಇದ್ದರು.



ಮಂಡ್ಯದಲ್ಲಿ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಅಂಗವಾಗಿ ಬಾಣಸಿಗರು ಹೋಳಿಗೆ ಸಿದ್ಧಪಡಿಸುತ್ತಿದ್ದಾರೆ –ಪ್ರಜಾವಾಣಿ ಚಿತ್ರ

ಲಕ್ಷ ಹೋಳಿಗೆ

ಸಮ್ಮೇಳನಕ್ಕೆ ಬರುವವರಿಗೆ ಒಂದು ಲಕ್ಷ ಹೋಳಿಗೆ ತಯಾರಿಸುವ ಕಾರ್ಯ ಈಗಾಗಲೇ ಸಮ್ಮೇಳನದ ವೇದಿಕೆ ಸ್ಥಳದಲ್ಲಿ ಶುರುವಾಗಿದೆ. 750 ಬಾಣಸಿಗರು ಮತ್ತು ಅಡುಗೆ ಸಹಾಯಕರ ತಂಡ ಹೋಳಿಗೆ ಸೇರಿದಂತೆ ತಲಾ ಒಂದು ಲಕ್ಷ ಬಾದೂಷ, ಲಡ್ಡು, ಮೈಸೂರು ಪಾಕ್ ತಯಾರು ಮಾಡುತ್ತಿದ್ದಾರೆ.

‘2016ರಲ್ಲಿ ಮೈಸೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅಡುಗೆ ಮಾಡಿದ್ದೆವು. ಈಗ 2ನೇ ಬಾರಿ ಅವಕಾಶ ಸಿಕ್ಕಿದೆ. ಒಟ್ಟು 2,500 ಪಾಕ ಪ್ರವೀಣರ ತಂಡ ಶುಚಿ–ರುಚಿಯಾದ ಆಹಾರ ತಯಾರಿಸುವಲ್ಲಿ ನಿರತವಾಗಿದೆ’ ಎಂದು ಮೈಸೂರಿನ ‘ನವನೀತ ಕ್ಯಾಟರರ್ಸ್’ ಮಾಲೀಕರಾದ ಶಿಲ್ಪಾ ಮತ್ತು ಶಿವಣ್ಣ ದಂಪತಿ ತಿಳಿಸಿದರು.



ಮೋದಿ ಅವರಿಗೆ ವಿಜಯೇಂದ್ರ ಹೂಗುಚ್ಛ ನೀಡಿದರು

ಉಪಚುನಾವಣೆ ಸೋಲು ವಿವರಣೆ ಕೇಳಿದ ಮೋದಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ವಿಧಾನಸಭೆಯ ಮೂರು ಕ್ಷೇತ್ರಗಳ ಉಪಚುನಾವಣೆಯ ಸೋಲಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಲ್ಲಿ ವಿವರಣೆ ಕೇಳಿದರು.

ರಾಜ್ಯ ಘಟಕದ ಅಧ್ಯಕ್ಷರಾಗಿ ಒಂದು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ವಿಜಯೇಂದ್ರ ಅವರು ಮೋದಿ ಅವರನ್ನು ಬುಧವಾರ ಭೇಟಿ ಮಾಡಿ ಚರ್ಚಿಸಿದರು. ಪಕ್ಷದ ಸಂಘಟನಾ ಚಟುವಟಿಕೆಗಳ ಕುರಿತು ವಿಜಯೇಂದ್ರ ಮಾಹಿತಿ ನೀಡಿದರು.

ಈ ವೇಳೆ ಮೋದಿ ಅವರು, ‘ಮೂರು ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವ ಗುರಿ ನೀಡಲಾಗಿತ್ತು. ಅಲ್ಲದೇ, ಚನ್ನಪಟ್ಟಣ ಹಾಗೂ ಶಿಗ್ಗಾವಿಯಲ್ಲಿ ಮಾಜಿ ಮುಖ್ಯಮಂತ್ರಿಗಳ ಮಕ್ಕಳನ್ನೇ ಕಣಕ್ಕಿಳಿಸಲಾಗಿತ್ತು. ಆದರೂ, ಸೋತಿದ್ದೇವೆ. ರಾಜ್ಯ ನಾಯಕರು ಸಂಘಟಿತರಾಗಿ ಪ್ರಚಾರ ನಡೆಸಿದ್ದರೆ ಹೀಗಾಗುತ್ತಿರಲಿಲ್ಲ’ ಎಂದು ಅಸಮಾಧಾನ ವ್ಯಕ್ತಪಡಿಸಿದರು ಎಂದು ಮೂಲಗಳು ತಿಳಿಸಿವೆ.

‘ಮೋದಿ ಅವರ ಭೇಟಿಯ ಅಪೂರ್ವ ಕ್ಷಣಗಳು ರಾಜ್ಯದಲ್ಲಿ ಪಕ್ಷದ ಬಲವರ್ಧನೆಗೆ ದೊರೆತ ಪ್ರೇರಣೆಯ ಕಿರಣಗಳು’ ಎಂದು ವಿಜಯೇಂದ್ರ ‘ಎಕ್ಸ್’ ಮಾಡಿದ್ದಾರೆ. ‘ಅವರ ಕಾರ್ಯಶೈಲಿ ನಮ್ಮಂಥ ಕಾರ್ಯಕರ್ತರಿಗೆ ನಿತ್ಯ ಚೈತನ್ಯದ ಚಿಲುಮೆಯಾಗಿದೆ. ಅವರ ಮಾರ್ಗದರ್ಶನದಲ್ಲಿ ರಾಜ್ಯದಲ್ಲಿ ಪಕ್ಷ ಕಟ್ಟುವ ಕಾರ್ಯಕ್ಕೆ ಅದಮ್ಯ ಉತ್ಸಾಹ ಬಂದಿದೆ. ಕೇಂದ್ರ ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸಬೇಕು ಹಾಗೂ ಪಕ್ಷದ ಕಾರ್ಯಕರ್ತರು ಯೋಜಿತವಾಗಿ ತೊಡಗಿಸಿಕೊಳ್ಳಲು ಕಾರ್ಯಕ್ರಮ ರೂಪಿಸಬೇಕೆಂದು ಪ್ರಧಾನಿ ಸೂಚಿಸಿದರು’ ಎಂದು ಅವರು ತಿಳಿಸಿದ್ದಾರೆ.

ಹಿಮಾಂಶಿ ಶೆಲತ್‌ಗೆ ‘ಕುವೆಂಪು ರಾಷ್ಟ್ರೀಯ ಪುರಸ್ಕಾರ’

ಬೆಂಗಳೂರು: ಕುಪ್ಪಳಿಯ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ ನೀಡುವ ‘ಕುವೆಂಪು ರಾಷ್ಟ್ರೀಯ ಪುರಸ್ಕಾರ’ಕ್ಕೆ ಗುಜರಾತಿ ಲೇಖಕಿ ಹಿಮಾಂಶಿ ಇಂದೂಲಾಲ್ ಶೆಲತ್ ಆಯ್ಕೆಯಾಗಿದ್ದಾರೆ.

ಈ ಪುರಸ್ಕಾರ ₹5 ಲಕ್ಷ ನಗದು ಹಾಗೂ ಬೆಳ್ಳಿ ಪದಕವನ್ನು ಒಳಗೊಂಡಿದೆ. ಪ್ರತಿಷ್ಠಾನದ ಅಧ್ಯಕ್ಷ ಬಿ.ಎಲ್. ಶಂಕರ್ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ. ಶರೀಫಾ ವಿಜಲಿವಾಲಾ, ಅಗ್ರಹಾರ ಕೃಷ್ಣಮೂರ್ತಿ ಹಾಗೂ ಪುರುಷೋತ್ತಮ ಬಿಳಿಮಲೆ ಸಮಿತಿಯಲ್ಲಿದ್ದರು.

ಗುಜರಾತ್‌ನ ಸೂರತ್‌ನ ಹಿಮಾಂಶಿ ಶೆಲತ್ ಅವರು ಹೊಸತನದ ಬರವಣಿಗೆ ಶೈಲಿಯಿಂದ ಗುಜರಾತಿ ಹಾಗೂ ಭಾರತೀಯ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಕಥೆ, ಕಾದಂಬರಿ, ಪ್ರಬಂಧ, ಸಾಹಿತ್ಯ ವಿಮರ್ಶೆ ಹಾಗೂ ಅನುವಾದ ಪ್ರಕಾರಗಳಲ್ಲಿ ಅವರ 20 ಪುಸ್ತಕಗಳು ಪ್ರಕಟವಾಗಿವೆ ಎಂದು ಪ್ರತಿಷ್ಠಾನದ ಸಮಕಾರ್ಯದರ್ಶಿ ಕಡಿದಾಳ್ ಪ್ರಕಾಶ್ ತಿಳಿಸಿದ್ದಾರೆ.



ಹಿಮಾಂಶಿ ಶೆಲತ್

ಪ್ರಶಸ್ತಿ ಪ್ರದಾನ ಸಮಾರಂಭವನ್ನು 2025ರ ಜನವರಿಯಲ್ಲಿ ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲಾಗುವುದು ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಶಾಲೆಯಲ್ಲಿ ಕಲಿಸಲು ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಅನುಮತಿ


ಶಾಲಾ ಮಕ್ಕಳಿಗೆ ಸ್ತೋತ್ರ ಪಾರಾಯಣ

• ವಿಜಯಕುಮಾರ್ ಎಸ್.ಕೆ.

ಚಿಕ್ಕಮಗಳೂರು: ಶ್ರೀ ಶಂಕರ ತತ್ವ ಪ್ರಸಾರ ಅಭಿಯಾನದ ಅಂಗವಾಗಿ ಜಿಲ್ಲೆಯ ಎಲ್ಲಾ ಶಾಲೆಗಳಲ್ಲಿ ಮೂರು ಸ್ತೋತ್ರ ಪಾರಾಯಣಕ್ಕೆ ಶಾಲಾ ಶಿಕ್ಷಣ ಇಲಾಖೆ ಅನುಮತಿ ನೀಡಿದೆ.

ಶಂಕರ ಭಗವತ್ಪಾದರು ರಚಿಸಿರುವ ಕಲ್ಯಾಣವೃಷ್ಟಿಸ್ತವ, ಶಿವಪಂಚಾಕ್ಷರ ನಕ್ಷತ್ರಮಾಲಾ ಹಾಗೂ ಲಕ್ಷ್ಮೀನರಸಿಂಹ-ಕರಾವಲಂಬ ಸ್ತೋತ್ರಗಳನ್ನು ವಾರದಲ್ಲಿ ಎರಡು ದಿನ ಮಕ್ಕಳಿಗೆ ಪಾರಾಯಣ ಮಾಡಿಸಲು ಅನುಮತಿ ನೀಡುವಂತೆ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅವರು ಶಿಕ್ಷಣ ಇಲಾಖೆಗೆ ಆಗಸ್ಟ್ 10ರಂದು ಪತ್ರ ಬರೆದಿದ್ದರು.

ಜಿಲ್ಲೆಯ ಎಲ್ಲಾ ಹಿರಿಯ ಪ್ರಾಥಮಿಕ ಶಾಲೆ (6 ಮತ್ತು 7ನೇ ತರಗತಿ) ಹಾಗೂ ಪ್ರೌಢಶಾಲೆಯ (8 ಮತ್ತು 9ನೇ ತರಗತಿ) ವಿದ್ಯಾರ್ಥಿಗಳಿಗೆ ವಾರಕ್ಕೆ 2 ಅವಧಿಗಳನ್ನು ನಿಗದಿಪಡಿಸಿ ಕಲಿಕೆಗೆ ಅವಕಾಶ ಕಲ್ಪಿಸಿಕೊಡುವಂತೆ ಕೋರಿದ್ದರು. ಇದನ್ನು ಆಧರಿಸಿ ಸೆಪ್ಟೆಂಬರ್ 6ರಂದು ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಸುತ್ತೋಲೆ ಹೊರಡಿಸಿದ್ದರು.



ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಹೊರಡಿಸಿರುವ ಸುತ್ತೋಲೆ

‘ಈ ಮೂರು ಸ್ತೋತ್ರಗಳನ್ನು ಶಾಲಾ ಪಠ್ಯ ಚಟುವಟಿಕೆಗಳಿಗೆ ತೊಂದರೆ ಆಗದಂತೆ ಷರತ್ತಿಗೆ ಒಳಪಟ್ಟು ಪ್ರವಚನ ಮಾಡಲು ಅನುಮತಿ ನೀಡಲಾಗಿದೆ’ ಎಂದು ತಿಳಿಸಿದ್ದರು. ಎಲ್ಲಾ ಬಿಇಒ ಕಚೇರಿ ಮತ್ತು ಮುಖ್ಯ ಶಿಕ್ಷಕರಿಗೆ ಕಳುಹಿಸಿ ‘ಅಗತ್ಯ ಕ್ರಮಕ್ಕಾಗಿ’ ಎಂದು ಸೂಚಿಸಿದ್ದರು.

‘ಶೃಂಗೇರಿಯ ಶಂಕರ ಪೀಠದ ಭಾರತೀತೀರ್ಥ ಸ್ವಾಮೀಜಿ ಅವರು ಸನ್ಯಾಸ ಸ್ವೀಕರಿಸಿದ ಸುವರ್ಣ ಮಹೋತ್ಸವದ ನಿಮಿತ್ತ ಕಲ್ಯಾಣವೃಷ್ಟಿ ಅಭಿಯಾನ ನಡೆಯುತ್ತಿದೆ. ಬಹುತೇಕ ಶಾಲೆಗಳಲ್ಲಿ ಮಕ್ಕಳಿಗೆ ಸ್ತೋತ್ರ ಪಾರಾಯಣ ಕಲಿಸಲಾಗುತ್ತಿದೆ. ನಮ್ಮ ಸ್ವಯಂ ಸೇವಕರು ಹೆಚ್ಚಿನದಾಗಿ ಇರುವ ಕಡೆಗಳಲ್ಲಿ ಮತ್ತು ನಾವು ಪ್ರಯತ್ನ ಮಾಡಿರುವ ಶಾಲೆಗಳಲ್ಲಿ ಸ್ತೋತ್ರ ಪಾರಾಯಣ ಅಭ್ಯಾಸ ಮಾಡಿಸಲಾಗುತ್ತಿದೆ’ ಎಂದು ಶಂಕರ ತತ್ವ ಪ್ರಸಾರ ಅಭಿಯಾನದ ಉಸ್ತುವಾರಿ ವಹಿಸಿರುವ ಉಮೇಶ್ ಹರಿಹರ ‘ಪ್ರಜಾವಾಣಿ’ಗೆ ವಿವರಿಸಿದರು.

‘ಶಾಲೆಗಳಲ್ಲಿ ಸಮಯ ನೀಡಿದಾಗ ನಮ್ಮ ಅಭಿಯಾನದ ಕಾರ್ಯಕರ್ತರು ಹೋಗಿ ಪಾರಾಯಣ ಅಭ್ಯಾಸ ಮಾಡಿಸುತ್ತಿದ್ದಾರೆ. ಹೆಚ್ಚಿನದಾಗಿ ಶೃಂಗೇರಿ, ಕೊಪ್ಪ, ನರಸಿಂಹರಾಜಪುರ ಮತ್ತು ಕಳಸ ತಾಲ್ಲೂಕಿನ ಶಾಲೆಗಳಲ್ಲಿ ನಡೆಯುತ್ತಿದೆ’ ಎಂದು ಹೇಳಿದರು.

‘ಸ್ತೋತ್ರ ತ್ರಿವೇಣಿಯ ಮಹಾ ಸಮರ್ಪಣೆ 2025ರ ಜ.11ರಂದು ಶೃಂಗೇರಿಯಲ್ಲಿ ನಡೆಯಲಿದೆ. ವಿದ್ಯಾರ್ಥಿಗಳು, ಆಸ್ತಿಕರು ಸೇರಿ 50 ಸಾವಿರ ಜನ ಭಾಗವಹಿಸುವ ನಿರೀಕ್ಷೆ ಇದೆ’ ಎಂದು ತಿಳಿಸಿದರು.

‘ಸುತ್ತೋಲೆ ಹಿಂಪಡೆಯಲಾಗುವುದು’

‘ಸುತ್ತೋಲೆಯನ್ನು ಸೆಪ್ಟೆಂಬರ್‌ನಲ್ಲಿ ಹೊರಡಿಸಲಾಗಿತ್ತು. ಆದರೆ, ಕೆಲವರು ವಿರೋಧ ವ್ಯಕ್ತಪಡಿಸಿದ ಬಳಿಕ ಪ್ರವಚನ ಮಾಡಿಸಿಲ್ಲ’ ಎಂದು ಡಿಡಿಪಿಐ ಜಿ.ಕೆ. ಪುಟ್ಟರಾಜು ತಿಳಿಸಿದರು.

‘ವಿರೋಧ ವ್ಯಕ್ತವಾಗುತ್ತಿರುವ ಬಗ್ಗೆ ಸ್ವಾಮೀಜಿ ಅವರಿಗೂ ತಿಳಿಸಲಾಗಿದೆ. ಅನುಮತಿ ನೀಡಿದ್ದ ಸುತ್ತೋಲೆಯನ್ನು ಇನ್ನೂ ವಾಪಸ್ ಪಡೆದಿಲ್ಲ. ಕೂಡಲೇ ಹಿಂಪಡೆಯಲಾಗುವುದು’ ಎಂದು ‘ಪ್ರಜಾವಾಣಿ’ಗೆ ಸ್ಪಷ್ಟಪಡಿಸಿದರು.

‘ಯಡಿಯೂರಪ್ಪ ಅವರೇ ಒಪ್ಪಿದ್ದರಿಂದ ಅರ್ಜಿ ವಜಾ ಮಾಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಾಲಕಿಯ ಶರ್ಟ್ ಒಳಗೆ ಯಾಕೆ ಕೈ ಹಾಕಿದ್ದಿರಿ ಎಂದು ಕೇಳಿದ್ದಕ್ಕೆ, ಅವಳ ಮೇಲೆ ರೇಪ್ ನಡೆದಿದೆಯೊ ಇಲ್ಲವೊ ಎಂಬುದನ್ನು ಚೆಕ್ ಮಾಡಲು ಹಾಕಿದ್ದೆ ಎಂದು ಯಡಿಯೂರಪ್ಪನವರೇ ಹೇಳಿದ್ದಾರೆ. ಅವರ ಈ ನಡೆಯಿಂದಲೇ ಲೈಂಗಿಕ ದೌರ್ಜನ್ಯ ಎಸಗಿರುವುದು ಸ್ಪಷ್ಟ...’

‘ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ನನ್ನ ವಿರುದ್ಧ ದಾಖಲಾಗಿರುವ ಪೋಕ್ಸೊ ಪ್ರಕರಣ ರದ್ದುಪಡಿಸಬೇಕು’ ಎಂದು ಕೋರಿ ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಸಲ್ಲಿಸಿರುವ ರಿಟ್ ಅರ್ಜಿಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಬುಧವಾರ ವಿಚಾರಣೆ ನಡೆಸಿದರು.

ಈ ವೇಳೆ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಆದ ಪದಾಂಕಿತ ಹಿರಿಯ ವಕೀಲ ರವಿವರ್ಮ ಕುಮಾರ್ ಪ್ರಕರಣಕ್ಕೆ ಸಂಬಂಧಿಸಿದಂತೆ ತೆರೆದ ನ್ಯಾಯಾಲಯದಲ್ಲಿ ಓದಿದ ದೋಷಾರೋಪ ಪಟ್ಟಿಯಲ್ಲಿನ ಪ್ರಮುಖ ಅಂಶವಿದು.

‘ರೇಪ್ ನಡೆದಿದೆಯೊ ಇಲ್ಲವೊ ಎಂದು ಪರಿಶೀಲಿಸಲು ಬಾಲಕಿಯ ಶರ್ಟ್ ಒಳಕೆ ಕೈ ಹಾಕಿದ್ದೆ ಎಂದು ಯಡಿಯೂರಪ್ಪ ಹೇಳಿದ್ದಾರೆ. ಅವರ ಈ ಕೃತ್ಯ ಬಾಲಕಿಯ ಮೇಲಿನ ಲೈಂಗಿಕ ದೌರ್ಜನ್ಯವಲ್ಲವೇ’ ಎಂದು ಪ್ರಶ್ನಿಸಿದ ರವಿವರ್ಮಕುಮಾರ್ ‘ಲೈಂಗಿಕ ದೌರ್ಜನ್ಯ ನಡೆದಿರುವುದು ಸುಸ್ಪಷ್ಟ, ಹಾಗಾಗಿ, ಪ್ರಕರಣ ರದ್ದುಪಡಿಸುವಂತೆ ಕೋರಿರುವ ಯಡಿಯೂರಪ್ಪನವರ ಅರ್ಜಿ ವಜಾಗೊಳಿಸಬೇಕು’ ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಈ ವಾದವನ್ನು ಅಲ್ಲಗಳೆದ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಸಿ.ವಿ. ನಾಗೇಶ್, ‘ಸಂತ್ರಸ್ತ ಬಾಲಕಿಯ ತಾಯಿ ಈ ಪ್ರಕರಣದಲ್ಲಿ ದೂರುದಾರರು (ಅವರು ಈಗ ಬದುಕಿಲ್ಲ). ಒಂದೂವರೆ ತಿಂಗಳ ನಂತರ ಪ್ರಕರಣ ದಾಖಲಿಸಲಾಗಿದೆ. ಯಡಿಯೂರಪ್ಪ ಅನುಚಿತವಾಗಿ ಸ್ಪರ್ಶಿಸಿದ್ದಾರೆ ಎಂಬ ಬಾಲಕಿಯ ಹೇಳಿಕೆ ಇದೆ. ವಾಸ್ತವವನ್ನು ಗಮನಿಸಿದಾಗ, ಹಲವು ಜನರ ಸಮ್ಮುಖದಲ್ಲಿ ಇಂತಹ ಘಟನೆ ನಡೆಯಲು ಸಾಧ್ಯವಿತ್ತೇ’ ಎಂದು ಪ್ರಶ್ನಿಸಿದರಲ್ಲದೆ, ‘ಬಾಲಕಿಯ ಹೇಳಿಕೆ ಆಧರಿಸಿ ದೋಷಾರೋಪ ಪಟ್ಟಿ ದಾಖಲಿಸಲಾಗಿದೆ’ ಎಂದರು.

ಇದಕ್ಕೆ ನ್ಯಾಯಮೂರ್ತಿ ನಾಗಪ್ರಸನ್ನ ಅವರು, ‘ಕೋರ್ಟ್ ಈ ಹಂತದಲ್ಲಿ ಬಾಲಕಿಯ 164ರ ಹೇಳಿಕೆಯನ್ನು ಪರಿಗಣಿಸಬೇಕಲ್ಲವೇ’ ಎಂದು ಪ್ರಶ್ನಿಸಿದರು. ಇದಕ್ಕೆ ನಾಗೇಶ್, ‘ಯಡಿಯೂರಪ್ಪನವರಿಗೆ 82 ವರ್ಷವಾಗಿದ್ದು, ಕೈ ನಡುಗುತ್ತವೆ. ಲೈಟ್ ಸ್ವಿಚ್ ಹಾಕಲೂ ನಮಗೆ ಹೇಳುತ್ತಾರೆ ಎಂದು ಅವರ ಮನೆಯ ಕೆಲಸದವರ ಹೇಳಿಕೆಯಿದೆ. ರೂಮಿಗೆ ಬಾಲಕಿ ಹೋಗಿರಲಿಲ್ಲ ಎಂಬ ಸಾಕ್ಷಿಯ ಹೇಳಿಕೆ ಇದೆ. ಮಹಿಳೆ ದೂರು ನೀಡುವ ಮುನ್ನ ರಾಜಕಾರಣಿಯೊಬ್ಬರನ್ನು ಭೇಟಿ ಮಾಡಿ ಠಾಣೆಗೆ ಬಂದಿದ್ದರು. ಹೀಗಾಗಿ, ಇದರ ಹಿಂದೆ ಕಾಣದ ಹಿತಾಸಕ್ತಿ ಅಡಗಿದೆ’ ಎಂದು ಪುನರುಚ್ಚರಿಸಿದರು. ನ್ಯಾಯಮೂರ್ತಿಯವರು ವಿಚಾರಣೆಯನ್ನು ಗುರುವಾರಕ್ಕೆ ಮುಂದೂಡಿದರು.

ಎನ್‌ಎಚ್‌ಆರ್‌ಸಿ ಅಧ್ಯಕ್ಷ ಸ್ಥಾನ ಚಂದ್ರಚೂಡ್ ಹೆಸರು ಪ್ರಸ್ತಾಪ

ಪ್ರಜಾವಾಣಿ ವಾರ್ತೆ


ಚಂದ್ರಚೂಡ್

ನವದೆಹಲಿ: ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ (ಎನ್‌ಎಚ್‌ಆರ್‌ಸಿ) ಹೊಸ ಅಧ್ಯಕ್ಷರ ಆಯ್ಕೆ ಸಂಬಂಧ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಆಯ್ಕೆ ಸಮಿತಿ ಬುಧವಾರ ಸಭೆ ನಡೆಸಿತು. ಆಯೋಗದ ಅಧ್ಯಕ್ಷರು ಮತ್ತು ಒಬ್ಬ ಸದಸ್ಯರ ಆಯ್ಕೆ ಕುರಿತು ಸರ್ಕಾರ ಸೂಚಿಸಿದ ಹೆಸರಿಗೆ ವಿರೋಧ ಪಕ್ಷಗಳ ಸದಸ್ಯರಿಂದ ಅಸಮ್ಮತಿ ವ್ಯಕ್ತವಾಯಿತು.

ಭಾರತದ ಮುಖ್ಯ ನ್ಯಾಯಮೂರ್ತಿ ಆಗಿ ಇತ್ತೀಚೆಗಷ್ಟೇ ನಿವೃತ್ತರಾದ ಡಿ.ವೈ. ಚಂದ್ರಚೂಡ್ ಅವರ ಹೆಸರು ಸಭೆಯಲ್ಲಿ ಪ್ರಸ್ತಾಪವಾಗಿತ್ತು ಎಂದು ಮೂಲಗಳು ಹೇಳಿವೆ.

ಸುಪ್ರೀಂ ಕೋರ್ಟ್‌ನ ಮಾಜಿ ನ್ಯಾಯಮೂರ್ತಿ ಅರುಣ್ ಕುಮಾರ್ ಮಿಶ್ರಾ ಅವರ ಅಧಿಕಾರಾವಧಿ ಜೂನ್ 1ಕ್ಕೆ ಪೂರ್ಣಗೊಂಡಾಗಿನಿಂದ ಎನ್‌ಎಚ್‌ಆರ್‌ಸಿ ಅಧ್ಯಕ್ಷರ ಹುದ್ದೆ ಖಾಲಿಯಿದೆ. ಆಗಿನಿಂದ ಆಯೋಗದ ಸದಸ್ಯೆ ವಿಜಯ ಭಾರತಿ ಸಯಾನಿ ಪ್ರಭಾರ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಪ್ರಧಾನಿ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಗೃಹ ಸಚಿವ ಅಮಿತ್ ಶಾ, ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಸೇರಿ ಇತರರು ಭಾಗವಹಿಸಿದ್ದರು. ಭಾರತದ ಮಾಜಿ ಮುಖ್ಯ ನ್ಯಾಯಮೂರ್ತಿ ಅಥವಾ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಯನ್ನು ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಬಹುದು. ಆಯ್ಕೆ ಸಮಿತಿ ಶಿಫಾರಸು ಆಧರಿಸಿ ರಾಷ್ಟ್ರಪತಿ ಆಯೋಗದ ಅಧ್ಯಕ್ಷರನ್ನು ನೇಮಿಸುವರು.

ಸಭೆಯಲ್ಲಿ ತೆಗೆದುಕೊಂಡ ನಿರ್ಧಾರದ ಕುರಿತು ಪ್ರತಿಕ್ರಿಯಿಸಲು ವಿರೋಧ ಪಕ್ಷದ ನಾಯಕರು ನಿರಾಕರಿಸಿದರು. ಆದರೆ ಅಧ್ಯಕ್ಷರ ಸ್ಥಾನಕ್ಕೆ ಸರ್ಕಾರ ಪ್ರಸ್ತಾಪಿಸಿದ ಹೆಸರಿಗೆ ಅಸಮ್ಮತಿ ಪತ್ರ ಸಲ್ಲಿಸಲು ಅವರು ನಿರ್ಧರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈ ಹಿಂದೆ ಮಾಜಿ ಸಿಜೆಐಗಳಾದ ಎಚ್‌.ಎಲ್‌.ದತ್ತು ಮತ್ತು ಕೆ.ಜಿ. ಬಾಲಕೃಷ್ಣನ್ ಅವರು ಎನ್‌ಎಚ್‌ಆರ್‌ಸಿ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದ್ದಾರೆ.

‘ಮಹಾ ಕುಂಭಕ್ಕೆ ಉಚಿತ ಪ್ರಯಾಣವಿಲ್ಲ’

ನವದೆಹಲಿ: ಪ್ರಯಾಗ್‌ರಾಜ್‌ನಲ್ಲಿ ನಡೆಯಲಿರುವ ‘ಮಹಾ ಕುಂಭಮೇಳ’ಕ್ಕೆ ರೈಲಿನಲ್ಲಿ ಸಾಗುವವರಿಗೆ ಯಾವುದೇ ರೀತಿಯ ಉಚಿತ ಪ್ರಯಾಣ ಸೌಲಭ್ಯ ಇರುವುದಿಲ್ಲ ಎಂದು ರೈಲ್ವೆ ಇಲಾಖೆ ಬುಧವಾರ ತಿಳಿಸಿದೆ.

ಉಚಿತ ಪ್ರಯಾಣಕ್ಕೆ ಸಂಬಂಧಿಸಿದಂತೆ ಕೆಲ ಸುಳ್ಳು ಸುದ್ದಿಗಳು ಹರಿದಾಡುತ್ತಿದ್ದು, ಅವೆಲ್ಲ ಆಧಾರರಹಿತವಾಗಿದ್ದು, ಜನರ ದಾರಿತಪ್ಪಿಸುವಂತಿವೆ. ಈ ರೀತಿಯ ಯಾವುದೇ ಉಚಿತ ಪ್ರಯಾಣವನ್ನು ರೈಲ್ವೆ ಒದಗಿಸುತ್ತಿಲ್ಲ ಎಂದು ಇಲಾಖೆಯ ಪ್ರಕಟಣೆ ಹೇಳಿದೆ.

‘ಟಿಕೆಟ್ ಇಲ್ಲದೆ ಪ್ರಯಾಣಿಸುವುದು ನಿಷೇಧವಾಗಿದ್ದು, ರೈಲ್ವೆ ಕಾಯ್ದೆ ಮತ್ತು ನಿಯಮಗಳ ಪ್ರಕಾರ ಶಿಕ್ಷಾರ್ಹ ಅಪರಾಧವಾಗಿದೆ’ ಎಂದು ಅದು ತಿಳಿಸಿದೆ.

30ಕ್ಕೆ ಪಂಜಾಬ್ ಬಂದ್‌ಗೆ ರೈತ ಸಂಘಟನೆಗಳ ಕರೆ ● 50ಕ್ಕೂ ಹೆಚ್ಚು ಸ್ಥಳಗಳಲ್ಲಿ ಪ್ರತಿಭಟನೆ

ರೈತರ ಧರಣಿ: ರೈಲು ಸಂಚಾರ ವ್ಯತ್ಯಯ

ಪ್ರಜಾವಾಣಿ ವಾರ್ತೆ/ ಪಿಟಿಐ

ಚಂಡೀಗಢ/ಲುಧಿಯಾನ: ಕನಿಷ್ಠ ಬೆಂಬಲ ಬೆಲೆಗೆ ಕಾನೂನು ಖಾತರಿ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಪಂಜಾಬ್‌ನಲ್ಲಿ ರೈತರು ಬುಧವಾರ ರೈಲು ಹಳಿಗಳ ಮೇಲೆ ಕುಳಿತು ಧರಣಿ ನಡೆಸಿದರು. ಇದರಿಂದ, ರೈಲು ಸಂಚಾರದಲ್ಲಿ ವ್ಯತ್ಯಯವಾಯಿತು.

‘ರೈಲ್ ರೋಕೊ’ ಪ್ರತಿಭಟನೆಗೆ ಸಂಯುಕ್ತ ಕಿಸಾನ್ ಮೋರ್ಚಾ ಮತ್ತು ಕಿಸಾನ್ ಮಜ್ದೂರ್ ಮೋರ್ಚಾ ಕರೆ ನೀಡಿದ್ದವು. ‘ಪಂಜಾಬ್‌ನ 50ಕ್ಕೂ ಹೆಚ್ಚು ಸ್ಥಳಗಳಲ್ಲಿ ಮಧ್ಯಾಹ್ನ 12 ಗಂಟೆಯಿಂದ 3 ಗಂಟೆಯವರೆಗೆ ರೈತರು ರೈಲು ಹಳಿಗಳ ಮೇಲೆ ಧರಣಿ ನಡೆಸಿದರು’ ಎಂದು ಕಿಸಾನ್ ಮಜ್ದೂರ್ ಮೋರ್ಚಾದ ನಾಯಕ ಸರವಣ ಸಿಂಗ್ ಪಂಡೇರ್ ತಿಳಿಸಿದರು.

‘12 ರೈಲುಗಳ ಸಂಚಾರ ರದ್ದುಗೊಂಡಿದೆ ಮತ್ತು 34 ರೈಲುಗಳು ವಿಳಂಬವಾಗಿ ಸಂಚರಿಸಿವೆ’ ಎಂದು ಫಿರೋಜಪುರ ವಿಭಾಗದ ಹಿರಿಯ ರೈಲ್ವೆ ಅಧಿಕಾರಿ ಮಾಹಿತಿ ನೀಡಿದರು.

ರೈತರು ರೈಲು ಹಳಿಗಳ ಮೇಲೆ ಕುಳಿತಿದ್ದರಿಂದ ಕೆಲ ರೈಲುಗಳು ಮಾರ್ಗ ಮಧ್ಯೆಯೇ ಸಂಚಾರ ನಿಲ್ಲಿಸಿದವು. ಮುಂಜಾಗ್ರತಾ ಕ್ರಮವಾಗಿ ಕೆಲ ರೈಲುಗಳನ್ನು ಸಮೀಪದ ನಿಲ್ದಾಣಗಳಲ್ಲಿ ನಿಲ್ಲಿಸಲಾಗಿತ್ತು.

ಜಮ್ಮುವಿನಿಂದ ಸಿಯಾಲ್ದಾಗೆ ಚಲಿಸುತ್ತಿದ್ದ ಹಮ್‌ಸಫರ್ ಎಕ್ಸ್‌ಪ್ರೆಸ್, ಅಮೃತಸರದಿಂದ ಮುಂಬೈಗೆ ತೆರಳುತ್ತಿದ್ದ ದಾದರ್ ಎಕ್ಸ್‌ಪ್ರೆಸ್, ನವದೆಹಲಿಯಿಂದ ಅಮೃತಸರಕ್ಕೆ ಸಾಗುತ್ತಿದ್ದ ಶಾನ್-ಎ-ಪಂಜಾಬ್ ಎಕ್ಸ್‌ಪ್ರೆಸ್ ರೈಲುಗಳನ್ನು ಲುಧಿಯಾನ ರೈಲು ನಿಲ್ದಾಣ ವಿವಿಧ ಪ್ಲಾಟ್‌ಫಾರ್ಮ್‌ಗಳಲ್ಲಿ ನಿಲ್ಲಿಸಲಾಗಿತ್ತು. ನವದೆಹಲಿಯಿಂದ ಅಮೃತಸರಕ್ಕೆ ಸಂಚರಿಸುತ್ತಿದ್ದ ಶತಾಬ್ದಿ ಎಕ್ಸ್‌ಪ್ರೆಸ್ ರೈಲನ್ನು ಖನ್ನಾ ನಿಲ್ದಾಣದಲ್ಲಿ ನಿಲ್ಲಿಸಲಾಗಿತ್ತು.

ಇದೇ 30ಕ್ಕೆ ಪಂಜಾಬ್ ಬಂದ್: ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಇದೇ 30ರಂದು ಸಂಯುಕ್ತ ಕಿಸಾನ್ ಮೋರ್ಚಾ ಮತ್ತು ಕಿಸಾನ್ ಮಜ್ದೂರ್ ಮೋರ್ಚಾ ಸಂಘಟನೆಗಳು ‘ಪಂಜಾಬ್ ಬಂದ್’ಗೆ ಕರೆ ನೀಡಿವೆ. ಬಂದ್ ಯಶಸ್ವಿಯಾಗಲು ಜನರು, ವ್ಯಾಪಾರಿಗಳು ಮತ್ತು ಸಹಕರಿಸಬೇಕು ಎಂದು ಪಂಡೇರ್ ಮನವಿ ಮಾಡಿದರು.


ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಅಮೃತಸರದಲ್ಲಿ ರೈತರು ರೈಲು ಹಳಿ ಮೇಲೆ ಧರಣಿ ನಡೆಸಿದರು

— ಪಿಟಿಐ ಚಿತ್ರ

ಆತ್ಮಹತ್ಯೆಗೆ ಯತ್ನಿಸಿದ್ದ ರೈತ ಸಾವು

ಶಂಭು ಗಡಿಯ ಬಳಿ ಡಿ.14ರಂದು ಪ್ರತಿಭಟನೆ ವೇಳೆ ವಿಷಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದ ರೈತರೊಬ್ಬರು ಬುಧವಾರ ಮೃತಪಟ್ಟಿದ್ದಾರೆ.

ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಲುಧಿಯಾನ ಜಿಲ್ಲೆಯ ರೈತ ರಣಜೋಧ್ ಸಿಂಗ್ ಅವರು ಮೃತಪಟ್ಟಿದ್ದಾರೆ ಎಂದು ರೈತ ನಾಯಕರು ತಿಳಿಸಿದ್ದಾರೆ.

ರೈತರಿಗೆ ನಮ್ಮ ಬಾಗಿಲು ಸದಾ ತೆರೆದಿರುತ್ತದೆ: ಸುಪ್ರೀಂ ಕೋರ್ಟ್



ನವದೆಹಲಿ: ಶಂಭು ಗಡಿಯಲ್ಲಿ ಫೆ.13ರಿಂದ ಪ್ರತಿಭಟನೆಯಲ್ಲಿ ತೊಡಗಿರುವ ರೈತರು ತಮ್ಮ ಸಮಸ್ಯೆಗಳ ಬಗ್ಗೆ ಚರ್ಚಿಸಲು ಉನ್ನತ ಮಟ್ಟದ ಸಮಿತಿಯ ಜೊತೆ ಮಾತುಕತೆಗೆ ಒಲವು ತೋರದಿರುವ ಕಾರಣಕ್ಕೆ, ‘ರೈತರ ಪಾಲಿಗೆ ನಮ್ಮ ಬಾಗಿಲು ಸದಾ ತೆರೆದಿರುತ್ತದೆ’ ಎಂದು ಸುಪ್ರೀಂ ಕೋರ್ಟ್ ಬುಧವಾರ ಹೇಳಿದೆ.

ಆಮರಣಾಂತ ಉಪವಾಸ ನಡೆಸುತ್ತಿರುವ ರೈತ ಮುಖಂಡ ಜಗಜೀತ್ ಸಿಂಗ್ ಡಲ್ಲೇವಾಲ್ ಅವರಿಗೆ ಏನಾದರೂ ತೊಂದರೆ ಆದರೆ ಪಂಜಾಬ್ ಸರ್ಕಾರವನ್ನು ದೂಷಿಸಬೇಕಾಗುತ್ತದೆ ಎಂದು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಉಜ್ವಲ್ ಭುಯಾನ್ ಅವರು ಇರುವ ವಿಭಾಗೀಯ ಪೀಠವು ಎಚ್ಚರಿಸಿದೆ. ವೈದ್ಯರ ಸಲಹೆ ಪ್ರಕಾರ ಅವರನ್ನು ತಕ್ಷಣವೇ ಆಸ್ಪತ್ರೆಗೆ ದಾಖಲಿಸಬೇಕಾಗಿದೆ ಎಂದು ಪೀಠ ಹೇಳಿದೆ.

ಕೋರ್ಟ್ ನೇಮಕ ಮಾಡಿರುವ ಸಮಿತಿಯ ಜೊತೆ ಸಮಾಲೋಚನೆ ನಡೆಸಲು ರೈತರು ಒಲವು ತೋರುತ್ತಿಲ್ಲ ಎಂದು ಪಂಜಾಬ್‌ನ ಎಜಿ ಗುರ್ಮಿಂದರ್ ಸಿಂಗ್ ಪೀಠಕ್ಕೆ ಮಾಹಿತಿ ನೀಡಿದರು. ಇದಕ್ಕೆ ಪೀಠವು, ‘ಕೋರ್ಟ್‌ನ ಬಾಗಿಲು ಯಾವಾಗಲೂ ತೆರೆದಿರುತ್ತದೆ ಎಂಬುದನ್ನು ಸ್ಪಷ್ಟಪಡಿಸುತ್ತಿದ್ದೇವೆ. ಯಾವುದೇ ಸಲಹೆ ಅಥವಾ ಬೇಡಿಕೆಯ ಸನ್ನದನ್ನು ರೈತರು ನೇರವಾಗಿ ಅಥವಾ ತಮ್ಮ ಅಧಿಕೃತ ಪ್ರತಿನಿಧಿ ಮೂಲಕ ಸಲ್ಲಿಸಬಹುದು. ಅದನ್ನು ಸೂಕ್ತವಾಗಿ ಪರಿಗಣಿಸಲಾಗುವುದು ಹಾಗೂ ಸಂಬಂಧಪಟ್ಟ ಎಲ್ಲರ ಜೊತೆ ಚರ್ಚಿಸಲಾಗುವುದು’ ಎಂದಿತು.

ಡಲ್ಲೇವಾಲ್ ಅವರು 20 ದಿನಗಳಿಂದ ಉಪವಾಸ ನಡೆಸುತ್ತಿದ್ದಾರೆ. ಅವರು ವೈದ್ಯಕೀಯ ಪರೀಕ್ಷೆಗೆ ಒಪ್ಪುತ್ತಿಲ್ಲ. ಅವರ ಅಂಗಾಂಗಗಳು ಸರಿಯಾಗಿ ಕೆಲಸ ಮಾಡುತ್ತಿವೆಯಾದರೂ, ಅವರನ್ನು ಆಸ್ಪತ್ರೆಗೆ ದಾಖಲಿಸಬೇಕು ಎಂದು ವೈದ್ಯರು ಹೇಳಿದ್ದಾರೆ ಎಂದು ಸಿಂಗ್ ವಿವರಿಸಿದರು. ವಿಚಾರಣೆಯು ಗುರುವಾರ ಮುಂದುವರಿಯಲಿದೆ.

‘ಅತ್ಯಲ್ಪ ಪಿಂಚಣಿ ಶೋಚನೀಯ’

ನವದೆಹಲಿ(ಪಿಟಿಐ): ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳಿಗೆ ₹10 ಸಾವಿರದಿಂದ ₹15 ಸಾವಿರದಷ್ಟು ಅತ್ಯಲ್ಪ ನಿವೃತ್ತಿ ವೇತನ ನೀಡಲಾಗುತ್ತಿದೆ. ಇದು ಶೋಚನೀಯ ಎಂದು ಸುಪ್ರೀಂ ಕೋರ್ಟ್ ಬುಧವಾರ ಹೇಳಿದೆ.

‘ನಿವೃತ್ತಿ ವೇತನ ನೀಡುವುದಕ್ಕೆ ಸಂಬಂಧಿಸಿ ಮಾನವೀಯತೆ ದೃಷ್ಟಿಯಿಂದ ಕ್ರಮ ಕೈಗೊಳ್ಳಬೇಕೇ ಹೊರತು ಕಾನೂನಾತ್ಮಕ ವಿಧಾನಕ್ಕೆ ಜೋತು ಬೀಳಬಾರದು’ ಎಂದು ಸಂಬಂಧಪಟ್ಟ ಅಧಿಕಾರಿಗಳನ್ನು ಉದ್ದೇಶಿಸಿ ಹೇಳಿದೆ.

ಈ ಕುರಿತು ಸಲ್ಲಿಸಲಾಗಿದ್ದ ಅರ್ಜಿಗಳ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ ಹಾಗೂ ಕೆ.ವಿ. ವಿಶ್ವನಾಥನ್ ಅವರು ಇದ್ದ ನ್ಯಾಯಪೀಠ ನಡೆಸಿತು.

‘ಜಿಲ್ಲಾ ನ್ಯಾಯಾಲಯಗಳಿಂದ ಪದೋನ್ನತಿ ಹೊಂದಿ ಹೈಕೋರ್ಟ್ ನ್ಯಾಯಮೂರ್ತಿಗಳಾದವರನ್ನು ಹೊಸ ಪಿಂಚಣಿ ಯೋಜನೆ ವ್ಯಾಪ್ತಿಗೆ ಸೇರಿಸಲಾಗಿದೆ. ಇನ್ನೊಂದೆಡೆ, ಹೈಕೋರ್ಟ್‌ಗೆ ನೇಮಕಗೊಂಡಿರುವ ಹಿರಿಯ ವಕೀಲರಿಗೆ ಹಳೆಯ ಪಿಂಚಣಿ ಯೋಜನೆಯ ಪ್ರಯೋಜನ ಸಿಗುತ್ತಿದೆ. ಇದು ಪಿಂಚಣಿಯಲ್ಲಿನ ವ್ಯತ್ಯಾಸಕ್ಕೆ ಕಾರಣ.

ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರ ಮನವಿಯಂತೆ ವಿಚಾರಣೆಯನ್ನು ಪೀಠವು ಜನವರಿ 8ಕ್ಕೆ ಮುಂದೂಡಿತು.

ಈ ವಿಷಯ ಕುರಿತು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಿ. ಇದರಿಂದ ನಾವು ಈ ವಿಚಾರದಲ್ಲಿ ಮಧ್ಯಪ್ರವೇಶಿಸುವುದು ತಪ್ಪಲಿದೆ

ಸುಪ್ರೀಂ ಕೋರ್ಟ್ ನ್ಯಾಯಪೀಠ
(ಅಟಾರ್ನಿ ಜನರಲ್ ಅವರಿಗೆ ಹೇಳಿದ್ದು)

‘ಅಂಬೇಡ್ಕರ್ ಬಗೆಗಿನ ಧಾರ್ಷ್ಟ್ಯಕ್ಕೆ ಶಹಭಾಷ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಂಬೇಡ್ಕರ್ ಅವರು ಕೊಟ್ಟ ಸಂವಿಧಾನದಡಿಯಲ್ಲಿಯೇ ಕಾರ್ಯನಿರ್ವಹಿಸುತ್ತಿರುವ ಸಂಸತ್‌ನಲ್ಲಿ ನಿಂತು ಅವರ ಸ್ಮರಣೆಯನ್ನು ವ್ಯಸನ ಎಂದು ತುಚ್ಛೀಕರಿಸುವ ನಿಮ್ಮ ಧಾರ್ಷ್ಟ್ಯಕ್ಕೆ ಶಹಬಾಷ್ ಅನ್ನಲೇಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಮಿತ್ ಶಾ ಅವರನ್ನು ಉದ್ದೇಶಿಸಿ ಹೇಳಿದ್ದಾರೆ.

ಅಮಿತ್ ಶಾ ಅವರಿಗೆ ಬಹಿರಂಗ ಪತ್ರ ಬರೆದಿರುವ ಅವರು, ‘ಅಂಬೇಡ್ಕರ್ ಅವರ ಬಗ್ಗೆ ಬಿಜೆಪಿಯ ಅಂತರಂಗದ ಅಭಿಪ್ರಾಯವನ್ನು ಬಹಿರಂಗವಾಗಿ, ಧೈರ್ಯದಿಂದ ದೇಶದ ಮುಂದೆ ತೆರೆದಿಟ್ಟದ್ದಕ್ಕಾಗಿ ಮತ್ತು ನಿಮ್ಮ ಜೀವಮಾನದಲ್ಲಿ ಒಂದು ಸತ್ಯವನ್ನಾದರೂ ಹೇಳಿದ್ದಕ್ಕೆ ನಿಮ್ಮನ್ನು ಅಭಿನಂದಿಸುತ್ತೇನೆ. ನಿಮ್ಮ ಮಾತಿನಿಂದ ಇಡೀ ದೇಶಕ್ಕೆ ನಿಮ್ಮ ಅಂತರಂಗದ ಅರಿವಾಗಿದೆ’ ಎಂದಿದ್ದಾರೆ.

‘ನಿಮ್ಮ ಪಕ್ಷ ಮತ್ತು ಪರಿವಾರಕ್ಕೆ ಮೋದಿ... ಮೋದಿ... ಎಂದು ಹೇಳುವುದು ಒಂದು ವ್ಯಸನ. ಮೋದಿಯವರ ಬದಲಿಗೆ ಅಷ್ಟು ಬಾರಿ ದೇವರ ನಾಮ ಸ್ಮರಣೆ ಮಾಡಿದ್ದರೆ ಏಳು ಜನ್ಮದಲ್ಲಿ ಮಾತ್ರ ಅಲ್ಲ, ನೂರು ಜನ್ಮದಲ್ಲಿಯೂ ನಿಮಗೆ ಸ್ವರ್ಗವೇ ಸಿಗುತ್ತಿತ್ತು’ ಎಂದಿದ್ದಾರೆ.

‘ಅಂಬೇಡ್ಕರ್ ಹುಟ್ಟದೆ ಇರುತ್ತಿದ್ದರೆ ನಾನು ಊರಲ್ಲಿ ದನ-ಕುರಿ ಮೇಯಿಸಿಕೊಂಡು ಇರಬೇಕಾಗುತ್ತಿತ್ತು. ಮಲ್ಲಿಕಾರ್ಜುನ ಖರ್ಗೆಯವರು ಎಐಸಿಸಿ ಅಧ್ಯಕ್ಷ ಸ್ಥಾನಕ್ಕೆ ಬರುತ್ತಿರಲಿಲ್ಲ; ಕಲಬುರಗಿಯ ಯಾವುದಾದರೂ ಕಾರ್ಖಾನೆಯಲ್ಲಿ ಕಾರ್ಮಿಕರಾಗಿರುತ್ತಿದ್ದರು. ನೀವು ಹೇಳುವ ವ್ಯಸನ, ನಮ್ಮ ಪಾಲಿನ ಅಂಬೇಡ್ಕರ್ ಸ್ಮರಣೆಯೇ ನಮ್ಮನ್ನೆಲ್ಲ ಇಲ್ಲಿಗೆ ತಂದು ನಿಲ್ಲಿಸಿ, ನಮಗೆ ಸ್ಥಾನಮಾನ ಮತ್ತು ಜನರ ಸೇವೆ ಮಾಡುವ ಅವಕಾಶ ಕೊಟ್ಟಿದೆ’ ಎಂದಿದ್ದಾರೆ.

ನನ್ನ ಮಾತುಗಳನ್ನು ತಿರುಚಲಾಗಿದೆ’ ಎಂದೆಲ್ಲ ಸ್ಪಷ್ಟೀಕರಣ ಕೊಟ್ಟು ಆತ್ಮವಂಚನೆ ಮಾಡಿಕೊಳ್ಳಬೇಡಿ. ಅದನ್ನು ಸಮರ್ಥಿಸಿಕೊಂಡು ದೇಶವನ್ನು ಎದುರಿಸಿ

ಸಿದ್ದರಾಮಯ್ಯ, ಮುಖ್ಯಮಂತ್ರಿ

‘ನಿಮಗೆ ಛೀಮಾರಿ ಹಾಕುತ್ತಿದ್ದಾರೆ’

‘ಈ ಭೂಮಿಯಲ್ಲಿ ಸೂರ್ಯ-ಚಂದ್ರ ಇರುವವರೆಗೆ ಅಂಬೇಡ್ಕರ್ ಸ್ಮರಣೆ ಇರಲಿದೆ. ನೀವು ತುಚ್ಛೀಕರಿಸಿದಷ್ಟೂ ಪುಟಿದು ಪುಟಿದು ಮೇಲೆದ್ದು ಬಂದು ಅವರು ನಮ್ಮ ಮುನ್ನಡೆಯ ಹಾದಿಗೆ ಬೆಳಕಾಗುತ್ತಾರೆ. ನಿಮ್ಮ ದುರಹಂಕಾರದ ಮಾತಿಗೆ ನಿಮ್ಮ ಚೇಲಾಗಳು ಮೇಜುಕುಟ್ಟಿ ಸಂಭ್ರಮಿಸಿರಬಹುದು. ಆದರೆ, ಅಂಬೇಡ್ಕರ್ ಅವರಿಂದಾಗಿ ಸಮಾನತೆ ಮತ್ತು ಘನತೆಯ ಬದುಕು ಪಡೆದಿರುವ ದೇಶದ ಕೋಟ್ಯಂತರ ಜನ ನಿಮಗೆ ಛೀಮಾರಿ ಹಾಕುತ್ತಿದ್ದಾರೆ ಎನ್ನುವುದು ತಿಳಿದಿರಲಿ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

‘ಅಂಬೇಡ್ಕರ್ ಮತ್ತು ಅವರು ಬರೆದಿರುವ ದೇಶದ ಸಂವಿಧಾನವನ್ನು ಅವರು ಬದುಕಿರುವಾಗಲೇ ನಿಮ್ಮ ಮಾತೃಸಂಸ್ಥೆ ಆರ್‌ಎಸ್‌ಎಸ್ ಯಾಕೆ ತಿರಸ್ಕರಿಸಿತ್ತು? ಆರ್‌ಎಸ್‌ಎಸ್ ನಾಯಕರಾಗಿದ್ದ ಹೆಡಗೆವಾರ್, ಗೋಲ್ವಾಲ್ಕರ್ ಮತ್ತು ಸಾವರ್ಕರ್ ಸಂವಿಧಾನವನ್ನು ವಿರೋಧಿಸಿ ನೀಡಿರುವ ಹೇಳಿಕೆಗಳೇನು ಎನ್ನುವ ವಿವರ ಇತಿಹಾಸದ ಪುಟಗಳಲ್ಲಿವೆ. ನಿಮ್ಮ ಸುಳ್ಳುಗಳು ಮತ್ತು ಆತ್ಮವಂಚನೆಯ ನಡವಳಿಕೆಗಳಿಂದ ಅದನ್ನು ಮರೆಮಾಚಬಹುದು. ಆದರೆ ಅಳಿಸಿ ಹಾಕಲಾಗುವುದಿಲ್ಲ ಎನ್ನುವುದು ನೆನಪಿರಲಿ. ಆ ಅಭಿಪ್ರಾಯವನ್ನೇ ನೀವು ಸಂಸತ್‌ನಲ್ಲಿ ಆಡಿದ್ದೀರಿ’ ಎಂದೂ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಯಾರು ಏನೆಂದರು?

ತಪ್ಪುಗಳನ್ನು ಮಾಡುವವರು ಮಾತ್ರ ಪುಣ್ಯದ ಬಗ್ಗೆ ಚಿಂತೆ ಮಾಡಬೇಕು. ಈ ದೇಶ, ಜನರು ಹಾಗೂ ಸಂವಿಧಾನ ಕುರಿತು ಕಾಳಜಿ ಹೊಂದಿರುವವರು ಮಾತ್ರ ಅಂಬೇಡ್ಕರ್ ಅವರ ಹೆಸರು ಹೇಳಬೇಕು

ಎಂ.ಕೆ.ಸ್ಟಾಲಿನ್, ತಮಿಳುನಾಡು ಮುಖ್ಯಮಂತ್ರಿ

ಅಮಿತ್ ಶಾ ಅವರು ಅಂಬೇಡ್ಕರ್ ಅವರನ್ನು ಅವಮಾನಿಸಿ, ಅವರ ಕುರಿತು ಕುಚೋದ್ಯದ ಹೇಳಿಕೆ ನೀಡಿದ್ದಾರೆ. ಫೆಬ್ರುವರಿಯಲ್ಲಿ ನಡೆಯಲಿರುವ ದೆಹಲಿ ವಿಧಾನಸಭೆ ಚುನಾವಣೆಗೂ ಮುನ್ನ ಮನೆ ಮನೆಗೆ ತೆರಳಿ, ಶಾ ಅವರು ಅಂಬೇಡ್ಕರ್ ಅವರನ್ನು ಅವಮಾನಿಸಿರುವ ವಿಷಯವನ್ನು ವಿವರಿಸುತ್ತೇವೆ

ಅರವಿಂದ ಕೇಜ್ರಿವಾಲ್, ಎಎಪಿ ವರಿಷ್ಠ

ಅಂಬೇಡ್ಕರ್ ಕುರಿತ ಅಮಿತ್ ಶಾ ಹೇಳಿಕೆ ಬಿಜೆಪಿಯವರಲ್ಲಿನ ಅಹಂಕಾರ ತೋರಿಸುತ್ತದೆ. ಬಿಜೆಪಿ ಹಾಗೂ ಆರ್‌ಎಸ್‌ಎಸ್‌ನ ಬೆಂಬಲ ಇಲ್ಲದೆಯೇ ಶಾ ಇಂತಹ ಹೇಳಿಕೆ ನೀಡುವ ಧೈರ್ಯ ಮಾಡುತ್ತಿರಲಿಲ್ಲ. ಪ್ರಧಾನಿ ನರೇಂದ್ರ ಮೋದಿ ಅವರು ಶಾ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು

ಉದ್ಧವ್ ಠಾಕ್ರೆ, ಶಿವಸೇನಾ(ಯುಬಿಟಿ) ಮುಖ್ಯಸ್ಥ

ಅಂಬೇಡ್ಕರ್ ಮಹಾ ಮೇಧಾವಿ. ಸ್ವಾತಂತ್ರ್ಯವೆಂಬ ಗಾಳಿಯನ್ನು ಉಸಿರಾಡುವ ಪ್ರತಿಯೊಬ್ಬ ವ್ಯಕ್ತಿ ಅಂಬೇಡ್ಕರ್ ಅವರನ್ನು ಅತ್ಯಂತ ಗೌರವದಿಂದ ಕಾಣುತ್ತಾನೆ. ನಾವು ನಿರಂತರವಾಗಿ ಅವರ ಹೆಸರು ಹೇಳೋಣ

ವಿಜಯ್, ನಟ ಹಾಗೂ ಟಿವಿಕೆ ಪಕ್ಷದ ಸಂಸ್ಥಾಪಕ

‘ಮಹಾ’: ವಿಪಕ್ಷಗಳಿಂದ ಸಭಾತ್ಯಾಗ

ಗೃಹ ಸಚಿವ ಅಮಿತ್ ಶಾ ನೀಡಿರುವ ಹೇಳಿಕೆಯ ವಿಚಾರ ಮಹಾರಾಷ್ಟ್ರ ವಿಧಾನಮಂಡಲದ ಎರಡೂ ಸದನಗಳಲ್ಲಿ ಬುಧವಾರ ಪ್ರತಿಧ್ವನಿಸಿತು.

ವಿಧಾನಪರಿಷತ್ ಕಲಾಪ ಆರಂಭಗೊಂಡಾಗ, ಶಾ ಅವರ ಹೇಳಿಕೆ ಕುರಿತು ಚರ್ಚೆಗೆ ಅವಕಾಶ ನೀಡಬೇಕು ಎಂದು ವಿರೋಧ ಪಕ್ಷದ ನಾಯಕ ಅಂಬಾದಾಸ್ ದನ್ವೆ ಕೋರಿದರು. ಇದಕ್ಕೆ ಆಡಳಿತ ಪಕ್ಷದ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. ಆಗ, ‘ಸಂಸತ್‌ನಲ್ಲಿನ ವಿಚಾರಗಳ ಕುರಿತು ವಿಧಾನಪರಿಷತ್‌ನಲ್ಲಿ ಚರ್ಚೆ ಮಾಡುವಂತಿಲ್ಲ. ಈ ವಿಚಾರವಾಗಿ ವಿಪಕ್ಷಗಳ ಸದಸ್ಯರು ರಾಜಕೀಯ ಮಾಡುತ್ತಿವೆ’ ಎಂದು ಉಪ ಸಭಾಪತಿ ನೀಲಂ ಗೋರ್‍ಹೆ ಹೇಳಿದರು.

ಇದನ್ನು ಪ್ರತಿಭಟಿಸಿ, ‘ಮಹಾ ವಿಕಾಸ್ ಅಘಾಡಿ’ ಸದಸ್ಯರು, ಘೋಷಣೆಗಳನ್ನು ಕೂಗಿದರಲ್ಲದೇ, ನಂತರ ಸದನದಿಂದ ಹೊರನಡೆದರು.

ಕಾಂಗ್ರೆಸ್‌ನದ್ದು ನೀಚ ಮನಃಸ್ಥಿತಿ: ಆರ್. ಅಶೋಕ ಟೀಕೆ

‘ಅಂಬೇಡ್ಕರ್ ಅವರಿಗೆ ಕಾಂಗ್ರೆಸ್ ಮಾಡಿದ ಮಹಾ ಮೋಸವನ್ನು, ಮಹಾ ಅಪಮಾನಗಳನ್ನು ಎಳೆ ಎಳೆಯಾಗಿ ದೇಶದ ಜನರ ಮುಂದೆ ಬಿಚ್ಚಿಟ್ಟ ಅಮಿತ್ ಶಾ ಅವರ ಭಾಷಣದಿಂದ ನಿಮಗೆ ಮುಜುಗರ, ಹತಾಶೆ ಆಗಿರುವುದು ಆಶ್ಚರ್ಯವೇನಲ್ಲ’ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಉದ್ದೇಶಿಸಿ ಪ್ರತಿಕ್ರಿಯೆ ನೀಡಿದ್ದಾರೆ. ‘ಅಂಬೇಡ್ಕರ್ ಅವರನ್ನು ಚುನಾವಣೆಯಲ್ಲಿ ಸೋಲಿಸಿದ, ಅವರ ಅಂತ್ಯ ಸಂಸ್ಕಾರಕ್ಕೆ ಭೂಮಿ ನೀಡಲು ನಿರಾಕರಿಸಿದ, ಅವರನ್ನು ಬಿಟ್ಟು, ತಮಗೆ ತಾವೇ ಭಾರತ ರತ್ನ ಕೊಟ್ಟುಕೊಂಡ ನೀಚ ಮನಃಸ್ಥಿತಿ ನಿಮ್ಮ ಕಾಂಗ್ರೆಸ್ ಪಕ್ಷದ್ದು. ಇದೀಗ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಭಾಷಣವನ್ನು ತಿರುಚಿ ಮತ್ತೊಮ್ಮೆ ಬಾಬಾ ಸಾಹೇಬರನ್ನು ಅವಮಾನಿಸುತ್ತಿದ್ದೀರಿ’ ಎಂದು ದೂರಿದ್ದಾರೆ.

ಕಿಚ್ಚು ಹಚ್ಚಿದ ಶಾ ಹೇಳಿಕೆ

ಒಂದನೇ ಪುಟದಿಂದ..

ತೃಣಮೂಲ ಕಾಂಗ್ರೆಸ್‌ನ ರಾಜ್ಯಸಭಾ ನಾಯಕ ಡೆರೆಕ್ ಒ’ಬ್ರಯಾನ್, ಶಾ ವಿರುದ್ಧ ಹಕ್ಕುಚ್ಯುತಿಯ ನೋಟಿಸ್ ಸಲ್ಲಿಸಿದರೆ, ಕಾಂಗ್ರೆಸ್ ದೇಶದಾದ್ಯಂತ ರಾಜಭವನಗಳಿಗೆ ಚಲೋ ಚಳವಳಿ ನಡೆಸಿತು. ಶಾ ಹೇಳಿಕೆ ಖಂಡಿಸಿ ರಾಜಧಾನಿಯಲ್ಲಿ ಎಎಪಿಯ ಕಾರ್ಯಕರ್ತರು ಅರವಿಂದ್ ಕೇಜ್ರಿವಾಲ್ ನೇತೃತ್ವದಲ್ಲಿ ಬಿಜೆಪಿ ಕಚೇರಿಯತ್ತ ನುಗ್ಗಲು ಯತ್ನಿಸಿದರು. ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮತ್ತು ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಹಾಗೂ ‘ಇಂಡಿಯಾ’ ಒಕ್ಕೂಟದ ಇತರ ಮುಖಂಡರು ಶಾ ಹೇಳಿಕೆ ವಿರುದ್ಧ ಗುಡುಗಿದರು.

ಶಾ ಅವರ ಹನ್ನೊಂದು ಸೆಕೆಂಡ್‌ಗಳ ಹೇಳಿಕೆಗೆ ತೀವ್ರ ವಿರೋಧ ಎದುರಾಗುತ್ತಿದ್ದಂತೆಯೇ ಗೃಹ ಸಚಿವರ ಪರವಾಗಿ ಪ್ರಧಾನಿ ಟ್ವೀಟ್ ಮಾಡಲು ಆರಂಭಿಸಿದರೆ, ನಡ್ಡಾ ಸೇರಿದಂತೆ ಹಲವು ಹಿರಿಯ ಸಚಿವರು ಶಾ ಅವರೊಂದಿಗೆ ಪತ್ರಿಕಾಗೋಷ್ಠಿ ನಡೆಸಿ, ಕಾಂಗ್ರೆಸ್ ವಿರುದ್ಧ ಹರಿಹಾಯ್ದರು. ಮಾತಿನ ಒಂದು ಸಣ್ಣ ತುಣುಕನ್ನು ಬಿಡುಗಡೆ ಮಾಡುವ ಬದಲು, ಇಡೀ ಹೇಳಿಕೆಯ ದೃಶ್ಯ ಬಿಡುಗಡೆ ಮಾಡಿ ಎಂದು ಸವಾಲು ಎಸೆದರು.

ಕಾಂಗ್ರೆಸ್ ಪಕ್ಷದ ವಿರುದ್ಧ ಟೀಕಾಪ್ರಹಾರ ನಡೆಸಿದ ಶಾ, ರಾಜ್ಯಸಭಾ ಭಾಷಣದ ಸಂದರ್ಭದಲ್ಲಿ ತಾವು ಮಾಡಿರುವ ಆರೋಪಗಳನ್ನು ಪುನರುಚ್ಚರಿಸಿದರು. ‘ಕಾಂಗ್ರೆಸ್ ಅಧ್ಯಕ್ಷರಿಗೆ ಸಂತೋಷವಾಗುವುದಿದ್ದರೆ ನಾನು ರಾಜೀನಾಮೆ ನೀಡುವೆ. ಇದರಿಂದ ಅವರ ಸಮಸ್ಯೆ ಪರಿಹಾರ ಆಗುವುದಿಲ್ಲ’ ಎಂದು ವ್ಯಂಗ್ಯವಾಗಿ ಹೇಳಿದರು. ‘ಇನ್ನೂ 15 ವರ್ಷ ಅವರು ಅದೇ ಕುರ್ಚಿಯಲ್ಲಿ ಕುಳಿತುಕೊಳ್ಳಬೇಕು’ ಎಂದೂ ಕುಟುಕಿದರು. ವಿವಾದಕ್ಕೆ ಸಂಬಂಧಿಸಿದಂತೆ ಪ್ರಧಾನಿಯೇ ಟ್ವೀಟ್ ಮಾಡಿದ್ದು, ಖುದ್ದು ಶಾ ಸೇರಿದಂತೆ ಸಚಿವರು ಪತ್ರಿಕಾಗೋಷ್ಠಿ ನಡೆಸಿದ್ದು ಬಿಜೆಪಿ ಎಷ್ಟೊಂದು ಒತ್ತಡದಲ್ಲಿ ಸಿಲುಕಿದೆ ಎಂಬುದರ ದ್ಯೋತಕ ಎಂದು ವಿರೋಧಪಕ್ಷದ ಸಂಸದರು ವಿಶ್ಲೇಷಿಸಿದರು.

ಬ್ರಿಟನ್‌ನಲ್ಲಿ ಶಿಕ್ಷೆ: ಭಾರತದಲ್ಲಿ ಜೈಲು

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಬ್ರಿಟನ್ನಿನಲ್ಲಿ ಕೊಲೆ ಪ್ರಕರಣದಲ್ಲಿ 28 ವರ್ಷಗಳ ಜೈಲು ಶಿಕ್ಷೆಗೆ ಗುರಿಯಾಗಿರುವ ವ್ಯಕ್ತಿಯೊಬ್ಬನನ್ನು, ಆತನ ಶಿಕ್ಷೆಯ ಬಾಕಿ ಅವಧಿಯನ್ನು ಪೂರೈಸಲು ಸೂರತ್‌ನ ಲಾಜಪೋರ್ ಜೈಲಿಗೆ ವರ್ಗಾಯಿಸಲಾಗಿದೆ.

ಶಿಕ್ಷೆಗೆ ಗುರಿಯಾದವರನ್ನು ಹಸ್ತಾಂತರ ಮಾಡಿಕೊಳ್ಳಲು ಭಾರತ ಮತ್ತು ಬ್ರಿಟನ್ ನಡುವೆ ಒಪ್ಪಂದ ಆದ ನಂತರದಲ್ಲಿ ಈ ರೀತಿಯ ವರ್ಗಾವಣೆ ಪ್ರಕರಣ ವರದಿಯಾಗಿರುವುದು ಇದೇ ಮೊದಲು ಎನ್ನಲಾಗಿದೆ.

27 ವರ್ಷ ವಯಸ್ಸಿನ ಜಿಗುಕುಮಾರ್ ಸೊರ್ಥಿ ಎಂಬಾತನನ್ನು ಬ್ರಿಟನ್ನಿನ ಅಧಿಕಾರಿಗಳಿಂದ ವಶಕ್ಕೆ ಪಡೆದುಕೊಂಡಿರುವ ಪೊಲೀಸರು, ಆತನನ್ನು ಮಂಗಳವಾರ ಸೂರತ್‌ಗೆ ಕರೆತಂದಿದ್ದಾರೆ. ಕಾನೂನು ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿದ ನಂತರ ಆತನನ್ನು ಲಾಜಪೋರ್ ಜೈಲಿಗೆ ಕಳುಹಿಸಲಾಯಿತು.


ಬ್ರಿಟನ್ ಅಧಿಕಾರಿಗಳು ಹಾಗೂ ಗುಜರಾತ್ ಪೊಲೀಸರೊಂದಿಗೆ ಜಿಗುಕುಮಾರ್

ವಲಸಾಡ್ ಜಿಲ್ಲೆಯ ಉಮರಗಾಂವ್‌ನ ಜಿಗುಕುಮಾರ್‌ನಿಗೆ ಕೊಲೆ ಪ್ರಕರಣದಲ್ಲಿ 28 ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗಿದೆ. ಈತ ಬ್ರಿಟನ್ನಿನ ಜೈಲಿನಲ್ಲಿ ಕೆಲವು ವರ್ಷಗಳನ್ನು ಈಗಾಗಲೇ ಕಳೆದಿದ್ದಾನೆ. ಶಿಕ್ಷೆಯ ಇನ್ನುಳಿದ ಅವಧಿಯನ್ನು ಈತ ಇಲ್ಲಿನ ಜೈಲಿನಲ್ಲಿ ಕಳೆಯಲಿದ್ದಾನೆ ಎಂದು ಸೂರತ್ ಪೊಲೀಸ್ ಆಯುಕ್ತ ಅನುಪಮ್ ಸಿಂಗ್ ಗೆಹಲೋತ್ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜಿಗುಕುಮಾರ್ ಮತ್ತು ಭಾವಿನಿ ಪರ್ವೀನ್ ಎಂಬುವವರ ನಡುವೆ 2017ರಲ್ಲಿ ಭಾರತದಲ್ಲಿ ಮದುವೆ ನಿಶ್ಚಯವಾಗಿತ್ತು. ಆದರೆ ಭಾವಿನಿ ಅವರು ಮದುವೆ ಮುರಿದುಕೊಂಡಿದ್ದಕ್ಕಾಗಿ ಜಿಗುಕುಮಾರ್, ಭಾವಿನಿ ಅವರನ್ನು ಅವರ ತಾಯಿಯ ಎದುರೇ 2020ರಲ್ಲಿ ಇರಿದು ಕೊಂದಿದ್ದ ಎಂದು ಬ್ರಿಟನ್ನಿನ ಮಾಧ್ಯಮ ವರದಿಗಳು ಹೇಳುತ್ತವೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ಎಷ್ಟು ತಿಳಿದಿರುತ್ತೇವೆಯೋ ಅದಕ್ಕಿಂತ ಕಡಿಮೆ ಮಾತನಾಡುವುದು ಒಳ್ಳೆಯದು.

–ವಿಲಿಯಂ ಷೇಕ್ಸ್‌ಪಿಯರ್

ಒಂದು ದೇಶ, ಒಂದು ಚುನಾವಣೆ ಪ್ರಜಾಪ್ರಭುತ್ವಕ್ಕೆ ಹೇರುವ ನಿರ್ಬಂಧ

ಲೋಕಸಭೆ ಮತ್ತು ವಿಧಾನಸಭೆಗಳಿಗೆ ಏಕಕಾಲಕ್ಕೆ ಚುನಾವಣೆ ನಡೆಸಲು ಅವಕಾಶ ಮಾಡಿಕೊಡುವುದಕ್ಕಾಗಿ ಎರಡು ಮಸೂದೆಗಳನ್ನು ಸಂಸತ್ತಿನಲ್ಲಿ ಮಂಡಿಸಲಾಗಿದೆ. 'ಒಂದು ದೇಶ, ಒಂದು ಚುನಾವಣೆ' ಎಂಬ ಚಿಂತನೆಯನ್ನು ಜಾರಿಗೆ ತರಲೇಬೇಕು ಎಂದು ಸರ್ಕಾರ ಪಟ್ಟು ಹಿಡಿದಿರುವುದನ್ನು ಇದು ತೋರಿಸುತ್ತದೆ. ಈ ಚಿಂತನೆಯ ಕುರಿತು ದೇಶದಾದ್ಯಂತ ವ್ಯಾಪಕ ಚರ್ಚೆ ನಡೆದಿದೆ ಮತ್ತು ಬಲವಾದ ವಿರೋಧವೂ ವ್ಯಕ್ತವಾಗಿದೆ. ಜಂಟಿ ಸಂಸದೀಯ ಸಮಿತಿಯ (ಜೆಪಿಸಿ) ಪರಿಶೀಲನೆಗೆ ಮಸೂದೆಗಳನ್ನು ಒಪ್ಪಿಸಲು ನಿರ್ಧರಿಸಲಾಗಿದೆ. ಯಾವುದೇ ಮಹತ್ವದ ಬದಲಾವಣೆ ಇಲ್ಲದೆಯೇ ಮಸೂದೆಗಳು ಸಂಸತ್ತಿಗೆ ವಾಪಸ್ ಬರಬಹುದು. ಏಕೆಂದರೆ, ಜೆಪಿಸಿಯಲ್ಲಿ ಆಡಳಿತ ಪಕ್ಷದ ಸದಸ್ಯರೇ ಹೆಚ್ಚಿನ ಸಂಖ್ಯೆಯಲ್ಲಿ ಇರುವುದು ರೂಢಿ. ಒಂದು ಮಸೂದೆಯು ಸಂವಿಧಾನ ತಿದ್ದುಪಡಿಗೆ ಸಂಬಂಧಿಸಿದ್ದು. ಹಾಗಾಗಿ, ಅದು ಅಂಗೀಕಾರ ಆಗಲು ಮೂರನೇ ಎರಡರಷ್ಟು ಬಹುಮತ ಬೇಕೇಬೇಕು. ಮಸೂದೆ ಮಂಡನೆ ಆಗಬೇಕೇ ಬೇಡವೇ ಎಂಬುದನ್ನು ನಿರ್ಧರಿಸಲು ನಡೆದ ಮತದಾನದ ಫಲಿತಾಂಶ ನೋಡಿದರೆ, ಈ ಮಸೂದೆಗೆ ಅನುಮೋದನೆ ದೊರೆಯುವ ಸಾಧ್ಯತೆ ಇಲ್ಲ. ಆಡಳಿತಾರೂಢ ಎನ್‌ಡಿಎಯ ಕೆಲವು ಸದಸ್ಯರು ಕೂಡ ಮತದಾನ ನಡೆದಾಗ ಗೈರುಹಾಜರಾಗಿದ್ದರು.



ಈ ಮಸೂದೆಗಳು ಚುನಾವಣೆ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆ ಮೇಲೆ ಮಿತಿಗಳನ್ನು ಹೇರುವ ಉದ್ದೇಶ ಹೊಂದಿವೆ

ಏಕಕಾಲಕ್ಕೆ ಚುನಾವಣೆ ಚಿಂತನೆಗೆ ಬಹುತೇಕ ಎಲ್ಲ ವಿರೋಧ ಪಕ್ಷಗಳಿಂದ ಮಾತ್ರವಲ್ಲ, ದೊಡ್ಡ ಸಂಖ್ಯೆಯಲ್ಲಿ ಸಾಮಾಜಿಕ ಸಂಘಟನೆಗಳಿಂದ ಮತ್ತು ರಾಜಕೀಯ ಚಿಂತಕರಿಂದಲೂ ವಿರೋಧ ವ್ಯಕ್ತವಾಗಿದೆ. ಇದು ಸಂವಿಧಾನದ ಮೂಲಸ್ವರೂಪದ ಉಲ್ಲಂಘನೆ ಎಂದು ವಿರೋಧ ಪಕ್ಷಗಳು ಬಣ್ಣಿಸಿವೆ. ಈ ಸಂಬಂಧದ ಮಸೂದೆಯು ಸಂಸತ್ತಿನ ಮಸೂದೆ ರೂಪಿಸುವ ಅಧಿಕಾರವನ್ನು ಮೀರಿದ್ದು ಎಂದು ವಿರೋಧ ಪಕ್ಷಗಳು ಹೇಳಿವೆ. ಈ ಮಸೂದೆಗಳು ರಾಜ್ಯಗಳ ಶಾಸನಸಭೆಗಳ ಸ್ವಾಯತ್ತೆಯನ್ನು ಕಸಿದುಕೊಂಡು ರಾಜ್ಯಗಳು ಸಂಸತ್ತಿನ ಅಧೀನದಲ್ಲಿ ಇರುವಂತೆ ಮಾಡುತ್ತವೆ ಎಂಬ ಆಕ್ಷೇಪವೂ ವ್ಯಕ್ತವಾಗಿದೆ. ಸರ್ಕಾರದ ಮುಂದಿರುವ ಪ್ರಸ್ತಾವದ ಪ್ರಕಾರ, ಏಕಕಾಲಕ್ಕೆ ಚುನಾವಣೆಯ ಯೋಜನೆಯು ಸ್ಥಳೀಯಾಡಳಿತ ಸಂಸ್ಥೆಗಳಿಗೂ ಅನ್ವಯ ಆಗುತ್ತದೆ. ಸಾಂವಿಧಾನಿಕತೆಯ ವಿಚಾರಗಳಲ್ಲದೆ, ಗಂಭೀರವಾದ ರಾಜಕೀಯ ವಿಚಾರಗಳೂ ಇಲ್ಲಿ ಇವೆ. ವಿವಿಧ ಹಂತಗಳ ಸರ್ಕಾರಗಳ ಆಯ್ಕೆಗೆ ಮತ ಚಲಾಯಿಸುವಾಗ ಮತದಾರರು ಭಿನ್ನ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುತ್ತಾರೆ. ಆದರೆ, ಏಕಕಾಲಕ್ಕೆ ಚುನಾವಣೆ ನಡೆದರೆ ರಾಷ್ಟ್ರ ಮಟ್ಟದಲ್ಲಿ ಅಧಿಕಾರದಲ್ಲಿರುವ ಪಕ್ಷಕ್ಕೆ ಮತ್ತು ರಾಷ್ಟ್ರೀಯ ಪಕ್ಷಗಳಿಗೆ ಅನುಕೂಲಕರ ಪರಿಸ್ಥಿತಿ ಸೃಷ್ಟಿಯಾಗುತ್ತದೆ. ದೇಶದ ರಾಜಕೀಯ ವ್ಯವಸ್ಥೆಯಲ್ಲಿ ಬಹಳ ಪ್ರಾಮುಖ್ಯ ಹೊಂದಿರುವ ಪ್ರಾದೇಶಿಕ ಪಕ್ಷಗಳಿಗೆ ತೀರಾ ಅನನುಕೂಲಕರ ಪರಿಸ್ಥಿತಿ ಎದುರಾಗುತ್ತದೆ. ಪಕ್ಷೇತರರಾಗಿ ಸ್ಪರ್ಧಿಸುವವರ ಮುಂದೆಯೂ ಇದೇ ಪರಿಸ್ಥಿತಿ ಇರುತ್ತದೆ. ಈ ಮಸೂದೆಗಳು ಕಾಯ್ದೆಯಾಗಿ ಜಾರಿಗೆ ಬಂದರೆ ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಇರುವ ಮುಕ್ತ ಅವಕಾಶಗಳು ಇಲ್ಲವಾಗುತ್ತವೆ. ಚುನಾವಣಾ ಆಯೋಗಕ್ಕೆ ಹೆಚ್ಚುವರಿ ಅಧಿಕಾರ ನೀಡುವ ಪ್ರಸ್ತಾವಕ್ಕೆ ಕೂಡ ವಿರೋಧ ಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿವೆ.

ವೆಚ್ಚ ಕಡಿತವಾಗುತ್ತದೆ, ಚುನಾವಣಾ ಪ್ರಕ್ರಿಯೆ ಹೆಚ್ಚು ದಕ್ಷಗೊಳ್ಳುತ್ತದೆ ಮತ್ತು ಮತದಾರರ ಭಾಗವಹಿಸುವಿಕೆ ಹೆಚ್ಚುತ್ತದೆ ಎಂಬುದು ಏಕಕಾಲಕ್ಕೆ ಚುನಾವಣೆ ನಡೆಸುವುದರ ಪರವಾಗಿರುವವರ ಪ್ರತಿಪಾದನೆ. ಸರ್ಕಾರಕ್ಕೆ ನಿಶ್ಚಿತ ಅವಧಿ ಇರುವುದರಿಂದ ಆಡಳಿತದಲ್ಲಿ ಸ್ಥಿರತೆ ಮೂಡುತ್ತದೆ ಎಂದು ಅವರು ಹೇಳುತ್ತಾರೆ. ಏಕಕಾಲಕ್ಕೆ ಚುನಾವಣೆ ನಡೆಸುವುದರಿಂದ ಜನರಿಗೆ ಆಗುವ ನಷ್ಟವನ್ನು ನೋಡಿದರೆ ಈ ಪ್ರಯೋಜನಗಳು ಏನೇನೂ ಅಲ್ಲ. ಪೌರರ ಪ್ರಜಾಸತ್ತಾತ್ಮಕ ಹಕ್ಕುಗಳು ಮೊಟಕುಗೊಳ್ಳುತ್ತವೆ, ಸಂಸದೀಯ ಪ್ರಜಾಪ್ರಭುತ್ವದ ತಳಹದಿಯಾದ ಪಕ್ಷ ವ್ಯವಸ್ಥೆಗೆ ಭಾರಿ ಹಾನಿ ಉಂಟಾಗುತ್ತದೆ. ಈಗ ಹೇಳಲಾಗುತ್ತಿರುವ ಅನುಕೂಲಗಳು ಕೂಡ ವಾಸ್ತವದಲ್ಲಿ ಸಿಗದೇ ಹೋಗಬಹುದು. ಈ ಮಸೂದೆಗಳು ಕಾಯ್ದೆಯಾದರೆ, ಅವುಗಳ ಅನುಷ್ಠಾನದಲ್ಲಿ ಹಲವು ಗಂಭೀರವಾದ ಸಮಸ್ಯೆಗಳು ಎದುರಾಗಬಹುದು. ಈಗ ಮಂಡಿಸಲಾಗಿರುವ ಮಸೂದೆಗಳು ಚುನಾವಣೆ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆ ಮೇಲೆ ಮಿತಿಗಳನ್ನು ಹೇರುವ ಉದ್ದೇಶ ಹೊಂದಿವೆ. ಪ್ರಜಾಪ್ರಭುತ್ವವು ಮುಕ್ತವಾಗಿ ಇರುವುದು ಒಂದು ಮೌಲ್ಯವೇ ವಿನಾ ಅದೊಂದು ಲೋಪ ಅಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಕಾಪಿಟ್ಟುಕೊಳ್ಳುವುದು ಸುಲಭದ ಕೆಲಸ ಅಲ್ಲ.

ದಿನದ ಟ್ವೀಟ್

ಆರೋಗ್ಯ ಭದ್ರತೆಯ ಸವಾಲು



ದೆಹಲಿಯಲ್ಲಿ ಎಲ್ಲ ಹಿರಿಯ ನಾಗರಿಕರಿಗೆ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಉಚಿತ ಆರೋಗ್ಯ ಸೇವೆ ಒದಗಿಸುವುದಾಗಿ ಆಮ್ ಆದ್ಮಿ ಪಕ್ಷ ಘೋಷಿಸಿದೆ. ನಿವೃತ್ತಿ ನಂತರ ಹಿರಿಯ ನಾಗರಿಕರಿಗೆ ಆರ್ಥಿಕ ಹಾಗೂ ಆರೋಗ್ಯ ಭದ್ರತೆ ಒದಗಿಸಲು ಇದೊಂದೇ ಪ್ರಾಯೋಗಿಕ ಮಾರ್ಗವಾಗಿದೆ. ಕೊನೆಯಲ್ಲಿ, ಪ್ರತಿ ರಾಜ್ಯವೂ ಈ ನಡೆಯನ್ನು ಅನುಸರಿಸಬೇಕಾಗುತ್ತದೆ.

ಅಶ್ವಿನ್ ಮಹೇಶ್, ನಗರ ಯೋಜನಾ ತಜ್ಞ

ಕಿಡಿನುಡಿ

ಮೀಸಲಾತಿಯನ್ನು ಜಾತಿ ಆಧಾರದ ಮೇಲೆ ಮುಂದುವರಿಸಬೇಕೇ ಅಥವಾ ಆರ್ಥಿಕ ಮಾನದಂಡಕ್ಕೆ ತಕ್ಕಂತೆ ಬದಲಾಯಿಸಬೇಕೇ ಎಂಬ ಬಗ್ಗೆ ಚರ್ಚೆ ನಡೆಸುವ ಅಗತ್ಯ ಇದೆ ಎಂದು ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡ ಹೇಳಿದ್ದಾರೆ. ಅವರ ಪುತ್ರ ಪ್ರತಿನಿಧಿಸುವ ಕ್ಷೇತ್ರವಾಗಿರುವ ಮಂಡ್ಯದಲ್ಲಿ ಇತ್ತೀಚೆಗೆ ದೇವಸ್ಥಾನಕ್ಕೆ ದಲಿತರು ಪ್ರವೇಶಿಸಿದರೆಂಬ ಕಾರಣದಿಂದ, ಪ್ರಬಲ ಜಾತಿಗಳ ಜನ ಅಲ್ಲಿನ ದೇವರ ಮೂರ್ತಿಯನ್ನೇ ಹೊರತಂದರು. ಈ ತಾರತಮ್ಯವು ಜಾತಿ ಆಧಾರಿತವೋ ಅಥವಾ ಆರ್ಥಿಕ ಸ್ಥಿತಿಯನ್ನು ಆಧರಿಸಿದ್ದೋ ಎಂಬುದನ್ನು ದೇವೇಗೌಡರು ಹೇಳುವರೇ?

ವೀಣಾ ಜೈನ್

25 ವರ್ಷಗಳ ಹಿಂದೆ

ಭಾನುವಾರ, 19-12-1999

● **'ಮಾನವ ಬಾಂಬ್' ಸ್ಫೋಟ: ಚಂದ್ರಿಕಾ ಪಾರು: 25 ಸಾವು**

ಕೊಲಂಬೊ, ಡಿ.18 (ಪಿಟಿಐ, ಯುಎನ್‌ಐ)– ಶ್ರೀಲಂಕಾ ಅಧ್ಯಕ್ಷೆ ಚಂದ್ರಿಕಾ ಕುಮಾರತುಂಗೆ ಅವರು ತಮ್ಮ ಹತ್ಯೆಗೆ ಇಂದು ರಾತ್ರಿ ಇಲ್ಲಿ ನಡೆದ ಶಂಕಿತ ಆತ್ಮಹತ್ಯಾ ಬಾಂಬ್ ದಾಳಿಯಲ್ಲಿ ಪವಾಡಸದೃಶ ರೀತಿಯಲ್ಲಿ ಪಾರಾಗಿದ್ದು, ಹಿರಿಯ ಪೊಲೀಸ್ ಅಧಿಕಾರಿ ಸೇರಿದಂತೆ 25 ಮಂದಿ ಮೃತಪಟ್ಟು, ನೂರಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ.

ನಗರದ ಮಧ್ಯ ಭಾಗದಲ್ಲಿನ ಪುರಭವನದ ಹೊರಗೆ ನಡೆದ ಚುನಾವಣಾ ರ‍್ಯಾಲಿಯನ್ನು ಉದ್ದೇಶಿಸಿ ಭಾಷಣ ಮಾಡಿ ವೇದಿಕೆಯಿಂದ ಕೆಳಗೆ ಇಳಿಯುತ್ತಿದ್ದಂತೆಯೇ ಶಕ್ತಿಶಾಲಿ ಬಾಂಬ್ ಆಸ್ಫೋಟನೆಗೊಂಡಿತು.

● **ರಾಜೀವ್ ಹತ್ಯೆ ಮಾದರಿ ಯತ್ನ**

ಕೊಲಂಬೊ, ಡಿ. 18 (ಪಿಟಿಐ)– 'ಮಾನವ ಬಾಂಬ್' ಮೂಲಕ ಭಾರತ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರನ್ನು ಹತ್ಯೆ ಮಾಡಿದ ಬಗೆಯಲ್ಲಿಯೇ ಚಂದ್ರಿಕಾ ಕುಮಾರತುಂಗೆ ಅವರನ್ನು ಹತ್ಯೆ ಮಾಡಲು ಎಲ್‌ಟಿಟಿಇ ಸಂಚು ನಡೆಸಿರುವುದು ಕಂಡುಬಂದಿದೆ.

'ಮಾನವ ಬಾಂಬ್' ಮಹಿಳೆಯೊಬ್ಬಳು, ಮಾಯಾ ಚಂದಾನಿ ಜತೆ ಮಾತನಾಡುತ್ತಿದ್ದ ಚಂದ್ರಿಕಾ ಅವರ ಬಳಿ ಸಾರಿ ಬಾಂಬ್ ಆಸ್ಫೋಟಿಸಿ ಅವರನ್ನು ಚೂರು ಚೂರಾಗಿ ಮಾಡಲು ಹವಣಿಸುವಾಗಲೇ ಭದ್ರತಾ ಅಧಿಕಾರಿ ತಕ್ಷಣ ಜಾಗೃತಗೊಂಡು ಆಕೆಯನ್ನು ಕೊಂಚ ದೂರ ಎಳೆದಿದ್ದರಿಂದ ಚಂದ್ರಿಕಾ ಪವಾಡಸದೃಶ ರೀತಿಯಲ್ಲಿ ಪಾರಾದರು.

50 ವರ್ಷಗಳ ಹಿಂದೆ

ಗುರುವಾರ, 19-12-1974

● **ಸಂಸತ್ ಕಾಂಗ್ರೆಸ್ ಪಕ್ಷದಲ್ಲಿ ಒಡಕು**

ನವದೆಹಲಿ, ಡಿ.18– ಕಾಂಗ್ರೆಸ್ ಸಂಸತ್ ಪಕ್ಷದ ಕಾರ್ಯನಿರ್ವಾಹಕ ಸಮಿತಿಯಲ್ಲಿ ಇಂದು ಪಕ್ಷದ ಎರಡು ಪ್ರಮುಖ ಬಣಗಳ ನಡುವೆ ಒಡಕು ಮತ್ತೆ ಬಯಲಾಯಿತು.

ಸಕ್ಕರೆ, ಜವಳಿ ಮತ್ತು ಔಷಧಿ ಕೈಗಾರಿಕೆಗಳನ್ನು ರಾಷ್ಟ್ರೀಕರಿಸಬೇಕೆಂಬ ವಸಂತ ಸಾಠೆಯವರ ಸಲಹೆ ಈ ಮುಖಾಮುಖಿ ಘರ್ಷಣೆಗೆ ಕಾರಣವಾಯಿತು.

ಸಾಠೆಯವರು ಪಕ್ಷದ ನಾಯಕಿ ಇಂದಿರಾ ಗಾಂಧಿಯವರ ವಿಶೇಷ ಅನುಮತಿ ಪಡೆದು ಸಭೆಗೆ ಬಂದಿದ್ದರು.

● **ಕುಲ ಕಸುಬುಗಳ ಉತ್ತೇಜನಕ್ಕೆ ಕಾರ್ಪೊರೇಷನ್ ರಚನೆ– ಅರಸು**

ಬೆಂಗಳೂರು, ಡಿ. 18– ಶತಮಾನಗಳಿಂದ ಕುಲ ಕಸುಬುಗಳನ್ನು ಮುಂದುವರೆಸಿಕೊಂಡು ಬಂದಿರುವ ಜನಾಂಗಗಳಿಗೆ ಕಸುಬು ಮುಂದುವರೆಸುವುದಕ್ಕೆ ಅಗತ್ಯ ಸಹಾಯ ಕಲ್ಪಿಸಲು ಗೃಹ ಕೈಗಾರಿಕೆ ಮತ್ತು ಕುಶಲ ಕೈಗಾರಿಕೆ ಕಾರ್ಪೊರೇಷನ್ ರಚಿಸಲು ಯೋಚಿಸಲಾಗುತ್ತದೆ ಎಂದು ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರು ಇಂದು ಇಲ್ಲಿ ಪ್ರಕಟಿಸಿದರು.

ಕುಂಬಾರ ಗುಂಡಿಯಲ್ಲಿ ಕುಂಬಾರ ಸಂಘದ ವಿದ್ಯಾರ್ಥಿನಿಲಯಕ್ಕೆ ನಂದಾದೀವಿಗೆ ಬೆಳಗಿ ಅಸ್ತಿಭಾರ ಹಾಕಿದ ಮುಖ್ಯಮಂತ್ರಿಯವರು 'ಕ್ಷೌರಿಕರಿಗೆ, ಕುಂಬಾರರಿಗೆ ಕಸುಬು ಮುಂದುವರೆಸಲು ಸಹಾಯ ಮಾಡಿ ಕಸುಬು ಬೆಳೆಸುವ ವಿದ್ಯೆ ಕಲಿಸೋಣ. ಎಲ್ಲರಿಗೂ ಗುಮಾಸ್ತ ಕೆಲಸ ಕೊಡಿಸುತ್ತೇನೆ ಅಂದರೆ ನಿರುದ್ಯೋಗ ಬಗೆಹರಿಯೋಲ್ಲ. ವಿದ್ಯಾವಂತರಾಗೋಣ ಆದರೆ ಕಸುಬು ನಿರ್ಲಕ್ಷಿಸಬೇಡಿ, ಮಡಕೆಗೆ ಮಾರುಕಟ್ಟೆ ಇಲ್ಲ ಅಂತಲ್ಲ. ಲೋಹ ಬಳಸುವವರು ಶೇಕಡ 50ರಷ್ಟೂ ಇಲ್ಲ. ಬಡವರ ಮನೆಗಳಿಗೆ ಸ್ವಯಂ ಹವಾನಿಯಂತ್ರಣ ಕೊಡುವ ನಾಡುಹಂಚು, ನಿರ್ಮಾಣ ಏಕೆ ಕಡೆಗಣಿಸಬೇಕು?' ಎಂದರು.

ಕನ್ನಡದ 'ಸಂಬಂಜ'ವನ್ನು ಅರಸಿಬಂದು ತಬ್ಬಿದ ಸಾಮಾಜಿಕ ನ್ಯಾಯದ 'ವೈಕಂ' ಬಳ್ಳಿ

ವೈಕಂ: ಶತಮಾನದ ಮಹಾಮಾರ್ಗ



ಪಡಸಾಲೆ

ರಘುನಾಥ ಚ.ಹ.

ಭಾರತದ ಜಾತಿವ್ಯವಸ್ಥೆಯ ಕರಾಳಸ್ವರೂಪವನ್ನು ಅರ್ಥ ಮಾಡಿಕೊಳ್ಳುವ ದಿಸೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಗಾಗ ಬಳಸುವ 'ಬಾವಿಯ ನೀರಿನ ರೂಪಕ' ಮುಖ್ಯವಾದುದು. ಬಾವಿಯ ನೀರಿನ ಮೇಲಿನ ಕಸವನ್ನು ಬಿಂದಿಗೆಯಿಂದ ಅತ್ತಿತ್ತ ಸರಿಸಿದಾಗ ನೀರು ತಿಳಿಗೊಳ್ಳುತ್ತದೆ. ಸ್ವಲ್ಪ ಸಮಯದ ನಂತರ ನೀರನ್ನು ಕಸ ಮತ್ತೆ ಆವರಿಸಿಕೊಳ್ಳುತ್ತದೆ. ಗಾಂಧಿ, ಬಸವಣ್ಣನವರಂಥ ಸಮಾಜ ಸುಧಾರಕರ ಜಾತಿ ನಿರ್ಮೂಲನದ ಪ್ರಯತ್ನಗಳೂ ಬಾವಿ ನೀರು ತಿಳಿಯಾಗುವ ಅಲ್ಪಕಾಲಿಕ ಪ್ರಯತ್ನಗಳಷ್ಟೇ ಎನ್ನುವುದು ಸಿದ್ದರಾಮಯ್ಯನವರು ಕಟ್ಟಿಕೊಡುವ ರೂಪಕದ ಧ್ವನಿ. ಹೀಗೆ ಜಾತಿ ಕಸವನ್ನು ಸರಿಸಲು ಪ್ರಯತ್ನಿಸಿದ ಆಧುನಿಕ ಭಾರತದ ಬಹು ಮುಖ್ಯ ವಿದ್ಯಮಾನಗಳಲ್ಲೊಂದು ಕೇರಳ ನೆಲದ 'ವೈಕಂ ಸತ್ಯಾಗ್ರಹ.'

ನೂರು ವರ್ಷಗಳ ಹಿಂದಿನ ಕೇರಳದ ತಿರುವಾಂಕೂರು ವಿರೋಧಾಭಾಸಗಳ ಸಮೀಕರಣದಂತಿದ್ದ ಸಂಸ್ಥಾನ. ಒಂದೆಡೆ, ದೇಶದಲ್ಲೇ ಅತಿ ಹೆಚ್ಚಿನ ಸಾಕ್ಷರತೆ ಹಾಗೂ ಆರೋಗ್ಯ ಜಾಗೃತಿಯು ಸಂಸ್ಥಾನಕ್ಕೆ ಹೆಮ್ಮೆಯ ಸಂಗತಿಯಾಗಿತ್ತು. ಅದೇಕಾಲಕ್ಕೆ, ಅಲ್ಲಿನ ಜಾತಿವ್ಯವಸ್ಥೆಯು ಸಾಮಾಜಿಕವಾಗಿ ದುರ್ಬಲವಾದ ವರ್ಗಗಳ ಉಸಿರುಗಟ್ಟಿಸುವಂತಿತ್ತು. ಜಾತಿವ್ಯಸನದ ರಾಡಿಯಿಂದಾಗಿಯೇ ವಿವೇಕಾನಂದರ ಕಣ್ಣಿಗೆ ಇಡೀ ಕೇರಳ ಹುಚ್ಚಾಸ್ಪತ್ರೆಯಾಗಿ ಕಾಣಿಸಿತ್ತು.

ಕೇರಳದ ವೈಕಂನಲ್ಲಿನ ಶಿವ ದೇಗುಲ ಧರ್ಮದ ಹೆಸರಿನಲ್ಲಿ ಜಾತಿ ತಾರತಮ್ಯವನ್ನು ಆಚರಿಸುವವರಿಗೆ ಪ್ರಯೋಗಶಾಲೆಯಂತಿದ್ದ ಸ್ಥಳ. ಮಂದಿರಕ್ಕೆ ಪ್ರವೇಶ ಮಾತ್ರವಲ್ಲ, ದೇಗುಲವನ್ನು ಸಂಪರ್ಕಿಸುವ ರಸ್ತೆಗಳನ್ನು ಪ್ರವೇಶಿಸಲೂ ಅಸ್ಪೃಶ್ಯರಿಗೆ ಅವಕಾಶವಿರಲಿಲ್ಲ. 1865ರಲ್ಲಿ ಜಾತಿ-ಧರ್ಮದ ಭೇದವಿಲ್ಲದೆ ಎಲ್ಲ ನಾಗರಿಕರೂ ಸಾರ್ವಜನಿಕ ರಸ್ತೆಗಳನ್ನು ಬಳಸಬಹುದೆಂದು ತಿರುವಾಂಕೂರು ಸರ್ಕಾರ ಆದೇಶ ನೀಡಿತು. ಆದರೆ, ಸರ್ಕಾರದ ನಿರ್ಧಾರವನ್ನು ಸಂಪ್ರದಾಯವಾದಿಗಳು ವಿರೋಧಿಸಿದರು. ಜಾತಿಪದ್ಧತಿ ತಿಳಿಗೊಳಿಸುವ ಆದೇಶಗಳನ್ನು ಉಲ್ಲಂಘಿಸುವ ಸಂಪ್ರದಾಯವಾದಿಗಳಿಗೆ ಶಿಕ್ಷೆ-ದಂಡ ವಿಧಿಸುವ ಸರ್ಕಾರದ ಪ್ರಯತ್ನಗಳೂ ಫಲಕೊಡಲಿಲ್ಲ. ಪರ-ವಿರೋಧದ ಹಗ್ಗಜಗ್ಗಾಟದ ನಡುವೆ 1884ರಲ್ಲಿ ಪ್ರಕರಣ ಹೈಕೋರ್ಟ್ ಮೆಟ್ಟಿಲೇರಿತು. ಸಾರ್ವಜನಿಕ ರಸ್ತೆಗಳನ್ನು 'ರಾಜ ಮಾರ್ಗ' ಹಾಗೂ 'ಗ್ರಾಮ ಮಾರ್ಗ'ಗಳೆಂದು ಪ್ರತ್ಯೇಕಿಸಿದ ನ್ಯಾಯಾಲಯ, ರಾಜ ಮಾರ್ಗಗಳಲ್ಲಿ ಅಸ್ಪೃಶ್ಯರಿಗೆ ಪ್ರವೇಶ ನಿರ್ಬಂಧಿಸಿತು. ಹೈಕೋರ್ಟ್‌ನ ರಾಜಿವ್ಯವಸ್ಥೆಯೂ ಸಂಪ್ರದಾಯವಾದಿಗಳಿಗೆ ಸಮಾಧಾನ ತರಲಿಲ್ಲ.

ಸರ್ಕಾರದ ಅಧೀನದಲ್ಲಿದ್ದ ಹಾಗೂ ನಂಬೂದಿರಿ ಬ್ರಾಹ್ಮಣರು ನಿರ್ವಹಿಸುತ್ತಿದ್ದ ವೈಕಂ ದೇಗುಲದ ಸುತ್ತಮುತ್ತಲಿನ ರಸ್ತೆಗಳಿಗೆ, 'ಇಲ್ಲಿಂದ ಮುಂದೆ ಕೆಳವರ್ಗದ ಜನ ಪ್ರವೇಶವಿಲ್ಲ' ಎಂದು ಸೂಚನಾಫಲಕ ಹಾಕುವುದರೊಂದಿಗೆ ಜಾತಿವಾದಿಗಳ ಅಸಹನೆ ಸ್ಫೋಟಗೊಂಡಿತು. ಇದರ ಇನ್ನೊಂದು ತುದಿಗೆ, ಜಾತಿ ದೌರ್ಜನ್ಯಗಳನ್ನು ವಿರೋಧಿಸುವವರು ಸಂಘಟನೆಗೊಳ್ಳತೊಡಗಿದರು. 1904ರ ವೇಳೆಗೆ 'ಶ್ರೀ ಮೂಲಂ ಪ್ರಜಾಸಭಾ' ಅಸೆಂಬ್ಲಿಯಲ್ಲಿ ಜಾತಿ ತಾರತಮ್ಯ ವಿರೋಧದ ದನಿಗಳು ಮೊಳಗಿದವು. ಕುಮಾರನ್ ಅಶಾನ್, ಸಿ.ವಿ. ಕುಂಜಿರಾಮನ್, ಟಿ.ಕೆ. ಮಾಧವನ್, ಅಯ್ಯನ್ ಕಾಳಿ, ಟಿ.ಟಿ. ಕೇಶವನ್ ಶಾಸ್ತ್ರಿಗಳಂಥವರು ಅಸೆಂಬ್ಲಿಯ ಭಾಗವಾದುದರಿಂದಾಗಿ, ಜಾತಿಶೋಷಣೆಯ ಧ್ವನಿ ಅಧಿಕಾರ ಕೇಂದ್ರದೊಳಗೂ ಗಟ್ಟಿಯಾಗಿ ಕೇಳುವಂತಾಯಿತು.

ಕಾಂಗ್ರೆಸ್ ಹಾಗೂ ಗಾಂಧೀಜಿ ಪ್ರವೇಶದೊಂದಿಗೆ ವೈಕಂ ಸತ್ಯಾಗ್ರಹಕ್ಕೆ ರಾಜಕೀಯ ಶಕ್ತಿ ದೊರಕಿತು. 1923ರ ಡಿ. 23ರಂದು ಕಾಕಿನಾಡದಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ವೈಕಂ ಸತ್ಯಾಗ್ರಹದ ಕುರಿತು ಟಿ.ಕೆ. ಮಾಧವನ್ ಮಾತನಾಡಿದರು. ಸತ್ಯಾಗ್ರಹವನ್ನು ಬೆಂಬಲಿಸುವ ನಿರ್ಣಯವನ್ನು ಸಭೆ ಕೈಗೊಂಡಿತು.

ವೈಕಂ ಸತ್ಯಾಗ್ರಹ ಅಹಿಂಸೆಯಿಂದ ಕೂಡಿರಬೇಕೆಂದು ಗಾಂಧೀಜಿ ನಿರ್ದೇಶಿಸಿದ್ದರು. ಸ್ವಾತಂತ್ರ್ಯ ಚಳವಳಿಯ ಅಸಹಕಾರ ಹಾಗೂ ಸತ್ಯಾಗ್ರಹ ಗುಣಗಳು ವೈಕಂ ಚಳವಳಿಯ ಭಾಗವೂ ಆದವು. 1924ರ ಮಾರ್ಚ್ 30ರಂದು ಸತ್ಯಾಗ್ರಹ ಅಧಿಕೃತವಾಗಿ ಆರಂಭಗೊಂಡಿತು. ಏಪ್ರಿಲ್ 12ರಂದು ತಮಿಳುನಾಡಿನ ಪೆರಿಯಾರ್ (ಎ.ವಿ. ರಾಮಸ್ವಾಮಿ) ವೈಕಂಗೆ ಆಗಮಿಸಿ, ಸತ್ಯಾಗ್ರಹದ ತೀವ್ರತೆ ಹೆಚ್ಚಿಸಿದರು. 1925ರ ಮಾರ್ಚ್‌ನಲ್ಲಿ ಕೇರಳಕ್ಕೆ ಭೇಟಿ ನೀಡಿದ ಗಾಂಧೀಜಿ, ರಾಜಕುಟುಂಬದ ಸದಸ್ಯರು, ನಾರಾಯಣಗುರುಗಳು ಹಾಗೂ ಆಡಳಿತ ಪ್ರತಿನಿಧಿಗಳು ಸೇರಿದಂತೆ ಹಲವರೊಂದಿಗೆ ಮಾತುಕತೆ ನಡೆಸಿದರು.

ಹಲವರ ಸತತ ಪ್ರಯತ್ನಗಳಿಂದಾಗಿ ಸರ್ಕಾರ ಹಾಗೂ ಸಂಪ್ರದಾಯವಾದಿಗಳು ತಮ್ಮ ಪಟ್ಟು ಸಡಿಲಿಸುವುದು ಅನಿವಾರ್ಯವಾಯಿತು. ದೇಗುಲದ ರಸ್ತೆಗಳನ್ನು ದಲಿತರಿಗೆ ನಿರ್ಬಂಧಿಸುವ ಫಲಕಗಳನ್ನು ತೆಗೆದುಹಾಕಲಾಯಿತು. '603 ದಿನಗಳ ವೈಕಂ ಸತ್ಯಾಗ್ರಹ ಯಶಸ್ವಿಯಾಗಿದೆ' ಎಂದು 1925ರ ನವೆಂಬರ್ 23ರಂದು 'ಸತ್ಯಾಗ್ರಹ ಆಶ್ರಮ' ಪ್ರಕಟಣೆ ಹೊರಡಿಸುವುದರೊಂದಿಗೆ ಬಹು ದೊಡ್ಡ ಆಂದೋಲನವೊಂದು ಕೊನೆಗೊಂಡಿತು.

ಅಸ್ಪೃಶ್ಯತೆ ನಿವಾರಣೆಯ ಆಶಯವನ್ನು ಸ್ವಾತಂತ್ರ್ಯ ಚಳವಳಿಯ ಭಾಗವಾಗಿಸಿದ ವೈಕಂ ಸತ್ಯಾಗ್ರಹವು ದೇಶದ ವಿವಿಧ ಭಾಗಗಳಲ್ಲಿ ದಲಿತರಿಗೆ ದೇವಾಲಯಗಳ ಪ್ರವೇಶ ದೊರಕಿಸಿಕೊಡುವ ಚಳವಳಿಗಳಿಗೆ ಮುನ್ನುಡಿ ಬರೆಯಿತು. ಕೆಲವು ಮಿತಿಗಳ ನಡುವೆಯೂ 'ವೈಕಂ ಸತ್ಯಾಗ್ರಹ'ಕ್ಕೆ ಚಾರಿತ್ರಿಕ ಮಹತ್ವವಿದೆ. ಈ ಸತ್ಯಾಗ್ರಹವು ಮುಂದಿನ ದಿನಗಳಲ್ಲೂ ದೇಶದ ವಿವಿಧ ಭಾಗಗಳಲ್ಲಿ ಜಾತಿ ವಿರೋಧದ ದನಿಗಳು ಕೇಳಿಸಲಿಕ್ಕೆ ಪ್ರೇರಣೆ ಒದಗಿಸಿದ್ದನ್ನು ಗಮನಿಸಬೇಕಾಗಿದೆ. ಆಧುನಿಕ ಭಾರತದ ಜಾತಿ ವ್ಯವಸ್ಥೆಯನ್ನು ವಿರೋಧಿಸಿದ ಮೊದಲ ದನಿಯಾಗಿ, ಈಗಲೂ ಅನುರಣನಗೊಳ್ಳುತ್ತಿರುವ ದನಿಯಾಗಿ 'ವೈಕಂ ಸತ್ಯಾಗ್ರಹ' ಮುಖ್ಯವಾದುದು.



ವೈಕಂ ಸತ್ಯಾಗ್ರಹದ ಶತಮಾನೋತ್ಸವ ಸ್ಮರಣೆಗಾಗಿ ತಮಿಳುನಾಡು ಸರ್ಕಾರ ನೀಡಿದ ಪ್ರಶಸ್ತಿ ಕನ್ನಡ ಲೇಖಕ ದೇವನೂರ ಮಹಾದೇವ ಅವರಿಗೆ ಸಂದಿರುವುದು ಕುತೂಹಲಕರ ವಿದ್ಯಮಾನ. ಸಮಾಜ ಸುಧಾರಣೆ ಹಂಬಲದ ಶತಮಾನ ಪ್ರಾಯದ ಕಳ್ಳುಬಳ್ಳಿ ನಂಟೊಂದು ಕೇರಳ, ತಮಿಳುನಾಡುಗಳನ್ನು ಸುತ್ತಿಕೊಂಡು ಕನ್ನಡ ನೆಲದ ಬರಹಗಾರನನ್ನು ತಬ್ಬಿಕೊಂಡಿರುವುದು 'ಸಂಬಂಜ ಅನ್ನೋದು ದೊಡ್ಡದು ಕನಾ' ಎನ್ನುವ ದೇವನೂರರದೇ ಮಾತನ್ನು ನೆನಪಿಸುವಂತಿದೆ.

ಜನರ ಗಮನವನ್ನು ಸೆಳೆಯುವ ಬಹುತೇಕ ಪ್ರಶಸ್ತಿಗಳು ಸಂಭ್ರಮದಲ್ಲೇ ಕೊನೆಗೊಳ್ಳುತ್ತಿರುವ ದಿನಗಳಿವು. ಕೆಲವು ಪುರಸ್ಕಾರಗಳಷ್ಟೇ ಅರಿವು, ಆತ್ಮಾಭಿಮಾನದ ಸಂಕೇತವಾಗಿ ಒದಗಿಬರುತ್ತವೆ. ವೈಕಂ ಪ್ರಶಸ್ತಿಯ ಅಗ್ಗಳಿಕೆಯಿರುವುದು ಅದು ಪ್ರತಿನಿಧಿಸುತ್ತಿರುವ ಮೌಲ್ಯಗಳಲ್ಲಿ ಹಾಗೂ ಆ ಗೌರವ ಸಂದಿರುವ ವ್ಯಕ್ತಿಯೂ ವೈಕಂ ಅರಿವಿನ ಪಥಪರಂಪರೆಯ ಸಮರ್ಥ ಕೊಂಡಿಯಾಗಿರುವುದರಲ್ಲಿ.

ನಿಟಿಲು ನಿಟಿಲೆನ್ನುವ ದುರ್ಬಲ ಮೂಳೆಗಳನ್ನು ಹೊಂದಿರುವ ಕನ್ನಡ ಶಾಲೆಗಳ ನಿಟ್ಟುಸಿರಿನ ನಡುವೆ ನಡೆಯುವ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಸಂಭ್ರಮದ ಭಾಗವಾಗಲಾರೆ ಎನ್ನುವ ನಿಲುವು ತಾಳಿರುವ ಮಹಾದೇವ, ತಮ್ಮ ಊರುಕೇರಿಗೆ ಸಮೀಪದಲ್ಲೇ ಸಾಹಿತ್ಯ ಸಮ್ಮೇಳನವೊಂದು ನಡೆಯುತ್ತಿರುವ ಸಂದರ್ಭದಲ್ಲಿ ವೈಕಂ ಪ್ರಶಸ್ತಿಯನ್ನು ಸ್ವೀಕರಿಸಿದ್ದಾರೆ. ದೇವರು ಧರ್ಮದ ಹೆಸರಿನಲ್ಲಿ ಈಗಲೂ ಅಸ್ಪೃಶ್ಯತೆ ಆಚರಣೆಯಲ್ಲಿರುವ ಪ್ರಕರಣಗಳು ವರದಿಯಾಗುತ್ತಿರುವಾಗ, ದೇವನೂರರು ವೈಕಂ ಪ್ರಶಸ್ತಿಯನ್ನು ಸ್ವೀಕರಿಸಿರುವುದು ಕೆಲವರಿಗೆ ದ್ವಂದ್ವವಾಗಿ ಕಾಣಬಹುದು. ಆದರೆ, ಸಾಹಿತ್ಯ ಸಮ್ಮೇಳನ ಅಥವಾ ನೃಪತುಂಗ ಪ್ರಶಸ್ತಿಯ ಕೇಂದ್ರದಲ್ಲಿರುವ ಜಾತ್ರೆಯ ಸಂಭ್ರಮ 'ವೈಕಂ ಪ್ರಶಸ್ತಿ'ಯಲ್ಲಿಲ್ಲ. ಈ ಪ್ರಶಸ್ತಿಯ ಎದೆಯಲ್ಲಿರುವುದು ಸಮಸಮಾಜದ ಹಂಬಲ ಹಾಗೂ ಅದು ಪೂರ್ಣರೂಪದಲ್ಲಿ ಸಾಧ್ಯವಾಗದಿರುವುದರ ಕುರಿತ ಗಾಢ ವಿಷಾದ. ಅರಿವು ಮತ್ತು ವಿಷಾದವೇ ಮುಖ್ಯವಾದ ಪ್ರಶಸ್ತಿಯ ಜೊತೆಯಲ್ಲಿ ಕಾಣಿಸಿಕೊಳ್ಳುವ ಸಂಭ್ರಮ ಕೇವಲ ಅನುಷಂಗಿಕವಷ್ಟೇ.

ನೂರು ವರ್ಷಗಳ ಹಿಂದೆ, ಕೇರಳದಲ್ಲಿ ನಡೆದ ವೈಕಂ ಸತ್ಯಾಗ್ರಹ ಕೊನೆಗೊಂಡಾಗ 'ಸತ್ಯಾಗ್ರಹ ಆಶ್ರಮ' ಬಿಡುಗಡೆ ಮಾಡಿದ ಪ್ರಕಟಣೆಯಲ್ಲಿನ ಒಂದು ಮಾತು ಹೀಗಿದೆ: 'ರಸ್ತೆಯನ್ನು ಪ್ರವೇಶಿಸುವ ಸ್ವಾತಂತ್ರ್ಯವಷ್ಟೇ ದೊರೆತಿದೆ, ಅಸ್ಪೃಶ್ಯತೆ ಹಾಗೆಯೇ ಮುಂದುವರೆದಿದೆ'. ಈ ಮಾತಿನಲ್ಲಿ ಹೆಚ್ಚೇನೂ ಬದಲಾವಣೆ ಆಗದಿರುವುದಕ್ಕೆ ವರ್ತಮಾನ ಪ್ರತಿದಿನವೂ ಉದಾಹರಣೆಗಳನ್ನು ಒದಗಿಸುತ್ತಿದೆ. ಅಂಥದೊಂದು ಹೊಸ ಉದಾಹರಣೆ, ಅಂಬೇಡ್ಕರ್ ಜಪದ ಬದಲು ದೇವರನ್ನಾದರೂ ಜಪಿಸಿದರೆ ಸ್ವರ್ಗ ದೊರೆಯುತ್ತದೆನ್ನುವ ಕೇಂದ್ರ ಗೃಹ ಸಚಿವ ಅಮಿತಾ ಶಾ ಅವರ ಮಾತು. ಅಂಬೇಡ್ಕರ್ ಜಪವನ್ನು ವಿಡಂಬನೆಯಂತೆ ಕಾಣುವ ಮನಃಸ್ಥಿತಿಯೇ 'ವೈಕಂ'ಮಾರ್ಗ ನಿರಂತರವಾದುದು ಎನ್ನುವುದರ ಸೂಚನೆಯಂತಿದೆ.

ಚುರುಮುರಿ



ಒನ್ ಫ್ಯಾಮಿಲಿ ಒನ್ ಪಾರ್ಟಿ!

● ಗುರು ಪಿ.ಎಸ್.

'ರೀ... ಮುಂದಿನ ವಾರ ಏನಿದೆ ಗೊತ್ತಾ?' ಕೇಳಿದಳು ಹೆಂಡತಿ.

'ಏನು' ಎಂದೆ ಗಂಭೀರವಾಗಿ.

'ಮುಂದಿನ ವಾರ ನಮ್ ಮದುವೆ ಆ್ಯನಿವರ್ಸರಿ, ಮುಂದಿನ ತಿಂಗಳ ಮೊದಲನೇ ವಾರದಲ್ಲಿ ದೊಡ್ಡ ಮಗಳು, ಎರಡನೇ ವಾರದಲ್ಲಿ ಸಣ್ಣ ಮಗಳ ಬರ್ತ್‌ಡೇ' ವರದಿ ಒಪ್ಪಿಸಿದಳು.

ಏನೂ ಮಾತನಾಡದೆ ನ್ಯೂಸ್‌ಪೇಪರ್ ಓದುವುದರಲ್ಲಿ ಮಗ್ನನಾದೆ.

'ಇನ್ನೆರಡೇ ತಿಂಗಳಲ್ಲಿ ನಿಮ್ ಬರ್ತ್‌ಡೇನೂ ಬಂದ್‌ಬಿಡುತ್ತೆ ರೀ...' ಹೆಂಡತಿಯ ಮಾತು ಮುಂದುವರಿದೇ ಇತ್ತು.

'ನೋಡಿಲ್ಲಿ, ಕೇಂದ್ರ ಸರ್ಕಾರ 'ಒನ್ ನೇಷನ್, ಒನ್ ಎಲೆಕ್ಷನ್' ಮಸೂದೆ ಮಂಡಿಸಿದೆ'.

'ನಾನೇನೋ ಹೇಳ್ತಿದ್ರೆ ನೀವೇನೋ ಹೇಳ್ತೀರಲ್ರೀ'.

'ಈ ಸುದ್ದಿ ಓದಿ, ನನಗೂ ಒಂದು ಐಡಿಯಾ ಬಂತು'.

'ಏನದು?'

'ಒಬ್ಬೊಬ್ಬರ ಬರ್ತ್‌ಡೇಗೆ ಒಮ್ಮೊಮ್ಮೆ ಹೊಸ ಬಟ್ಟೆ ತರೋದು, ಕೇಕ್ ಕಟ್ ಮಾಡೋದು, ಪದೇ ಪದೇ ಪಾರ್ಟಿ ಮಾಡೋದಕ್ಕಿಂತ 'ಒನ್ ಫ್ಯಾಮಿಲಿ, ಒನ್ ಪಾರ್ಟಿ' ನಿಯಮ ಜಾರಿಗೆ ತಂದರೆ ಹೆಂಗೆ?' ಎನ್ನುತ್ತಾ ಉತ್ಸಾಹದಲ್ಲಿ ಎಲ್ಲರ ಮುಖ ನೋಡಿದೆ.

ನನ್ನ ಯೋಚನೆಗೆ ಯಾರಿಂದಲೂ ಮೆಚ್ಚುಗೆ ವ್ಯಕ್ತವಾಗಲಿಲ್ಲ, ಸಿಟ್ಟಿನಲ್ಲಿ ಮುಖ ನೋಡಿದರು ಮಕ್ಕಳು!

'ಸರಿಯಾಗಿ ಅಭಿವೃದ್ಧಿ ಕೆಲಸ ಅಂತೂ ಮಾಡಲ್ಲ. ನೀವು ದುಡ್ಡು ಬಿಚ್ಚೋದೇ ಎಲೆಕ್ಷನ್ ಟೈಮ್‌ನಲ್ಲಿ. ಅದಕ್ಕೆ, ಆಗಾಗ ಚುನಾವಣೆ ನಡೀತಿದ್ರೆ ನಮ್ಮಂಥ ಕಾರ್ಯಕರ್ತರು ನಾಲ್ಕು ಕಾಸು ಮಾಡ್ಕೋತಾರೆ, ನೀವು ಅದಕ್ಕೂ ಕಲ್ಲು ಹಾಕಿದರೆ ಹೇಗೆ?' ಫಂಕ್ಷನ್ ಹೆಸರಲ್ಲಿ ಅಷ್ಟಿಷ್ಟು ದುಡ್ಡು ಉಳಿಸಿಕೊಳ್ಳುತ್ತಿದ್ದ ಹೆಂಡತಿಯೂ ನಗುತ್ತಲೇ ತಿವಿದಳು.

'ವರ್ಷಕ್ಕೆ ಐದೈದು ಪಾರ್ಟಿ ಮಾಡಬೇಕೆಂದರೆ ಮತ್ತೊಂದು ಕಾನೂನು ಬರಬೇಕಷ್ಟೇ?'

'ಯಾವ ಕಾನೂನು ರೀ?'

'ಸೇಮ್ ಪ್ರೈವೇಟ್ ಜಾಬ್‌ಗೆ, ಸೇಮ್ ಸರ್ಕಾರಿ ಸ್ಯಾಲರಿ'.

ಸಂಗತ

ಖುಷಿಯ ಮಾರುಕಟ್ಟೆಯಲ್ಲಿ ನಕಲಿ ಮಾಲು!

ಖುಷಿ ಅನ್ನುವುದು ನಾವು ಅನುಭವಿಸಬೇಕಾದದ್ದೇ ವಿನಾ ಬೇರೆಯವರಿಗೆ ತೋರಿಸಬೇಕಾದಂತಹ ಸಂಗತಿಯಲ್ಲ

● ಸದಾಶಿವ್ ಸೊರಟೂರು

'ಜನ ಸಾಮಾಜಿಕ ಜಾಲತಾಣದಲ್ಲಿ ತೋರಿಸಿಕೊಳ್ಳುವಷ್ಟು ಖುಷಿಯಾಗೇನೂ ಇಲ್ಲ. ಆದರೆ ತಾವು ಹೆಚ್ಚು ಖುಷಿಯಾಗಿದ್ದೇವೆ, ಅದರಲ್ಲೂ ಇತರರಿಗಿಂತ ಈ ವಿಚಾರದಲ್ಲಿ ಒಂದಷ್ಟು ಹೆಚ್ಚೇ ಮುಂದಿದ್ದೇವೆ ಎಂದು ನಟಿಸಲು ಆರಂಭಿಸಿದ್ದಾರೆ. ಕ್ರಮೇಣ ಅದೊಂದು ಗೀಳೇ ಆಗಿಬಿಡುತ್ತಿದೆ' ಎಂದು ಮನೋವೈದ್ಯರೊಬ್ಬರು ಮೊನ್ನೆ ಮಾತಿಗೆ ಸಿಕ್ಕಾಗ ಹೇಳಿದರು.

ನಮ್ಮ ಪರಿಚಿತ ವಲಯದಲ್ಲಿ ನಡೆದ ಪ್ರಕರಣ ಇದು. ಆಕೆ ಓದಿಕೊಂಡ ಗೃಹಿಣಿ. ಸರ್ಕಾರಿ ಕೆಲಸಕ್ಕಾಗಿ ಬಹಳ ಪ್ರಯತ್ನ ನಡೆಸಿ ವಿಫಲರಾದವರು. ಈಗಲೂ ಆ ಕೆಲಸಕ್ಕಾಗಿ ಯತ್ನಿಸುತ್ತಲೇ ಇದ್ದಾರೆ. ಈ ಬಗ್ಗೆ ಅವರಲ್ಲಿ ಬಹಳಷ್ಟು ಬೇಸರ ಇದೆ. ಆದರೆ ಇತ್ತೀಚೆಗೆ ಅವರು ಫೇಸ್‌ಬುಕ್‌ನಲ್ಲಿ 'ನಾನು ಕೆಲಸಕ್ಕಾಗಿ ಓದಲಿಲ್ಲ. ನನಗೆ ಗೃಹಿಣಿತನ ಇಷ್ಟ. ಅಡುಗೆ ಇಷ್ಟ. ಕೆಲಸಕ್ಕೆ ಹೋಗುವವರನ್ನು ನೋಡಿ ಪಾಪ ಅನಿಸುತ್ತದೆ. ಅವರು ಅಸಂತುಷ್ಟರು. ನಾವು ಗೃಹಿಣಿಯರು ಸುಖಿಗಳು...' ಎಂದೆಲ್ಲ ಪದೇ ಪದೇ ಬರೆದುಕೊಳ್ಳುತ್ತಿರುತ್ತಾರೆ. ತಾನು ಎಲ್ಲರಿಗಿಂತ ಖುಷಿಯಾಗಿದ್ದೇನೆ ಎಂದು ತೋರಿಸಿಕೊಳ್ಳುವ ಹಂಬಲ ಅದು. ಆದರೆ ಅದರ ಅಸಲಿಯತ್ತು ಬೇರೆಯದೇ ಇದೆ ಅಲ್ಲವೇ?

ಜನ ಎಷ್ಟರಮಟ್ಟಿಗೆ ಖುಷಿಯಾಗಿದ್ದಾರೆ ಎಂಬುದನ್ನು ತಿಳಿಸುವ ಇತ್ತೀಚಿನ ಸಂತೋಷ ಸೂಚ್ಯಂಕದ ವರದಿಯ ಪ್ರಕಾರ, ಭಾರತ 143 ದೇಶಗಳ ಪಟ್ಟಿಯಲ್ಲಿ 126ನೇ ಸ್ಥಾನದಲ್ಲಿದೆ. ಆದರೆ ನಾವು ವಾಟ್ಸ್‌ಆ್ಯಪ್, ಫೇಸ್‌ಬುಕ್, ಇನ್‌ಸ್ಟಾಗ್ರಾಂ ಸ್ಟೇಟಸ್‌ಗಳನ್ನು ನೋಡುತ್ತಿದ್ದರೆ, ನಾವೆಲ್ಲಾ ಸುಖಿಗಳ ಪಟ್ಟಿಯಲ್ಲಿ ಮೊದಲ ಸ್ಥಾನವನ್ನೂ ಮೀರಿ ಬೆಳೆದು ನಿಂತಿದ್ದೇವೆಯೇನೊ ಅನ್ನಿಸುತ್ತದೆ.

ಅಂಗಡಿಯಲ್ಲಿ ಎಲ್ಲರಿಗೂ ಕಾಣಿಸುವಂತೆ ಗಾಜಿನ ಡಬ್ಬಿಯಲ್ಲಿ ತಿನಿಸು ಇಡುವುದು ಮತ್ತು ಸಾಮಾಜಿಕ ಜಾಲತಾಣಗಳ ಸ್ಟೇಟಸ್‌ನಲ್ಲಿ ನಮ್ಮ ಖುಷಿಯನ್ನು ತೆರೆದಿಡುವುದು ಒಂದೇ ಅನಿಸುತ್ತದೆ. ಅಂಗಡಿಯವನಿಗೆ ಅದು ಮಾರುಕಟ್ಟೆ. ಹಾಗಿದ್ದರೆ ನಮ್ಮ ಖುಷಿಯೂ ಒಂದು ವ್ಯವಹಾರವೇ? ಅದು ಲೈಕು, ಕಮೆಂಟು ಗಳಿಸುವ ಮಾರುಕಟ್ಟೆಯೇ? ಖುಷಿ ಅನ್ನುವುದು ನಾವು ಅನುಭವಿಸಬೇಕಾದದ್ದೇ ವಿನಾ ಬೇರೆಯವರಿಗೆ ತೋರಿಸಬೇಕಾದಂತಹ ಸಂಗತಿಯಲ್ಲ. ತೀರಾ ಆತ್ಮೀಯರ ಬಳಿ ಬಿಚ್ಚಿಕೊಳ್ಳಬಹುದಷ್ಟೆ. ಅಸಲಿ ಖುಷಿಯು ಸಾಮಾನ್ಯವಾಗಿ ನಾವು ಹೇಳದೆಯೂ ಮತ್ತೊಬ್ಬರನ್ನು ತಟ್ಟುತ್ತದೆ. ಸುಳ್ಳು ಖುಷಿ ಮಾತ್ರ ಪ್ರಚಾರ ಬಯಸುತ್ತದೆ.

ಇದೀಗ ಅದು ಎಷ್ಟರಮಟ್ಟಿಗೆ ಬೆಳೆದಿದೆ ಅಂದರೆ, ನಾವು ಬದುಕುತ್ತಿರುವ ಬದುಕೇ ಸುಳ್ಳು, ಸಾಮಾಜಿಕ ಜಾಲತಾಣದಲ್ಲಿ ನಾವು ತೋರಿಸಿಕೊಳ್ಳುತ್ತಿರುವ ಬದುಕೇ ಅಸಲಿ ಎಂದು ಬಹುತೇಕರಿಗೆ ಅನ್ನಿಸಲು ಶುರುವಾಗಿದೆ. ನಾವು ತೋರ್ಪಡಿಕೆಯ ಗೀಳಿಗೆ ಬಿದ್ದು, ನಮ್ಮಲ್ಲಿರುವ ಅಷ್ಟೋ ಇಷ್ಟೋ ಖುಷಿಯನ್ನೂ ಕಳೆದುಕೊಂಡು ನಟಿಸಲು ಶುರು ಮಾಡಿದ್ದೇವೆಯೇನೋ ಎಂಬ ಅನುಮಾನ ಮೂಡುತ್ತದೆ.

ರಾತ್ರಿ ಅನ್ನಕ್ಕೆ ಪುಳಿಯೋಗರೆ ಗೊಜ್ಜು ಬೆರೆಸಿಕೊಂಡು ತಿಂದು, ಹೋಟೆಲ್‌ನಿಂದ ಎಂದೋ ತರಿಸಿದ್ದ ದೋಸೆಯ ಫೋಟೊವನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕಿ 'ನಮ್ಮ ಮನೆಯ ಇಂದಿನ ತಿಂಡಿ' ಎಂದು ಬರೆದುಕೊಂಡ ಪೋಸ್ಟ್‌ಗಳು, ನಾಯಿಯನ್ನು ನೆಪವಾಗಿಟ್ಟು ದೊಡ್ಡ ಮನೆಯ ಅದ್ದೂರಿತನವನ್ನು ಫೋಟೊದಲ್ಲಿ ಸೆರೆಹಿಡಿದು ಪೋಸ್ಟ್ ಹಾಕಿ, ಮನೆಕಟ್ಟಲು ಮಾಡಿದ ಸಾಲದ ಇಎಂಐನ ಒತ್ತಡಕ್ಕೆ ರಾತ್ರಿಯೆಲ್ಲಾ ನಿದ್ದೆ ಕಳೆದುಕೊಂಡವರೂ ಇದ್ದಾರೆ.

ಇದು ಇವರೆಲ್ಲಾ ಉದ್ದೇಶಪೂರ್ವಕವಾಗಿ ಮಾಡಿದ್ದಲ್ಲ. ಅವರೊಳಗೆ ಯಾವುದೋ ಕೀಳರಿಮೆಯೊಂದು ತಾಂಡವವಾಡುತ್ತಿರುತ್ತದೆ. ದಿನವೂ ಬೇರೆಯವರ ಪೋಸ್ಟ್‌ಗಳನ್ನು ನೋಡಿ 'ಇವರ ಮುಂದೆ ನಾನೇನೂ ಅಲ್ಲ. ನನ್ನದು ಬದುಕೇ ಅಲ್ಲ' ಎಂಬಂತಹ ಒತ್ತಡಕ್ಕೆ ಮನುಷ್ಯ ಒಳಗಾಗುತ್ತಿದ್ದಾನೆ. ಅಂತಹ ಒತ್ತಡಗಳು ಅವನನ್ನು ಅಸಹಜ ಎನಿಸುವಂತಹ ಈ ನಡೆಗಳಿಗೆ ಕಾರಣವಾಗಿಸುತ್ತವೆ. ಬೇರೆಯವರಿಗಿಂತ ತಾನು ತುಂಬಾ ಖುಷಿಯಾಗಿದ್ದೇನೆ, ಸುಖವಾಗಿದ್ದೇನೆ, ಅದ್ಭುತವಾಗಿ ಬದುಕುತ್ತಿದ್ದೇನೆ ಎಂದೆಲ್ಲ ಸಾಮಾಜಿಕ ಜಾಲತಾಣದ ಮೂಲಕ ಪದೇ ಪದೇ ಸಾಬೀತುಪಡಿಸಿಕೊಳ್ಳಬೇಕಾದ ವಿಚಿತ್ರ ಒತ್ತಡದಲ್ಲಿ ಮನುಷ್ಯ ಬಳಲುತ್ತಿದ್ದಾನೆ. ಇಂತಹ ವರ್ತನೆಗಳು ಅವನ ಗಂಭೀರ ಮಾನಸಿಕ ಸಮಸ್ಯೆಗಳಿಗೆ ಕಾರಣವಾಗುತ್ತವೆ ಎನ್ನುತ್ತಾರೆ ತಜ್ಞರು.



ಇನ್‌ಸ್ಟಾಗ್ರಾಮಿನಲ್ಲಿ ನಿತ್ಯವೂ ಚೆಂದದ ಹುಡುಗಿಯರ ಫೋಟೊ ನೋಡುತ್ತಿದ್ದ ಹುಡುಗಿಯೊಬ್ಬಳು, ತಾನು ಅವರಂತೆ ಚೆನ್ನಾಗಿಲ್ಲ ಎಂದುಕೊಂಡು ಖಿನ್ನತೆಗೆ ಜಾರಿ ಆತ್ಮಹತ್ಯೆಯ ದಾರಿ ಹಿಡಿದಿದ್ದಳು. ಇಂತಹ ಉದಾಹರಣೆಗಳು ನೂರಾರು ಎನ್ನುತ್ತಾರೆ ಮನೋವೈದ್ಯರೊಬ್ಬರು.

ಪದೇ ಪದೇ ಪ್ರಚಾರಕ್ಕೆ, ತೋರ್ಪಡಿಕೆಗೆ ಒಳಗಾಗುವುದು ಒಂದು ಮೋಹ. ಮೋಹ ಮುಸುಕಿದ ಬುದ್ಧಿ ಸರ್ವನಾಶದ ಸಿದ್ಧಿ ಅನ್ನುತ್ತಾರೆ ಸು.ರಂ.ಎಕ್ಕುಂಡಿ. ಎಲ್ಲರನ್ನೂ ಮೆಚ್ಚಿಸಲು ಹೊರಟವನು ಯಾರನ್ನೂ ಮೆಚ್ಚಿಸಲಾರ. ನಾವು ಬದುಕುವುದು ಯಾರಿಗಾಗಿಯೋ ಅಲ್ಲ, ನಮಗಾಗಿ. ಸಾಮಾಜಿಕ ಜಾಲತಾಣ ಇರುವುದು ನಾವು ಆಚೆಯ ಜಗತ್ತನ್ನು ಇಣುಕಿ ನೋಡಲು. ನಮ್ಮ ಮನೆಯನ್ನೇ ತೆರೆದು ಅಂಗಳದಲ್ಲಿ ಇಡಲು ಅಲ್ಲ. ಯಾವುದೂ ಅತಿಯಾಗಬಾರದು. ಬದುಕಿನ ಖಾಸಗಿತನದಲ್ಲಿ ನೆಮ್ಮದಿ ಇದೆ. ಇದು ನಮ್ಮ ಹಿರೀಕರು ಕಂಡುಕೊಂಡಿದ್ದ ನೆಮ್ಮದಿ. ಈಗ ನಮಗೊಂದು ಖಾಸಗಿತನ ಇಲ್ಲವಾಗಿರುವುದೇ ಈ ಕಾಲದ ದುರ್ದೈವ.

ನಾವು ನಮ್ಮ ಖುಷಿಯನ್ನು ಇನ್ನೊಬ್ಬರಲ್ಲಿ ಹುಡುಕಿಕೊಳ್ಳಲು ನೋಡುತ್ತೇವೆ. ಆದರೆ ಅದು ನಮ್ಮೊಳಗಿರುತ್ತದೆ. ನಾವು ಸುಖಿಗಳಂತೆ ಕಾಣುವ ದೊಡ್ಡ ದುಃಖಿಗಳು. ಬದುಕು ಇರುವುದು ಬದುಕುವುದಕ್ಕೇ ವಿನಾ ಪ್ರದರ್ಶನಕ್ಕೆ ಇಡಲು ಅಲ್ಲ ಎಂಬುದನ್ನು ನಾವು ಮರೆಯಬಾರದು.

ವಾಚಕರ ವಾಣಿ

ಓಬಿರಾಯನ ಕಾಲದ ದೂರವಾಣಿ ಭತ್ಯೆ!

ಬೆಳಗಾವಿಯಲ್ಲಿ ನಡೆಯುತ್ತಿರುವ ವಿಧಾನಮಂಡಲದ ಚಳಿಗಾಲದ ಅಧಿವೇಶನದಲ್ಲಿ, ಶಾಸಕರ ವೇತನ– ಭತ್ಯೆ ಹೆಚ್ಚಿಸಿಕೊಳ್ಳುವುದರ ಕುರಿತು ಪಕ್ಷಭೇದ ಮರೆತು ಒಮ್ಮತದ ಅಭಿಪ್ರಾಯ ಮೂಡಿರುವುದರಲ್ಲಿ ವಿಶೇಷವೇನೂ ಇಲ್ಲ. ಏಕೆಂದರೆ ಈ ವಿಷಯವಾಗಿ ಸದನದಲ್ಲಿ ಎಲ್ಲರೂ ಒಂದಾಗುವುದು ಹಳೆಯ ವಿಷಯ.

ಆದರೆ ಪ್ರತಿ ಶಾಸಕರಿಗೆ ಮಾಸಿಕ ₹ 20,000 ದೂರವಾಣಿ ಭತ್ಯೆ ನೀಡುತ್ತಿರುವುದು ಗಮನಾರ್ಹ! ಈಗಿನ ಡಿಜಿಟಲ್ ಮತ್ತು ಮೊಬೈಲ್ ಕ್ರಾಂತಿಯ ದಿನಗಳಲ್ಲಿ ದೇಶದಲ್ಲಿ ಇರುವ ಪ್ರತಿ ಮೊಬೈಲ್ ಕಂಪನಿಯೂ ಅನಿಯಮಿತವಾದ ಕರೆ ಸೌಲಭ್ಯವನ್ನು ವರ್ಷಕ್ಕೆ ಕೆಲವೇ ಸಾವಿರ ರೂಪಾಯಿಗಳಿಗೆ ಒದಗಿಸುತ್ತಿದೆ. ಹೀಗಿರುವಾಗ, ಇನ್ನೂ ಓಬಿರಾಯನ ಕಾಲದ ದೂರವಾಣಿ ವೆಚ್ಚದ ಲೆಕ್ಕದಲ್ಲೇ ಶಾಸಕರಿಗೆ ಭತ್ಯೆಯನ್ನು ನೀಡುವುದು ಎಷ್ಟು ಸರಿ?

ರಮೇಶ್ ಗೌಡ, ಬೆಳಗಾವಿ

ಕಾಯ್ದೆ ಜಾರಿಗೆ ಮುನ್ನ...

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಸಮುದಾಯ ಪ್ರಾಣಿಗಳ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ನಿರ್ಧರಿಸಿರುವುದಾಗಿ ವರದಿಯಾಗಿದೆ (ಪ್ರ.ವಾ., ಡಿ. 18). ಸಾಮಾನ್ಯವಾಗಿ ಎಲ್ಲರೂ ಪ್ರಾಣಿಪ್ರಿಯರೇ. ಆದರೆ ಬೀದಿನಾಯಿಗಳು ಮತ್ತು ಸಾಕುನಾಯಿಗಳಿಂದ ಆಗುವ ತೊಂದರೆಗಳನ್ನು ಕೂಡ ಗಮನದಲ್ಲಿ ಇಟ್ಟುಕೊಳ್ಳಬೇಕು. ಕೆಲವು ಕಡೆ ಪೊಲೀಸರ ಹಾಗೆ ಅವು ಬೀದಿಯ ಕಾವಲು ಕಾಯುತ್ತವೆ. ಹಾಗೆಯೇ, ಕೆಲವು ನಾಯಿಗಳ ಗುಂಪು ಅತಿರೇಕದಿಂದ ವರ್ತಿಸಿ ಮಕ್ಕಳು ಮತ್ತು ವಯಸ್ಸಾದವರ ಮೇಲೆ ದಾಳಿ ಮಾಡುವುದೂ ಇದೆ.

ಅಪಾರ್ಟ್‌ಮೆಂಟ್‌ಗಳಲ್ಲಿ ನಾಯಿಗಳು ಬೊಗಳಿದರೆ ಆ ಕಟ್ಟಡದ ಎಲ್ಲ ಮನೆಗಳಲ್ಲೂ ಶಬ್ದ ಪ್ರತಿಧ್ವನಿಸುತ್ತದೆ. ಚಿಕ್ಕ ಮಕ್ಕಳು, ವಯಸ್ಸಾದವರು ಮನೆಯಲ್ಲಿದ್ದರೆ ತೊಂದರೆ ಆಗುತ್ತದೆ. ರಾತ್ರಿ ಹೊತ್ತಾದರೆ ಎಲ್ಲರಿಗೂ ಸಮಸ್ಯೆ. ಬಾಯಿಗೆ ಕವಚ ಹಾಕದೆ ಹೊರಗೆ ತಿರುಗಾಡಿಸುವಾಗ ಯಾರಿಗಾದರೂ ಕಚ್ಚುವ ಸಾಧ್ಯತೆ ಇರುತ್ತದೆ. ಅಲ್ಲದೆ ನಾಯಿಗಳನ್ನು ರಸ್ತೆ ಮತ್ತು ಫುಟ್‌ಪಾತ್‌ಗಳಲ್ಲಿ ಮಲಮೂತ್ರ ವಿಸರ್ಜಿಸಲು ಕರೆದೊಯ್ಯುವವರೇ ಬಹಳ ಜನ. ಕೆಲವರು ಮಾತ್ರ ಸ್ವಚ್ಛಗೊಳಿಸುವ ಸಾಧನ ಮತ್ತು ನೀರಿನ ಬಾಟಲಿ ಹಿಡಿದು ಹೋಗುತ್ತಿರುತ್ತಾರೆ (ಕೆಲವು ದೇಶಗಳಲ್ಲಿ ಇದು ಕಡ್ಡಾಯ). ನಾಯಿಗಳಿಗೆ ಬೆಲ್ಟ್, ಮಾಸ್ಕ್ ಹಾಕುವುದನ್ನೂ ಕಡ್ಡಾಯ ಮಾಡಬೇಕು. ಇಂತಹ ಕೆಲವು ಸೂಕ್ಷ್ಮ ವಿಷಯಗಳನ್ನು ಗಮನಿಸದೆ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿ ಮಾಡಲು ಮುಂದಾಗುವುದು ಸರಿಯಲ್ಲ. ನಾಯಿ, ಬೆಕ್ಕಿನಂತಹ ಪ್ರಾಣಿಗಳನ್ನು ಸಾಕುವುದು ಸರ್ವೇಸಾಮಾನ್ಯ. ಆದರೆ ನಮ್ಮ ಪ್ರಾಣಿಪ್ರೀತಿ ಇತರರಿಗೆ ತೊಂದರೆಯಾಗದಂತೆ ಇರಬೇಕು.

ಅತ್ತಿಹಳ್ಳಿ ದೇವರಾಜ್, ಹಾಸನ

ಹಿಂದಿ ಹೇರಿಕೆ: ಜಾಗೃತಿ ಅಗತ್ಯ

ಹಿಂದಿ ಹೇರಿಕೆ ವಿರೋಧಿ ಕರ್ನಾಟಕ ಒಕ್ಕೂಟವು ಹಿಂದಿ ಹೇರಿಕೆ ವಿರುದ್ಧ ಜಾಗೃತಿ ಮೂಡಿಸಲು, ಮಂಡ್ಯದಲ್ಲಿ ನಡೆಯಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಒಂದು ಲಕ್ಷ ಕರಪತ್ರಗಳನ್ನು ಹಂಚಲು ಮುಂದಾಗಿರುವುದು (ಪ್ರ.ವಾ., ಡಿ. 18) ಶ್ಲಾಘನೀಯ. ರಾಜ್ಯದಲ್ಲಿ ಅದರಲ್ಲೂ ವಿಶೇಷವಾಗಿ ಬೆಂಗಳೂರಿನಲ್ಲಿ ಕನ್ನಡ ಕ್ರಮೇಣ ಮರೆಯಾಗುತ್ತಿದೆ. ಇಂತಹ ಸ್ಥಿತಿ ಬೇಸರ ತರಿಸುತ್ತದೆ. ಕೇಂದ್ರ ಸರ್ಕಾರವು ದಕ್ಷಿಣದ ರಾಜ್ಯಗಳ ಮೇಲೆ ಹಿಂದಿಯನ್ನು ಬಲವಂತವಾಗಿ ಹೇರುವ ಪ್ರಯತ್ನ ಮಾಡುತ್ತಲೇ ಇದೆ. ಆದರೆ, ನಮ್ಮ ಯಾವ ಸಂಸದರೂ ಇದನ್ನು ಪ್ರಶ್ನಿಸುತ್ತಿಲ್ಲ. ಈಗೀಗ ರಾಷ್ಟ್ರೀಕೃತ ಬ್ಯಾಂಕ್‌ಗಳು ಸಹ ಗ್ರಾಹಕರ ಮೊಬೈಲ್‌ಗಳಿಗೆ ಬ್ಯಾಂಕ್ ಪ್ರಕಟಣೆ ಪತ್ರ, ವಿಜ್ಞಾಪನೆಗಳನ್ನು ಹಿಂದಿಯಲ್ಲಿ ಕಳುಹಿಸುತ್ತಿವೆ. ಇಲ್ಲಿನ ಅನೇಕ ಗ್ರಾಹಕರಿಗೆ ಹಿಂದಿ ತಿಳಿಯದು. ಈ ರೀತಿಯ ಹಿಂದಿ ಹೇರಿಕೆ ವಿರುದ್ಧ ತೀವ್ರ ಹೋರಾಟ ನಡೆಯಬೇಕಾಗಿದೆ.

ಎಚ್‌.ವಿ.ಶ್ರೀಧರ್, ಬೆಂಗಳೂರು

ಸಾಹಿತ್ಯ ಸಮ್ಮೇಳನ: ಬದಲಾಗಲಿ ಪರಿಕಲ್ಪನೆ

ಮಂಡ್ಯದಲ್ಲಿ ನಡೆಯಲಿರುವ ಕನ್ನಡ ಸಾಹಿತ್ಯ ಸಮ್ಮೇಳನದ ಆಹ್ವಾನ ಪತ್ರಿಕೆಯನ್ನು ನೋಡಿದರೆ ಜುಗುಪ್ಸೆಯಾಗುತ್ತದೆ. ಅಲ್ಲಿ ಚರ್ಚೆಗೆ ಯೋಜಿಸಲಾಗಿರುವ ವಿಷಯಗಳೆಲ್ಲ ಅಪ್ರಸ್ತುತ ಮತ್ತು ಭವಿಷ್ಯದ ಕನ್ನಡ, ಕರ್ನಾಟಕವನ್ನು ಕಟ್ಟಲು ಯಾವ ಸ್ಪಂದನವನ್ನೂ ಉಂಟು ಮಾಡುವುದಿಲ್ಲ. ಶತಮಾನದ ಹಿಂದೆ ಬಿಎಂಶ್ರೀ ಅವರು ಕನ್ನಡವನ್ನು ಕಟ್ಟುವ ಕುರಿತು ಅರ್ಥಪೂರ್ಣವಾದ ಮಾತುಗಳನ್ನು ಹೇಳಿದ್ದರು. ಬೆಳೆಯುತ್ತಿರುವ ತಂತ್ರಜ್ಞಾನದ ಈ ಸಂದರ್ಭದಲ್ಲಿ ಕನ್ನಡ, ಕರ್ನಾಟಕವನ್ನು ಕಟ್ಟುವುದು ಹೇಗೆ, ಹೊಸ ಹೊಸ ಉದ್ಯೋಗಗಳನ್ನು ಸೃಷ್ಟಿಸುವುದು ಹೇಗೆ, ಜಾಗತಿಕ ಸಂದರ್ಭದಲ್ಲಿ ಕನ್ನಡದ ಪ್ರತಿಭೆಗಳು ಅನ್ಯ ದೇಶಗಳೊಂದಿಗೆ ತಾಂತ್ರಿಕ ಸಂಬಂಧವನ್ನು ಕುದುರಿಸಿಕೊಳ್ಳುವುದು ಹೇಗೆ, ಮೇಕ್– ಇನ್ ಕರ್ನಾಟಕ ಮಾಡಲು ಕನ್ನಡದ ಪ್ರತಿಭೆಗಳನ್ನು ಅಣಿಗೊಳಿಸುವುದು ಹೇಗೆ, ಬಹುಮುಖಿ ಕರ್ನಾಟಕ ಸಂಸ್ಕೃತಿಯ ಮೇಲೆ ಏಕಮುಖಿ ರಾಜಕೀಯ ಸಿದ್ಧಾಂತ ಹಾಗೂ ವ್ಯಾಪಾರ ಸಿದ್ಧಾಂತದಿಂದ ಆಗುವ ಪರಿಣಾಮಗಳೇನು, ವೈವಾಹಿಕ ಸಮಸ್ಯೆಗಳು, ವಧುವಿಗಾಗಿ ಪರದಾಡುತ್ತಿರುವ ಯುವಕರು, ಹೆಣ್ಣುಭ್ರೂಣ ಹತ್ಯೆ ಪ್ರಕರಣಗಳು, ನವರಾಜಕೀಯ ಸೈದ್ಧಾಂತಿಕ ಸಂಘರ್ಷ, ಹೊರದೇಶಗಳಲ್ಲಿರುವ ಕನ್ನಡ ಪ್ರತಿಭೆಗಳನ್ನು ನಮ್ಮ ಸ್ಥಳೀಯ ಪ್ರತಿಭೆಗಳ ತರಬೇತಿಗಾಗಿ ವೈಜ್ಞಾನಿಕ ರಾಯಭಾರಿಗಳನ್ನಾಗಿ ಕರೆಸಿಕೊಳ್ಳುವ ಬಗೆ ಹೇಗೆ... ಹೀಗೆ ಏನೆಲ್ಲಾ ಪ್ರಚಲಿತ ಸಮಸ್ಯೆಗಳು, ಸಂಗತಿಗಳಿವೆ.

ನಮ್ಮಲ್ಲಿ ಇರುವ ಜನಪದ ಸಾಹಿತ್ಯವು ಸಂಬಂಧವನ್ನು ಬೆಸೆಯುವಂತಹದ್ದು. ಆಧುನಿಕ ಸಂದರ್ಭದಲ್ಲಿ ಅದನ್ನು ಬಳಸಿಕೊಳ್ಳುವ ವಿವೇಚನೆಯ ಅಗತ್ಯವಿದೆ. ಇತ್ತೀಚೆಗೆ ಸಮೂಹ ಮಾಧ್ಯಮಗಳಿಂದ ಸೃಷ್ಟಿಯಾಗುತ್ತಿರುವ ಹೊಸ ಪ್ರಕಾರದ ಸಾಹಿತ್ಯದ ಬಗ್ಗೆ ನಾವು ಕಣ್ತೆರೆದಿಲ್ಲ. ಕನ್ನಡ ಸಾಹಿತ್ಯ ಪರಿಕಲ್ಪನೆಗೂ ಈಗ ನಡೆಯುತ್ತಿರುವ ಸಾಹಿತ್ಯ ಸಮ್ಮೇಳನಗಳ ಸ್ವರೂಪಕ್ಕೂ ಸಂಬಂಧವೇ ಇಲ್ಲದಂತಾಗಿದೆ. ಸಾಹಿತ್ಯ ಪರಿಷತ್ತು ಮರಿ ರಾಜಕಾರಣಿಗಳ ಉತ್ಪಾದಕ ಕೇಂದ್ರವಾಗಿದೆ ಎಂಬ ಆರೋಪ ಕೇಳಿಬಂದಿದೆ. ಸಮ್ಮೇಳನವನ್ನು ಉದ್ಘಾಟಿಸಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಎಲ್ಲ ಸಂಗತಿಗಳ ಬಗ್ಗೆ ಗಮನಹರಿಸಬೇಕು. ಸಾಹಿತ್ಯ ಪರಿಷತ್ತು ಸಾಹಿತ್ಯದ ಕೆಲಸ ಮಾಡಿಕೊಂಡು ಅತ್ತ ಇರಲಿ. ಇತ್ತ ಸರ್ಕಾರವು ಮೂರು ವರ್ಷಕ್ಕೊಮ್ಮೆ ಕರ್ನಾಟಕ ಸಾಂಸ್ಕೃತಿಕ ಸಮ್ಮೇಳನ ಯೋಜಿಸಬೇಕು. ಅಲ್ಲಿ ಏನೆಲ್ಲವನ್ನೂ ಚರ್ಚೆ ಮಾಡಬಹುದು, ಕರ್ನಾಟಕದ ಯಾವೆಲ್ಲ ಘನತೆವೆತ್ತ ಸಾಧಕರನ್ನು ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡಬಹುದು. ಆ ಮೂಲಕ ಭವಿಷ್ಯದ ಕರ್ನಾಟಕವನ್ನು ದರ್ಶಿಸಬಹುದು.

ಹಿ.ಶಿ.ರಾಮಚಂದ್ರೇಗೌಡ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ರಾಜ್ಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ 'ರಕ್ಷಣಾ ಘಟಕ'ವಾಗಿರುವ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯಕ್ಕೆ (ಡಿಸಿಆರ್‌ಇ) ವಿಶೇಷ ಪೊಲೀಸ್ ಠಾಣೆ ಮಾನ್ಯತೆ ನೀಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಇದುವರೆಗೂ ಸೀಮಿತ ಅಧಿಕಾರ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಡಿಸಿಆರ್‌ಇಗೆ ಹೊಸ ಆದೇಶದಿಂದ ಹೆಚ್ಚಿನ ಬಲ ಬಂದಿದೆ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಮೇಲೆ ನಡೆಯುತ್ತಿರುವ ದೌರ್ಜನ್ಯ ತಡೆಯಲು, ತಪ್ಪಿತಸ್ಥರಿಗೆ ಶಿಕ್ಷೆ ಆಗುವಂತೆ ಮಾಡಲು, ಅನ್ಯಾಯಕ್ಕೆ ಒಳಗಾದವರಿಗೆ ತ್ವರಿತವಾಗಿ ನ್ಯಾಯ ಕಲ್ಪಿಸುವ ನಿಟ್ಟಿನಲ್ಲಿ ಇದು ದಿಟ್ಟ ಹೆಜ್ಜೆ ಎಂದು ಹೇಳಲಾಗುತ್ತಿದೆ

ಎಸ್‌ಸಿ, ಎಸ್‌ಟಿ ದೌರ್ಜನ್ಯ ತಡೆ 'ಡಿಸಿಆರ್‌ಇ'ಗೆ ಹೆಚ್ಚು ಬಲ

ವಿಶೇಷ ಪೊಲೀಸ್ ಠಾಣೆ ಸ್ಥಾನಮಾನ; ಸ್ವತಂತ್ರವಾಗಿ ಎಫ್‌ಐಆರ್ ದಾಖಲಿಸುವ ಅಧಿಕಾರ

● ಆದಿತ್ಯ ಕೆ.ಎ.

ದಶಕಗಳ ಹೋರಾಟದ ಬಳಿಕ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯಕ್ಕೆ (ಡಿಸಿಆರ್‌ಇ) ವಿಶೇಷ ಪೊಲೀಸ್ ಠಾಣೆ ಮಾನ್ಯತೆ ಲಭಿಸಿದೆ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರ ಮೇಲೆ ನಡೆಯುವ ದೌರ್ಜನ್ಯ ಪ್ರಕರಣಗಳಲ್ಲಿ ಪರಿಣಾಮಕಾರಿ ಕ್ರಮ ಕೈಗೊಳ್ಳಲು ಡಿಸಿಆರ್‌ಇಗೆ ಬಲ ಸಿಕ್ಕಿದೆ.

ರಾಜ್ಯದಲ್ಲಿ ಅಸ್ತಿತ್ವದಲ್ಲಿದ್ದ 10 ಡಿಸಿಆರ್‌ಇ ಘಟಕಗಳು ಈವರೆಗೂ ಸೀಮಿತ ಅಧಿಕಾರ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು. ಇದೀಗ ಹೆಚ್ಚಿನ ಅಧಿಕಾರ ಲಭಿಸಿದ್ದು, ಬಲವರ್ಧನೆಗೊಂಡಿವೆ.

ಬೆಂಗಳೂರಿನಲ್ಲಿ ಎರಡು, ಪ್ರತಿ ಜಿಲ್ಲೆಗೆ ಒಂದರಂತೆ ಒಟ್ಟು 33 ವಿಶೇಷ ಪೊಲೀಸ್ ಠಾಣೆ ಸ್ಥಾಪಿಸಲು ರಾಜ್ಯ ಸರ್ಕಾರ ಆದೇಶಿಸಿದೆ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಮೇಲೆ ನಡೆಯುತ್ತಿರುವ ದೌರ್ಜನ್ಯ ತಡೆಯಲು, ತಪ್ಪಿತಸ್ಥರಿಗೆ ಶಿಕ್ಷೆ ಆಗುವಂತೆ ಮಾಡಲು, ಅನ್ಯಾಯಕ್ಕೆ ಒಳಗಾದವರಿಗೆ ತ್ವರಿತವಾಗಿ ನ್ಯಾಯ ಕಲ್ಪಿಸಲು ಮುಂದಾಗಿದೆ.

ಸರ್ಕಾರವು 2023ರಲ್ಲಿ ಡಿಸಿಆರ್‌ಇ ಘಟಕವನ್ನು ರಾಜ್ಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ 'ರಕ್ಷಣಾ ಘಟಕ'ವಾಗಿ ಘೋಷಣೆ ಮಾಡಿತ್ತು. ಕಳೆದ ಬಜೆಟ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ'ದ ರಕ್ಷಣಾ ಕೋಶವು ಪರಿಣಾಮಕಾರಿಯಾಗಿ ಕೆಲಸ ಮಾಡಲು ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಘೋಷಿಸಿದ್ದರು.

ಅದರಂತೆ ಅಸ್ಪೃಶ್ಯತಾ ನಿಷೇಧ ಕಾಯ್ದೆ–1955 ಹಾಗೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆ–1989ರ ಅಡಿಯಲ್ಲಿ ದಲಿತರ ಮೇಲೆ ನಡೆಯುವ ದೌರ್ಜನ್ಯ ಪ್ರಕರಣಗಳಲ್ಲಿ ವಿಶೇಷ ಪೊಲೀಸ್ ಠಾಣೆಗಳ ಮೂಲಕ ಆರೋಪಿಗಳ ವಿರುದ್ಧ ತ್ವರಿತವಾಗಿ ಕಾನೂನು ಕ್ರಮ ಕೈಗೊಳ್ಳಲು ಸರ್ಕಾರ ಮುಂದಾಗಿದೆ.


1974ರಲ್ಲಿ ಡಿಸಿಆರ್‌ಇ ಸ್ಥಾಪನೆ ಆಗಿದ್ದು, ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಗೆ ಬರುವ ಕೆಲವು ವಿಷಯಗಳಲ್ಲಿ ವಿಚಾರಣೆ ನಡೆಸಿ, ಸರ್ಕಾರಕ್ಕೆ ವರದಿ ಸಲ್ಲಿಸುವ ಅಧಿಕಾರ ಹೊಂದಿತ್ತು. ದೌರ್ಜನ್ಯಕ್ಕೆ ಒಳಗಾದ ಸಂತ್ರಸ್ತರು ಸ್ಥಳೀಯ ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲು ಮಾಡುತ್ತಿಲ್ಲವೆಂದು ಆರೋಪಿಸಿ ಡಿಸಿಆರ್‌ಇ ಘಟಕದ ಬಾಗಿಲು ತಟ್ಟುತ್ತಿದ್ದರು. ಆದರೆ, ಪೊಲೀಸ್ ಠಾಣೆ ಮಾನ್ಯತೆಯಿಲ್ಲದೇ ಕಾನೂನು ಪ್ರಕ್ರಿಯೆ ಕಾರ್ಯಗತ ಮಾಡುವುದು ಡಿಸಿಆರ್‌ಇ ಘಟಕಕ್ಕೆ ಅಸಾಧ್ಯವಾಗಿತ್ತು. ಅಧಿಕಾರಿಗಳು ಕೇವಲ ವಿಚಾರಣೆ ನಡೆಸಿ, ಕ್ರಮ ಜರುಗಿಸುವಂತೆ ಸ್ಥಳೀಯ ಠಾಣೆಗೆ ಶಿಫಾರಸು ಮಾಡಿ, ನೊಂದವರನ್ನು ಮತ್ತೆ ಸ್ಥಳೀಯ ಠಾಣೆಗಳಿಗೇ ಕಳುಹಿಸುತ್ತಿದ್ದರು.

ಸ್ಥಳೀಯ ಠಾಣೆಗಳಲ್ಲಿ ಇರುವ ಇತರ ಕೆಲಸಗಳ ಒತ್ತಡದಿಂದ ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಎಫ್‌ಐಆರ್ ದಾಖಲಾತಿ ಪ್ರಕ್ರಿಯೆ, ತನಿಖೆ, ದೋಷಾರೋಪ ಪಟ್ಟಿ ಸಲ್ಲಿಸುವುದು ವಿಳಂಬ ಆಗುತ್ತಿತ್ತು. ತನಿಖಾಧಿಕಾರಿಗಳು, ತನಿಖೆಯನ್ನು 60 ದಿನಗಳಲ್ಲಿ ಪೂರ್ಣಗೊಳಿಸಿ ಕೋರ್ಟ್‌ಗೆ ಆರೋಪ ಪಟ್ಟಿ ಸಲ್ಲಿಸಬೇಕಿತ್ತು. ಅದೂ ಸಾಧ್ಯವಾಗುತ್ತಿರಲಿಲ್ಲ.

'ಈಗ ಡಿಸಿಆರ್‌ಇ ಘಟಕಗಳಿಗೆ ವಿಶೇಷ ಠಾಣೆ ಮಾನ್ಯತೆ ಲಭಿಸಿರುವ ಕಾರಣ, ಎಫ್‌ಐಆರ್ ದಾಖಲಿಸುವ ಅಧಿಕಾರ ದತ್ತವಾಗಿದೆ. ತ್ವರಿತವಾಗಿ ತನಿಖೆ ನಡೆಸಿ, ವಿಶೇಷ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸುವುದಕ್ಕೂ ನೆರವಾಗಲಿದೆ' ಎಂದು ಅಧಿಕಾರಿಯೊಬ್ಬರು ಹೇಳಿದರು.

ಒಂದಂಕಿ ದಾಟದ ಶಿಕ್ಷೆ ಪ್ರಮಾಣ: ಛತ್ತೀಸಗಢ, ಮಧ್ಯಪ್ರದೇಶ, ಜಾರ್ಖಂಡ್ ಹಾಗೂ ಬಿಹಾರ ರಾಜ್ಯಗಳಲ್ಲಿ ಹಲವು ವರ್ಷಗಳ ಹಿಂದೆಯೇ ವಿಶೇಷ ಪೊಲೀಸ್ ಠಾಣೆ ಸ್ಥಾಪನೆ ಮಾಡಲಾಗಿದೆ. ಆ ರಾಜ್ಯಗಳಲ್ಲಿ ಶಿಕ್ಷೆ ಪ್ರಮಾಣವೂ ಹೆಚ್ಚಿದೆ. ಆದರೆ, ಕರ್ನಾಟಕದಲ್ಲಿ ಶಿಕ್ಷೆ ಪ್ರಮಾಣ ಒಂದಂಕಿ (ಶೇ 3.71) ದಾಟಿಲ್ಲ.

ಕೇಂದ್ರ ಸ್ಥಾನ ಬೆಂಗಳೂರು, ಪ್ರಾದೇಶಿಕ ಕೇಂದ್ರಗಳಾದ ಮೈಸೂರು, ದಾವಣಗೆರೆ, ಕಲಬುರಗಿ, ಮಂಗಳೂರು, ಬೆಳಗಾವಿ, ಕೋಲಾರ, ತುಮಕೂರು, ಬಾಗಲಕೋಟೆ, ವಿಜಯಪುರದಲ್ಲಿ ಡಿಸಿಆರ್‌ಇ ಘಟಕಗಳು ಕಾರ್ಯ ನಿರ್ವಹಣೆ ಮಾಡುತ್ತಿದ್ದರೂ ದೌರ್ಜನ್ಯಕ್ಕೆ ಒಳಗಾದವರು ನ್ಯಾಯಕ್ಕಾಗಿ ಅಲೆದಾಡುವ ಪರಿಸ್ಥಿತಿಯಿತ್ತು. ಇನ್ನು ಮುಂದೆ ಅದು ತಪ್ಪಲಿದೆ ಎಂಬುದು ಅಧಿಕಾರಿಗಳ ಹೇಳಿಕೆ.



ಆಧಾರ: ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ವಾರ್ಷಿಕ ವರದಿ

ಐತಿಹಾಸಿಕ ನಿರ್ಧಾರ



ರಾಜ್ಯ ಸರ್ಕಾರವು ಐತಿಹಾಸಿಕ ತೀರ್ಮಾನ ತೆಗೆದುಕೊಂಡಿದೆ. ಹಿಂದಿನ ಯಾವುದೇ ಸರ್ಕಾರಗಳಿಗೂ ಈ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗಿರಲಿಲ್ಲ. ಸ್ಥಳೀಯ ಪೊಲೀಸರು ಪರಿಣಾಮಕಾರಿಯಾಗಿ ಪ್ರಕರಣಗಳ ತನಿಖೆ ನಡೆಸದಿರುವ ಕಾರಣಕ್ಕೆ ಶಿಕ್ಷೆ ಪ್ರಮಾಣ ಕಡಿಮೆಯಿತ್ತು. ದಲಿತರ ಜಮೀನು ಕಬಳಿಸುವುದು, ಬೆಳೆ ನಾಶಪಡಿಸಲು ಬೇರೆಯವರಿಗೆ ಯಾವುದೇ ಹಕ್ಕಿಲ್ಲ. ಸಂವಿಧಾನ ನೀಡಿರುವ ನಾಗರಿಕರ ಹಕ್ಕುಗಳ ರಕ್ಷಣೆ ಆಗಬೇಕು, ಯೋಜನೆಗಳು ನಿಗದಿತ ಫಲಾನುಭವಿಗಳಿಗೇ ದೊರೆಯಬೇಕು ಎಂಬ ದಿಸೆಯಲ್ಲಿ ಕ್ರಮ ತೆಗೆದುಕೊಳ್ಳಲಾಗಿದೆ

ಡಾ.ಎಚ್.ಸಿ.ಮಹದೇವಪ್ಪ, ಸಮಾಜ ಕಲ್ಯಾಣ ಸಚಿವ


ನ್ಯಾಯೋಚಿತ ತನಿಖೆ



ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಜನರ ಮೇಲೆ ನಡೆಯುವ ದೌರ್ಜನ್ಯ ಪ್ರಕರಣಗಳಿಗೆ ಸಂಬಂಧಿಸಿದಂತೆ ನಿಗದಿತ ಅವಧಿಯಲ್ಲಿ ನ್ಯಾಯೋಚಿತವಾಗಿ ತನಿಖೆ ನಡೆಸಿ, ಸಂತ್ರಸ್ತರಿಗೆ ನ್ಯಾಯ ಒದಗಿಸಬೇಕಿದೆ. ಇದಕ್ಕಾಗಿ ವಿಶೇಷ ಪೊಲೀಸ್ ಠಾಣೆಗಳು ಕಾರ್ಯನಿರ್ವಹಿಸಲಿವೆ

ಜಿ.ಪರಮೇಶ್ವರ, ಗೃಹ ಸಚಿವ

ಬೇರೆ ರಾಜ್ಯಗಳಲ್ಲಿ ಅಧ್ಯಯನ



ರಾಜ್ಯದಲ್ಲೂ ಕಾನೂನನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವ ಉದ್ದೇಶದಿಂದ ಐದು ರಾಜ್ಯಗಳಿಗೆ ತಂಡ ತೆರಳಿ ಅಧ್ಯಯನ ನಡೆಸಿತ್ತು. ದಲಿತರ ಮೇಲಿನ ದೌರ್ಜನ್ಯ ತಡೆಗಟ್ಟುವಲ್ಲಿ ದೇಶದ ಇತರೆ ರಾಜ್ಯಗಳು ಹೇಗೆ ಕಾರ್ಯನಿರ್ವಹಣೆ ಮಾಡುತ್ತಿವೆ ಎಂಬ ವರದಿ ತಯಾರಿಸಿ, ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಪೊಲೀಸ್ ಠಾಣೆ ಸ್ಥಾನಮಾನದ ನಂತರ ಡಿಸಿಆರ್‌ಇ ಘಟಕವು ಸಾಮಾಜಿಕ ನ್ಯಾಯ ಒದಗಿಸುವಲ್ಲಿ ಬಲವಾದ ಸಂಸ್ಥೆಯಾಗಿ ಹೊರಹೊಮ್ಮಲಿದೆ

ಅರುಣ್ ಚಕ್ರವರ್ತಿ, ಎಡಿಜಿಪಿ–ಡಿಸಿಆರ್‌ಇ

450 ಹೊಸ ಹುದ್ದೆ


ವಿಶೇಷ ಪೊಲೀಸ್ ಠಾಣೆಗಳ ಕಾರ್ಯ ನಿರ್ವಹಣೆಗೆ ಡಿಸಿಆರ್‌ಇ ಘಟಕದಲ್ಲಿ ಹಾಲಿ ಇರುವ 340 ಹುದ್ದೆಗಳ ಜತೆಗೆ ಹೆಚ್ಚುವರಿಯಾಗಿ 450 ಹುದ್ದೆ ಸೃಜಿಸಲಾಗಿದೆ.

ಡಿಸಿಆರ್‌ಇ ಕರ್ತವ್ಯಗಳು

ಸಮಾಜ ಕಲ್ಯಾಣ ಇಲಾಖೆಯು 1974ರಲ್ಲಿ ಹೊರಡಿಸಿದ ಆದೇಶದ ಪ್ರಕಾರ ಡಿಸಿಆರ್‌ಇ ಘಟಕವು 14 ಅಂಶಗಳ ಬಗ್ಗೆ ವಿಚಾರಣೆ ನಡೆಸಿ, ವರದಿ ನೀಡುವ ಅಧಿಕಾರವನ್ನು ಹೊಂದಿದೆ. ಅದರಲ್ಲಿ ಪ್ರಮುಖವಾದವು:

- ಶೇ 18 ಮೀಸಲಾತಿ ಉಲ್ಲಂಘನೆ
- ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಜನರ ಕಲ್ಯಾಣಕ್ಕಾಗಿ ನೀಡಿದ ಅನುದಾನದ ದುರುಪಯೋಗ
- ಸರ್ಕಾರಿ ಭೂಮಿ ಮಂಜೂರು ಮಾಡುವ ಆದೇಶದ ಉಲ್ಲಂಘನೆ
- ದಲಿತರನ್ನು ಗೋಮಾಳ ಭೂಮಿಯಿಂದ ಕಾನೂನಿಗೆ ವಿರುದ್ಧವಾಗಿ ಒಕ್ಕಲೆಬ್ಬಿಸಿದ ಪ್ರಕರಣಗಳು
- ದಲಿತರಿಗೆ ನೀಡಲಾದ ಇನಾಮ್ ಜಮೀನು, ನಿವೇಶನಗಳನ್ನು ನಿಯಮ ಬಾಹಿರವಾಗಿ ಪರಭಾರೆ ಮಾಡಿದ ಪ್ರಕರಣ
- ಸುಳ್ಳು ಜಾತಿ ಪ್ರಮಾಣಪತ್ರ ಪಡೆದ ಪ್ರಕರಣಗಳು
- ಜೀತ ನಿರ್ಮೂಲನಾ ಪದ್ಧತಿ–1975ರ ಕಾಯ್ದೆ ಅಡಿಯಲ್ಲಿ ದಾಖಲಾದ ಪ್ರಕರಣಗಳು
- ಸಮಾಜ ಕಲ್ಯಾಣ ಇಲಾಖೆಯಲ್ಲಿ ಸರ್ಕಾರಿ ಅನುದಾನಿತ ವಸತಿನಿಲಯಗಳಲ್ಲಿ ಆಗುವ ಅನುದಾನದ ದುರುಪಯೋಗ
- ಎಸ್.ಸಿ/ಎಸ್.ಟಿ ಕಲ್ಯಾಣಕ್ಕೆ ಸಂಬಂಧಿಸಿದಂತೆ ಕಾನೂನು/ನಿಯಮಗಳ ಉಲ್ಲಂಘನೆ

10 ವರ್ಷಗಳಲ್ಲಿ ರಾಜ್ಯದಲ್ಲಿ ದಾಖಲಾದ ದೌರ್ಜನ್ಯ ಪ್ರಕರಣಗಳು



*ಎಸ್.ಸಿ/ಎಸ್.ಟಿ ಕಾಯ್ದೆ ಪ್ರಕರಣಗಳೂ ಸೇರಿ
ಆಧಾರ: ರಾಜ್ಯ ಅಪರಾಧ ದಾಖಲಾತಿ ವಿಭಾಗ

ಎಸ್.ಸಿ/ಎಸ್.ಟಿ (ದೌರ್ಜನ್ಯ ತಡೆ) ಕಾಯ್ದೆಯಡಿ 5 ವರ್ಷಗಳಲ್ಲಿ ದಾಖಲಾದ ಪ್ರಕರಣಗಳು, ತನಿಖೆ ಪ್ರಗತಿ ವಿವರ

ವರ್ಷ	ದಾಖಲಾದ ಪ್ರಕರಣ	60 ದಿನಗಳಲ್ಲಿ ತನಿಖೆ ಪೂರ್ಣ	60 ದಿನದ ನಂತರ ತನಿಖೆ ಪೂರ್ಣ	ತನಿಖೆ ಪ್ರಗತಿಯಲ್ಲಿ	6 ತಿಂಗಳಿಗೂ ಮೇಲ್ಪಟ್ಟು	9 ತಿಂಗಳಿಗೂ ಮೇಲ್ಪಟ್ಟು	1 ವರ್ಷಕ್ಕೂ ಮೇಲ್ಪಟ್ಟು
2018	1,751	1,376	370	5	0	0	5
2019	1,673	1,487	178	8	0	0	8
2020	1,607	1,495	97	15	0	0	15
2021	2,047	1,632	384	31	0	0	31
2022	2,120	1,355	521	344	173	69	102

ತನಿಖಾ ಅಧಿಕಾರ ವ್ಯಾಪ್ತಿ

- ಅಸ್ಪೃಶ್ಯತಾ ನಿಷೇಧ ಕಾಯ್ದೆ– 1955
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆ–1989
- ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಮತ್ತು ಇನ್ನಿತರೆ ಹಿಂದುಳಿದ ವರ್ಗಗಳ (ಮೀಸಲಾತಿ ಮತ್ತು ನೇಮಕಾತಿ) ಕಾಯ್ದೆ– 1990


ಚಿಕಿತ್ಸೆಗಾಗಿ ಅಮೆರಿಕಕ್ಕೆ ನಟ ಶಿವರಾಜ್‌ಕುಮಾರ್

ನಟ ಶಿವರಾಜ್‌ಕುಮಾರ್ ಹೆಚ್ಚಿನ ಚಿಕಿತ್ಸೆಗಾಗಿ ಬುಧವಾರ(ಡಿ.18) ರಾತ್ರಿ ಅಮೆರಿಕಕ್ಕೆ ತೆರಳಿದ್ದಾರೆ. ಡಿ.24ರಂದು ಅಲ್ಲಿನ ಮಯಾಮಿ ಕ್ಯಾನ್ಸರ್ ಇನ್‌ಸ್ಟಿಟ್ಯೂಟ್‌ನಲ್ಲಿ ಅವರು ಶಸ್ತ್ರಚಿಕಿತ್ಸೆಗೆ ಒಳಗಾಗಲಿದ್ದಾರೆ.

ಶಿವರಾಜ್‌ಕುಮಾರ್ ಅವರ ಜೊತೆಗೆ ಗೀತಾ ಶಿವರಾಜ್‌ಕುಮಾರ್ ಹಾಗೂ ನಿವೇದಿತಾ ಶಿವರಾಜ್‌ಕುಮಾರ್ ಅವರೂ ಅಮೆರಿಕಕ್ಕೆ ತೆರಳಿದ್ದಾರೆ. ಸಚಿವ ಮಧು ಬಂಗಾರಪ್ಪ ಅವರೂ ಕುಟುಂಬವನ್ನು ಸೇರಿಕೊಳ್ಳಲಿದ್ದಾರೆ. ವೈದ್ಯರಾದ ಮುರುಗೇಶನ್ ಮನೋಹರನ್ ಅವರು ಶಿವರಾಜ್‌ಕುಮಾರ್ ಅವರಿಗೆ ಶಸ್ತ್ರಚಿಕಿತ್ಸೆ ಮಾಡಲಿದ್ದಾರೆ.

ಬುಧವಾರ ಮುಂಜಾನೆ ನಟರಾದ ಸುದೀಪ್, ವಿನೋದ್ ರಾಜ್‌ಕುಮಾರ್, ಹಲವು ನಿರ್ಮಾಪಕರು ಭೇಟಿಯಾಗಿ ಶಿವರಾಜ್‌ಕುಮಾರ್ ಅವರ ಆರೋಗ್ಯ ವಿಚಾರಿಸಿದರು. ನೂರಾರು ಅಭಿಮಾನಿಗಳು ಬುಧವಾರ ಸಂಜೆ ಶಿವರಾಜ್‌ಕುಮಾರ್ ಅವರ ನಿವಾಸದ ಬಳಿ ಸೇರಿದ್ದರು. ಅಭಿಮಾನಿಗಳನ್ನು, ಕುಟುಂಬದ ಸದಸ್ಯರನ್ನು ನೋಡಿ ಶಿವರಾಜ್ ಕುಮಾರ್ ಒಂದು ಕ್ಷಣ ಭಾವುಕರಾದರು.

ಇದೇ ವೇಳೆ ಸುದ್ದಿಗಾರರ ಜೊತೆ ಮಾತನಾಡಿದ ಶಿವರಾಜ್‌ಕುಮಾರ್, 'ಇಲ್ಲಿದ್ದು ಕೊಂಡೇ ಪಡೆದ ಚಿಕಿತ್ಸೆಯ ವರದಿ ಸಕಾರಾತ್ಮಕವಾಗಿದೆ. ಆದರೂ ಆತಂಕ ಇದ್ದೇ ಇರುತ್ತದೆ. ಕುಟುಂಬಸ್ಥರನ್ನು, ಅಭಿಮಾನಿಗಳನ್ನು ನೋಡಿ ದುಃಖ ಉಮ್ಮಳಿಸಿತು ಅಷ್ಟೆ. ನಾನು ಬಹಳ ಭರವಸೆಯಿಂದ ಇದ್ದೇನೆ. ಡಿ.24ಕ್ಕೆ ಶಸ್ತ್ರಚಿಕಿತ್ಸೆ ನಡೆಯಲಿದೆ. ಐದು ವಾರಗಳ ಕಾಲ ನಾನು ಅಮೆರಿಕದಲ್ಲಿ ಇರಲಿದ್ದೇನೆ. ಎಲ್ಲರ ಆಶೀರ್ವಾದ ಇದೆ. ಜ.25ಕ್ಕೆ ಅಮೆರಿಕದಿಂದ ಹೊರಡಲಿದ್ದು, ಜ.26ಕ್ಕೆ ಬೆಂಗಳೂರಿಗೆ ಆಗಮಿಸಲಿದ್ದೇನೆ. ಈಗಲೇ ಎಲ್ಲರಿಗೂ ಹೊಸ ವರ್ಷದ ಶುಭಾಶಯಗಳು. ವರ್ಷಾಂತ್ಯಕ್ಕೆ ಬಿಡುಗಡೆಗೊಳ್ಳಲಿರುವ 'ಯುಐ' ಹಾಗೂ 'ಮ್ಯಾಕ್ಸ್' ಸಿನಿಮಾಗೆ ಒಳ್ಳೆಯದಾಗಲಿ' ಎಂದು ಹಾರೈಸಿದರು.


ಶಿವರಾಜ್‌ಕುಮಾರ್

'ಮುಗಿಲ ಮಲ್ಲಿಗೆ'ಯಲ್ಲಿ ಮಂಜು

ಸಾಹಸ ನಿರ್ದೇಶಕ, ನಟ ಥ್ರಿಲ್ಲರ್ ಮಂಜು 'ಮುಗಿಲ ಮಲ್ಲಿಗೆ' ತಂಡ ಸೇರಿಕೊಂಡಿದ್ದಾರೆ. ಎ.ಎನ್.ಆರ್. ಪಿಕ್ಚರ್ಸ್ ಬ್ಯಾನರ್ ಅಡಿಯಲ್ಲಿ ನಾಗರಾಜ್ ರೆಡ್ಡಿ ಅವರು ನಿರ್ಮಿಸುತ್ತಿರುವ ಚಿತ್ರಕ್ಕೆ ಆರ್.ಕೆ.ಗಾಂಧಿ ಆ್ಯಕ್ಷನ್–ಕಟ್ ಹೇಳುತ್ತಿದ್ದಾರೆ.



ಥ್ರಿಲ್ಲರ್ ಮಂಜು

'ಥ್ರಿಲ್ಲರ್ ಮಂಜು ಈ ಚಿತ್ರದಲ್ಲಿ ಮುತ್ತತ್ತಿ ದೇವರಾಜ್ ಆಗಿ ಕಾಣಿಸಿಕೊಳ್ಳುತ್ತಿದ್ದಾರೆ. ಭಾವನಾತ್ಮಕ ಪಾತ್ರವಿದು. ಅವರ ಪತ್ನಿಯ ಪಾತ್ರದಲ್ಲಿ ಭವ್ಯಾ ನಟಿಸುತ್ತಿದ್ದಾರೆ. ಹೊಸಕೋಟೆಯ ಸುತ್ತಮುತ್ತ ಚಿತ್ರದ ಮಾತಿನ ಭಾಗ ಮತ್ತು ಸಾಹಸ ಸನ್ನಿವೇಶಗಳನ್ನು ಚಿತ್ರೀಕರಿಸಿದ್ದೇವೆ. ಹಾಡುಗಳು ಚಿತ್ರೀಕರಣಕ್ಕಾಗಿ ಸಕಲೇಶಪುರ, ಮಡಿಕೇರಿಗೆ ಹೋಗುತ್ತೇವೆ' ಎಂದು ಮಾಹಿತಿ ನೀಡಿದರು ನಿರ್ದೇಶಕರು.

ಈ ಹಿಂದೆ 'ಕಮರೊಟ್ಟು ಚೆಕ್‌ಪೋಸ್ಟ್' ಚಿತ್ರದಲ್ಲಿ ನಟಿಸಿದ್ದ ಸನತ್‌ಗೆ ಸಹನಾ ಚಂದ್ರಶೇಖರ್ ಜೋಡಿಯಾಗಿದ್ದಾರೆ. ಈ ಚಿತ್ರಕ್ಕೆ ಅಭಿನಂದನ್ ಶೆಟ್ಟಿ ಛಾಯಾಚಿತ್ರಗ್ರಹಣ, ಅನಿರುದ್ಧ ಶಾಸ್ತ್ರಿ ಸಂಗೀತ ಸಂಯೋಜನೆ, ವಿನಯ್ ಜಿ. ಆಲೂರು ಸಂಕಲನವಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಡಿಸೆಂಬರ್ 19, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ಚತುರ್ಥಿ ಗಂ. 10-03 ನಕ್ಷತ್ರ: ಆಶ್ಲೇಷ ಗಂ. 26-00 ಯೋಗ: ವೈಧೃತಿ ಗಂ. 18-34 ಕರಣ: ಬಾಲವ ಗಂ. 10-03, ಧನು ಮಾಸದ 03 ನೇ ದಿನ, ಮಳೆನಕ್ಷತ್ರ: ಮೂಲ 2.
ರಾಹುಕಾಲ : ಮಧ್ಯಾಹ್ನ 01-30 – 03-00
ಸೂರ್ಯೋದಯ : 06-51 ಸೂರ್ಯಾಸ್ತ : 06-04
ಮುಸ್ಲಿಂ ದಿನಾಂಕ : 16 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ : 3, 9

ಮೇಷ: ಜವಾಬ್ದಾರಿಯುತ ನಡವಳಿಕೆಯನ್ನು ಹೊಂದಿರುವ ನಿಮಗೆ ಮೇಲಧಿಕಾರಿಗಳಿಂದ ಪ್ರಶಂಸೆಯ ಜತೆಯಲ್ಲಿ ಗೌಪ್ಯ ವಿಚಾರದ ಸುಳಿವು ದೊರಕುವುದು. ಹಣಕ್ಕಿಂತ ಸ್ನೇಹ ಸಂಬಂಧಗಳು ಮುಖ್ಯವೆಂದು ಅರಿವಾಗಲಿದೆ.

ವೃಷಭ: ಚಿನ್ನಾಭರಣದ ಮೇಲಿನ ಅಥವಾ ಭೂ ಮೇಲಿನ ಹೂಡಿಕೆಯು ಲಾಭ ಉಂಟುಮಾಡುತ್ತದೆ. ಕೆಲಸದ ಬಾಕಿ ಹಣವು ಸಂದಾಯವಾಗುವುದು. ನಿಲುವನ್ನು ಬದಲಾಯಿಸಬೇಡಿ.

ಮಿಥುನ: ಬಂಧುಗಳ ಅವಹೇಳನದ ಮಾತುಗಳು ಸ್ವಂತ ವಾಹನ ಖರೀದಿಸುವ ಸನ್ನಿವೇಶಕ್ಕೆ ನಾಂದಿಯಾಗಲಿದೆ. ಕೃಷಿಗೆ ಸಂಬಂಧಿಸಿದ ಯಂತ್ರಗಳು ಅಥವಾ ವಾಹನ ಖರೀದಿಸಬಹುದು. ಹೂಡಿಕೆ ವಿಚಾರದಲ್ಲಿ ಜಾಗ್ರತೆಯಿಂದ ವ್ಯವಹರಿಸಿ.

ಕರ್ಕಾಟಕ: ಕೌಟುಂಬಿಕ ಕಲಹ, ಮಾನಸಿಕ ಕ್ಷೋಭೆ, ಸಮಸ್ಯೆಗಳು ಹಂತ ಹಂತವಾಗಿ ದೂರಾಗುವುದು. ಮರೆಯಲಾರದ ಘಟನೆಯೊಂದು ಸಂಗಾತಿಯೊಂದಿಗೆ ನಡೆಯುವುದು. ಸ್ವ ಇಚ್ಛೆಯೇ ಅಂತಿಮವಾಗಿರಲಿ.

ಸಿಂಹ: ಹಲವು ಕಾರಣಗಳಿಗೆ ಸ್ನೇಹಿತರು ಮಾರ್ಗದರ್ಶನ, ಬೆಂಬಲ ಹಾಗೂ ಸಹಕಾರವನ್ನು ಅಪೇಕ್ಷಿಸುವಂತಾಗುವುದು. ಅಧೀನ ಸಿಬ್ಬಂದಿಯೊಂದಿಗೆ ಸಂಯಮದಿಂದ ನಡೆದುಕೊಳ್ಳುವುದು ಅನುಕೂಲ ತರಲಿದೆ.

ಕನ್ಯಾ: ಪ್ರೀತಿ ಪಾತ್ರರೊಂದಿಗೆ ಹೊಸ ಯೋಜನೆಯನ್ನು ಆರಂಭಿಸುವ ಬಗ್ಗೆ ಅವರೊಂದಿಗೆ ಚರ್ಚೆ ನಡೆಸುವಿರಿ. ಉತ್ಸಾಹವನ್ನು ಹೆಚ್ಚಿಸಿಕೊಳ್ಳುವ ಸಮಯವಾಗಿದೆ. ವೃತ್ತಿಗೆ ಸಂಬಂಧಿಸಿದಂತೆ ಅಚ್ಚರಿಯ ಸುದ್ದಿ ಕೇಳಲಿರುವಿರಿ.

ತುಲಾ: ಹಿರಿಯರ ಅನುಭವದ ಸಲಹೆಯನ್ನು ನಿರ್ಲಕ್ಷಿಸುವುದು ಮೂರ್ಖತನದ ಪ್ರದರ್ಶನವಾಗುತ್ತದೆ. ಸ್ನೇಹಿತರಿಂದ ದೂರ ಉಳಿಯುವ ಅನಿವಾರ್ಯತೆ ಬರಲಿದೆ. ಹಾಲು ಮಾರಾಟಗಾರರಿಗೆ ಲಾಭ ಬರುವುದು.

ವೃಶ್ಚಿಕ: ಹಣಕಾಸು ಸಂಸ್ಥೆಯ ಜವಾಬ್ದಾರಿ ನೋಡುವವರಿಗೆ ಆತಂಕ, ಸಮಸ್ಯೆ ಎದುರಾಗಲಿದೆ. ಮನಸ್ಸಿನ ಮಾತಿಗೆ ಬೆಲೆ ಕೊಡುವುದು ಮುಖ್ಯವಾಗಿದೆ. ನಿರುದ್ಯೋಗಿಗಳಿಗೆ ಕುಟುಂಬದ ಒತ್ತಡ ಹೆಚ್ಚಾಗಲಿದೆ.

ಧನು: ದೊರೆತಿರುವ ಖ್ಯಾತಿಯನ್ನು ಉಳಿಸಿಕೊಳ್ಳುವತ್ತ ಹೆಚ್ಚಿನ ಗಮನ ಹರಿಸುವುದು ಉತ್ತಮ. ವಿದ್ಯಾಕ್ಷೇತ್ರದಲ್ಲಿ ವಿದ್ಯಾರ್ಥಿಗಳಿಗೆ ಉತ್ತಮ ಅವಕಾಶಗಳು ಲಭಿಸಲಿವೆ. ಪ್ರಾಣಾಯಾಮವನ್ನು ಅಭ್ಯಾಸ ಮಾಡಿರಿ.

ಮಕರ: ಬ್ಯಾಂಕ್ ಉನ್ನತ ಅಧಿಕಾರಿಗಳಿಗೆ ಹೊರ ರಾಜ್ಯಗಳಿಗೆ ವರ್ಗಾವಣೆಯಾಗುವ ಸಾಧ್ಯತೆ ಇರುತ್ತದೆ. ಒತ್ತಡದಿಂದಾಗಿ ಕರ್ತವ್ಯ ನಿರ್ವಹಣೆಯಲ್ಲಿ ವಿಳಂಬ ಉಂಟಾಗಲಿದೆ. ಪುಣ್ಯಕ್ಷೇತ್ರ ದರ್ಶನದಿಂದ ನೆಮ್ಮದಿ ಇರುವುದು.

ಕುಂಭ: ರಾಜಕಾರಣಿಗಳು ಚುನಾವಣಾ ದೃಷ್ಟಿಯಿಂದ ಸಾಮಾಜಿಕ ಯೋಜನೆಗಳನ್ನು ಹಮ್ಮಿಕೊಳ್ಳುವುದು ಉತ್ತಮ. ಕೈಗಾರಿಕೋದ್ಯಮಿಗಳು ವೃತ್ತಿಯಲ್ಲಿ ನಾಯಕತ್ವವನ್ನು ಹೊಂದುವ ಅವಕಾಶಗಳನ್ನು ಪಡೆಯುವಿರಿ.

ಮೀನ: ಆತುರವಿಲ್ಲದೆ ಮೇಲಧಿಕಾರಿಗೆ ಪರಿಸ್ಥಿತಿಯನ್ನು ತಪ್ಪಾಗಿ ಅರ್ಥೈಸದೆ ಮನದ ಭಾವನೆಯನ್ನು ಸ್ಪಷ್ಟವಾಗಿ ತೆರೆದಿಡಿ. ಗಣ್ಯವ್ಯಕ್ತಿಯ ಭೇಟಿಯಿಂದ ಅನುಕೂಲ ಉಂಟಾಗುವುದು.

ಕಾಯಕವೇ ದೇವರು!



ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

ರೈತ ಯಾರಿಗಾದರೂ ಕೈಯೊಡ್ಡಿ ಬದುಕಿದ್ದಾನೇನು? ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು ಅಂತ ಯಾಕೆ ಹೇಳ್ತಾರೆ ಅಂದ್ರ, ರೈತ ಯಾರಿಗೂ ಕೈಯೊಡ್ಡಿ ಬದುಕಿಲ್ಲ ಅದಕ್ಕ.

ಒಂದು ಕಂಪ್ಯೂಟರ್ ತಯಾರಾತು ಅಂದ್ರ ಅದರ ಬೆಲೆಯನ್ನು ತಯಾರು ಮಾಡಿದ ಕಂಪನಿ ನಿರ್ಧಾರ ಮಾಡ್ತೈತಿ. ಆದರೆ, ರೈತ ಬೆಳೆದ ಬೆಳೆಗಳಿಗೆ ಬೆಲೆ ನಿಗದಿ ಮಾಡೋರು ಕಂಪನಿಯವರು. ಯಾರೇ ಬೆಲೆ ನಿಗದಿ ಮಾಡಲಿ, ಲಾಭ ಬರಲಿ ಬಿಡಲಿ, ಮಳೆ ಬಿಸಿಲುಗಳಲ್ಲಿ ತೊಂದರೆ ಅನುಭವಿಸಿ ಜಗತ್ತಿಗೆ ಆಹಾರ ಕೊಡ್ತಾನಲ್ಲ ರೈತ, ಅವ ನಿಜವಾದ ದೇವರು. ಭೂಮಿ ತಾಯಿಗೆ ಯಾವಾಗ ಸಂತೋಷವಾಗತ್ತೈತಿ? ಮಳೆಯ ಲಕ್ಷಾಂತರ ಹನಿಗಳು ಇಳೆಗೆ ಬಿದ್ದಾಗ ಆಕಿಗೆ ಸಂತೋಷವಾಗೋದಿಲ್ಲ, ತನ್ನ ಮಗ ರೈತನ ಬೆವರಿನ ಹನಿಗಳು ಭೂಮಿ ಮೇಲೆ ಬಿದ್ದಾಗ ಆಕೆ ಸಂತೋಷ ಪಡ್ತಾಳ.

ಚಾತಕ ಪಕ್ಷಿ ಅಂತ ಒಂದೈತಿ. ಅದು ಮಳೆ ನೀರಿಗೆ ಬಾಯಿ ತೆರೆದುಕೊಂಡು ಕುಳಿತಿರ್ತೈತಿ. ಅದನ್ನು ನೋಡಿ ಒಬ್ಬ ಕವಿ ಬರೀತಾನ... 'ಏ ಚಾತಕ ಪಕ್ಷಿಯೇ ಕಂಡ ಕಂಡ ಮೇಘಗಳು ಹಾದು ಹೋಗ್ತಾವಂತ ಸುಮ್ಮನೆ ಬಾಯಿ ತೆರೆದು ಕುಳಿತುಕೊಳ್ಳಬೇಡ. ನನ್ನ ಮಾತು ಕೇಳು. ಕೆಲವು ಮೇಘಗಳು ಸುಮ್ಮನೆ ಶಬ್ದ ಮಾಡುತ್ತವೆ. ಇನ್ನು ಕೆಲವು ಮೋಡಗಳು ಶಬ್ದ ಮಾಡೋದಿಲ್ಲ. ಮಳೆ ಸುರಿಸುತ್ತವೆ' ಅಂತಾನ. ನಮ್ಮಲ್ಲೂ ಹಾಂಗೆ ಚುನಾವಣೆ ಬಂದಾಗ ಕೆಲವು ಮೇಘಗಳು ಶಬ್ದ ಮಾಡುತ್ತವೆ. ಆ ನಂತರ ಕೈಗೆ ಸಿಗೋದೇ ಇಲ್ಲ. ಅದಕ್ಕೇ ಕಂಡ ಕಂಡ ಮೇಘಗಳಿಗೆ ಬಾಯಿ ತೆರೆದು ಕೂರ್ತ್ಕೋಬಾರ್ದು. ದುಡಿದು ತಿನ್ನೋದ ಕಲಿಬೇಕು. ನಿಮ್ಮ ದೇಹವನ್ನೇ ತೆಗೆದುಕೊಳ್ಳಿ. ಸದಾ ಕೆಲಸ ಮಾಡುತ್ತಲೇ ಇರ್ತೈತಿ. ನೀನು ಸುಖ ನಿದ್ದೆಯಲ್ಲಿದ್ದಾಗಲೂ ನಿನ್ನ ದೇಹ ಕೆಲಸ ಮಾಡುತ್ತಲೇ ಇರುತ್ತೈತಿ. ಅದನ್ನು ನೋಡಿ ಕಲಿ. ಅದು ಯಾವಾಗಲಾದರೂ ಕೆಲಸ ಮಾಡೋದು ನಿಲ್ಲಿಸ್ತು ಅಂದ್ರ, ನಿನಗೆ ಶಾಶ್ವತ ವಿಶ್ರಾಂತಿ ಅಷ್ಟೆ.

ನಿಸರ್ಗ ಕೂಡ ನಿರಂತರ ಕೆಲಸ ಮಾಡುತ್ತಲೇ ಇರತೈತಿ. ಉದಯಿಸುವ ಸೂರ್ಯ ವಿಶ್ರಾಂತಿ ತೆಗೆದುಕೊಳ್ಳುವುದಿಲ್ಲ. ಬೀಸುವ ಗಾಳಿ ಎಂದಾದರೂ ನಿಂತೈತೇನು? ನಾವು ಶನಿವಾರ ಅರ್ಧ ದಿನ ರಜೆ. ಭಾನುವಾರ ಪೂರ್ತಿ ದಿನ ರಜೆ. ಗಾಳಿ ಏನಾದರೂ ಒಂದು ದಿನ ರಜೆ ತೆಗೆದುಕೊಂಡರೆ ನಮಗೆಲ್ಲ ಶಾಶ್ವತ ರಜೆ ಅಷ್ಟೆ. ಸುದ್ದಿ ಮುಟ್ಟಿಸೋಕೂ ಯಾರೂ ಇರಲ್ಲ. ಹರಿಯುವ ನದಿ ನಿರಂತರ ಹರಿಯುತ್ತಲೇ ಇರುತೈತಿ. ಹರಿಯುವ ನದಿ ನಿಂತಿತು ಎಂದರೆ ಹೊಲಸಾಗತೈತಿ. ನಿಂತ್ರ ನದಿ ಕೆಡತೈತಿ. ಕುಂತ್ರ ಮನುಷ್ಯ ಕೆಡತಾನ. ಅದಕ್ಕೆ ನದಿ ಹರಕೋತಿರಬೇಕು, ಮನುಷ್ಯ ದುಡುಕೋತಿರಬೇಕು. ಇದು ಜೀವನದ ಸೂತ್ರ.


ರೈತ ನಿರಂತರ ದುಡುಕೋತಾ ಇರ್ತಾನ. ದುಡಿಮೆಯೇ ದೇವರು. ಅದೇ ದೇವರ ಪೂಜೆ. ಕಾಶಿ ರಾಮೇಶ್ವರದಲ್ಲಿ ದೇವರಿದ್ದಾನ ಎಂದು ನಾವು ತಿಳಕೊಂಡೇವಿ. ಅವನನ್ನು ನೋಡಲು ಅಲ್ಲಿಗೆ ಹೋಗ್ತೇವಿ. ಆದರೆ ಶರಣರು ಏನಂದರು ಅಂದ್ರ, 'ಸುಮ್ಮನೆ ನೀ ಕೆಲಸ ಮಾಡು. ದೇವರೇ ನಿನ್ನ ಹಿಂದೆ ಬರ್ತಾನೆ' ಅಂತ. ಕಾಯಕ ಅಷ್ಟು ದೊಡ್ಡದು ಅಂತ ತಿಳಿಸಿಕೊಟ್ಟರು ಅವರು. ಚಲನವಲನ ಇದ್ದರಷ್ಟೇ ಚಂದ ಇರ್ತೈತಿ ಜೀವನ. ಇಲ್ಲವಾದರೆ ಜಂಗ್ ಹಿಡುದುಹೋಗತ್ತೈತಿ.

ಪದಬಂಧ 5896

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ಬೆಂಬಿಡದೆ ಕಾಡುವವನು (4)
5.ಮಣಿ ಧರಿಸಿದ ಚಲುವೆ (3)
6.ಲೋಪದೋಷಗಳನ್ನು ಸರಿಪಡಿಸುವವನು (4)
8.ಸಮದಲ್ಲಿ ಸೇರುವಿಕೆ (4)
10.ಲವಣ ಹಿಡಿರುವವ ರಾಮನ ಮಗ (2)
12.ಕವಿತೆ ಬರೆಯುವವನು (2)
14.ಹೀಗೆ ಕಣ್ಮರೆಯಾಗುವುದು (4)
16.ಬೇರೆಯವರ ಒಳಿತು (4)
17.ವಾದ್ಯ ನುಡಿಸುವವನು ತಿರುಗಿದ್ದಾನಲ್ಲ! (3)
18.ವರ್ಗ ಅಥವಾ ಇಯತ್ತೆ (4)

ಮೇಲಿಂದ ಕೆಳಕ್ಕೆ
1.ಈತ ಕೈಲಾಗದವನು (5)
2.ಅಂತಃಪುರವನ್ನು ಹೀಗೂ ಹೇಳುತ್ತಾರೆ (4)
3.ಅದೇ ತಾನೆ ಅರಳಿದ ಹೂ (4)
4.ಕಲೆಸಿದ ಗೋಧಿ ಹಿಟ್ಟು (3)
7.ರಸಗಳನ್ನು ಅನುಭವಿಸಬಲ್ಲವನು (3)
9.ಲೆಕ್ಕ ಶಾಸ್ತ್ರವಿದು (3)
11.ನಡುವೆ ಜೀ ಎನ್ನುತ್ತಿರುವ ಮಂತ್ರಿ (3)
13. ತಂಡದವರು ನಡೆಸಿದ ಅಸಂಬದ್ಧವಾದ ಚರ್ಚೆ (5)
14.ಒಳಗಿರುವ ಬೆಳಕು (4)
15.ಹೊಸ ಶೈಲಿಯ ಕವಿ (4)
16.ಅಗಲವಾದ ಹರಿವಾಣ (3)



5895ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಬಡವ 3.ಶಿಲುಬೆ 5.ಭವಿಷ್ಯ 7.ಅಭಿರುಚಿ 10.ಬಾಕು 11.ಲೋಬಿ 12.ಮದನ 13.ಗೆಜ್ಜೆ 14.ಜಯ 15.ರದಾರಸ 17.ಕರುಣೆ 19.ಕಮ್ಮಾರ 20.ಮತ್ಸರ

ಮೇಲಿಂದ ಕೆಳಕ್ಕೆ: 1.ಬಸಿರು 2.ವಭ 3.ಶಿಷ್ಯ 4.ಬೆಳಕು 6.ವಿಜಯನಗರ 8.ಭಿನ್ನಾಭಿಪ್ರಾಯ 9.ಚಿಕ್ಕಮಗಳೂರು 10.ಬಾಡಿಗೆದಾರ 14.ಜನಕ 16.ದಾತಾರ 17.ಕರ 18.ಣೆಮ

ಸುಡೊಕು 6281

	2		4		3	9	6	
7		8						5
4			5		8	7		1
		9						7
	3	7	1		6	4	5	
8						2	1	
6		5		2			3	4
3						5		2
	8	2		5			7	


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6280 ಸುಡೊಕು

3	4	8	2	7	9	6	5	1
9	6	1	5	8	3	2	7	4
5	7	2	1	6	4	3	9	8
6	9	4	7	3	5	1	8	2
2	8	5	6	9	1	7	4	3
1	3	7	4	2	8	9	6	5
8	5	9	3	1	6	4	2	7
7	1	6	8	4	2	5	3	9
4	2	3	9	5	7	8	1	6

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,336
ಇಂದಿನ ಅಂತ್ಯ	24,198
▼	137
ದಿನದ ಕನಿಷ್ಠ	24,216

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4 ₹187
ಆರ್‌ಎಸ್‌ಎಸ್-5 ₹182
ಗುಡ್ ಲಾಟ್ (ಪ್ರತಿ ಕೆ.ಜಿಗೆ) ₹176

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹325-862
ದ್ವಿತಳಿ (ಬಿ.ವಿ) ₹377-765

ಬೆಲೆ ಇಳಿಕೆ: ರಸ್ತೆಗೆ ಟೊಮೆಟೊ ಸುರಿದ ಬೆಳೆಗಾರ

ಪ್ರಜಾವಾಣಿ ವಾರ್ತೆ

ಕೊಟ್ಟೂರು (ವಿಜಯನಗರ ಜಿಲ್ಲೆ): ಟೊಮೆಟೊ ಧಾರಣೆಯ ದಿಢೀರ್ ಕುಸಿತ ಕಂಡಿದ್ದರಿಂದ ದಿಕ್ಕೆಟ್ಟ ತಾಲ್ಲೂಕಿನ ನಿಂಬಳಗೆರೆ ಗ್ರಾಮದ ರೈತ ಗಾಬರಿಕಾಡಪ್ಪ ಮೂರು ಎಕರೆಯಲ್ಲಿ ಬೆಳೆದಿದ್ದ 30 ಬಾಕ್ಸ್ ಟೊಮೆಟೊವನ್ನು ಬುಧವಾರ ರಸ್ತೆಗೆ ಚೆಲ್ಲಿದರು.

'ಕಳೆದ ವಾರ ಒಂದು ಬಾಕ್ಸ್ ಟೊಮೆಟೊ ಬೆಲೆ ₹400 ರಿಂದ ₹500 ಇತ್ತು. ಈಗ ₹50ರಿಂದ ₹70ಕ್ಕೆ ಕುಸಿದಿದೆ. ಒಂದು ಎಕರೆಗೆ ₹80 ಸಾವಿರ ಖರ್ಚು ಮಾಡಿ ಬೆಳೆದ ಬೆಳೆಗೆ ಈಗಿನ ದರದಲ್ಲಿ ಕೂಲಿ ಹಣ ಸಹ ಸಿಗುತ್ತಿಲ್ಲ. ಸಾಗಣೆ ವೆಚ್ಚ ಅಧಿಕವಾಗುತ್ತದೆ. ಅದಕ್ಕೆ ಹೊಲದ ಪಕ್ಕದಲ್ಲೇ ಜಾನುವಾರು ತಿನ್ನಲು ರಸ್ತೆಗೆ ಸುರಿದಿದ್ದೇನೆ' ಎಂದು ಗಾಬರಿಕಾಡಪ್ಪ ತಿಳಿಸಿದರು.

'ರೈತರು ಟೊಮೆಟೊ ಬೆಳೆಯಲು ಸಾಲ ಮಾಡಿದ್ದಾರೆ. ಕಟಾವು ಮಾಡುವ ಹಂತದಲ್ಲಿ ಬೆಲೆ ಕುಸಿದಿದೆ. ವೆಚ್ಚವೂ ಕೈಗೆ ಬಾರದ ಸ್ಥಿತಿಯಿದೆ. ಹೀಗಾಗಿ, ರೈತರು ಸಂಕಷ್ಟದಲ್ಲಿದ್ದಾರೆ. ಬೆಳೆಗಾರರ ನೆರವಿಗೆ ಸರ್ಕಾರ ಮುಂದಾಗಬೇಕು' ಎಂದು ಹಾರಕನಾಳು ಗ್ರಾಮದ ರೈತ ವೀರಭದ್ರಯ್ಯ ಒತ್ತಾಯಿಸಿದರು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹605
12 ಕ್ಕೆ	₹80
ಮೈಸೂರು	
100ಕ್ಕೆ	₹605

ಎರಡು ವಾರದಲ್ಲಿ ಕ್ವಿಂಟಲ್‌ಗೆ ₹1,987 ದರ ಇಳಿಕೆ

ತೊಗರಿ ಧಾರಣೆ ಕುಸಿತ

ಪ್ರಜಾವಾಣಿ ವಾರ್ತೆ

ಕಲಬುರಗಿ: 'ತೊಗರಿ ಕಣಜ' ಕಲಬುರಗಿಯಲ್ಲಿ ತೊಗರಿ ಇಳುವರಿ ಉತ್ತಮವಾಗಿದ್ದು, ಕೃಷಿ ಉತ್ಪನ್ನ ಮಾರುಕಟ್ಟೆಗೆ (ಎಪಿಎಂಸಿ) ಹೆಚ್ಚಿನ ಪ್ರಮಾಣದಲ್ಲಿ ಆವಕವಾಗುತ್ತಿದೆ. ಇದರಿಂದಾಗಿ ದರ ದಿಢೀರ್ ಕುಸಿದಿದ್ದು, ರೈತರು ಆತಂಕಗೊಂಡಿದ್ದಾರೆ.

ಪ್ರಸಕ್ತ ವರ್ಷ ಜಿಲ್ಲೆಯ 5.90 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೊಗರಿ ಬಿತ್ತನೆಯಾಗಿದ್ದು, ಸುಮಾರು 50 ಲಕ್ಷ ಕ್ವಿಂಟಲ್ ಇಳುವರಿಯ ನಿರೀಕ್ಷೆ ಇದೆ. ಈಗಾಗಲೇ, ಜಿಲ್ಲೆಯ ಎಪಿಎಂಸಿಗಳಿಗೆ 4.50 ಲಕ್ಷ ಕ್ವಿಂಟಲ್ ತೊಗರಿ ಆವಕವಾಗಿದೆ. ಡಿಸೆಂಬರ್ 2ರಂದು ಕ್ವಿಂಟಲ್‌ಗೆ ಗರಿಷ್ಠ ದರ ₹11,000 ಇತ್ತು. ಈಗ ₹9,013ಕ್ಕೆ (ಡಿ.18) ತಲುಪಿದೆ. ಎರಡು ವಾರದ ಅವಧಿಯಲ್ಲಿ ಕ್ವಿಂಟಲ್‌ಗೆ ₹1,987 ದರ ಕುಸಿತವಾಗಿದೆ.

'ಕಳೆದ ವರ್ಷ ಕಲಬುರಗಿ ಎಪಿಎಂಸಿಗೆ 6.81 ಲಕ್ಷ ಕ್ವಿಂಟಲ್ ತೊಗರಿ ಆವಕವಾಗಿತ್ತು. ಕ್ವಿಂಟಲ್‌ಗೆ ಕನಿಷ್ಠ ₹6,550 ಮತ್ತು ಗರಿಷ್ಠ ₹13,014ಕ್ಕೆ ಮಾರಾಟವಾಗಿತ್ತು. ಪ್ರಸಕ್ತ ವರ್ಷದ ಮಾರ್ಚ್ ತಿಂಗಳಲ್ಲಿನ ಶರಣಬಸವೇಶ್ವರ ಜಾತ್ರೆಯ ಮುಹೂರ್ತ ವ್ಯಾಪಾರದಂದು ₹12,750ಕ್ಕೆ ಮಾರಾಟ ಆಗಿದ್ದು, ಈ ವರ್ಷದ ಗರಿಷ್ಠ ದರವಾಗಿದೆ. ಕನಿಷ್ಠ ದರ ₹6,512 ಆಗಿದೆ' ಎಂದು ಕಲಬುರಗಿ ಎಪಿಎಂಸಿ ಕಾರ್ಯದರ್ಶಿ ಅಲ್ಲಾಬಕಾಶ್ ಬಿಜಾಪುರ 'ಪ್ರಜಾವಾಣಿ'ಗೆ ತಿಳಿಸಿದರು.

'ಸರ್ಕಾರ ಕ್ವಿಂಟಲ್ ತೊಗರಿಗೆ ₹7,550 ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಿದೆ. ಅದಕ್ಕಿಂತ ಹೆಚ್ಚಿನ ದರಕ್ಕೆ ಮಾರಾಟ ಆಗುತ್ತಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ₹8 ಸಾವಿರದಷ್ಟು ದರ ಇತ್ತು. ಮಾರುಕಟ್ಟೆಗೆ ಹೆಚ್ಚಿನ ಪ್ರಮಾಣದಲ್ಲಿ ಆವಕ ಆಗುತ್ತಿರುವುದರಿಂದ ಸಹಜವಾಗಿ ದರ ಇಳಿದಿದೆ. ರೈತರು ಎರಡು ತಿಂಗಳು ದಾಸ್ತಾನು ಮಾಡಿಕೊಂಡು ಮಾರಿದರೆ ಎರಡರಿಂದ ಮೂರು ಸಾವಿರ ರೂಪಾಯಿಯಷ್ಟು ಹೆಚ್ಚಿನ ಲಾಭ ಪಡೆಯಬಹುದು' ಎಂದು ಜಂಟಿ ಕೃಷಿ ನಿರ್ದೇಶಕ ಸಮದ್ ಪಟೇಲ್ ಹೇಳಿದರು.


ಕಲಬುರಗಿ ಎಪಿಎಂಸಿಗೆ ಆವಕವಾಗಿರುವ ತೊಗರಿ

> ತೊಗರಿಗೆ ನೆಟೆ ರೋಗ ತಗುಲಿ ನಷ್ಟವಾಗಿದೆ. ಸರ್ಕಾರವು ಖರೀದಿ ಕೇಂದ್ರ ಆರಂಭಿಸಿ ಮಾರುಕಟ್ಟೆ ಬೆಲೆಗಿಂತ ಸ್ವಲ್ಪ ಹೆಚ್ಚಿನ ದರ ನಿಗದಿಪಡಿಸಿದರೆ ಅನುಕೂಲವಾಗಲಿದೆ
> **ರಾಜಕುಮಾರ ಕೋಟೆ**
> ರೈತ, ಕಲಮೂಡ ಗ್ರಾಮ

₹15.82 ಲಕ್ಷ ಕೋಟಿ ನಿವ್ವಳ ನೇರ ತೆರಿಗೆ ಸಂಗ್ರಹ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಡಿಸೆಂಬರ್ 17ರ ವರೆಗೆ ₹15.82 ಲಕ್ಷ ಕೋಟಿ ನಿವ್ವಳ ನೇರ ತೆರಿಗೆ ಸಂಗ್ರಹವಾಗಿದೆ ಎಂದು ಕೇಂದ್ರ ಸರ್ಕಾರ ಬುಧವಾರ ತಿಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಗೆ ಹೋಲಿಸಿದರೆ ತೆರಿಗೆ ಸಂಗ್ರಹ ಪ್ರಮಾಣದಲ್ಲಿ ಶೇ 16.45ರಷ್ಟು ಏರಿಕೆಯಾಗಿದೆ ಎಂದು ಹೇಳಿದೆ.

ಮುಂಗಡ ತೆರಿಗೆ ಪಾವತಿಯಲ್ಲಿ ₹7.56 ಲಕ್ಷ ಕೋಟಿ ಸಂಗ್ರಹವಾಗಿದ್ದು, ಒಟ್ಟಾರೆ ಶೇ 21ರಷ್ಟು ಹೆಚ್ಚಳವಾಗಿದೆ. ಕಾರ್ಪೊರೇಟ್ ತೆರಿಗೆ ₹7.42 ಲಕ್ಷ ಕೋಟಿ ಹಾಗೂ ಕಾರ್ಪೊರೇಟ್ ಯೇತರ ತೆರಿಗೆ ₹7.97 ಲಕ್ಷ ಕೋಟಿ ಸಂಗ್ರಹವಾಗಿದೆ.

ಷೇರು ವಹಿವಾಟು ತೆರಿಗೆ (ಎಸ್‌ಟಿಟಿ) ₹40,114 ಕೋಟಿ ಸಂಗ್ರಹವಾಗಿದೆ.

ಒಟ್ಟು ₹3.39 ಲಕ್ಷ ಕೋಟಿ ಮರುಪಾವತಿ (ರೀಫಂಡ್) ಮಾಡಲಾಗಿದೆ. ಹಿಂದಿನ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಶೇ 42.49ರಷ್ಟು ಏರಿಕೆಯಾಗಿದೆ. ನೇರ ತೆರಿಗೆಯ ಸರಾಸರಿ ಸಂಗ್ರಹವು ₹19.21 ಲಕ್ಷ ಕೋಟಿ ಆಗಿದೆ.

ಕರ್ನಾಟಕ: ₹1,405 ಕೋಟಿ ಕಬ್ಬಿನ ಬಿಲ್ ಬಾಕಿ

ನವದೆಹಲಿ (ಪಿಟಿಐ): 2024–25ನೇ ಸಕ್ಕರೆ ಮಾರುಕಟ್ಟೆ ಋತುವಿನ (ಅಕ್ಟೋಬರ್–ಸೆಪ್ಟೆಂಬರ್) ಆರಂಭದ 70 ದಿನಗಳ ಅವಧಿಯಲ್ಲಿ ಕಾರ್ಖಾನೆಗಳು ಕಬ್ಬು ಬೆಳೆಗಾರರಿಗೆ ₹8,126 ಕೋಟಿ ಬಿಲ್ ಪಾವತಿಸಿವೆ ಎಂದು ಕೇಂದ್ರ ಸರ್ಕಾರ, ಬುಧವಾರ ಸಂಸತ್‌ಗೆ ತಿಳಿಸಿದೆ.

'ಡಿಸೆಂಬರ್ 13ರ ವರೆಗೆ ಸಕ್ಕರೆ ಕಾರ್ಖಾನೆಗಳಿಂದ ಬೆಳೆಗಾರರಿಗೆ ಒಟ್ಟು ₹11,141 ಕೋಟಿ ಪಾವತಿಯಾಗಿದೆ' ಎಂದು ಕೇಂದ್ರ ಆಹಾರ ಸಚಿವ ಪ್ರಲ್ಹಾದ ಜೋಶಿ ಅವರು, ಲೋಕಸಭೆಗೆ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ದೇಶಾದ್ಯಂತ ಒಟ್ಟು ₹3,015 ಕೋಟಿ ಬಾಕಿ ಉಳಿಸಿಕೊಳ್ಳಲಾಗಿದೆ. ಬಾಕಿ ಉಳಿಸಿಕೊಂಡಿರುವ ರಾಜ್ಯಗಳ ಪೈಕಿ ಕರ್ನಾಟಕ ಮೊದಲ ಸ್ಥಾನದಲ್ಲಿದ್ದರೆ, ಆ ನಂತರದ ಸ್ಥಾನಗಳಲ್ಲಿ ಕ್ರಮವಾಗಿ ಉತ್ತರ ಪ್ರದೇಶ ಮತ್ತು ಮಹಾರಾಷ್ಟ್ರ ಇವೆ. ಕರ್ನಾಟಕದ ಸಕ್ಕರೆ ಕಾರ್ಖಾನೆಗಳು ₹1,405 ಕೋಟಿ ಪಾವತಿ ಮಾಡಬೇಕಿದೆ ಎಂದು ಅವರು ವಿವರಿಸಿದ್ದಾರೆ.

ಕೇಂದ್ರ ಸರ್ಕಾರದ ಮಧ್ಯಪ್ರವೇಶದಿಂದಾಗಿ ಕಬ್ಬಿನ ಬಾಕಿ ಮೊತ್ತದದಲ್ಲಿ ಕಡಿಮೆಯಾಗಿದೆ ಎಂದು ಹೇಳಿದ್ದಾರೆ.

ಗರಿಷ್ಠ ಪಿಂಚಣಿ: ದಾಖಲೆ ಸಲ್ಲಿಕೆ ಅವಧಿ ಜನವರಿ 31ರವರೆಗೆ ವಿಸ್ತರಣೆ

ನವದೆಹಲಿ (ಪಿಟಿಐ): ಉದ್ಯೋಗಿ ಪಿಂಚಣಿ ಯೋಜನೆ (ಇಪಿಎಸ್) 1995ರ ಅಡಿ ಗರಿಷ್ಠ ಪಿಂಚಣಿ ಕೋರಿ ಉದ್ಯೋಗಿಗಳು ಸಲ್ಲಿಸಿರುವ ಅರ್ಜಿಗಳಿಗೆ ಸಂಬಂಧಿಸಿದಂತೆ ಉದ್ಯೋಗದಾತ ಸಂಸ್ಥೆಗಳು ವೇತನದ ವಿವರ ಹಾಗೂ ಇತರೆ ದಾಖಲೆಯನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡುವ ಅವಧಿಯನ್ನು ನೌಕರರ ಭವಿಷ್ಯ ನಿಧಿ ಸಂಘಟನೆಯು (ಇಪಿಎಫ್‌ಒ) ಮುಂದಿನ ವರ್ಷದ ಜನವರಿ 31ರ ವರೆಗೆ ವಿಸ್ತರಿಸಿದೆ.

ಉದ್ಯೋಗಿ ಮತ್ತು ಉದ್ಯೋಗದಾತ ಸಂಸ್ಥೆಯ ಜಂಟಿ ಘೋಷಣೆ ಸಲ್ಲಿಕೆಗೆ ಇಪಿಎಫ್‌ಒ ಆನ್‌ಲೈನ್‌ನಲ್ಲಿ ಅವಕಾಶ ಕಲ್ಪಿಸಿದೆ. ಇನ್ನೂ 3.1 ಲಕ್ಷ ಅರ್ಜಿಗಳ ಮೌಲ್ಯಮಾಪನ ಬಾಕಿ ಇದೆ ಎಂದು ಕೇಂದ್ರ ಕಾರ್ಮಿಕ ಸಚಿವಾಲಯ ತಿಳಿಸಿದೆ.

2022ರ ನವೆಂಬರ್ 4ರಂದು ಉದ್ಯೋಗಿಗಳ ಪಿಂಚಣಿ (ತಿದ್ದುಪಡಿ) 2014ರ ಯೋಜನೆಯ (ಇಪಿಎಸ್) ಸಿಂಧುತ್ವವನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿತ್ತು. 2023ರ ಫೆಬ್ರುವರಿ 26ರಿಂದ ಅರ್ಜಿ ಸಲ್ಲಿಕೆಗೆ ಅವಕಾಶ ಕಲ್ಪಿಸಲಾಗಿತ್ತು.


ನೌಕರರ ಸಂಘಟನೆಗಳ ಮನವಿ ಮೇರೆಗೆ ಹಲವು ಬಾರಿ ಕಾಲಾವಕಾಶವನ್ನು ವಿಸ್ತರಿಸಲಾಗಿದೆ. ಈಗ ಕೊನೆಯ ಬಾರಿ ಕಾಲಾವಕಾಶ ನೀಡಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಪ್ರಸ್ತುತ ಪಿಂಚಣಿಯ ಮಾಸಿಕ ಗರಿಷ್ಠ ವೇತನವನ್ನು ₹15 ಸಾವಿರಕ್ಕೆ ನಿಗದಿಪಡಿಸಲಾಗಿದೆ. ಈ ಮಿತಿಗಿಂತಲೂ ಹೆಚ್ಚಿನ ಪಿಂಚಣಿ ಕೋರಿ 17.49 ಲಕ್ಷ ಉದ್ಯೋಗಿಗಳು ಅರ್ಜಿ ಸಲ್ಲಿಸಿದ್ದಾರೆ ಎಂದು ಹೇಳಿದೆ.

ಸಲ್ಲಿಕೆಯಾಗಿರುವ ಜಂಟಿ ಹೇಳಿಕೆಯನ್ನು ಇಪಿಎಫ್‌ಒದಿಂದ ಮೌಲ್ಯಮಾಪನ ಮಾಡಲಾಗಿದೆ. ಈ ಪೈಕಿ 4.66 ಲಕ್ಷ ಅರ್ಜಿಗಳಿಗೆ ಹೆಚ್ಚುವರಿ ಮಾಹಿತಿ/ ಸ್ಪಷ್ಟನೆ ಕೋರಲಾಗಿದೆ. ಇದಕ್ಕೆ ಪ್ರತಿಕ್ರಿಯಿಸುವ ಅವಧಿಯನ್ನು ಮುಂದಿನ ವರ್ಷದ ಜನವರಿ 15ರ ವರೆಗೆ ವಿಸ್ತರಿಸಲಾಗಿದೆ ಎಂದು ತಿಳಿಸಿದೆ.

ಸುಂಕದ ಮೇಲೆ ನಿಗಾ ಇರಲಿ ಭಾರತಕ್ಕೆ ಟ್ರಂಪ್ ಸಂದೇಶ ರವಾನೆ

ವಾಷಿಂಗ್ಟನ್ (ಪಿಟಿಐ): ಅಮೆರಿಕದ ಕೆಲವು ವಸ್ತುಗಳ ಆಮದಿಗೆ ಭಾರತವು ವಿಧಿಸಿರುವ ಹೆಚ್ಚಿನ ಸುಂಕಕ್ಕೆ ಪ್ರತಿಯಾಗಿ ಅಷ್ಟೇ ಮೊತ್ತದ ಸುಂಕ ವಿಧಿಸುವುದಾಗಿ ಅಮೆರಿಕದ ಅಧ್ಯಕ್ಷರಾಗಿ ಚುನಾಯಿತರಾಗಿರುವ ಡೊನಾಲ್ಡ್ ಟ್ರಂಪ್ ಅವರು ಎಚ್ಚರಿಸಿದ್ದಾರೆ.


ಡೊನಾಲ್ಡ್ ಟ್ರಂಪ್


'ಅವರು ನಮ್ಮ ವಸ್ತುಗಳಿಗೆ ಸುಂಕವನ್ನು ವಿಧಿಸಿದರೆ, ನಾವು ಅಷ್ಟೇ ಮೊತ್ತದ ಸುಂಕ ವಿಧಿಸುತ್ತೇವೆ. ಬಹುತೇಕ ಎಲ್ಲ ಸಂದರ್ಭಗಳಲ್ಲಿ ಅವರು ನಮಗೆ ಸುಂಕ ವಿಧಿಸುತ್ತಾರೆ. ಆದರೆ ನಾವು ಅವರಿಗೆ ಸುಂಕ ವಿಧಿಸಿರಲಿಲ್ಲ' ಎಂದು ಟ್ರಂಪ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಚೀನಾದೊಂದಿಗಿನ ಸಂಭಾವ್ಯ ವ್ಯಾಪಾರ ಒಪ್ಪಂದದ ಬಗೆಗಿನ ಪ್ರಶ್ನೆಗೆ ಉತ್ತರಿಸುವ ವೇಳೆ ಟ್ರಂಪ್ ಅವರು, ಭಾರತ ಮತ್ತು ಬ್ರೆಜಿಲ್ ಅಮೆರಿಕದ ವಸ್ತುಗಳಿಗ ಹೆಚ್ಚಿನ ಸುಂಕ ವಿಧಿಸುತ್ತಿವೆ ಎಂದು ಹೇಳಿದ್ದಾರೆ.

'ಯಾರಾದರೂ ಸುಂಕ ವಿಧಿಸಿದರೆ ಅಷ್ಟೇ ಪ್ರಮಾಣದ ಸುಂಕ ವಿಧಿಸುವುದು ಅತ್ಯಗತ್ಯ. ನಾವು ಭಾರತಕ್ಕೆ ಸೈಕಲ್ ಕಳುಹಿಸುತ್ತೇವೆ. ಅವರೂ ನಮಗೆ ಸೈಕಲ್ ಕಳುಹಿಸುತ್ತಾರೆ. ಆದರೆ ಅವರು ನಮಗೆ 100– 200 ಸುಂಕ ವಿಧಿಸುತ್ತಾರೆ. ಅವರ ಸುಂಕ ಅಧಿಕವಾಗಿರುತ್ತದೆ' ಎಂದು ಟ್ರಂಪ್ ಹೇಳಿದ್ದಾರೆ.

'ಕ್ರಿಯೆಗೆ ಸಮನಾದ ಪ್ರತಿಕ್ರಿಯೆ ಡೊನಾಲ್ಡ್ ಟ್ರಂಪ್ ಅವರ ಆಡಳಿತದ ಲಕ್ಷಣವಾಗಿರುತ್ತದೆ. ನಾವು ನಿಮ್ಮೊಂದಿಗೆ ಹೇಗೆ ನಡೆದುಕೊಳ್ಳಬೇಕೆಂದು ಬಯಸುತ್ತಿರೋ ಅದಕ್ಕೆ ಸರಿಯಾಗಿ ನೀವು ಕೂಡ ನಮ್ಮೊಂದಿಗೆ ನಡೆದುಕೊಳ್ಳಬೇಕು' ಎಂದು ಟ್ರಂಪ್ ಅವರ ವಾಣಿಜ್ಯ ಕಾರ್ಯದರ್ಶಿ ಪಿಕ್ ಹಾವರ್ಡ್ ಲುಟ್ನಿಕ್ ಅವರು ಹೇಳಿದ್ದಾರೆ.

ಪ್ರಶ್ನೋತ್ತರ


ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಶ್ರೀನಾಥ್, ಬೆಳಗಾವಿ.

- **ಪ್ರಶ್ನೆ: ನಾನು ಇತ್ತೀಚೆಗೆ ಕೇಂದ್ರ ಸರ್ಕಾರ ಪ್ರಕಟಿಸಿರುವ ಪ್ಯಾನ್ 2.0 ಯೋಜನೆ ಪ್ರಕಾರ ಕ್ಯೂಆರ್ ಕೋಡ್ ಇರುವ ಪ್ಯಾನ್ ಕಾರ್ಡ್ ಪಡೆಯಲು ಇಚ್ಛಿಸಿದ್ದೇನೆ. ಇದು ಕಡ್ಡಾಯ ಅಲ್ಲದಿದ್ದರೂ ಇದರಿಂದ ಯಾವುದಾದರು ಪ್ರಯೋಜನ ಇದೆಯೇ?**

ಉತ್ತರ: ಕೆಲವು ವರ್ಷಗಳ ಹಿಂದೆ ಕಪ್ಪು–ಬಿಳುಪಿನ ಪ್ಯಾನ್ ಕಾರ್ಡ್ ನೀಡಲಾಗುತ್ತಿತ್ತು. ತದ ನಂತರ ಬಂದ ಫೋಟೊಸಹಿತ ಕಾರ್ಡ್‌ಗಳಲ್ಲೂ ಕ್ಯೂಆರ್ ಕೋಡ್ ಇಲ್ಲದ ಪ್ಯಾನ್ ನೀಡಲಾಗುತ್ತಿತ್ತು.

ಸರ್ಕಾರವೇ ಹೇಳುವ ಪ್ರಕಾರ ಮುಂದೆ ಈ 'ಪ್ಯಾನ್ 2.0' ಮಾದರಿಯ ಪ್ಯಾನ್ ಕಾರ್ಡ್ ಹೆಚ್ಚಿನ ತಾಂತ್ರಿಕ ಅಂಶಗಳನ್ನು ಹೊಂದಿವೆ. ಪ್ಯಾನ್ ಬಳಸಿ ಡಿಜಿಟಲ್ ವೇದಿಕೆಗಳ ಮೂಲಕ ನಡೆಯುವ ವಂಚನೆಯ ಅಪಾಯದಿಂದ ಸುರಕ್ಷತೆ ನೀಡುತ್ತದೆ ಎಂದು ಹೇಳಲಾಗಿದೆ. ಅಂದರೆ ಒಬ್ಬರ ಪ್ಯಾನ್ ಸಂಖ್ಯೆ, ಫೋಟೊ ಮಾದರಿ ಬಳಸಿ ಅದರಲ್ಲಿನ ಮಾಹಿತಿಯಿಂದ ನಡೆಸುವ ಅಕ್ರಮ ವ್ಯವಹಾರ ಹಾಗೂ ಖಾತೆ ತೆರೆಯುವಿಕೆಯನ್ನು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ಪರಿಶೀಲಿಸಬಹುದಾಗಿದೆ ಎಂಬುದು ಇದರ ವೈಶಿಷ್ಟ್ಯ.

ಈಗಾಗಲೇ, ನಿಮ್ಮ ಪ್ಯಾನ್ ಕಾರ್ಡ್ ಈ ಗುಣಾಂಶಗಳನ್ನು ಹೊಂದಿರದಿದ್ದರೆ ನೀವು ಕೂಡ ನವೀಕೃತ ಪ್ಯಾನ್‌ಗೆ ಎನ್‌ಎಸ್‌ಡಿಎಲ್ ಅಥವಾ ಯುಟಿಐ ಟಿಐಎಸ್‌ಎಲ್ ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.

ಚೇತನ್ ಕುಮಾರ್, ಮಾಗಡಿ.

- **ಪ್ರಶ್ನೆ: ನಾನು ಕಳೆದ ಐದು ವರ್ಷಗಳಿಂದ ಟೆಕ್ ಕಂಪನಿಗಳಲ್ಲಿ ಹೂಡಿಕೆ ಆರಂಭಿಸಿದ್ದೇನೆ. ಇದರಲ್ಲಿ ಷೇರು ಹಾಗೂ ಮ್ಯೂಚುವಲ್ ಫಂಡ್ ಎರಡೂ ವಿಭಾಗದ ಹೂಡಿಕೆ ಇದೆ. ಸಾಮಾನ್ಯವಾಗಿ ದೀರ್ಘಾವಧಿ ಹೂಡಿಕೆಗಳು ಅಧಿಕ ಲಾಭ ತರುವ ಹೂಡಿಕೆಗಳಾಗಿವೆ ಎಂಬುದು ಎಲ್ಲರ ಅಭಿಪ್ರಾಯ. ನಾನು ಎಸ್‌ಐಪಿಗಳನ್ನೂ ಹೊಂದಿದ್ದೇನೆ. ಏಕ ಕಂತಿನ ಹೂಡಿಕೆ ಸಹ ಮಾಡುತ್ತಿದ್ದೇನೆ. ನಿಧಾನವಾಗಿ ಪ್ರತಿ ತಿಂಗಳು ₹50 ಸಾವಿರ ಉಳಿತಾಯವನ್ನು ಹೂಡಿಕೆಗೆ ಬಳಸುವ ಗುರಿ ಹೊಂದಿದ್ದೇನೆ.**

  ಈ ರೀತಿ ಹೂಡಿಕೆ ಮಾಡುವಾಗ ನಾವು ಹೆಚ್ಚಾಗಿ ನಮ್ಮ ದೇಶೀಯ ಮಾರುಕಟ್ಟೆಯ ಹೂಡಿಕೆ ಉತ್ಪನ್ನಗಳನ್ನು ಮಾತ್ರ ಆಯ್ಕೆ ಮಾಡುತ್ತೇವೆ. ಇಂದಿನ ದಿನಗಳಲ್ಲಿ ಮಾಹಿತಿ ಲಭ್ಯತೆಯಿಂದ ಅಂತರರಾಷ್ಟ್ರೀಯ ಫಂಡ್, ಗೋಲ್ಡ್ ಫಂಡ್, ಕಮೋಡಿಟಿ ಫಂಡ್ ಹಾಗೂ ವಿದೇಶಿ ಷೇರುಗಳಲ್ಲೂ ಹೂಡಿಕೆ ಮಾಡಲು ಸಾಕಷ್ಟು ಅವಕಾಶ ಇದೆ ಎಂದು ಕೇಳಿದ್ದೇನೆ.

  ನಾವು ಇದಕ್ಕೆ ಯಾವ ರೀತಿ ಪ್ರಯತ್ನಿಸಬಹುದು. ಇದು ನಿಜಕ್ಕೂ ಲಾಭದಾಯಕವೇ? ಒಂದು ವೇಳೆ ಅಂತಹ ಹೂಡಿಕೆ ಸಾಧ್ಯವಾದರೆ ಯಾವ ರೀತಿ ಮುಂದುವರಿಯಬಹುದು. ಈ ಬಗ್ಗೆ ಮಾಹಿತಿ ನೀಡಿ.

ಉತ್ತರ: ನಿಮ್ಮ ಬದುಕಿನ ಆದ್ಯ ಹಂತದಲ್ಲಿ ನೀವು ಹೂಡಿಕೆ ಬಗ್ಗೆ ಬಹಳ ಆಸಕ್ತಿ ಹೊಂದಿರುವುದು ಶ್ಲಾಘನೀಯ. ಪ್ರತಿ ತಿಂಗಳು ₹50 ಸಾವಿರದಂತೆ ಹೂಡಿಕೆ ಮಾಡುವ ನಿಮ್ಮ ಉದ್ದೇಶವು ವಾರ್ಷಿಕವಾಗಿ ₹6 ಲಕ್ಷ ಮೊತ್ತವು ನಿಮ್ಮ ಉಳಿತಾಯದ ಭಾಗವಾಗಿ ಪ್ರತಿವರ್ಷ ಸಂಚಯಿಸಲಿದೆ. ಸಾಮಾನ್ಯವಾಗಿ ಈ ಮೊತ್ತವನ್ನು ಬ್ಯಾಂಕಿನ ಉಳಿತಾಯ ಖಾತೆ ಅಥವಾ ನಿಶ್ಚಿತ ಠೇವಣಿ ಖಾತೆಯಲ್ಲಿ ಇಟ್ಟಾಗ ಶೇ 4ರಿಂದ ಶೇ 8ರಷ್ಟು ಬಡ್ಡಿ ಸಿಗುತ್ತದೆ.

ನೀವು ಈ ನಿಖರ ಆದಾಯಕ್ಕಿಂತ ಅಧಿಕ ಆದಾಯ ಬೇಕೆಂದು ನಿರೀಕ್ಷಿಸಿದಾಗ ಸಹಜವಾಗಿ ಅದಕ್ಕೆ ಅದರದ್ದೇ ಆದ ಆರ್ಥಿಕ ಅಪಾಯದ ಜೊತೆ ಸಿಗುವ ಲಾಭದ ಮೇಲೆ ಒಂದಷ್ಟು ಅನಿಶ್ಚಿತತೆ ಸಮಸ್ಯೆಯೂ ಇರುತ್ತದೆ. ಇದನ್ನು ನಾವು ಎಷ್ಟು ಸಮರ್ಥವಾಗಿ ಹಾಗೂ ಮಾಹಿತಿಯುಕ್ತವಾಗಿ ನಿರ್ವಹಿಸುತ್ತೇವೋ ಅಷ್ಟು ನಮ್ಮ ಲಾಭ, ಸಾಮಾನ್ಯ ಹೂಡಿಕೆಗಿಂತ ಹೆಚ್ಚಿರುತ್ತದೆ. ದೀರ್ಘಾವಧಿಯಲ್ಲಿ ಮತ್ತು ನಿರಂತರ ಹೂಡಿಕೆಯಲ್ಲಿ ಈ ಸಣ್ಣ ಪ್ರತಿಶತದ (ಶೇ 1ರಿಂದ ಶೇ 2ರಷ್ಟು) ಹೆಚ್ಚುವರಿ ಲಾಭವು ಅನೇಕ ಪಟ್ಟು ನಮ್ಮ ಗಳಿಕೆಯನ್ನು ಹೆಚ್ಚಿಸುತ್ತದೆ.

ನೀವು ಉಲ್ಲೇಖಿಸಿದಂತೆ ಮಾರುಕಟ್ಟೆಯಲ್ಲಿ ಅನೇಕ ಹೂಡಿಕೆ ಉತ್ಪನ್ನಗಳಿವೆ. ಹಲವು ಆಯ್ಕೆಗಳು ಇವೆ. ಅಂತರ ರಾಷ್ಟ್ರೀಯ ಫಂಡ್, ಗೋಲ್ಡ್ ಫಂಡ್, ಕಮೋಡಿಟಿ ಫಂಡ್ ಹಾಗೂ ವಿದೇಶಿ ಷೇರುಗಳಲ್ಲೂ ಹೂಡಿಕೆ ಮಾಡಲು ಸಾಕಷ್ಟು ಅವಕಾಶ ಇದೆ. ಈ ಎಲ್ಲ ಹೂಡಿಕೆಗಳು ವಿಭಿನ್ನ ರೀತಿಯ ಮಾರುಕಟ್ಟೆ ಅಪಾಯ ಹೊಂದಿವೆ ಅಥವಾ ನಮ್ಮ ಆಳವಾದ ಮಾಹಿತಿಯ ತಿಳಿವನ್ನು ನಿರೀಕ್ಷಿಸುತ್ತವೆ.

ಉದಾಹರಣೆಗೆ ಕಮೋಡಿಟಿ ಹಾಗೂ ಚಿನ್ನದಲ್ಲಿ ಹೂಡಿಕೆ ಮಾಡುವ ಮ್ಯೂಚುವಲ್ ಫಂಡ್‌ಗಳು ಕಮೋಡಿಟಿ ಹಾಗೂ ಚಿನ್ನದ ಅಂತರರಾಷ್ಟ್ರೀಯ ಬೆಲೆ ಹಾಗೂ ಜಾಗತಿಕ ವಿದ್ಯಮಾನ, ವಿದೇಶಿ ವಿನಿಮಯ ದರ ಇತ್ಯಾದಿಯನ್ನು ಹೆಚ್ಚಾಗಿ ಪರಿಗಣಿಸಿದರೆ, ವಿದೇಶಿ ಷೇರುಗಳು ಆಯಾ ದೇಶದ ಆಂತರಿಕ ಹಾಗೂ ಕಂಪನಿಯ ಕಾರ್ಯ ಕ್ಷೇತ್ರ - ಉದ್ದಿಮೆಯ ಒಟ್ಟಾರೆ ವೃದ್ಧಿ ಇತ್ಯಾದಿ ವಿಚಾರವನ್ನು ಅವಲಂಬಿಸಿವೆ.

ಹೀಗಾಗಿ ಹೂಡಿಕೆ ನಿರ್ಣಯದ ಹಿಂದೆ ಈ ವಿಚಾರಗಳು ನಮ್ಮ ಹೂಡಿಕೆ ಮೇಲೆ ಯಾವ ರೀತಿ ಪರಿಣಾಮ ಬೀರುತ್ತವೆ ಎನ್ನುವ ಮಾಹಿತಿಯನ್ನು ಕಲೆ ಹಾಕುವ ಹಾಗೂ ಅದನ್ನು ವಾಸ್ತವ ಸ್ಥಿತಿಗೆ ಹೊಸೆದು ನೋಡುವ ಸಾಮರ್ಥ್ಯ ನಮ್ಮಲ್ಲಿದ್ದರೆ ಹೂಡಿಕೆ ಮಾಡುವುದು ಸುಲಭ. ಈ ಬಗ್ಗೆ ಅರಿತು ವ್ಯವಹರಿಸುವುದು ಯಾವತ್ತೂ ಅಪಾಯರಹಿತ ಹೂಡಿಕೆಗೆ ಸೋಪಾನ. ಈ ಮೇಲಿನ ಉತ್ಪನ್ನಗಳನ್ನು ದೇಶೀಯ ಮ್ಯೂಚುವಲ್ ಫಂಡ್‌ಗಳೇ ಹೂಡಿಕೆದಾರರಿಗೆ ಖರೀದಿ-ಮಾರಾಟ ಮಾಡುವ ಸೇವೆ ನೀಡುತ್ತವೆ. ಇದನ್ನು ನಿಮ್ಮ ಈಗಿನ ಪೋಲಿಯೊ ಖಾತೆ ಮೂಲಕ ವ್ಯವಹರಿಸಬಹುದು.

ಇನ್ನು ವಿದೇಶಿ ಷೇರುಗಳ ಬಗ್ಗೆ ಹೇಳುವುದಾದರೆ ಇವು ಕೂಡ ಬಹುತೇಕ ಆಯಾ ದೇಶೀಯ ಆಡಳಿತ ನೀತಿ, ಅಂತರ ರಾಷ್ಟ್ರೀಯ ವ್ಯವಹಾರ, ಆಯಾ ಕಂಪನಿಯ ಲಾಭ, ನಷ್ಟ, ಅವುಗಳ ನಿರ್ವಹಣಾ ಮಂಡಳಿಯ ಗುಣಮಟ್ಟ ಇತ್ಯಾದಿ ಅನೇಕ ಮಾಹಿತಿಯ ಆಧಾರದಲ್ಲಿ ನಡೆಯುತ್ತವೆ. ಹೀಗಾಗಿ, ಸಮರ್ಪಕ ಹೂಡಿಕೆಗೆ ನಮ್ಮ ಸಮಯ ಹಾಗೂ ಉತ್ತಮ ನಿರ್ಧಾರವನ್ನು ನಿರೀಕ್ಷಿಸುತ್ತದೆ. ಈ ವಿಚಾರದಲ್ಲಿ ಯೋಚಿಸುವ ಮುನ್ನ ದೇಶೀಯ ಮಾರುಕಟ್ಟೆ ಬಗ್ಗೆ ಹೆಚ್ಚಿನ ಮಾಹಿತಿ, ಗೆಲುವಿನ ಅನುಭವ ಎರಡೂ ಇರುವುದು ಸೂಕ್ತ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

3ನೇ ದಿನವೂ ಸೂಚ್ಯಂಕ ಕುಸಿತ

ಮುಂಬೈ (ಪಿಟಿಐ): ಸತತ ಮೂರನೇ ದಿನವಾದ ಬುಧವಾರವೂ ಕರಡಿ ಕುಣಿತ ಜೋರಾಗಿದ್ದರಿಂದ ಷೇರು ಸೂಚ್ಯಂಕಗಳು ಇಳಿಕೆ ಕಂಡಿವೆ.

ಯುಟಿಲಿಟಿ, ಬಂಡವಾಳ ಸರಕು ಮತ್ತು ಲೋಹದ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದವು. ಜೊತೆಗೆ, ವಿದೇಶಿ ಬಂಡವಾಳದ ಹೊರಹರಿವು ಹೆಚ್ಚಳದಿಂದಾಗಿ ದೇಶದ ಷೇರುಪೇಟೆಯಲ್ಲಿ ನಕಾರಾತ್ಮಕ ವಹಿವಾಟು ಮುಂದುವರಿಯಿತು ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 502 ಅಂಶ ಇಳಿಕೆ ಕಂಡು, 80,182 ಅಂಶಗಳಲ್ಲಿ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 137 ಅಂಶ ಇಳಿಕೆ ಕಂಡು, 24,198 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಟಾಟಾ ಮೋಟರ್ಸ್, ಪವರ್ ಗ್ರಿಡ್, ಎನ್‌ಟಿಪಿಸಿ, ಅದಾನಿ ಪೋರ್ಟ್ಸ್, ಜೆಎಸ್‌ಡಬ್ಲ್ಯು ಸ್ಟೀಲ್, ಐಸಿಐಸಿಐ ಬ್ಯಾಂಕ್, ಎಲ್ ಆ್ಯಂಡ್ ಟಿ, ಬಜಾಜ್ ಫೈನಾನ್ಸ್ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ. ಟಿಸಿಎಸ್, ರಿಲಯನ್ಸ್ ಇಂಡಸ್ಟ್ರಿಸ್, ಟೆಕ್ ಮಹೀಂದ್ರ ಮತ್ತು ಎಚ್‌ಸಿಎಲ್ ಟೆಕ್ನಾಲಜೀಸ್ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಮಂಗಳವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹6,409 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಜಾಗತಿಕ ಮಟ್ಟದಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 0.48ರಷ್ಟು ಏರಿಕೆಯಾಗಿದ್ದು, ಪ್ರತಿ ಬ್ಯಾರೆಲ್‌ಗೆ 73.67 ಡಾಲರ್ ಆಗಿದೆ. ಸೋಲ್, ಶಾಂಘೈ ಮತ್ತು ಹಾಂಗ್‌ಕಾಂಗ್ ಮಾರುಕಟ್ಟೆಗಳಲ್ಲಿ ಸಕಾರಾತ್ಮಕ ವಹಿವಾಟು ನಡೆದಿದೆ. ಟೋಕಿಯೊ ಮಾರುಕಟ್ಟೆ ಕುಸಿದಿದೆ.

ಎಚ್–1ಬಿ ವೀಸಾ ನಿಯಮ ಸರಳ

ವಾಷಿಂಗ್ಟನ್ (ಪಿಟಿಐ): ಮುಂದಿನ ತಿಂಗಳ 20ರಂದು ಅಧ್ಯಕ್ಷ ಸ್ಥಾನ ತೊರೆಯಲಿರುವ ಜೋ ಬೈಡನ್ ಅವರು ಎಚ್–1ಬಿ ವೀಸಾ ನಿಯಮಗಳನ್ನು ಪರಿಷ್ಕರಿಸಿದ್ದು, ಇದರಿಂದ ಅಮೆರಿಕದ ಕಂಪನಿಗಳು ವಿದೇಶಿ ಉದ್ಯೋಗಿಗಳನ್ನು ನೇಮಿಸಿಕೊಳ್ಳುವ ಪ್ರಕ್ರಿಯೆ ಸುಲಭವಾಗಲಿದೆ.



ಬೈಡನ್ ಅವರು ಮಂಗಳವಾರ ಹೊಸ ನಿಯಮಗಳನ್ನು ಪ್ರಕಟಿಸಿದ್ದು, ಎಫ್–1 ವಿದ್ಯಾರ್ಥಿ ವೀಸಾವನ್ನು ಎಚ್–1ಬಿ ವೀಸಾಗೆ ಪರಿವರ್ತನೆಗೊಳಿಸುವ ವಿಧಾನವೂ ಸರಳವಾಗಲಿದೆ.

2025ರ ಜ.20ರಂದು ಡೊನಾಲ್ಡ್ ಟ್ರಂಪ್ ಅವರು ಅಮೆರಿಕದ ಅಧ್ಯಕ್ಷರಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ತಮ್ಮ ಅವಧಿ ಇನ್ನೊಂದು ತಿಂಗಳು ಇರುವ ಬೆನ್ನಲ್ಲೇ ಬೈಡನ್ ಅವರು ನೂತನ ನಿಯಮಗಳನ್ನು ಪ್ರಕಟಿಸಿದ್ದಾರೆ.

ಎಚ್–1ಬಿ ವೀಸಾ ನೀಡಲು ನಿಗದಿಪಡಿಸಿದ್ದ ಮಾನದಂಡವನ್ನು ಪರಿಷ್ಕರಿಸಿದ್ದು, ಲಾಭರಹಿತ ಮತ್ತು ಸರ್ಕಾರಿ ಸಂಶೋಧನಾ ಸಂಸ್ಥೆಗಳು ಅಗತ್ಯಕ್ಕೆ ತಕ್ಕಂತೆ ಉದ್ಯೋಗಿಗಳನ್ನು ನೇಮಕ ಮಾಡಿಕೊಳ್ಳಬಹುದು. ಅಂತಹವರಿಗೆ ನೀಡುವ ಎಚ್–1ಬಿ ವೀಸಾಗೆ ಯಾವುದೇ ಮಿತಿ ಇರುವುದಿಲ್ಲ.

ಈ ಬಗ್ಗೆ ಪ್ರಕಟಣೆ ನೀಡಿರುವ ಹೋಮ್‌ಲ್ಯಾಂಡ್ ಸೆಕ್ಯುರಿಟಿ ಇಲಾಖೆ, 'ಅಮೆರಿಕದ ಉದ್ಯೋಗದಾತರು ತಮ್ಮ ವ್ಯಾಪಾರದ ಆದ್ಯತೆಗಳಿಗೆ ಅನುಗುಣವಾಗಿ ಉದ್ಯೋಗಿಗಳನ್ನು ನೇಮಿಸಿಕೊಳ್ಳಲು ಹಾಗೂ ಜಾಗತಿಕ ಮಾರುಕಟ್ಟೆಯಲ್ಲಿನ ಸ್ಪರ್ಧೆಯಲ್ಲಿ ಉಳಿಯಲು ಈ ಬದಲಾವಣೆಯಿಂದ ಅನುಕೂಲವಾಗಲಿದೆ' ಎಂದು ತಿಳಿಸಿದೆ.

ಎಫ್–1 ವೀಸಾ ಹೊಂದಿರುವ ವಿದ್ಯಾರ್ಥಿಗಳಿಗೆ ಉದ್ಯೋಗ ಅವಕಾಶಗಳನ್ನು ಪಡೆಯಲು ಆಗುತ್ತಿರುವ ಅಡಚಣೆಗಳನ್ನು ತಪ್ಪಿಸಲು, ಎಫ್–1 ವೀಸಾವನ್ನು ಎಚ್–1ಬಿಗೆ ಪರಿವರ್ತನೆ ಮಾಡಿಕೊಳ್ಳುವುದು ಸುಲಭವಾಗಲಿದೆ.

ಈಗಾಗಲೇ ಎಚ್–1ಬಿ ವೀಸಾ ನೀಡಲು ಅನುಮೋದನೆ ಆಗಿರುವ ಅರ್ಜಿಗಳನ್ನು ಅಮೆರಿಕದ ಪೌರತ್ವ ಮತ್ತು ವಲಸೆ ಸೇವಾ ಇಲಾಖೆಯಲ್ಲಿ (ಯುಎಸ್‌ಸಿಐಎಸ್) ತ್ವರಿತವಾಗಿ ಇತ್ಯರ್ಥಗೊಳಿಸಲಾಗುತ್ತದೆ.

ಕಾನೂನಿನ ಅಡಿಯಲ್ಲಿ ತಮ್ಮ ಸಿಬ್ಬಂದಿಯ ರಕ್ಷಣೆಗೆ ಬದ್ಧವಾಗಿರುವ ಅಮೆರಿಕದ ಉದ್ಯೋಗದಾತ ಸಂಸ್ಥೆಗಳ ಮೇಲಿನ ಹೊರೆಯನ್ನು ಕಡಿಮೆ ಮಾಡುವ ಹಾಗೂ ಸಿಬ್ಬಂದಿಯ ಅಗತ್ಯಗಳನ್ನು ಪೂರೈಸಿಕೊಳ್ಳುವುದನ್ನು ಖಚಿತಪಡಿಸಿಕೊಳ್ಳುವ ಬೈಡನ್ ಸರ್ಕಾರದ ಹಿಂದಿನ ಪ್ರಯತ್ನಗಳಿಗೆ ಪೂರಕವಾಗಿ ಹೊಸ ನಿಯಮ ತರಲಾಗಿದೆ ಎಂದೂ ಅದು ಮಾಹಿತಿ ನೀಡಿದೆ.

'ಜಾಗತಿಕವಾಗಿ ನುರಿತ ಪ್ರತಿಭಾವಂತರನ್ನು ನೇಮಿಸಿಕೊಳ್ಳಲು ಅಮೆರಿಕದ ಎಲ್ಲಾ ಉದ್ಯೋಗದಾತರು ಎಚ್–1ಬಿ ವೀಸಾವನ್ನು ಅವಲಂಬಿಸಿದ್ದು, ಹೊಸ ನಿಯಮದಿಂದ ದೇಶದಲ್ಲಿನ ಉದ್ಯೋಗದಾತರಿಗೆ ಅನುಕೂಲವಾಗಲಿದೆ' ಎಂದು ಹೋಮ್‌ಲ್ಯಾಂಡ್ ಸೆಕ್ಯುರಿಟಿಯ ಅಲೇಜಂಡ್ರೊ ಎನ್. ಮಯೋರ್ಕಾಸ್ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಸುನಿತಾ, ವಿಲ್ಮೋರ್ ಮಾರ್ಚ್ ಅಂತ್ಯಕ್ಕೆ ಭೂಮಿಗೆ ವಾಪಸ್?

ಕೇಪ್ ಕೆನವೆರಾಲ್ (ಅಮೆರಿಕ)(ಎಪಿ): ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ (ಐಎಸ್‌ಎಸ್) ಸಿಲುಕಿರುವ ನಾಸಾದ ಗಗನಯಾನಿಗಳಾದ ಸುನಿತಾ ವಿಲಿಯಮ್ಸ್ ಹಾಗೂ ಬುಚ್ ವಿಲ್ಮೋರ್ ಭೂಮಿಗೆ ಮರಳುವುದು ಮತ್ತಷ್ಟು ವಿಳಂಬವಾಗಲಿದೆ.

'ಈ ಇಬ್ಬರು ಗಗನಯಾನಿಗಳು ಭೂಮಿಗೆ ಮರಳುವುದು ಇನ್ನಷ್ಟು ತಡವಾಗಲಿದೆ. ಮಾರ್ಚ್ ಅಂತ್ಯಕ್ಕೆ ವಾಪಸಾಗಬಹುದು' ಎಂದು ನಾಸಾ ಮಂಗಳವಾರ ಘೋಷಿಸಿದೆ.

ಬೋಯಿಂಗ್ ಸಂಸ್ಥೆಯ ಸ್ಟಾರ್‌ಲೈನರ್ ಗಗನನೌಕೆಯಲ್ಲಿ ಸುನಿತಾ ಹಾಗೂ ವಿಲ್ಮೋರ್ ಅವರು ಜೂನ್ 5ರಂದು ಐಎಸ್‌ಎಸ್‌ನತ್ತ ಪ್ರಯಾಣ ಬೆಳೆಸಿದ್ದರು. ಗಗನನೌಕೆಯಲ್ಲಿ ಕಂಡುಬಂದ ತಾಂತ್ರಿಕ ದೋಷದಿಂದಾಗಿ ಭೂಮಿಗೆ ಮರಳಲು ಸಾಧ್ಯವಾಗಿಲ್ಲ.

ಕಿರಿಲೊವ್ ಹತ್ಯೆ: ಶಂಕಿತ ವ್ಯಕ್ತಿ ವಶಕ್ಕೆ

ಮಾಸ್ಕೊ (ಎಪಿ): 'ರಷ್ಯಾ ಸೇನೆಯ ಅಣು, ಜೈವಿಕ ಮತ್ತು ರಾಸಾಯನಿಕ ರಕ್ಷಣಾ ಪಡೆಗಳ ಮುಖ್ಯಸ್ಥ ಲೆಫ್ಟಿನೆಂಟ್ ಜನರಲ್ ಇಗೋರ್ ಕಿರಿಲೊವ್ ಅವರ ಹತ್ಯೆ ಸಂಬಂಧ ಶಂಕಿತ ವ್ಯಕ್ತಿಯೊಬ್ಬನನ್ನು ವಶಕ್ಕೆ ಪಡೆಯಲಾಗಿದೆ' ಎಂದು ರಷ್ಯಾದ ಫೆಡರಲ್ ಸೆಕ್ಯುರಿಟಿ ಸರ್ವೀಸ್ (ಎಫ್‌ಎಸ್‌ಬಿ) ಬುಧವಾರ ಹೇಳಿದೆ.

ವ್ಯಕ್ತಿಯ ಹೆಸರನ್ನು ಎಫ್‌ಎಸ್‌ಬಿ ಬಹಿರಂಗಪಡಿಸಲಿಲ್ಲ. 'ಆತ ಉಜ್ಬೇಕಿಸ್ತಾನ ಪ್ರಜೆಯಾಗಿದ್ದು, ತನ್ನನ್ನು ಉಕ್ರೇನ್‌ನ ವಿಶೇಷ ಸೇವೆಯು ಈ ಕೆಲಸಕ್ಕೆಂದೇ ನೇಮಿಸಿಕೊಂಡಿತ್ತು ಎಂದು ಹೇಳಿಕೊಂಡಿದ್ದಾರೆ' ಎಂದು ಎಫ್‌ಎಸ್‌ಬಿ ತಿಳಿಸಿದೆ.

'ಅಬ್ಸರ್ವರ್' ಪತ್ರಿಕೆ ಮಾರಾಟ

ಲಂಡನ್ (ಎಪಿ): ಬ್ರಿಟನ್ ಮಾಧ್ಯಮ ಲೋಕದ ಪ್ರಗತಿಪರ ಮೌಲ್ಯಗಳ ಪ್ರತಿಪಾದಕ, ಜಗತ್ತಿನ ಅತ್ಯಂತ ಹಳೆಯದಾದ ಭಾನುವಾರದ ಪತ್ರಿಕೆ 'ದಿ ಅಬ್ಸರ್ವರ್' ಅನ್ನು ಗಾರ್ಡಿಯನ್ ಮೀಡಿಯಾ ಸಮೂಹವು ಟಾರ್ಟೈಸ್ ಮೀಡಿಯಾ ಸಂಸ್ಥೆಗೆ ಮಾರಾಟ ಮಾಡಿದೆ.

ಗಾರ್ಡಿಯನ್ ಮೀಡಿಯಾ ಸಮೂಹದ ಮಾಲೀಕ ಸಂಸ್ಥೆ 'ಸ್ಕಾಟ್ ಟ್ರಸ್ಟ್' ಈ ಕುರಿತು ಹೇಳಿಕೆ ಬಿಡುಗಡೆ ಮಾಡಿದೆ. ಪತ್ರಿಕೆಯನ್ನು ಎಷ್ಟು ಮೊತ್ತಕ್ಕೆ ಮಾರಾಟ ಮಾಡಲಾಗಿದೆ ಎಂದು ಟ್ರಸ್ಟ್ ಬಹಿರಂಗಪಡಿಸಿಲ್ಲ. ಆದರೆ, ಎರಡೂ ಕಂಪನಿಗಳ ಮಧ್ಯೆ ಮಾರಾಟವು ಷೇರು ಖರೀದಿ ಹಾಗೂ ಹೂಡಿಕೆ ಷರತ್ತುಗಳ ಮೂಲಕ ನಡೆದಿದೆ ಎಂದು ಹೇಳಿದೆ. 1791ರಲ್ಲಿ 'ದಿ ಅಬ್ಸರ್ವರ್' ಆರಂಭವಾಗಿತ್ತು. 1993ರಲ್ಲಿ ಗಾರ್ಡಿಯನ್ ಮೀಡಿಯಾ ಸಮೂಹವು ಈ ಪತ್ರಿಕೆಯನ್ನು ಖರೀದಿಸಿತು. ಗಾರ್ಡಿಯನ್ ಮೀಡಿಯಾ ಸಮೂಹದ ಪತ್ರಕರ್ತರು ಪತ್ರಿಕೆಯ ಮಾರಾಟವನ್ನು ವಿರೋಧಿಸಿದ್ದು, ಈ ತಿಂಗಳ ಆರಂಭದಲ್ಲಿ ಪ್ರತಿಭಟನೆಯನ್ನೂ ನಡೆಸಿದ್ದರು.

ದಿಢೀರ್ ನಿವೃತ್ತಿ ಘೋಷಿಸಿದ ಆಲ್‌ರೌಂಡರ್ • ಫ್ರ್ಯಾಂಚೈಸಿ ಕ್ರಿಕೆಟ್‌ನಲ್ಲಿ ಮುಂದುವರಿಯುವ ಇಂಗಿತ

‘ಕ್ರಿಕೆಟ್ ಮೇಧಾವಿ’ ಅಶ್ವಿನ್ ಹೆಜ್ಜೆಗುರುತು

• ಗಿರೀಶ ದೊಡ್ಡಮನಿ



ಬೆಂಗಳೂರಿನಲ್ಲಿ ಅಭಿಮಾನಿಗಳೊಂದಿಗೆ ಸೆಲ್ಫಿ ಕ್ಲಿಕ್ಕಿಸಿಕೊಂಡ ಆರ್. ಅಶ್ವಿನ್ — ಪ್ರಜಾವಾಣಿ ಸಂಗ್ರಹ ಚಿತ್ರ: ಎಸ್‌.ಕೆ. ದಿನೇಶ್

ರವಿಚಂದ್ರನ್ ಅಶ್ವಿನ್ ಕಳೆದ ಹದಿನಾಲ್ಕು ವರ್ಷಗಳಲ್ಲಿ ಕ್ರಿಕೆಟ್‌ನಲ್ಲಿ ಮಾಡಿದ ಸಾಧನೆಗಳದ್ದು ಒಂದು ತೂಕವಾದರೆ, ತಮ್ಮ ನೇರ ನಡೆ, ನುಡಿ, ಶಿಸ್ತು, ಸಮಯಪ್ರಜ್ಞೆ ಮತ್ತು ಬುದ್ಧಿಮತ್ತೆಯ ಮೂಲಕ ಬೀರಿದ ಪ್ರಭಾವವನ್ನು ಮತ್ತೊಂದು ತೂಕ. ಆದ್ದರಿಂದಲೇ ಅಶ್ವಿನ್ ಅವರನ್ನು ಕೇವಲ ಆಫ್‌ಸ್ಪಿನ್- ಆಲ್‌ರೌಂಡರ್ ಆಗಿ ನೋಡಲಾಗದು. ಅವರ ವಿದಾಯದ ಕ್ಷಣವನ್ನು ಕೂಡ ಸಹಜ ನಿರ್ಧಾರವೆಂದು ಪರಿಗಣಿಸಲಾಗದು.

ರವಿಚಂದ್ರನ್ ಅಶ್ವಿನ್ ಅವರು ತಮ್ಮ ಬತ್ತಳಿಕೆಯ ಪ್ರಮುಖ ಅಸ್ತ್ರ ಕೇರಂ ಬಾಲ್ ಮೂಲಕ ಘಟಾನುಘಟಿ ಬ್ಯಾಟರ್‌ಗಳಿಗೆ ಆಘಾತ ನೀಡಿದ ಮಾದರಿಯಲ್ಲಿಯೇ ಬಾರ್ಡರ್–ಗಾವಸ್ಕರ್ ಸರಣಿಯ ಮಧ್ಯದಲ್ಲಿಯೇ ತಮ್ಮ ವೃತ್ತಿಜೀವನಕ್ಕೆ ವಿದಾಯ ಘೋಷಿಸಿ ಅಚ್ಚರಿ ಮೂಡಿಸಿದ್ದಾರೆ. ಗಾಬಾ ಕ್ರೀಡಾಂಗಣದಲ್ಲಿ ಇನ್ನೂ ಮೂರನೇ ಟೆಸ್ಟ್ ಪಂದ್ಯದ ಕೊನೆಯ ದಿನದಾಟ ಮುಗಿದಿರಲಿಲ್ಲ. ಟಿ.ವಿ. ಪರದೆಯ ಮೇಲೆ ಬಂದ ಒಂದು ದೃಶ್ಯ ಸಂಚಲನ ಮೂಡಿಸಿತು. ಡ್ರೆಸ್ಸಿಂಗ್ ರೂಮ್‌ನಲ್ಲಿ ಕುಳಿತಿದ್ದ ವಿರಾಟ್ ಕೊಹ್ಲಿ ಅವರು ತಮ್ಮ ಪಕ್ಕದಲ್ಲಿದ್ದ ಅಶ್ವಿನ್ ಅವರನ್ನು ಆಲಂಗಿಸಿಕೊಂಡು ಹಾರೈಸಿದ ಆ ದೃಶ್ಯ ಸಾಮಾಜಿಕ ಜಾಲತಾಣಗಳಲ್ಲಿ ಕಾವೇರಿದ ಚರ್ಚೆಗೆ ಕಾರಣವಾಯಿತು.

ತಮಿಳುನಾಡಿನ 38 ವರ್ಷದ ಆಲ್‌ರೌಂಡರ್ ಕ್ರಿಕೆಟ್‌ಗೆ ವಿದಾಯ ಹೇಳುತ್ತಿರಬಹುದು ಎಂಬ ಅನುಮಾನವು ಸ್ವಲ್ಪ ಹೊತ್ತಿನ ನಂತರ ನಿಜವಾಯಿತು. ಪಂದ್ಯದ ನಂತರ ಸುದ್ದಿಗೋಷ್ಠಿಗೆ ಬಂದ ನಾಯಕ ರೋಹಿತ್ ಅವರೊಂದಿಗೆ ಅಶ್ವಿನ್ ಕೂಡ ಇದ್ದರು. ತಮ್ಮ ನಿರ್ಧಾರವನ್ನು ಚುಟುಕಾಗಿ ಸುದ್ದಿಗಾರರಿಗೆ ತಿಳಿಸಿದ ಅವರು ಎಲ್ಲರಿಗೂ ಕೃತಜ್ಞತೆ ಸಲ್ಲಿಸಿ ಹೊರಟರು. ಕ್ಯಾಮರಾಗಳ ಫ್ಲ್ಯಾಷ್ ಬೆಳಕಲ್ಲಿ ಅಶ್ವಿನ್ ಕಣ್ಣಂಚಿನಲ್ಲಿ ಜಿನುಗಿದ್ದ ಪಸೆ ಮಿಂಚಿತು.

ಚೆನ್ನೈ ನ ರೈಲ್ವೆ ಇಲಾಖೆಯ ಲೆಕ್ಕಪತ್ರ ವಿಭಾಗದಲ್ಲಿ ಉದ್ಯೋಗಿಯಾಗಿದ್ದ ರವಿಚಂದ್ರನ್ ಮತ್ತು ಚಿತ್ರಾ ದಂಪತಿಯ ಮಗ ಅಶ್ವಿನ್, ಭಾರತದ ಅತಿ ಹೆಚ್ಚು ವಿಕೆಟ್ ಗಳಿಸಿದ ಎರಡನೇ ಬೌಲರ್ ಹಾಗೂ ದೊಡ್ಡ ಮ್ಯಾಚ್ ವಿನ್ನರ್ ಆಗಿ ರೂಪುಗೊಂಡಿದ್ದು ರೋಚಕ ಕತೆ. ಮಧ್ಯಮವರ್ಗದ ಕುಟುಂಬದ ಹುಡುಗ ಅಶ್ವಿನ್ ಬಾಲ್ಯದಲ್ಲಿ ಕೆಲವು ಆರೋಗ್ಯ ತೊಂದರೆಗಳಿಂದ ಬಳಲಿದ್ದರು. ಚೈಲ್ಡ್ ಟ್ಯೂಬರ್‌ಕ್ಯುಲೋಸಿಸ್ ಅವರನ್ನು ಕಾಡಿತ್ತು. ಹೆಚ್ಚು ಊಟ ಮಾಡಲು, ಪ್ರಯಾಣ ಮಾಡಲು ಆಗುತ್ತಿರಲಿಲ್ಲ. ವಾಂತಿ, ಕೆಮ್ಮು, ಸುಸ್ತು ಸತತವಾಗಿ ಕಾಡುತ್ತಿತ್ತು. ತಂದೆ, ತಾಯಿ ಬಹಳಷ್ಟು ನಿಗಾ ವಹಿಸಿ, ವೈದ್ಯರಿಂದ ಚಿಕಿತ್ಸೆ ಕೊಡಿಸುತ್ತಿದ್ದರು. ಅಂತಹ ಸೂಕ್ಷ್ಮ ಆರೋಗ್ಯ ಸ್ಥಿತಿಯಿಂದ ಮೇಲೆದ್ದು ಬಂದು ಕ್ರಿಕೆಟಿಗನಾಗಲು ತಂದೆಯೇ ಪ್ರೇರಣೆಯಾದರು. ಕ್ಲಬ್ ಮಟ್ಟದಲ್ಲಿ ವೇಗದ ಬೌಲರ್ ಆಗಿದ್ದ ರವಿಚಂದ್ರನ್ ಅವರು ಬೈಕ್ ಮೇಲೆ ಮಗನನ್ನು ಕೂರಿಸಿಕೊಂಡು ಚೆಪಾಕ್ ಕ್ರೀಡಾಂಗಣಕ್ಕೆ ಪಂದ್ಯ ನೋಡಲು ಕರೆದುಕೊಂಡು ಹೋಗುತ್ತಿದ್ದರು.

‘1993ರಲ್ಲಿ ಭಾರತ ಮತ್ತು ಇಂಗ್ಲೆಂಡ್ ನಡುವಣ ನಡೆದಿದ್ದ ಪಂದ್ಯಕ್ಕೆ ಅಪ್ಪ ಕರೆದೊಯ್ದಿದ್ದರು. ಟೆರೆಸ್ ಟಿಕೆಟ್ ಸಿಕ್ಕಿತ್ತು. ಸಚಿನ್ ತೆಂಡೂಲ್ಕರ್, ಕಪಿಲ್ ದೇವ್, ಅನಿಲ್ ಕುಂಬ್ಳೆ ಅವರ ಆಟವನ್ನು ಮೊದಲ ಬಾರಿಗೆ ನೋಡಿದ್ದೆ. ಭಾರತ ತಂಡ ಗೆದ್ದಿತ್ತು. ಮೈದಾನದಲ್ಲಿ ಕುಳಿತು ಪಂದ್ಯ ವೀಕ್ಷಿಸುವ ಮಜಾನೇ ಬೇರೆ. ಅವತ್ತು ಅಪ್ಪ ಕಾಮೆಂಟ್ರಿ ಬಾಕ್ಸ್‌ಗೂ ಕರೆದೊಯ್ದು ಸುನಿಲ್ ಗಾವಸ್ಕರ್ ಅವರಿಂದ ಹಸ್ತಾಕ್ಷರ ಕೊಡಿಸಿದ್ದರು’ ಎಂದು ಅಶ್ವಿನ್ ತಮ್ಮ ಪುಸ್ತಕ ‘ಐ ಹ್ಯಾವ್ ದಿ ಸ್ಟ್ರೀಟ್ಸ್ ಎ ಕುಟ್ಟಿ ಕ್ರಿಕೆಟ್ ಸ್ಟೋರಿ’ಯಲ್ಲಿ ಬರೆದಿದ್ದಾರೆ.

ಅದಾಗಿ 18 ವರ್ಷಗಳ ನಂತರ ಸಚಿನ್, ಧೋನಿಯೊಂದಿಗೆ ಡ್ರೆಸ್ಸಿಂಗ್ ರೂಮ್ ಹಂಚಿಕೊಳ್ಳುವ ಮಟ್ಟಕ್ಕೆ ಅಶ್ವಿನ್ ಬೆಳೆದರು. 2011ರಲ್ಲಿ ಧೋನಿ ನಾಯಕತ್ವದ ಭಾರತ ತಂಡಕ್ಕೆ ಪದಾರ್ಪಣೆ ಮಾಡಿದರು. ಕಳೆದ 14 ವರ್ಷಗಳಲ್ಲಿ ಅದೆಷ್ಟೋ ಬಾರಿ ಸುನಿಲ್ ಗಾವಸ್ಕರ್ ಅವರು ಅಶ್ವಿನ್ ಹಲವು ಬಾರಿ ಸಂದರ್ಶನ ಮಾಡಿದ್ದಾರೆ.

ಹರ್ಭಜನ್‌ರನ್ನು ಮೀರಿ ಬೆಳೆದ ಆ್ಯಷ್: ಹರ್ಭಜನ್ ಸಿಂಗ್ ನಂತರ ಅವರ ಸ್ಥಾನವನ್ನು ತುಂಬುವ ಬೌಲರ್ ಹುಡುಕಾಟದಲ್ಲಿ ಆಯ್ಕೆದಾರರು ಇದ್ದರು. ಆಗ ಕಣ್ಣಿಗೆ ಬಿದ್ದಿದ್ದು ಅಶ್ವಿನ್. ತಮಿಳುನಾಡು ತಂಡ ವನ್ನು ಪ್ರತಿನಿಧಿಸುತ್ತಿದ್ದ ಅಶ್ವಿನ್ ದೇಶಿ ಕ್ರಿಕೆಟ್‌ನಲ್ಲಿ ಹೆಜ್ಜೆಗುರುತು ಮೂಡಿಸುತ್ತಿದ್ದರು. 2010–11ರಲ್ಲಿ ಭಾರತ ತಂಡಕ್ಕೆ ಸೇರುವ ಅವಕಾಶ ಒದಗಿಬಂದಿತು. ಧೋನಿ ನಾಯಕತ್ವದ ತಂಡದಲ್ಲಿ ಸಚಿನ್, ಗೌತಮ್ ಗಂಭೀರ್, ವೀರೇಂದ್ರ ಸೆಹ್ವಾಗ್, ವಿವಿಎಸ್ ಲಕ್ಷ್ಮಣ್, ಯುವರಾಜ್ ಸಿಂಗ್, ಜಹೀರ್ ಖಾನ್, ರಾಹುಲ್ ದ್ರಾವಿಡ್ ಅವರಂತಹ ಘಟಾನುಘಟಿಗಳು ಇದ್ದರು.

ಈ ಖ್ಯಾತನಾಮರ ಸಾಮೀಪ್ಯದಿಂದ ಬಹಳಷ್ಟು ವಿಷಯ ಕಲಿತರು. 2011ರ ಏಕದಿನ ವಿಶ್ವಕಪ್ ಗೆದ್ದ ಭಾರತ ತಂಡದಲ್ಲಿ ಅಶ್ವಿನ್ ಇದ್ದರು. ನಾಯಕ ಧೋನಿ ಮತ್ತು ಕೋಚ್ ಗ್ಯಾರಿ ಕರ್ಸ್ಟನ್ ಅವರ ಮನಸ್ಸು ಗೆದ್ದ ಅಶ್ವಿನ್ ಅದೇ ವರ್ಷ ವೆಸ್ಟ್ ಇಂಡೀಸ್ ಎದುರು ಪದಾರ್ಪಣೆ ಮಾಡಿದರು. ಎರಡನೇ ಇನಿಂಗ್ಸ್‌ನಲ್ಲಿ 6 ವಿಕೆಟ್ ಗಳಿಸಿ, ಪಂದ್ಯಶ್ರೇಷ್ಠ ಗೌರವ ಗಿಟ್ಟಿಸಿದರು. 2013ರ ಚಾಂಪಿಯನ್ಸ್ ಟ್ರೋಫಿ ಗೆದ್ದ ತಂಡದಲ್ಲಿಯೂ ಇದ್ದರು.

ಕೇರಂ ಬಾಲ್ ಪ್ರಯೋಗದಲ್ಲಿ ಪರಿಣತರಾದ ಅಶ್ವಿನ್ ಚುರುಕಾದ ಬುದ್ಧಿಮತ್ತೆಯಿಂದಲೂ ಗಮನ ಸೆಳೆದರು. ಅವರು ಬೌಲಿಂಗ್ ಅನ್ನು ಕೇವಲ ಆಟ ಅಥವಾ ಕಲೆಯನ್ನಾಗಿ ನೋಡಲಿಲ್ಲ. ಅದನ್ನು ಭೌತವಿಜ್ಞಾನವೆಂದು ಪರಿಗಣಿಸಿದರು. ಬೌಲಿಂಗ್ ಬಗ್ಗೆ ಮಾತನಾಡುವಾಗಲೆಲ್ಲ ಭೌತವಿಜ್ಞಾನದ ಪದಗಳ ಹೋಲಿಕೆಯೊಂದಿಗೆ ಮಾತನಾಡುತ್ತಿದ್ದರು. ಆ ಮೂಲಕ ಹೊಸ ಆಯಾಮ, ತಂತ್ರಗಳನ್ನು ಶೋಧಿಸಿದ್ದು ಅವರ ಹೆಚ್ಚುಗಾರಿಕೆ. ಇದರಿಂದಾಗಿ ಅವರು ಹರಭಜನ್ ಸಿಂಗ್ ಅವರ ದಾಖಲೆಗಳನ್ನೂ ಮೀರಿ ಮುನ್ನುಗ್ಗಿದ್ದರು. ಆಫ್‌ಸ್ಪಿನ್ ಬೌಲಿಂಗ್ ಕಲೆಯನ್ನು ಮತ್ತಷ್ಟು ಉತ್ತುಂಗಕ್ಕೆ ಏರಿಸಿದರು. ಅವರನ್ನೂ ಮೀರಿಸುವ ಆಫ್‌ಸ್ಪಿನ್ನರ್ ಬರುವರೇ ಎಂಬ ಪ್ರಶ್ನೆ ಉಳಿದಿದೆ.

ಅಂತರರಾಷ್ಟ್ರೀಯ ಕ್ರಿಕೆಟ್: ಆರ್. ಅಶ್ವಿನ್ ಸಾಧನೆ

ಬೌಲಿಂಗ್

ಮಾದರಿ	ಪಂದ್ಯ	ಇನಿಂಗ್ಸ್	ಎಸೆತ	ರನ್	ವಿಕೆಟ್	ಶ್ರೇಷ್ಠ ಇನಿಂಗ್ಸ್	ಶ್ರೇಷ್ಠ ಪಂದ್ಯ	ಎಕಾನಮಿ
ಟೆಸ್ಟ್	106	200	27246	12891	537	59ಕ್ಕೆ7	140ಕ್ಕೆ13	2.83
ಏಕದಿನ	116	114	6303	5180	156	25ಕ್ಕೆ4	25ಕ್ಕೆ4	4.93
ಟಿ20	65	65	1452	1672	72	8ಕ್ಕೆ4	8ಕ್ಕೆ4	6.90

ಬ್ಯಾಟಿಂಗ್

ಮಾದರಿ	ಪಂದ್ಯ	ಇನಿಂಗ್ಸ್	ರನ್	ಶ್ರೇಷ್ಠ	ಸರಾಸರಿ	ಶತಕ	ಅರ್ಧಶತಕ	ಬೌಂಡರಿ	ಸಿಕ್ಸರ್	ಕ್ಯಾಚ್
ಟೆಸ್ಟ್	106	151	3503	124	25.75	6	14	399	23	36
ಏಕದಿನ	116	63	707	65	16.44	0	1	60	7	31
ಟಿ20	65	19	184	31*	26.28	0	0	17	4	11

ಅಶ್ವಿನ್‌ಗೆ ಸಿಗದ ನಾಯಕತ್ವ

ತಮಿಳುನಾಡಿನ ಅಶ್ವಿನ್ ಅವರು ಕ್ರಿಕೆಟ್ ನಲ್ಲಿ ಹಲವಾರು ಸಾಧನೆಗಳನ್ನು ಮಾಡಿದ್ದಾರೆ. ಜೊತೆಗೆ ಕ್ರಿಕೆಟ್ ಆಟವನ್ನು ಸೂಕ್ಷ್ಮವಾಗಿ ಮತ್ತು ಆಳವಾಗಿ ಅರಿಯುವ ಕಲೆ ಗೊತ್ತಿತ್ತು. ತಾವು ಆಡುವ ಪಂದ್ಯಗಳಲ್ಲಿ ನಾಯಕರಿಗೆ ಉಪಯುಕ್ತ ಸಲಹೆಗಳನ್ನು ಕೊಡುವ ಚಾಕಚಕ್ಯತೆ ಅವರಲ್ಲಿತ್ತು. ಒತ್ತಡ ಸಂದರ್ಭದಲ್ಲಿ ಪಂದ್ಯಗಳನ್ನು ತಮ್ಮ ಬೌಲಿಂಗ್ ಅಥವಾ ಬ್ಯಾಟಿಂಗ್ ಮೂಲಕ ಗೆಲ್ಲಿಸಿಕೊಟ್ಟ ಉದಾಹರಣೆಗಳು ಹಲವಾರಿವೆ. ಆದರೂ ಅವರಿಗೆ ಭಾರತ ತಂಡದ ನಾಯಕತ್ವ ಒಲಿಯಲಿಲ್ಲ. ಹಿರಿತನ, ಪ್ರತಿಭೆ ಮತ್ತು ನಾಯಕತ್ವ ಗುಣಗಳಿದ್ದರೂ ತಂಡವನ್ನು ಮುನ್ನಡೆಸುವ ಅವಕಾಶ ಅವರಿಗೆ ದೊರೆಯಲಿಲ್ಲ.

ವಿವಾದಗಳಿಗೆ ಅಳುಕದ ವ್ಯಕ್ತಿತ್ವ

ಅಶ್ವಿನ್ ತಮ್ಮ ವೃತ್ತಿಜೀವನದಲ್ಲಿ ನೇರ, ನಿಷ್ಠುರ ನುಡಿಗಳನ್ನು ನುಡಿದು ವಿವಾದ ಮೈಮೇಲೆಳೆದುಕೊಂಡ ಘಟನೆಗಳು ಬಹಳಷ್ಟಿವೆ. ಆದರೆ ಅವರು ಯಾವುದೇ ಕಾರಣಕ್ಕೂ ತಮ್ಮ ಹೇಳಿಕೆಗಳಿಂದ ಹಿಂದೆ ಸರಿಯದೇ ವಿವಾದ ಅಥವಾ ಚರ್ಚೆಗಳನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುವ ಛಾತಿ ತೋರಿಸಿದವರು.

ಅದರಲ್ಲಿ ಪ್ರಮುಖವಾಗಿ ಮಂಕಡಿಂಗ್ ಕೂಡ ಒಂದು. ನಾನ್‌ಸ್ಟ್ರೈಕರ್ ಬ್ಯಾಟರ್ ಅನ್ನು ಬೌಲರ್ ರನ್ ಔಟ್ ಮಾಡುವುದನ್ನು ‘ನ್ಯಾಯ ಸಮ್ಮತ ವಲ್ಲದ ಆಟ’ದ ನಿಯಮದಡಿಯಲ್ಲಿ ನೋಡಲಾಗುತ್ತಿತ್ತು. ದಶಕದ ಹಿಂದೆ ‘ಮಂಕಡಿಂಗ್’ ಎನ್ನಲಾಗುತ್ತಿತ್ತು. ಆದರೆ ಅನ್ನು ಈಚೆಗೆ ಮೆರಿಲ್‌ಬೋನ್ ಕ್ರಿಕೆಟ್ ಕ್ಲಬ್ (ಎಂಸಿಸಿ) ಬದಲಾಯಿಸಿದೆ. ಅದನ್ನು ರನೌಟ್ ಎಂದು ‘ನಿಯಮಬದ್ಧ’ಗೊಳಿಸಿತು.

2019ರಲ್ಲಿ ನಡೆದಿದ್ದ ಐಪಿಎಲ್ ಪಂದ್ಯದಲ್ಲಿ ಆಗ ಪಂಜಾಬ್ ಕಿಂಗ್ಸ್‌ನಲ್ಲಿದ್ದ ಅಶ್ವಿನ್ ಅವರು ರಾಜಸ್ಥಾನ ರಾಯಲ್ಸ್ ತಂಡದ ಬ್ಯಾಟರ್ ಜೋಸ್ ಬಟ್ಲರ್ ಅವರನ್ನು ಔಟ್ ಮಾಡಿದ್ದರು. ಆಗ ಭುಗಿಲೆದ್ದ ಚರ್ಚೆ ಹಲವು ಆಯಾಮಗಳಲ್ಲಿ ನಡೆದಿತ್ತು. ಇಂಗ್ಲೆಂಡ್‌ನ ಹಲವು ಮಾಜಿ ಹಾಗೂ ಹಾಲಿ ಕ್ರಿಕೆಟಿಗರು ಅಶ್ವಿನ್ ಮೇಲೆ ಟೀಕೆಗಳ ಮಳೆಯನ್ನೇ ಸುರಿಸಿದ್ದರು. ಆದರೆ ಅಶ್ವಿನ್ ಗಟ್ಟಿಯಾಗಿ ನಿಂತರು. ಟೀಕೆಗಳನ್ನು ಎದುರಿಸಿದರು. ಕಡೆಗೂ ಎಂಸಿಸಿ ಮಣಿಯಿತು.

‘ಕುಟ್ಟಿ ಸ್ಟೋರೀಸ್’ ಯೂಟ್ಯೂಬ್ ವಾಹಿನಿ

ಅಶ್ವಿನ್ ಕ್ರಿಕೆಟ್ ಅಂಗಳದ ಹೊರಗೂ ತಮ್ಮ ಛಾಪು ಮೂಡಿಸಿದವರು. ಅದರಲ್ಲೂ ಅವರ ಯೂಟ್ಯೂಬ್ ವಾಹಿನಿ ‘ಕುಟ್ಟಿ ಸ್ಟೋರೀಸ್’ ಬಹಳ ಜನಪ್ರಿಯವಾಗಿದೆ. ಮಾಜಿ ಮತ್ತು ಹಾಲಿ ಕ್ರಿಕೆಟಿಗರೊಂದಿಗೆ ಅವರು ಈ ವಾಹಿನಿಯಲ್ಲಿ ನಡೆಸುವ ಸಂವಾದಗಳು ಮಾಹಿತಿಪೂರ್ಣವಾಗಿರುತ್ತವೆ. ಪಾಡ್‌ಕಾಸ್ಟ್ ಮೂಲಕವೂ ಅವರು ಕ್ರಿಕೆಟ್ ಲೋಕದ ಅಪರೂಪದ ಸಂಗತಿಗಳ ಕುರಿತು ಚರ್ಚೆ ನಡೆಸುತ್ತಾರೆ.

ಜಡೇಜ ಅವರೊಂದಿಗೆ ಜೊತೆಯಾಟ

ಅಶ್ವಿನ್ ಮತ್ತು ಎಡಗೈ ಆಲ್‌ರೌಂಡರ್ ರವೀಂದ್ರ ಜಡೇಜ ಅವರಿಬ್ಬರ ಬೌಲಿಂಗ್ ಜೊತೆಯಾಟದಿಂದ ಭಾರತ ಬಹಳಷ್ಟು ಪಂದ್ಯಗಳಲ್ಲಿ ಗೆಲುವು ಸಾಧಿಸಿದೆ. ಬ್ಯಾಟಿಂಗ್‌ನಲ್ಲಿಯೂ ಇವರ ಜೊತೆಯಾಟಗಳು ಇವೆ. ಈಚೆಗೆ ಚೆನ್ನೈನಲ್ಲಿ ಬಾಂಗ್ಲಾ ವಿರುದ್ಧ ನಡೆದಿದ್ದ ಟೆಸ್ಟ್‌ನಲ್ಲಿ ಅವರ ಜೊತೆಯಾಟದಲ್ಲಿ 199 ರನ್ ಸೇರಿಸಿದ್ದರು. ಇದರಿಂದಾಗಿ ಭಾರತ ತಂಡವು ದೊಡ್ಡ ಮೊತ್ತ ಗಳಿಸಲು ಸಾಧ್ಯವಾಗಿತ್ತು.


ತವರಿನಂಗಳದಲ್ಲಿ ಅಶ್ವಿನ್ ಮಹತ್ವ: ಕಳೆದ 12 ವರ್ಷಗಳಲ್ಲಿ ಭಾರತ ತಂಡವು ತವರಿನಲ್ಲಿ ಕೇವಲ ಎರಡು ಸರಣಿ ಸೋತಿದೆ. ಉಳಿದಂತೆ ಸತತ 18 ಸರಣಿಗಳಲ್ಲಿ ಭಾರತ ಜಯಿಸಿತ್ತು. ಆ ಜಯಗಳಲ್ಲಿ ಅಶ್ವಿನ್ ಪಾತ್ರವೇ ಮಹತ್ವದ್ದಾಗಿತ್ತು. ಆದರೆ 2012ರಲ್ಲಿ ಇಂಗ್ಲೆಂಡ್ ಮತ್ತು ಈಚೆಗೆ ನ್ಯೂಜಿಲೆಂಡ್ ಎದುರಿನ ಸರಣಿಯಲ್ಲಿ ಭಾರತವು ಸೋತಾಗ ಅಶ್ವಿನ್ ಉತ್ತಮ ಸಾಧನೆ ಮಾಡಿರಲಿಲ್ಲ. ಅದರ ಪರಿಣಾಮ ಸೋಲು ಎಂದು ವಿಶ್ಲೇಷಿಸಲಾಗಿತ್ತು.


ಎಲ್ಲ ಮಾದರಿಯ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಇದು ನನ್ನ ಕೊನೆಯ ದಿನ. ಕ್ರಿಕೆಟ್ ಅನ್ನು ತುಂಬಾ ಆನಂದಿಸಿದ್ದೇನೆ. ರೋಹಿತ್ ಶರ್ಮಾ ಮತ್ತು ತಂಡದ ಸಹ ಆಟಗಾರರೊಂದಿಗೆ ಹಲವಾರು ಸ್ಮರಣೀಯ ನೆನಪುಗಳಿವೆ. ವೃತ್ತಿ ಜೀವನದಲ್ಲಿ ನೆರವಾದ ಎಲ್ಲರಿಗೂ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಬಿಸಿಸಿಐ, ನನ್ನ ತಂಡ, ನನ್ನ ಕೋಚ್ ಬಳಗ ಎಲ್ಲರೂ ಈ ಪಯಣದ ಭಾಗವಾಗಿದ್ದಾರೆ. ಮುಖ್ಯವಾಗಿಯೂ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಅಜಿಂಕ್ಯ ರಹಾನೆ, ಚೇತೇಶ್ವರ ಪೂಜಾರ ವಿಕೆಟ್ ಹಿಂದೆ ನಿಂತು ಕ್ಯಾಚ್‌ಗಳನ್ನು ಹಿಡಿದು ನನಗೆ ವಿಕೆಟ್ ಗಳಿಸುವಲ್ಲಿ ನೆರವಾಗಿದ್ದಾರೆ

ಆರ್.ಅಶ್ವಿನ್ (ಬುಧವಾರ ಸುದ್ದಿಗೋಷ್ಠಿಯಲ್ಲಿ)


ನಾನು ನಿಮ್ಮೊಂದಿಗೆ 14 ವರ್ಷಗಳ ಕಾಲ ಆಡಿದ್ದೇನೆ. ಇಂದು ನೀವು ನಿವೃತ್ತಿ ಘೋಷಿಸಿದಾಗ ತುಸು ಭಾವುಕನಾದೆ. ನಿಮ್ಮೊಂದಿಗೆ ಆಟದಲ್ಲಿ ಕಳೆದ ಕ್ಷಣಗಳು ಸ್ಮೃತಿಪಟಲದ ಮುಂದೆ ಹಾದುಹೋದವು

ವಿರಾಟ್ ಕೊಹ್ಲಿ ಭಾರತ ತಂಡದ ಆಟಗಾರ


ಪ್ರಯೋಗ ಮತ್ತು ವಿಕಸನಕ್ಕೆ ಎಂದಿಗೂ ಭಯಪಡದಿರುವುದು ನಿಜವಾದ ಶ್ರೇಷ್ಠತೆ ಎಂದು ನಿಮ್ಮ ಪ್ರಯಾಣವು ತೋರಿಸುತ್ತದೆ. ನಿಮ್ಮ ಪರಂಪರೆಯು ಎಲ್ಲರಿಗೂ ಸ್ಫೂರ್ತಿಯಾಗಿದೆ

ಸಚಿನ್ ತೆಂಡೂಲ್ಕರ್ ಕ್ರಿಕೆಟ್ ದಿಗ್ಗಜ


ಯುವ ಬೌಲರ್ ಆಗಿ ಕ್ರಿಕೆಟ್ ಜೀವನ ಆರಂಭಿಸಿದ ಅಶ್ವಿನ್ ಅವರು ಆಧುನಿಕ ಕ್ರಿಕೆಟ್‌ವರೆಗೂ ದಿಗ್ಗಜರಾಗಿ ಬೆಳೆದ ಹಾದಿಯನ್ನು ಗಮನಿಸಿದರೆ ವರ್ಣನಾತೀತ

ಗೌತಮ್ ಗಂಭೀರ್ ಭಾರತ ತಂಡದ ಮುಖ್ಯ ಕೋಚ್


ಭಾರತ ಕ್ರಿಕೆಟ್‌ನ ಅತ್ಯದ್ಭುತ ಮ್ಯಾಚ್ ವಿನ್ನರ್, ಚೆಂಡಿನ ಮಾಂತ್ರಿಕ ಹಾಗೂ ಆಟದ ಕುರಿತು ಚಾಣಾಕ್ಷ ಚಿಂತಕ ಅಶ್ವಿನ್. ಅವರ ಅಂತರರಾಷ್ಟ್ರೀಯ ಕ್ರಿಕೆಟ್ ಜೀವನದ ಕುರಿತು ಹೆಮ್ಮೆ ಇದೆ

ಜಯ್ ಶಾ ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ ಅಧ್ಯಕ್ಷ


ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ 700 ವಿಕೆಟ್ ಪಡೆದು ಹಾಗೂ ಅತೀವ ಪ್ರೀತಿಯಿಂದಲೇ ಆಟದಲ್ಲಿ ತೊಡಗುತ್ತಿದ್ದ ನೀವು ಮೈದಾನದಲ್ಲಿ ಅತ್ಯಂತ ಸ್ಫೂರ್ತಿಯ ವ್ಯಕ್ತಿ

ಅನಿಲ್ ಕುಂಬ್ಳೆ ಭಾರತದ ತಂಡದ ಮಾಜಿ ನಾಯಕ


ನಾನು ಅಶ್ವಿನ್ ಜೊತೆಗೆ ಬಹಳಷ್ಟು ಕ್ರಿಕೆಟ್ ಆಡಿದ್ದೇನೆ. ನಮ್ಮಿಬ್ಬರ ನಡುವೆ ಎಷ್ಟೊಂದು ನೆನಪುಗಳಿವೆ. ಇಂತಹ ಹುಡುಗರು ಇನ್ನು ಮುಂದೆ ತಂಡದಲ್ಲಿ ಇರುವುದಿಲ್ಲವೆಂದಾಗ ಬೇಸರವಾಗುತ್ತದೆ

ರೋಹಿತ್ ಶರ್ಮಾ, ಭಾರತ ತಂಡದ ನಾಯಕ

ಧೋನಿ, ಕುಂಬ್ಳೆ ಹಾದಿಯಲ್ಲಿ ಅಶ್ವಿನ್

ಬ್ರಿಸ್ಬೇನ್ (ಪಿಟಿಐ): ಭಾರತ ತಂಡದ ಆರ್. ಅಶ್ವಿನ್ ಅವರು ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ದಿಢೀರ್ ನಿವೃತ್ತಿ ಘೋಷಿಸಿರುವುದು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ.

2014ರಲ್ಲಿ ಆಸ್ಟ್ರೇಲಿಯಾ ಪ್ರವಾಸದಲ್ಲಿಯೇ ಮಹೇಂದ್ರಸಿಂಗ್ ಧೋನಿ ನಾಯಕತ್ವ ತೊರೆದು, ಟೆಸ್ಟ್ ಕ್ರಿಕೆಟ್‌ಗೆ ನಿವೃತ್ತಿಯನ್ನೂ ಘೋಷಿಸಿದ್ದರು. 2008ರಲ್ಲಿ ಅನಿಲ್ ಕುಂಬ್ಳೆ ಕೂಡ ವಿದಾಯ ಹೇಳಿದ್ದರು. ಆಗ ಅವರು ನಾಯಕರಾಗಿದ್ದ ಕಾರಣ ಬಹಳಷ್ಟು ಚರ್ಚೆಗಳಾಗಿದ್ದವು. ಈಗ ಅಶ್ವಿನ್ ನಿವೃತ್ತಿಯೂ ಚರ್ಚೆಗೆ ಗ್ರಾಸವಾಗಿದೆ.

‘ನನ್ನನ್ನು ನಂಬಿ ಗೆಳೆಯರೇ, ಪ್ರತಿಯೊಬ್ಬರ ಸಮಯವೂ ಬರುತ್ತದೆ ಮತ್ತು ಇವತ್ತು ನನ್ನ ಕಾಲ’ ಎಂದು ಅಶ್ವಿನ್ ತಂಡದ ಸಹ ಆಟಗಾರರ ಮುಂದೆ ಮಾಡಿದ ವಿದಾಯ ಭಾಷಣದಲ್ಲಿ ಹೇಳಿದ್ದಾರೆ. ಬಿಸಿಸಿಐ ಈ ವಿಡಿಯೊ ವೆಬ್‌ಸೈಟ್‌ನಲ್ಲಿ ಹಾಕಿದೆ.

ಅಶ್ವಿನ್ ಅವರು ಗುರುವಾರ ಭಾರತಕ್ಕೆ ಮರಳಲಿದ್ದಾರೆಂದು ತಿಳಿದುಬಂದಿದೆ.

ಪ್ರತಿಭಟನೆ ವೇಳೆ ಕಾಂಗ್ರೆಸ್ ಕಾರ್ಯಕರ್ತ ಸಾವು

ಗುವಾಹಟಿ (ಪಿಟಿಐ): ಮಣಿಪುರದಲ್ಲಿನ ಅಶಾಂತಿ ಹಾಗೂ ‘ಅದಾನಿ ಲಂಚ ಪ್ರಕರಣ’ ಸೇರಿದಂತೆ ವಿವಿಧ ವಿಷಯಗಳ ಪ್ರತಿಭಟನೆ ವೇಳೆ, ಪೊಲೀಸರು ಸಿಡಿಸಿದ ಅಶ್ರುವಾಯು ಶೆಲ್‌ನಿಂದಾಗಿ ಕಾಂಗ್ರೆಸ್ ಕಾರ್ಯಕರ್ತರೊಬ್ಬರು ಉಸಿರುಗಟ್ಟಿ ಮೃತಪಟ್ಟಿದ್ದಾರೆ.

ವೃತ್ತಿಯಲ್ಲಿ ವಕೀಲರಾಗಿದ್ದ ಮೃದುಲ್ ಇಸ್ಲಾಂ (45) ಸಾವಿಗೀಡಾದ ಕಾರ್ಯಕರ್ತ. ಗುವಾಹಟಿಯಲ್ಲಿ ಬುಧವಾರ ಕಾಂಗ್ರೆಸ್ ಆಯೋಜಿಸಿದ್ದ ಪ್ರತಿಭಟನೆಯಲ್ಲಿ ಮೃದುಲ್ ಪಾಲ್ಗೊಂಡಿದ್ದರು. ಅಶ್ರುವಾಯು ಶೆಲ್ ಸಹಿಸಲಾರದೆ ಉಸಿರುಗಟ್ಟಿ ಸಾವಿಗೀಡಾದರು ಎಂದು ಕಾಂಗ್ರೆಸ್ ಆರೋಪಿಸಿದೆ.

ಮೃದುಲ್ ಅವರು, ಅಸ್ಸಾಂ ಪ್ರದೇಶ ಕಾಂಗ್ರೆಸ್ ಸಮಿತಿ ಕಾನೂನು ಘಟಕದ ಸದಸ್ಯರಾಗಿದ್ದರು. ಮೃದುಲ್ ಅವರ ಸಾವಿಗೆ ನಿರ್ದಿಷ್ಟ ಕಾರಣ ಏನೆಂಬುದು ಮರಣೋತ್ತರ ಪರೀಕ್ಷೆ ವರದಿ ಬಳಿಕ ತಿಳಿಯಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಘರ್ಷಣೆ ವೇಳೆ ಪೊಲೀಸರು ಕಾಂಗ್ರೆಸ್ ಅಸ್ಸಾಂ ಘಟಕದ ಅಧ್ಯಕ್ಷ ಭೂಪೇನ್ ಕುಮಾರ್ ಬೋರಾ, ರಾಜ್ಯಸಭೆಯ ಮಾಜಿ ಸದಸ್ಯ ರಿಪುನ್ ಬೋರಾ ಅವರನ್ನು ತಳ್ಳಿದ್ದು, ಇಬ್ಬರೂ ನೆಲದ ಮೇಲೆ ಬಿದ್ದರು ಎಂದೂ ದೂರಲಾಗಿದೆ.

ರಾಹುಲ್ ಆರೋಪ: ಪೊಲೀಸರ ಬಲಪ್ರಯೋಗದಿಂದಾಗಿ ಅಸ್ಸಾಂ, ಉತ್ತರಪ್ರದೇಶದಲ್ಲಿ ಪ್ರತ್ಯೇಕ ಪ್ರಕರಣಗಳಲ್ಲಿ ಪಕ್ಷದ ಇಬ್ಬರು ಕಾರ್ಯಕರ್ತರು ಮೃತಪಟ್ಟಿದ್ದಾರೆ ಎಂದು ಲೋಕಸಭೆ ಪ್ರತಿಪಕ್ಷದ ನಾಯಕ ರಾಹುಲ್‌ಗಾಂಧಿ ಆರೋಪಿಸಿದ್ದಾರೆ.

ಗಗನಯಾನ: ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಲ್ಲಿ ಸಿದ್ಧತೆ – ಇಸ್ರೊ

ಉಡ್ಡಯನ ವಾಹನ ನಿರ್ಮಾಣಕ್ಕೆ ಚಾಲನೆ

ಬೆಂಗಳೂರು(ಪಿಟಿಐ): ಮಹತ್ವಾಕಾಂಕ್ಷೆಯ ಗಗನಯಾನ ಕಾರ್ಯಕ್ರಮದ ಮೊದಲ ಮಾನವರಹಿತ ಗಗನನೌಕೆಯ ಪರೀಕ್ಷೆಗೆ ಸಂಬಂಧಿಸಿ ಉಡ್ಡಯನ ವಾಹನದ (ಎಚ್‌ಎಲ್‌ವಿಎಂ3) ನಿರ್ಮಾಣ ಕಾರ್ಯಕ್ಕೆ ಚಾಲನೆ ನೀಡಲಾಗಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಬುಧವಾರ ಘೋಷಿಸಿದೆ.

ಈ ಕಾರ್ಯವು ಆಂಧ್ರಪ್ರದೇಶದ ಶ್ರೀಹರಿಕೋಟಾದಲ್ಲಿರುವ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಲ್ಲಿ ನಡೆಯುತ್ತಿದೆ. ಭಾರತದ ಮೊದಲ ಮಾನವ ಸಹಿತ ಗಗನಯಾನ ಹಾಗೂ ಭವಿಷ್ಯದ ಅಂತರಿಕ್ಷಯಾನಗಳಿಗೆ ಸಂಬಂಧಿಸಿ ಇದು ಮಹತ್ವದ ಹೆಜ್ಜೆಯಾಗಿದೆ ಎಂದು ಇಸ್ರೊ ಹೇಳಿದೆ.

ಗಗನಯಾನಿಗಳನ್ನು ಬಾಹ್ಯಾಕಾಶಕ್ಕೆ ಸುರಕ್ಷಿತವಾಗಿ ಹೊತ್ತೊಯ್ಯಬಲ್ಲ ಸಾಮರ್ಥ್ಯ ಹೊಂದಿರುವ ಕಾರಣ, ಈ ಉಡ್ಡಯನ ವಾಹನವನ್ನು (ರಾಕೆಟ್) ‘ಹ್ಯೂಮನ್ ರೇಟೆಡ್ ಲಾಂಚ್ ವೆಹಿಕಲ್ ಮಾರ್ಕ್–3’ (ಎಚ್‌ಎಲ್ ವಿಎಂ3) ಎಂದು ಕರೆಯಲಾಗುತ್ತದೆ.

‘ಎಲ್‌ವಿ ಎಂ3’ ರಾಕೆಟ್ ಅನ್ನು ಮೊದಲ ಬಾರಿಗೆ 2014ರ ಡಿ.18ರಂದು ಬಳಸಲಾಗಿತ್ತು. ಈ ರಾಕೆಟ್ ಕಾರ್ಯಾಚರಣೆಗೆ 10 ವರ್ಷ ಪೂರೈಸಿದ ದಿನದಂದೇ ಗಗನಯಾನಕ್ಕಾಗಿ ‘ಎಚ್‌ಎಲ್‌ವಿ ಎಂ3’ ನಿರ್ಮಾಣ ಕಾರ್ಯಕ್ಕೂ ಚಾಲನೆ ನೀಡಿರುವುದು ಗಮನಾರ್ಹ.

ಎಚ್‌ಎಲ್‌ವಿಎಂ3

- ಮೂರು ಹಂತದ ಉಡ್ಡಯನ ವಾಹನ (ರಾಕೆಟ್)
- 10 ಟನ್‌ನಷ್ಟು ಭಾರದ ಗಗನನೌಕೆ/ಉಪಕರಣವನ್ನು ಕೆಳ ಭೂಕಕ್ಷೆಗೆ ಸೇರಿಸುವ ಸಾಮರ್ಥ್ಯ
- ಈ ವಾಹನದ ಎತ್ತರ 53 ಮೀಟರ್ ಹಾಗೂ ತೂಕ 640 ಟನ್

‘ಗಗನಯಾನಿಗಳನ್ನು ಸುರಕ್ಷಿತವಾಗಿ ಹೊತ್ತೊಯ್ಯುವ ‘ಎಲ್‌ವಿಎಂ3’ರ ಸಾಮರ್ಥ್ಯ ಪರೀಕ್ಷೆಯನ್ನು ಈಗಾಗಲೇ ಯಶಸ್ವಿಯಾಗಿ ನೆರವೇರಿಸಲಾಗಿದೆ. ಈ ಉಡ್ಡಯನ ವಾಹನದಲ್ಲಿ ಬಳಕೆಯಾಗುವ ಎಲ್ಲ ವ್ಯವಸ್ಥೆಗಳ ಕಾರ್ಯಕ್ಷಮತೆಯನ್ನು ಕೂಡ ಪರೀಕ್ಷಿಸಲಾಗಿದೆ’ ಎಂದು ಇಸ್ರೊ ಪ್ರಕಟಣೆಯಲ್ಲಿ ತಿಳಿಸಿದೆ.

‘ಗಗನಯಾನಿಗಳು ಭೂಮಿಗೆ ಮರಳುವ ವೇಳೆ, ಸುರಕ್ಷಿತವಾಗಿ ಪಾರಾಗುವ ವ್ಯವಸ್ಥೆಯನ್ನು (ಕ್ರೂ ಎಸ್ಕೇಪ್ ಸಿಸ್ಟಮ್) ಕೂಡ ಅಳವಡಿಸಲಾಗುತ್ತಿದೆ. ಇದು, ಮಾನವ ಸಹಿತ ಗಗನಯಾನ ಕಾರ್ಯಕ್ರಮ ಕುರಿತ ನಮ್ಮ ವಿಶ್ವಾಸ ಹೆಚ್ಚುವಂತೆ ಮಾಡಿದೆ’ ಎಂದು ಇಸ್ರೊ ಹೇಳಿದೆ.

ಭಾರತದಲ್ಲಿ ಸ್ಟಾರ್‌ಲಿಂಕ್ ಸೇವೆಯೇ ಇಲ್ಲ: ಮಸ್ಕ್

ಇಂಫಾಲ್ (ಪಿಟಿಐ): ಗಲಭೆಪೀಡಿತ ಮಣಿಪುರದಲ್ಲಿ ಸಂವಹನಕ್ಕಾಗಿ, ತಮ್ಮ ಒಡೆತನದ ಸ್ಟಾರ್‌ಲಿಂಕ್‌ನ ಇಂಟರ್‌ನೆಟ್ ಸೇವೆಯನ್ನು ಬಳಸಲಾಗುತ್ತಿದೆ ಎಂಬ ಆರೋಪಗಳನ್ನು ಉದ್ಯಮಿ ಎಲಾನ್ ಮಸ್ಕ್ ತಳ್ಳಿ ಹಾಕಿದ್ದಾರೆ.

‘ಇಂತಹ ಹೇಳಿಕೆಗಳು ಸುಳ್ಳು. ಭಾರತದ ಆಗಸದ ಮೇಲೆ ಸಾಗುವ ವೇಳೆ, ಸ್ಟಾರ್‌ಲಿಂಕ್ ಉಪಗ್ರಹದ ಕಿರಣಗಳನ್ನು ನಿಷ್ಕ್ರಿಯಗೊಳಿಸಲಾಗಿರುತ್ತದೆ’ ಎಂದು ಮಸ್ಕ್ ಪ್ರತಿಕ್ರಿಯಿಸಿದ್ದಾರೆ.

ಭಾರತದಲ್ಲಿ ಇಂಟರ್‌ನೆಟ್ ಸೇವೆ ಒದಗಿಸುವುದಕ್ಕಾಗಿ ಸ್ಟಾರ್‌ಲಿಂಕ್ ಪರವಾನಗಿ ಹೊಂದಿಲ್ಲ.

ಪೂರ್ವ ಇಂಫಾಲ್ ಜಿಲ್ಲೆಯ ಕೀರಾವೊ ಖುನೌ ಎಂಬಲ್ಲಿ ಇತ್ತೀಚೆಗೆ ದಾಳಿ ನಡೆಸಿದ್ದ ಭದ್ರತಾ ಪಡೆಗಳು, ಶಸ್ತ್ರಾಸ್ತ್ರಗಳ ಜೊತೆಗೆ ಕೆಲ ಇಂಟರ್‌ನೆಟ್ ಸಾಧನಗಳನ್ನು ವಶಪಡಿಸಿಕೊಂಡಿದ್ದವು.


ಸೇನೆಯು ಈ ಸಾಧನಗಳ ಚಿತ್ರಗಳನ್ನು ‘ಎಕ್ಸ್’ನಲ್ಲಿ ಹಂಚಿಕೊಂಡಿತ್ತು. ಸಾಮಾಜಿಕ ಜಾಲತಾಣಗಳ ಬಳಕೆದಾರರು, ಸಾಧನವೊಂದರ ಮೇಲೆ ಸ್ಟಾರ್‌ಲಿಂಕ್‌ನ ಲಾಂಛನ ಇರುವುದನ್ನು ಪತ್ತೆ ಮಾಡಿದ್ದರು.

‘ಉಗ್ರರು ಸ್ಟಾರ್‌ಲಿಂಕ್ ಸೇವೆ ಬಳಕೆ ಮಾಡುತ್ತಿದ್ದಾರೆ. ಇದನ್ನು ಎಲಾನ್ ಮಸ್ಕ್ ಗಮನಿಸುತ್ತಾರೆ ಹಾಗೂ ತಂತ್ರಜ್ಞಾನದ ದುರ್ಬಳಕೆ ನಿಯಂತ್ರಿಸುತ್ತಾರೆ ಎಂದು ಆಶಿಸುತ್ತೇನೆ’ ಎಂದು ವ್ಯಕ್ತಿಯೊಬ್ಬರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದರು.

ಸ್ಟಾರ್‌ಲಿಂಕ್‌ನ ಸಾಧನವನ್ನೇ ಹೋಲುವ ಉಪಕರಣವು ಪತ್ತೆಯಾಗಿದ್ದರಿಂದ, ಸರ್ಕಾರದ ಸಂಸ್ಥೆಗಳು ತನಿಖೆ ಕೈಗೊಂಡಿದ್ದವು.

ಆಸ್ಕರ್‌ನಿಂದ ‘ಲಾಪತಾ ಲೇಡೀಸ್’ ಹೊರಕ್ಕೆ

ನವದೆಹಲಿ (ಪಿಟಿಐ): ಭಾರತದಿಂದ ಆಸ್ಕರ್ ಅಂಗಳಕ್ಕೆ ಅಧಿಕೃತ ಪ್ರವೇಶ ಪಡೆದಿದ್ದ ‘ಲಾಪತಾ ಲೇಡೀಸ್’ ಚಿತ್ರವು ಅಂತರರಾಷ್ಟ್ರೀಯ ಚಲನಚಿತ್ರ ವಿಭಾಗದ ಸ್ಪರ್ಧೆಯಿಂದ ಹೊರಬಿದ್ದಿದೆ. ಆದರೆ ಬ್ರಿಟನ್ ಪ್ರತಿನಿಧಿಸುತ್ತಿರುವ, ಸಂಧ್ಯಾ ಸೂರಿ ಅವರ ಹಿಂದಿ ಚಲನಚಿತ್ರ ‘ಸಂತೋಷ್’ ಮುಂದಿನ ಸುತ್ತು ಪ್ರವೇಶಿಸಿದೆ.



ಕಿರಣ್ ರಾವ್ ನಿರ್ದೇಶನದ ‘ಲಾಪತಾ ಲೇಡೀಸ್’ ಅಂತಿಮ ಐದರ ಸ್ಥಾನಕ್ಕಾಗಿ ಸ್ಪರ್ಧಿಸುವ 15 ಚಲನಚಿತ್ರಗಳ ಪಟ್ಟಿ ಪ್ರವೇಶಿಸುವಲ್ಲಿ ವಿಫಲವಾಗಿದೆ.

‘ಅಕಾಡೆಮಿ ಆಫ್ ಮೋಷನ್ ಪಿಕ್ಚರ್ ಆರ್ಟ್ಸ್ ಅಂಡ್ ಸೈನ್ಸಸ್’ (ಎಎಂಪಿಎಎಸ್) ಆಯ್ಕೆಯಾದ 15 ಚಿತ್ರಗಳ ಪಟ್ಟಿಯನ್ನು ಬುಧವಾರ ಬಿಡುಗಡೆ ಮಾಡಿದೆ. ಆಸ್ಕರ್‌ಗೆ ಅಂತಿಮ ನಾಮ ನಿರ್ದೇಶನಗಳನ್ನು ಜನವರಿ 17ರಂದು ಪ್ರಕಟಿಸಲಾಗುತ್ತದೆ.

97ನೇ ಅಕಾಡೆಮಿ ಪ್ರಶಸ್ತಿಯ ಅಂತರ ರಾಷ್ಟ್ರೀಯ ಚಲನಚಿತ್ರ ವಿಭಾಗದಲ್ಲಿ 85 ದೇಶಗಳ ಅರ್ಹ ಸಿನಿಮಾಗಳು ಭಾಗವಹಿಸಿದ್ದವು ಎಂದು ಅಕಾಡೆಮಿ ತಿಳಿಸಿದೆ.

‘ಈ ವರ್ಷದ ಅಕಾಡೆಮಿ ಪ್ರಶಸ್ತಿಗಾಗಿ ಆಯ್ಕೆಯಾಗಿರುವ 15 ಸಿನಿಮಾಗಳ ಪಟ್ಟಿಯಲ್ಲಿ ‘ಲಾಪತಾ ಲೇಡೀಸ್’ ಸ್ಥಾನ ಪಡೆದಿಲ್ಲ. ಇದರಿಂದ ನಮಗೆ ನಿರಾಶೆಯಾಗಿರುವುದು ನಿಜ. ಆದರೆ ಇಡೀ ಪ್ರಯಾಣದಲ್ಲಿ ನಮಗೆ ಅಪಾರ ಬೆಂಬಲ ದೊರೆತಿದೆ. ಅದಕ್ಕಾಗಿ ಕೃತಜ್ಞರಾಗಿರುತ್ತೇವೆ’ ಎಂದು ಅಮೀರ್ ಖಾನ್ ಪ್ರೊಡಕ್ಷನ್, ಜಿಯೊ ಸ್ಟುಡಿಯೋಸ್ ಮತ್ತು ಕಿಂಡ್ಲಿಂಗ್ ಪ್ರೊಡಕ್ಷನ್ ಜಂಟಿ ಹೇಳಿಕೆಯಲ್ಲಿ ತಿಳಿಸಿವೆ. ಮುಂದಿನ ಸುತ್ತಿಗೆ ಆಯ್ಕೆಯಾಗಿರುವ ಎಲ್ಲ ಸಿನಿಮಾ ತಂಡಗಳನ್ನು ಅಭಿನಂದಿಸುವುದಾಗಿ ಪ್ರಕಟಣೆ ಹೇಳಿದೆ.

ಮುಂದಿನ ಹಂತಕ್ಕೆ ‘ಸಂತೋಷ್’, ‘ಅನುಜಾ’: ಬ್ರಿಟಿಷ್ ಭಾರತೀಯ ಚಿತ್ರ ನಿರ್ಮಾಪಕರಾದ ಸಂಧ್ಯಾ ಸೂರಿ ಅವರ ‘ಸಂತೋಷ್’ ಹಿಂದಿ ಭಾಷೆಯ ಅಪರಾಧ ಕಥಾ ಹಂದರ ಒಳಗೊಂಡಿರುವ ಸಿನಿಮಾ ಆಗಿದ್ದು, ಶಹನಾ ಗೋಸ್ವಾಮಿ ಮತ್ತು ಸುನೀತಾ ರಾಜ್ವರ್ ನಟಿಸಿದ್ದಾರೆ. ಇದು ಬ್ರಿಟನ್‌ನಿಂದ ನಾಮನಿರ್ದೇಶನಗೊಂಡಿರುವ ಅಧಿಕೃತ ಚಿತ್ರ.

‘ಸಂತೋಷ್’ ಜತೆಗೆ ‘ಅನುಜಾ’ (ಕಿರುಚಿತ್ರ) ಆಸ್ಕರ್ ಪ್ರಶಸ್ತಿಯ ಮುಂದಿನ ಹಂತಕ್ಕೆ ತಲುಪಿದ ಭಾರತೀಯ ಸಂಪರ್ಕ ಹೊಂದಿರುವ ಮತ್ತೊಂದು ಚಿತ್ರವಾಗಿದೆ. ಅದು ‘ಲೈವ್ ಆ್ಯಕ್ಷನ್ ಶಾರ್ಟ್ ಫಿಲ್ಮ್’ ವಿಭಾಗದಲ್ಲಿ ಆಯ್ಕೆಯಾದ 15 ಚಲನಚಿತ್ರಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದೆ.

ಲಾಸ್ ಏಂಜಲೀಸ್‌ನಲ್ಲಿ 2025ರ ಮಾರ್ಚ್ 2ರಂದು ಅಕಾಡೆಮಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ತನಿಖೆ ನಡೆಸಿದ ತಮಿಳುನಾಡು ಪೊಲೀಸರು

ಗಡಿ ಗ್ರಾಮಗಳಲ್ಲಿ ಕೇರಳದ ತ್ಯಾಜ್ಯ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕೇರಳದಲ್ಲಿ ಉತ್ಪಾದನೆಯಾಗುವ ತ್ಯಾಜ್ಯಗಳನ್ನು ನೆರೆಯ ತಮಿಳುನಾಡು, ಕರ್ನಾಟಕದ ಗ್ರಾಮಗಳಲ್ಲಿ ಸುರಿಯುವ ಕ್ರಮವು, 2025ರ ಮಾರ್ಚ್ ‘ಕಸಮುಕ್ತ ರಾಜ್ಯ’ ಎಂದು ಘೋಷಿಸುವ ಆ ರಾಜ್ಯದ ಯತ್ನವನ್ನೇ ಅಣಕಿಸುವಂತಾಗಿದೆ.



ಜೈವಿಕ ತ್ಯಾಜ್ಯ ಸೇರಿದಂತೆ ರಾಜ್ಯದಲ್ಲಿ ಉತ್ಪಾದನೆಯಾಗುವ ತ್ಯಾಜ್ಯಗಳನ್ನು ತಮಿಳುನಾಡಿನ ಗಡಿಯಲ್ಲಿ ಸುರಿಯಲಾಗುತ್ತಿದೆ ಎಂಬ ಬಗ್ಗೆ ವರದಿಗಳ ಕುರಿತು ತನಿಖೆಗೆ ಕೇರಳ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಮುಂದಾಗಿದೆ.

ಜೈವಿಕ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡದೆ ಸುರಿಯಲಾಗುತ್ತಿದೆ ಎಂಬ ಬಗ್ಗೆ ತನಿಖೆ ನಡೆಸಬೇಕು ಎಂದು ಜೈವಿಕ ತ್ಯಾಜ್ಯ ವಿಲೇವಾರಿ ಸ್ಥಾವರದ ಉಸ್ತುವಾರಿ ಹೊಂದಿರುವ ಭಾರತೀಯ ವೈದ್ಯಕೀಯ ಸಂಘದ ಕೇರಳ ಘಟಕವೂ ಒತ್ತಾಯಿಸಿದೆ.

ತಮಿಳುನಾಡು ಪೊಲೀಸ್‌ನ ತಂಡವೊಂದು ಗಡಿಭಾಗದ ಕೇರಳಕ್ಕೆ ತೆರಳಿ ಪರಿಶೀಲಿಸಿತು. ಜೈವಿಕ ತ್ಯಾಜ್ಯವನ್ನು ಸುರಿಯಲಾಗುತ್ತಿದೆ ಎಂಬ ವರದಿಗಳನ್ನು ಕೇರಳದ ಪ್ರಾದೇಶಿಕ ಕ್ಯಾನ್ಸರ್ ಕೇಂದ್ರ (ಆರ್‌ಸಿಸಿ) ಮತ್ತು ಖಾಸಗಿ ಕ್ರೆಡೆನ್ಸ್ ಆಸ್ಪತ್ರೆಯು ನಿರಾಕರಿಸಿವೆ.

‘ಪ್ರಜಾವಾಣಿ’ ಜೊತೆಗೆ ಮಾತನಾಡಿದ ಈ ಆಸ್ಪತ್ರೆಗಳ ಪ್ರತಿನಿಧಿಗಳು, ಜೈವಿಕ ತ್ಯಾಜ್ಯಗಳನ್ನು, ಐಎಂಎ ಸ್ಥಳೀಯ ಘಟಕವು ಪಾಲಕ್ಕಾಡ್‌ನಲ್ಲಿ ನಡೆಸುತ್ತಿರುವ ಸ್ಥಾವರದ (ಇಮೇಜ್) ಮೂಲಕವೇ ವಿಲೇವಾರಿ ಮಾಡಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಆರ್‌ಸಿಸಿ ನಿರ್ದೇಶಕಿ ಡಾ.ರೇಖಾ ಎ ನಾಯರ್, ‘ಹಳೆ ಏಜೆನ್ಸಿಯ ವಿವರಗಳು ತಮಿಳುನಾಡು ಗ್ರಾಮಗಳಲ್ಲಿ ಪತ್ತೆಯಾಗಿವೆ. ನಾವು ಸೂಕ್ತ ರೀತಿಯಲ್ಲೇ ವಿಲೇವಾರಿ ಮಾಡುತ್ತಿದ್ದೇವೆ ಎಂದು ತಮಿಳುನಾಡಿನ ಪೊಲೀಸರಿಗೆ ಮನವರಿಕೆ ಮಾಡಲಾಗಿದೆ’ ಎಂದು ತಿಳಿಸಿದರು.

‘ಇಮೇಜ್’ನ ಕಾರ್ಯದರ್ಶಿ ಡಾ.ಕೃಷ್ಣಕುಮಾರ್, ‘ಈ ಬಗ್ಗೆ ರಾಜ್ಯ ಆರೋಗ್ಯ ಇಲಾಖೆ ಕಾರ್ಯದರ್ಶಿ ಅವರಿಗೆ ವಿವರಣೆ ನೀಡಲಾಗಿದೆ. ಕೇರಳದ ತ್ಯಾಜ್ಯವನ್ನು ತಮಿಳುನಾಡು ಮತ್ತು ಕರ್ನಾಟಕದ ಪ್ರದೇಶಗಳಲ್ಲಿ ಸುರಿಯುವುದು ನಾಚಿಕೆಗೇಡಿನ ಕ್ರಮ’ ಎಂದು ಪ್ರತಿಕ್ರಿಯಿಸಿದರು.

ಅಧಿಕೃತ ಮಾಹಿತಿ ಪ್ರಕಾರ, ಕೇರಳದಲ್ಲಿ ನಿತ್ಯ 70 ಟನ್ ವೈದ್ಯಕೀಯ ತ್ಯಾಜ್ಯ ಉತ್ಪಾದನೆಯಾಗಲಿದೆ. ‘ಇಮೇಜ್’ ಸ್ಥಾವರದ ವಿಲೇವಾರಿ ಸಾಮರ್ಥ್ಯ ಒಟ್ಟು 70 ಟನ್‌ಗಳಾಗಿವೆ ಎಂದು ಗೊತ್ತಾಗಿದೆ.

‘ಅದಾನಿ–ಅಧಿಕಾರಿ ಭೇಟಿ: ಮಾಹಿತಿ ಇಲ್ಲ’

ಚೆನ್ನೈ: ‘ಉದ್ಯಮಿ ಗೌತಮ್ ಅದಾನಿ ಚೆನ್ನೈಗೆ ಜುಲೈನಲ್ಲಿ ಭೇಟಿ ನೀಡಿದ್ದಾಗ, ರಾಜ್ಯದ ಯಾವ ಅಧಿಕಾರಿಯನ್ನು ಭೇಟಿ ಮಾಡಿದ್ದರು ಎಂಬುದರ ಕುರಿತು ಮಾಹಿತಿ ಇಲ್ಲ’ ಎಂದು ತಮಿಳುನಾಡು ಸರ್ಕಾರ ತಿಳಿಸಿದೆ.

ಮಾಹಿತಿ ಹಕ್ಕು ಕಾರ್ಯಕರ್ತರೊಬ್ಬರು ಸಲ್ಲಿಸಿದ್ದ ಅರ್ಜಿಗೆ ಪ್ರತಿಕ್ರಿಯಿಸಿ ಸರ್ಕಾರ ಈ ಮಾಹಿತಿ ನೀಡಿದೆ. ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು, ವಿಧಾನ ಸಭೆಯಲ್ಲಿ ‘ನಾನು ಎಂದಿಗೂ ಅದಾನಿ ಭೇಟಿಯಾಗಿಲ್ಲ’ ಎಂದಿದ್ದರು.

‘ಅದಾನಿ ಅವರು ನನ್ನನ್ನು ಭೇಟಿಯಾಗಿಲ್ಲ, ನಾನೂ ಅದಾನಿ ಅವರನ್ನು ಭೇಟಿಯಾಗಿಲ್ಲ. ಇದಕ್ಕಿಂತಲೂ ಹೆಚ್ಚಿನ ವಿವರಣೆ ಅಗತ್ಯವಿದೆಯೇ?’ ಎಂದು ಡಿಸೆಂಬರ್ 10ರಂದು ಸ್ಟಾಲಿನ್ ವಿಧಾನ ಸಭೆಯಲ್ಲಿ ಪ್ರಶ್ನಿಸಿದ್ದರು.

ಅರಪ್ಪೋರ್ ಇಯಕ್ಕಂ ನಿವಾಸಿ ಜಯರಾಂ ವೆಂಕಟೇಶನ್ ಅವರು ಆರ್‌ಟಿಐ ಕಾಯ್ದೆಯಡಿ ಅರ್ಜಿ ಸಲ್ಲಿಸಿದ್ದರು.

ಬೂಮ್ರಾಗೆ 3 ವಿಕೆಟ್; ಮಳೆಯಿಂದಾಗಿ ಸ್ಥಗಿತವಾದ ಪಂದ್ಯ ಡ್ರಾ

ಸೋಲು ತಪ್ಪಿಸಿಕೊಂಡ ಭಾರತ

● ಮಧು ಜವಳಿ

ಬ್ರಿಸ್ಬೇನ್: ಇದೇ ಗಾಬಾ ಕ್ರೀಡಾಂಗಣದಲ್ಲಿ ಭಾರತ ತಂಡವು 2021ರಲ್ಲಿ ಅಮೋಘವಾದ ಟೆಸ್ಟ್ ಜಯಸಾಧಿಸಿತ್ತು. ವಿದೇಶಿ ನೆಲದಲ್ಲಿ ಸಾಧಿಸಿದ ದೊಡ್ಡ ಜಯ ಅದಾಗಿತ್ತು. ಆ ನೆನಪಿನ ಜೊತೆಗೆ ಬುಧವಾರ ಮತ್ತೊಂದು ಸಂಗತಿ ಸೇರಿಕೊಂಡಿತು. ಅದೇನೆಂದರೆ ಭಾರತ ತಂಡವು ಸೋಲಿನ ದವಡೆಯಿಂದ ಪಾರಾದ ಯಶೋಗಾಥೆ.

ಮಳೆಯಿಂದಾಗಿ ಬಹಳಷ್ಟು ಸಮಯ ನಷ್ಟವಾದ ಟೆಸ್ಟ್ ಪಂದ್ಯವನ್ನು ರೋಹಿತ್ ಶರ್ಮಾ ಪಡೆಯು ಡ್ರಾ ಮಾಡಿಕೊಂಡಿತು. ಬಾರ್ಡರ್ –ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯ ಮೂರನೇ ಪಂದ್ಯದ ಕೊನೆಯ ದಿನವಾದ ಬುಧವಾರ ಮಳೆಯಿಂದಾಗಿ ಆಟಗಾರರು ಡ್ರೆಸಿಂಗ್ ರೂಮ್‌ನಲ್ಲಿಯೇ ಹೆಚ್ಚು ಕಾಲ ಕಳೆದರು.

ಮೊದಲ ಇನಿಂಗ್ಸ್‌ನಲ್ಲಿ ಆಸ್ಟ್ರೇಲಿಯಾ ಗಳಿಸಿದ್ದ 445 ರನ್‌ಗಳಿಗೆ ಉತ್ತರವಾಗಿ ಭಾರತ 260 ರನ್ ಗಳಿಸಿ ಆಲೌಟ್ ಆಯಿತು. ಮಂಗಳವಾರ ದಿನದಾಟದ ಅಂತ್ಯಕ್ಕೆ ಕ್ರೀಸ್‌ನಲ್ಲಿದ್ದ ಆಕಾಶ್ ದೀಪ್ ಮತ್ತು ಬೂಮ್ರಾ ಫಾಲೋ ಆನ್ ತಪ್ಪಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಬುಧವಾರ ಬೆಳಿಗ್ಗೆ ಆಕಾಶ್ (31 ರನ್) ವಿಕೆಟ್ ಪಡೆಯುವಲ್ಲಿ ಟ್ರಾವಿಸ್ ಹೆಡ್ ಸಫಲರಾದರು.

185 ರನ್‌ಗಳ ಮುನ್ನಡೆಯೊಂದಿಗೆ ಎರಡನೇ ಇನಿಂಗ್ಸ್ ಆರಂಭಿಸಿದ ಆತಿಥೇಯರು 33 ರನ್ ಗಳಿಸುಷ್ಟರಲ್ಲಿ 5 ವಿಕೆಟ್ ಕಳೆದುಕೊಂಡರು. ಜಸ್‌ಪ್ರೀತ್ ಬೂಮ್ರಾ 3, ಮೊಹಮ್ಮದ್ ಸಿರಾಜ್ ಮತ್ತು ಆಕಾಶ್ ದೀಪ್ ತಲಾ ಎರಡು ವಿಕೆಟ್ ಗಳಿಸಿದರು.

ಈ ನಡುವೆ ಮಳೆಯೂ ಆಗಾಗ ಕಾಡಿತು. 89 ರನ್‌ಗಳಿಗೆ 7 ವಿಕೆಟ್ ಕಳೆದುಕೊಂಡಿದ್ದ ಆಸ್ಟ್ರೇಲಿಯಾ ಡಿಕ್ಲೇರ್ ಮಾಡಿಕೊಂಡಿತು. 275 ರನ್‌ಗಳ ಗೆಲುವಿನ ಗುರಿಯೊಡ್ಡಿತು. ಭಾರತ ತಂಡವು ವಿಕೆಟ್ ನಷ್ಟವಿಲ್ಲದೇ 8 ರನ್ ಗಳಿಸಿದ್ದ ಸಂದರ್ಭದಲ್ಲಿ ಮಳೆ ಆರಂಭವಾಯಿತು. ಆಟ ನಿಂತಿತು. ಪರ್ತ್‌ನಲ್ಲಿ ಗೆದ್ದಿದ್ದ ಭಾರತ ತಂಡವು ಅಡಿಲೇಡ್‌ನಲ್ಲಿ ನಡೆದಿದ್ದ ಪಿಂಕ್ ಬಾಲ್ ಟೆಸ್ಟ್‌ನಲ್ಲಿ ಸೋಲನುಭವಿಸಿತ್ತು. ಇದರಿಂದಾಗಿ ಮೂರು ಪಂದ್ಯಗಳ ನಂತರ ಸರಣಿಯು 1–1ರ ಸಮಬಲ ಸಾಧಿಸಿತು. ಇನ್ನೆರಡು ಪಂದ್ಯಗಳು ಮೆಲ್ಬರ್ನ್ (ಡಿ. 26 ರಿಂದ 30) ಮತ್ತು ಸಿಡ್ನಿ (ಜ 3 ರಿಂದ 7) ಈಗ ಕುತೂಹಲದ ಕೇಂದ್ರಬಿಂದುವಾಗಿವೆ.

ಮೂರನೇ ಪಂದ್ಯದ ಡ್ರಾದಿಂದ ರೋಹಿತ್ ಪಡೆಯು ಸಮಾಧಾನ ಪಟ್ಟಿರಬಹುದು. ಆದರೆ ಈ ಪಂದ್ಯದ ಸ್ಕೋರ್ ಕಾರ್ಡ್‌ನ ಹಿನ್ನೆಲೆಯಲ್ಲಿ ಹಲವು ಪಾಠಗಳಿವೆ.

ಬೂಮ್ರಾ ಮತ್ತು ಆಕಾಶ್‌ದೀಪ್ ಅವರು ಕೊನೆಯ ವಿಕೆಟ್ ಜೊತೆಯಾಟದಲ್ಲಿ ದಿಟ್ಟ ಆಟವಾಡದೇ ಹೋಗಿದ್ದರೆ ಭಾರತ ಫಾಲೋ ಆನ್ ಅನುಭವಿಸಬೇಕಿತ್ತು. ಪಂದ್ಯದ ಫಲಿತಾಂಶ ಬಹುಶಃ ಬೇರೆಯೇ ಆಗಿರುತ್ತಿತ್ತು.


ಜಸ್‌ಪ್ರೀತ್ ಬೂಮ್ರಾ ಮತ್ತು ಕೆ.ಎಲ್. ರಾಹುಲ್ ಸಂಭ್ರಮ –ಎಪಿ/ಪಿಟಿಐ ಚಿತ್ರ

ಆಸ್ಟ್ರೇಲಿಯಾ ನೆಲದಲ್ಲಿ ಗರಿಷ್ಠ ವಿಕೆಟ್ ಪಡೆದ ಭಾರತೀಯರು (ಟೆಸ್ಟ್)

ಬೌಲರ್	ಪಂದ್ಯ	ವಿಕೆಟ್	ಸರಾಸರಿ
ಜಸ್‌ಪ್ರೀತ್ ಬೂಮ್ರಾ	10	53	17.21
ಕಪಿಲ್ ದೇವ್	11	51	24.59
ಅನಿಲ್ ಕುಂಬ್ಳೆ	10	49	37.73
ಆರ್.ಅಶ್ವಿನ್	11	40	42.42
ಬಿಶನ್ ಸಿಂಗ್ ಬೇಡಿ	7	35	27.51

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ 445 (117.1 ಓವರ್‌ಗಳಲ್ಲಿ)

ಭಾರತ 260 (78.5 ಓವರ್‌ಗಳಲ್ಲಿ). (ಮಂಗಳವಾರ ಭಾರತ 74.5 ಓವರ್‌ಗಳಲ್ಲಿ 9ಕ್ಕೆ252)

ಬೂಮ್ರಾ ಔಟಾಗದೆ 10 (38ಎ, 6X1)

ಆಕಾಶ್‌ದೀಪ್ ಸ್ಟಂಪ್ಡ್ ಕ್ಯಾರಿ ಬಿ ಹೆಡ್ 31 (44 ಎ, 4X2, 6X1)

ಇತರೆ: 14 (ಬೈ 8, ಲೆಗ್‌ಬೈ 2, ನೋಬಾಲ್ 3, ವೈಡ್ 1)

ವಿಕೆಟ್ ಪತನ: 10–260 (ಆಕಾಶ್‌ದೀಪ್ 78.5)

ಬೌಲಿಂಗ್: ಮಿಚೆಲ್ ಸ್ಟಾರ್ಕ್ 24–3–83–3, ಜೋಶ್ ಹ್ಯಾಜಲ್‌ವುಡ್ 6–2–22–1, ಪ್ಯಾಟ್ ಕಮಿನ್ಸ್ 22–2–81–4, ನೇಥನ್ ಲಯನ್ 23–1–55–1, ಟ್ರಾವಿಸ್ ಹೆಡ್ 1.5–0–3–1, ಮಿಚೆಲ್ ಮಾರ್ಷ್ 2–0–6–0,

ಎರಡನೆ ಇನಿಂಗ್ಸ್: ಆಸ್ಟ್ರೇಲಿಯಾ 7ಕ್ಕೆ 89 ಡಿಕ್ಲೇರ್ಡ್ (18 ಓವರ್‌ಗಳಲ್ಲಿ)

ಮೆಕ್‌ಸ್ವೀನಿ ಸಿ ಪಂತ್ ಬಿ ಆಕಾಶ್‌ದೀಪ್ 4 (25ಎ)

ಖ್ವಾಜಾ ಬಿ ಬೂಮ್ರಾ 8 (7ಎ, 4x2)

ಲಾಬುಷೇನ್ ಸಿ ಪಂತ್ ಬಿ ಬೂಮ್ರಾ 1 (9ಎ)

ಮಾರ್ಷ್ ಸಿ ಪಂತ್ ಬಿ ಆಕಾಶ್‌ದೀಪ್ 2 (13ಎ)

ಹೆಡ್ ಸಿ ಪಂತ್ ಬಿ ಸಿರಾಜ್ 17 (19ಎ, 4x2)

ಸ್ಮಿತ್ ಸಿ ಪಂತ್ ಬಿ ಸಿರಾಜ್ 4 (5ಎ, 4x1)

ಕ್ಯಾರಿ ಅಜೇಯ 20 (20ಎ, 4X2)

ಕಮಿನ್ಸ್ ಸಿ ರಾಹುಲ್ ಬಿ ಬೂಮ್ರಾ 22 (10ಎ, 4X2, 6X2)

ಸ್ಟಾರ್ಕ್ ಅಜೇಯ 2 (2ಎ)

ಇತರೆ: 9 (ಬೈ1, ಲೆಗ್ ಬೈ 6, ನೋ ಬಾಲ್ 2)

ವಿಕೆಟ್ ಪತನ: 1–11 (ಉಸ್ಮಾನ್ ಖ್ವಾಜಾ 2.4), 2–16 (ಮಾರ್ನಸ್ ಲಾಬುಷೇನ್ 6.1) 3–16 (ನೇಥನ್ ಮೆಕ್‌ಸ್ವೀನಿ, 7.3), 4–28 (ಮಿಚೆಲ್ ಮಾರ್ಷ್, 9.5), 5–33 (ಸ್ಟೀವ್ ಸ್ಮಿತ್, 10.6), 6–60 (ಟ್ರಾವಿಸ್ ಹೆಡ್, 14.4), 7–85 (ಪ್ಯಾಟ್ ಕಮಿನ್ಸ್, 17.1)

ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 6–1–18–3, ಮೊಹಮ್ಮದ್ ಸಿರಾಜ್ 7–0–36–2, ಆಕಾಶ್‌ದೀಪ್ 5–1–28–2

ಎರಡನೇ ಇನಿಂಗ್ಸ್ ಭಾರತ ವಿಕೆಟ್ ನಷ್ಟವಿಲ್ಲದೆ 8 (2.1ಓವರ್)

ಜೈಸ್ವಾಲ್ ಅಜೇಯ 4 (6ಎ)

ರಾಹುಲ್ ಅಜೇಯ 4 (7ಎ)

ಬೌಲಿಂಗ್: ಮಿಚೆಲ್ ಸ್ಟಾರ್ಕ್ 1.1–0–4–0, ಪ್ಯಾಟ್ ಕಮಿನ್ಸ್ 1–0–4–0

ಮುಂದಿನ ಪಂದ್ಯ: ಡಿಸೆಂಬರ್ 26ರಿಂದ (ಮೆಲ್ಬರ್ನ್)

ಪಂದ್ಯಶ್ರೇಷ್ಠ: ಟ್ರಾವಿಸ್ ಹೆಡ್

ಫಲಿತಾಂಶ: ಪಂದ್ಯ ಡ್ರಾ, ಸರಣಿ 1–1 ಸಮ

ಸೀನಿಯರ್ ರಾಷ್ಟ್ರೀಯ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್

ಕರ್ನಾಟಕದ ಪುರುಷರು ಫೈನಲ್‌ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆತಿಥೇಯ ಕರ್ನಾಟಕ ಮತ್ತು ರೈಲ್ವೇಸ್ ತಂಡಗಳು ಬುಧವಾರ ಇಲ್ಲಿ ಆರಂಭವಾದ ಯಾನೆಕ್ಸ್ ಸನ್‌ರೈಸ್ 77ನೇ ಅಂತರ ರಾಜ್ಯ, ಅಂತರ ವಲಯ ಮತ್ತು 86ನೇ ಸೀನಿಯರ್ ರಾಷ್ಟ್ರೀಯ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಪುರುಷರ ವಿಭಾಗದಲ್ಲಿ ಫೈನಲ್ ಪ್ರವೇಶಿಸಿದವು.

ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆ (ಕೆಬಿಎ)ಯ ಆತಿಥ್ಯದಲ್ಲಿ ನಡೆಯುತ್ತಿರುವ ಕೂಟದ ಸೆಮಿಫೈನಲ್ ಹಣಾಹಣಿಯಲ್ಲಿ ಕರ್ನಾಟಕ 3–1ರಿಂದ ಛತ್ತೀಸಗಢ ತಂಡವನ್ನು ಮಣಿಸಿತು.

ಕ್ವಾರ್ಟರ್ ಫೈನಲ್‌ನಲ್ಲಿ ಬೈ ಪಡೆದಿದ್ದ ಕರ್ನಾಟಕ ತಂಡದ ಆರಂಭ ಉತ್ತಮವಾಗಿರಲಿಲ್ಲ. ಮೊದಲ ಸಿಂಗಲ್ಸ್‌ನಲ್ಲಿ ಸನೀತ್ ಡಿ.ಎಸ್. 14–21, 20–22ರಿಂದ ಸೋತರು. ಆದರೆ, ಎರಡನೇ ಸಿಂಗಲ್ಸ್‌ನಲ್ಲಿ ಭಾರ್ಗವ್ ಎಸ್. 21-8, 21-19ರಿಂದ ಯಶ್ ಯೋಗಿ ಅವರನ್ನು ಸೋಲಿಸಿದ್ದರಿಂದ ತಂಡಗಳ ಸ್ಕೋರ್ 1–1 ಸಮನಾಯಿತು.

ನಂತರದಲ್ಲಿ ನಿಕೋಲಸ್ ನಾಥನ್ ರಾಜ್ ಮತ್ತು ತುಷಾರ್ ಸುವೀರ್ ಜೋಡಿಯು 21-18, 21-15ರಿಂದ ಇಶಾನ್ ಭಟ್‌ನಗರ್ ಮತ್ತು ಆಯುಷ್ ಮಖಿಜಾ ಅವರನ್ನು ಸೋಲಿಸಿತು. ಕೊನೆ ಸಿಂಗಲ್ಸ್‌ನಲ್ಲಿ ರಘು ಎಂ. 21–10, 21–8ರಿಂದ ಹರ್ಷಿತ್ ಠಾಕೂರ್ ಅವರನ್ನು ಸೋಲಿಸಿ ಕರ್ನಾಟಕದ ಗೆಲುವಿನ ಅಂತರವನ್ನು ಹೆಚ್ಚಿಸಿದರು.

ಮತ್ತೊಂದು ಸೆಮಿಫೈನಲ್‌ನಲ್ಲಿ ರೈಲ್ವೇಸ್ ತಂಡವು 3–0ಯಿಂದ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ತಂಡವನ್ನು ಮಣಿಸಿತು. ಕ್ವಾರ್ಟರ್ ಫೈನಲ್‌ನಲ್ಲಿ ರೈಲ್ವೇಸ್ 3–0ಯಿಂದ ರಾಜಸ್ಥಾನವನ್ನು; ಛತ್ತೀಸಗಢ 3–1ರಿಂದ ಉತ್ತರಾಖಂಡವನ್ನು; ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ 3–0ಯಿಂದ ಅರುಣಾಚಲ ಪ್ರದೇಶವನ್ನು ಸೋಲಿಸಿತು.

ಮಹಿಳೆಯರ ವಿಭಾಗದ ಸೆಮಿಫೈನಲ್‌ನಲ್ಲಿ ಹರಿಯಾಣ ಮತ್ತು ಗುಜರಾತ್ ತಂಡಗಳು ಫೈನಲ್ ಪ್ರವೇಶಿಸಿದವು. ಹರಿಯಾಣ 3–0ಯಿಂದ ರೈಲ್ವೇಸ್ ವಿರುದ್ಧ; ಗುಜರಾತ್ 3–1ರಿಂದ ಉತ್ತರಾಖಂಡ ವಿರುದ್ಧ ಗೆಲುವು ಸಾಧಿಸಿತು.

ಕ್ವಾರ್ಟರ್ ಫೈನಲ್‌ನಲ್ಲಿ ಹರಿಯಾಣ 3–2ರಿಂದ ಕರ್ನಾಟಕದ ಎದುರು; ಉತ್ತರಾಖಂಡ 3–1ರಿಂದ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಎದುರು; ಗುಜರಾತ್ 3–1ರಿಂದ ಅಸ್ಸಾಂ ಎದುರು ಗೆದ್ದಿತ್ತು. ರೈಲ್ವೇಸ್ ತಂಡ ಬೈ ಪಡೆದಿತ್ತು.


ಕರ್ನಾಟಕದ ಭಾರ್ಗವ್ ಎಸ್. ಆಟದ ವೈಖರಿ –ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.

ಅಶ್ವಿನ್ ನಿವೃತ್ತಿ: ಅಸಮಾಧಾನ

ಬ್ರಿಸ್ಬೇನ್ (ಪಿಟಿಐ): ರವಿಚಂದ್ರನ್ ಅಶ್ವಿನ್ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿರುವ ಸಮಯದ ಬಗ್ಗೆ ಮಾಜಿ ಕ್ರಿಕೆಟಿಗ ಸುನಿಲ್ ಗಾವಸ್ಕರ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ಆಸ್ಟ್ರೇಲಿಯಾ ವಿರುದ್ಧದ ಟೆಸ್ಟ್ ಸರಣಿ ಬಳಿಕ ಅವರು ನಿವೃತ್ತಿ ಹೇಳಬಹುದಿತ್ತು. ಅವರ ನಿರ್ಧಾರದಿಂದಾಗಿ ಸರಣಿಯಲ್ಲಿ ಉಳಿದಿರುವ ಎರಡು ಟೆಸ್ಟ್ ಪಂದ್ಯಗಳಿಗೆ ಒಬ್ಬ ಸ್ಪಿನ್ನರ್‌ನ ಕೊರತೆ ಉಂಟಾಗಿದೆ’ ಎಂದು ಅಭಿಪ್ರಾಯಪಟ್ಟಿದ್ದಾರೆ.

‘ಈ ಸರಣಿಯ ಬಳಿಕ ನಾನು ಭಾರತ ತಂಡದ ಆಯ್ಕೆಗೆ ಲಭ್ಯವಿಲ್ಲ ಎಂದು ಹೇಳಬಹುದಿತ್ತು. ಇದು 2014–15ರಲ್ಲಿ ಟೆಸ್ಟ್ ಸರಣಿಯ ಮೂರನೇ ಪಂದ್ಯದ ಬಳಿಕ ಎಂ.ಎಸ್. ಧೋನಿ ನಿವೃತ್ತಿ ಘೋಷಿಸಿದಂತೆ ಆಯಿತು’ ಎಂದು ಹೇಳಿದ್ದಾರೆ.

‘ಆಯ್ಕೆ ಸಮಿತಿ ಈ ಪ್ರವಾಸಕ್ಕೆ ಒಂದು ಉದ್ದೇಶದೊಂದಿಗೆ ಹಲವು ಆಟಗಾರರನ್ನು ಆಯ್ಕೆ ಮಾಡಿದೆ. ಒಂದು ವೇಳೆ ತಂಡದಲ್ಲಿರುವ ಯಾರಾದರೂ ಗಾಯಗೊಂಡರೆ, ಮೀಸಲು ಆಟಗಾರರನ್ನು ಆಡಿಸಬಹುದು. ಸರಣಿಯ ಕೊನೆಯಲ್ಲಿ ನಿವೃತ್ತಿ ಘೋಷಿಸುವುದು ಸಾಮಾನ್ಯ. ಮಧ್ಯದಲ್ಲೇ ವಿದಾಯ ಹೇಳುವುದು ಸರಿಯಲ್ಲ’ ಎಂದಿದ್ದಾರೆ.


ಸುನಿಲ್ ಗಾವಸ್ಕರ್

ಪ್ರೊ ಕಬಡ್ಡಿ: ತಲೈವಾಸ್‌ಗೆ ಜಯ

ಪುಣೆ (ಪಿಟಿಐ): ಹಿಮಾಂಶು ಮತ್ತು ಮೊಯಿನ್ ಶಾಫಾಘಿ (ತಲಾ 13 ಅಂಕ) ರೇಡಿಂಗ್ ನೆರವಿನಿಂದ ತಮಿಳ್ ತಲೈವಾಸ್ ಪ್ರೊ ಕಬಡ್ಡಿ ಲೀಗ್‌ನ ಪಂದ್ಯದಲ್ಲಿ 60–29ರಿಂದ ಬೆಂಗಾಲ್ ವಾರಿಯರ್ಸ್ ವಿರುದ್ಧ ಗೆಲುವು ಸಾಧಿಸಿತು.

ಬುಧವಾರ ನಡೆದ ಪಂದ್ಯದಲ್ಲಿ ಆರಂಭದಿಂದಲೇ ಪಾರಮ್ಯ ಮೆರೆದ ತಲೈವಾಸ್ ವಿರಾಮದ ವೇಳೆ 25–13ರಿಂದ ಮುನ್ನಡೆ ಪಡೆದಿತ್ತು. ನಂತರವೂ ಚುರುಕಿನ ಆಟವಾಡಿದ ತಂಡವು ಗೆಲುವಿನ ಅಂತರವನ್ನು ಮತ್ತಷ್ಟು ಹೆಚ್ಚಿಸಿಕೊಂಡಿತು.

ಮತ್ತೊಂದು ಪಂದ್ಯದಲ್ಲಿ ಪಟ್ನಾ ಪೈರೇಟ್ಸ್ 41–37ರಿಂದ ತೆಲುಗು ಟೈಟನ್ಸ್ ತಂಡವನ್ನು ಮಣಿಸಿತು.

ಭಾರತ–ವಿಂಡೀಸ್ ಪಂದ್ಯ ಇಂದು

ನವೀ ಮುಂಬೈ (ಪಿಟಿಐ): ಭಾರತ ಮತ್ತು ವೆಸ್ಟ್ ಇಂಡೀಸ್ ಮಹಿಳಾ ತಂಡಗಳು ಗುರುವಾರ ನಡೆಯಲಿರುವ ಟಿ20 ಸರಣಿಯ ಕೊನೆಯ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

1–1ರಿಂದ ಸಮಬಲಗೊಂಡಿರುವ ಸರಣಿಯನ್ನು ಜಯಿಸಲು ಉಭಯ ತಂಡಗಳು ಜಿದ್ದಾಜಿದ್ದಿ ನಡೆಸಲಿವೆ. ಭಾರತ ತಂಡದ ಆರಂಭಿಕ ಆಟಗಾರ್ತಿ ಎರಡೂ ಪಂದ್ಯಗಳಲ್ಲಿ ಉತ್ತಮವಾಗಿ ಆಡಿದ್ದಾರೆ. ಆದರೆ ಉಳಿದವರಿಂದ ಸ್ಥಿರ ಆಟವಾಡುತ್ತಿಲ್ಲ. ಈ ಪಂದ್ಯದಲ್ಲಿ ಅವರು ಲಯಕ್ಕೆ ಮರಳಿದರೆ ತಂಡಕ್ಕೆ ಅನುಕೂಲವಾಗಲಿದೆ.

ರಾಷ್ಟ್ರೀಯ ಟಿಟಿ: ಯಶಸ್ವಿನಿ, ತನೀಶಾಗೆ ಪ್ರಶಸ್ತಿ

ಅಂಕುರ್ ಪ್ರಶಸ್ತಿ ಡಬಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಕುರ್ ಭಟ್ಟಾಚಾರ್ಯ ಮತ್ತು ಯಶಸ್ವಿನಿ ಘೋರ್ಪಡೆ ಅವರು ಯುಟಿಟಿ ರಾಷ್ಟ್ರೀಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಚಾಂಪಿಯನ್ ಷಿಪ್‌ನಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ಸಿಂಗಲ್ಸ್ ಕಿರೀಟವನ್ನು ಮುಡಿಗೇರಿಸಿಕೊಂಡರು.

ಕರ್ನಾಟಕ ಟೇಬಲ್ ಟೆನಿಸ್ ಸಂಸ್ಥೆಯ ಆಶ್ರಯದಲ್ಲಿ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ನಡೆ ಯುತ್ತಿರುವ ಕೂಟದ ನಾಲ್ಕನೇ ದಿನವಾದ ಬುಧವಾರ ಎರಡನೇ ಶ್ರೇಯಾಂಕದ ಅಂಕುರ್ ಫೈನಲ್ ಹಣಾಹಣಿಯಲ್ಲಿ 11-9, 11-6, 11-5, 11-9ರಿಂದ ನಾಲ್ಕನೇ ಶ್ರೇಯಾಂಕದ ಮಾನವ್ ಠಕ್ಕರ್ ಅವನ್ನು ಮಣಿಸಿದರು.

ಪೆಟ್ರೋಲಿಯಂ ಸ್ಪೋರ್ಟ್ಸ್ ಪ್ರಮೋಷನ್ ಬೋರ್ಡ್ ತಂಡದ ಅಂಕುರ್ ಕಳೆದ ಆವೃತ್ತಿಯಲ್ಲೂ ಫೈನಲ್ ಪ್ರವೇಶಿಸಿದ್ದರು. ಈ ಬಾರಿ ತಮ್ಮದೇ ತಂಡದ (ಪಿಎಸ್‌ಪಿಬಿ) ಒಲಿಂಪಿಯನ್ ಮಾನವ್ ಅವರನ್ನು ನೇರ ಗೇಮ್‌ಗಳಿಂದ ಸುಲಭವಾಗಿ ಮಣಿಸಿ ಪ್ರಶಸ್ತಿಗೆ ಮುತ್ತಿಕ್ಕಿದರು. ಸೆಮಿಫೈನಲ್‌ನಲ್ಲಿ ಅಂಕುರ್ 11-6, 11-9, 11-8, 11-8ರಿಂದ ರೈಲ್ವೆ ಕ್ರೀಡಾ ಅಭಿವೃದ್ಧಿ ಮಂಡಳಿಯ (ಆರ್‌ಎಸ್‌ಪಿಬಿ) ಆಕಾಶ್ ಪಾಲ್ ಅವರನ್ನು ಮಣಿಸಿದರೆ, ಠಕ್ಕರ್ 11-9, 11-8, 11-4, 11-7ರಿಂದ ಪಿಎಸ್‌ಪಿಬಿಯ ಆ್ಯಂಟನಿ ಅಮಲರಾಜ್ ಅವರನ್ನು ಸೋಲಿಸಿದರು.

ಹಾಲಿ ಚಾಂಪಿಯನ್, ಅಗ್ರ ಶ್ರೇಯಾಂಕದ ಹಮೀತ್ ದೇಸಾಯಿ (ಪಿಎಸ್‌ಪಿಬಿ) ಕ್ವಾರ್ಟರ್ ಫೈನಲ್ ಹಂತದಲ್ಲಿ ಹೊರಬಿದ್ದರು. ಅವರು 1–3 ಗೇಮ್‌ಗಳಿಂದ ಆ್ಯಂಟನಿ ಅವರಿಗೆ ಶರಣಾದರು. ಮೂರನೇ ಶ್ರೇಯಾಂಕದ ಪಯಸ್ ಜೈನ್ (ದೆಹಲಿ) 1–3ರಿಂದ ಆಕಾಶ್ ಅವರಿಗೆ ಎಂಟರ ಘಟ್ಟದ ಪಂದ್ಯದಲ್ಲಿ ಮಣಿದರು.

ಏಳು ಗೇಮ್‌ಗಳವರೆಗೆ ಸಾಗಿದ ಮಹಿಳೆಯರ ಸಿಂಗಲ್ಸ್‌ನ ರೋಚಕ ಫೈನಲ್ ಹಣಾಹಣಿಯಲ್ಲಿ ಪಿಎಸ್‌ಪಿಬಿ ತಂಡವನ್ನು ಪ್ರತಿನಿಧಿಸುತ್ತಿರುವ ಕರ್ನಾ ಟಕದ ಯಶಸ್ವಿನಿ 11-9, 5-11, 11-2, 4-11, 11-8, 10-12, 11-7ರಿಂದ ಭಾರತ ವಿಮಾನ ನಿಲ್ದಾಣ ಪ್ರಾಧಿಕಾರ ತಂಡದ ಸ್ವಸ್ತಿಕಾ ಘೋಷ್ ಅವರನ್ನು ಮಣಿಸಿದರು. ಸೆಮಿಫೈನಲ್‌ನಲ್ಲಿ ಯಶಸ್ವಿನಿ 11-13, 11-6, 6-11, 11-5, 11-9, 11-6ರಿಂದ ರೀತ್ ರಿಶ್ಯಾ (ಪಿಎಸ್‌ಪಿಬಿ) ಅವರನ್ನು; ಸ್ವಸ್ತಿಕಾ 11-5, 11-6, 11-5, 11-7ರಿಂದ ನಿಖತ್ ಬಾನು (ಆರ್‌ಬಿಐ) ಅವರನ್ನು ಸೋಲಿಸಿದರು.

ಅಂಕುತ್, ತನಿಶಾಗೆ ಯೂತ್ ಪ್ರಶಸ್ತಿ: 19 ವರ್ಷದೊಳಗಿನವರ ಬಾಲಕರ ಸಿಂಗಲ್ಸ್ ಪ್ರಶಸ್ತಿಯನ್ನೂ ಅಂಕುರ್ ಭಟ್ಟಾಚಾರ್ಯ ಗೆದ್ದರು. ಬಾಲಕಿಯರ ಸಿಂಗಲ್ಸ್ ಪ್ರಶಸ್ತಿ ಮಹಾರಾಷ್ಟ್ರದ ತನೀಶಾ ಕೋಟೆಚಾ ತಮ್ಮದಾಗಿಸಿಕೊಂಡರು.

ಫೈನಲ್‌ನಲ್ಲಿ ಅಂಕುರ್ 11-6, 11-2, 13-11, 11-4ರಿಂದ ತಮಿಳುನಾಡಿನ ಪಿ.ಬಿ. ಅಭಿನಂದ್ ಅವರನ್ನು ಮಣಿಸಿದರು. ತನೀಶಾ 11-6, 10-12, 12-14, 11-9, 11-2, 9-11, 11-9ರಿಂದ ತಮ್ಮದೇ ರಾಜ್ಯದ ಪೃಥಾ ವರ್ತಿಕರ್ ಅವರನ್ನು ಸೋಲಿಸಿದರು.


ಟ್ರೋಫಿಯೊಂದಿಗೆ ಯಶಸ್ವಿನಿ ಘೋರ್ಪಡೆ (ಮಹಿಳೆಯರ ಸಿಂಗಲ್ಸ್), ಅಂಕುರ್ ಭಟ್ಟಾಚಾರ್ಯ (ಪುರುಷರ ಸಿಂಗಲ್ಸ್, 19 ವರ್ಷದೊಳಗಿನ ಬಾಲಕರ ಸಿಂಗಲ್ಸ್) ಮತ್ತು ತನೀಶಾ ಕೋಟೆಚಾ (19 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್) ಪ್ರಜಾವಾಣಿ ಚಿತ್ರ: ಎಸ್.ಕೆ. ದಿನೇಶ್